ಗುರುವಾರ, ಜೂನ್ 10, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 161 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕೊರೊನಾ ಕಾರಣದಿಂದ ಕೆಲವು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಹಾಗೆಂದು, ಸ್ಪರ್ಧಾರ್ಥಿಗಳು ಪರೀಕ್ಷಾ ತಯಾರಿಗೆ ಅಲ್ಪವಿರಾಮ ಹಾಕುವುದು ಸರಿಯಲ್ಲ



ಜಿತಿನ್ ಪ್ರಸಾದ ಬಿಜೆಪಿಗೆ ಸೇರ್ಪಡೆ 9
ಆಳ-ಅಗಲ ಚುನಾವಣೆ ಮೊದಲಿನ ಪಕ್ಷಾಂತರ ತಂತ್ರ
‘ಕೊರೊನಾ ಮೇಲೆ ನಿರ್ದಿಷ್ಟ ದಾಳಿ ನಡೆಸಿ’ 11

ಸೆನ್ಸೆಕ್ಸ್	ನಿಫ್ಟಿ	₹/$
51,941 ▼	15,635 ▼	72.97 ▼

ಪ್ರತಿ ಯೂನಿಟ್‌ಗೆ ಸರಾಸರಿ 30 ಪೈಸೆ ಹೆಚ್ಚಳ: ಏ. 1 ರಿಂದ ಪೂರ್ವಾನ್ವಯ

ವಿದ್ಯುತ್ ದರ ಏರಿಕೆ ಶಾಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್–ಡೀಸೆಲ್ ದರ ಏರಿಕೆಯಿಂದಾಗಿ ಜನ ಸಾಮಾನ್ಯರು ಹೈರಾಣಾಗಿರುವ ಬೆನ್ನಲ್ಲೇ, ವಿದ್ಯುತ್ ದರ ಏರಿಕೆಯ ಮತ್ತೊಂದು ಹೊರೆ ಗ್ರಾಹಕರ ಮೇಲೆ ಬೀಳಲಿದೆ.

ರಾಜ್ಯದ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) ಗ್ರಾಹಕರಿಗೆ ಪೂರೈಸುವ ಪ್ರತಿ ಯೂನಿಟ್ ವಿದ್ಯುತ್ ದರವನ್ನು 30 ಪೈಸೆಯಷ್ಟು ಏರಿಕೆ ಮಾಡುವುದಕ್ಕೆ ಅನುಮತಿ ನೀಡಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಬುಧವಾರ ಆದೇಶ ಹೊರಡಿಸಿದೆ.

ಪರಿಷ್ಕೃತ ದರವು 2021ರ ಏಪ್ರಿಲ್ 1ರಿಂದ ಪೂರ್ವಾನ್ವಯ ವಾಗಲಿದೆ. ಕೋವಿಡ್ ಕಾರಣದಿಂದ ಏಪ್ರಿಲ್ ಮತ್ತು ಮೇ ತಿಂಗಳ ಹಿಂಬಾಕಿಯನ್ನು ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಬಡ್ಡಿರಹಿತವಾಗಿ ವಸೂಲಿ ಮಾಡುವಂತೆ ಆಯೋಗವು ಆದೇಶದಲ್ಲಿ ತಿಳಿಸಿದೆ.

ಎಸ್ಕಾಂಗಳು ಸರಾಸರಿ ಶೇಕಡ 17.31ರ ಪ್ರಮಾಣದಲ್ಲಿ ಪ್ರತಿ ಯೂನಿಟ್‌ಗೆ ₹ 1.35 ದರ ಹೆಚ್ಚಳಕ್ಕೆ ಅನುಮೋದನೆ ನೀಡುವಂತೆ ಬೇಡಿಕೆ ಸಲ್ಲಿಸಿದ್ದವು. ಕೆಇಆರ್‌ಸಿ, ಶೇ 3.84ರಷ್ಟು ಪ್ರಮಾಣದ ದರ ಹೆಚ್ಚಳಕ್ಕೆ ಅನುಮೋದನೆ ನೀಡಿದೆ. ಹುಕ್ಕೇರಿಯ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಗ್ರಾಹಕರಿಗೂ ಈ ದರ ಅನ್ವಯವಾಗಲಿದೆ.


ರಾಜ್ಯದಾದ್ಯಂತ ಗೃಹ ಬಳಕೆ, ಕೈಗಾರಿಕೆ, ವಾಣಿಜ್ಯ, ಕುಡಿಯುವ ನೀರು ಪೂರೈಕೆ, ಆಸ್ಪತ್ರೆಗಳು, ಬೀದಿದೀಪ ಮತ್ತು ಇತರ ಉದ್ದೇಶಗಳಿಗೆ ಬಳಕೆ ಮಾಡುವ ಪ್ರತಿ ಯೂನಿಟ್ ವಿದ್ಯುತ್ ದರದಲ್ಲಿ ಪ್ರತಿ ಹಂತದಲ್ಲಿ 10 ಪೈಸೆಯಷ್ಟು ಹೆಚ್ಚಳ ಮಾಡುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದೆ. ಗ್ರಾಹಕರಿಂದ ವಸೂಲಿ ಮಾಡುವ ನಿಗದಿತ ಶುಲ್ಕದ ದರವನ್ನು ಪ್ರತಿ ಕಿಲೋ ವ್ಯಾಟ್ ಅಥವಾ ಎಚ್‌ಪಿಗೆ ₹ 10ರಿಂದ ₹ 20ಕ್ಕೆ ಹೆಚ್ಚಳ ಮಾಡಲಾಗಿದೆ. ಇದರಿಂದ ಸರಾಸರಿ ಪ್ರತಿ ಯೂನಿಟ್‌ನ ದರದಲ್ಲಿ 30 ಪೈಸೆಯಷ್ಟು ಹೆಚ್ಚಳವಾಗಲಿದೆ.

ಮಿತಿ ಹೆಚ್ಚಳ: ಗೃಹ ಬಳಕೆ ವಿದ್ಯುತ್‌ನ ಕನಿಷ್ಠ ಮಿತಿಯನ್ನು 30 ಯೂನಿಟ್‌ಗಳಿಂದ 50 ಯೂನಿಟ್‌ಗಳಿಗೆ ಹೆಚ್ಚಿಸಲಾಗಿದೆ. ತ್ರೀ ಫೇಸ್ ವಿದ್ಯುತ್ ಪಡೆಯುವ ಹೊರೆಯ ಮಿತಿಯನ್ನು 50 ಕಿಲೋ ವ್ಯಾಟ್‌ನಿಂದ 150 ಕಿಲೋ ವ್ಯಾಟ್‌ಗೆ ಹೆಚ್ಚಿಸಲಾಗಿದೆ.

2018ರ ಆದೇಶದಂತೆ ಅಧಿಕ ಸಾಮರ್ಥ್ಯದ (ಎಚ್‌.ಟಿ) ವಿದ್ಯುತ್ ಬಳಕೆದಾರರಿಗೆ ಪ್ರೋತ್ಸಾಹ ಯೋಜನೆ ಮುಂದುವರಿಸಲಾಗಿದೆ. ರಾತ್ರಿ 10ರಿಂದ ಬೆಳಿಗ್ಗೆ 6ರವರೆಗೆ ಬಳಸುವ ಹೆಚ್ಚುವರಿ ವಿದ್ಯುತ್‌ಗೆ ಪ್ರತಿ ಯೂನಿಟ್‌ಗೆ ₹ 1 ಮತ್ತು ರಾತ್ರಿ 10ರಿಂದ ಬೆಳಿಗ್ಗೆ 6ರವರೆಗೆ ಎಲ್ಲ ಘಟಕಗಳ ಪ್ರತಿ ಯೂನಿಟ್‌ಗೆ ₹ 2 ಪ್ರೋತ್ಸಾಹಧನ ಮುಂದುವರಿಯಲಿದೆ. ಸಂಜೆ 6ರಿಂದ ರಾತ್ರಿ 10ರವರೆಗಿನ ಅವಧಿಯಲ್ಲಿ ಬಳಸುವ ಪ್ರತಿ ಯೂನಿಟ್‌ಗೆ ₹ 1 ದಂಡ ಶುಲ್ಕ ವಿಧಿಸುವುದನ್ನು ಮುಂದುವರಿಸಲಾಗಿದೆ.

ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ ಪ್ರತಿ ಯೂನಿಟ್‌ಗೆ ₹ 5.20ರ ದರದಲ್ಲೇ ವಿದ್ಯುತ್ ಪೂರೈಕೆ ಮುಂದುವರಿಯಲಿದೆ. ಪ್ರೋತ್ಸಾಹಕ ಯೋಜನೆ ಇಲ್ಲದ ಪ್ರತಿ ಯೂನಿಟ್ ದರದಲ್ಲಿ ಮಾತ್ರ 10 ಪೈಸೆ ಹೆಚ್ಚಳ ಅನ್ವಯವಾಗಲಿದೆ. ಬ್ಯಾಟರಿ ಚಾಲಿತ ವಾಹನಗಳ ಬಳಕೆ ಉತ್ತೇಜಿಸಲು ಬ್ಯಾಟರಿ ಚಾರ್ಜಿಂಗ್ ಘಟಕಗಳಿಗೆ ಪೂರೈಸುವ ವಿದ್ಯುತ್ ದರದಲ್ಲಿ ಹೆಚ್ಚಳ ಮಾಡಿಲ್ಲ. ಈಗ ಇರುವಂತೆ ಪ್ರತಿ ಯೂನಿಟ್‌ಗೆ ₹ 5ರ ದರ ಮುಂದುವರಿಯಲಿದೆ.

ಮಂಗಳೂರು ವಿಶೇಷ ಆರ್ಥಿಕ ವಲಯದ ಕೈಗಾರಿಕಾ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ₹ 7.30 ಮತ್ತು ಏಕಸ್ ವಿಶೇಷ ಆರ್ಥಿಕ ವಲಯದ ಕೈಗಾರಿಕಾ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ₹ 7.60ರ ದರ ನಿಗದಿ ಮಾಡಲಾಗಿದೆ.



> **ಕೈಗಾರಿಕೆಗಳು ಸಹಜ ಸ್ಥಿತಿಗೆ ಮರಳಲು ಇನ್ನೂ ಎರಡು ವರ್ಷ ಬೇಕು. ವಿದ್ಯುತ್ ದರ ಏರಿಕೆ ಆದೇಶವನ್ನು ಹಿಂಪಡೆಯಬೇಕು**
> **ಪೆರಿಕಲ್ ಎಂ.ಸುಂದರ್** ಎಫ್‌ಕೆಸಿಸಿಐ ಅಧ್ಯಕ್ಷ

> **ವಿದ್ಯುತ್ ದರ ಕಡಿಮೆ ಮಾಡಿ ಎಂದು ಕೋರಿದ್ದೆವು. ಈಗ ಜಾಸ್ತಿ ಮಾಡಿದ್ದಾರೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಸಣ್ಣ ಕೈಗಾರಿಕೆಗಳು ಮುಚ್ಚಿಹೋಗುತ್ತವೆ**
> **ಕೆ.ಬಿ. ಅರಸಪ್ಪ,** ಕಾಸಿಯಾ ಅಧ್ಯಕ್ಷ

₹ 1,819.38 ಕೋಟಿ ಕೊರತೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ (ಮೆಸ್ಕಾಂ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ), ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ) ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘಗಳು ಸೇರಿದಂತೆ 2020ರ ಅವಧಿಯಲ್ಲಿ ₹ 1,100.33 ಕೋಟಿ ವರಮಾನ ಕೊರತೆ ಹೊಂದಿದ್ದವು.

2022ರ ವೇಳೆಗೆ ಅಂದಾಜಿಸಲಾದ ₹ 719.05 ಕೋಟಿ ಕೊರತೆಯೂ ಸೇರಿದಂತೆ ಒಟ್ಟು ₹ 1,819.38 ಕೋಟಿ ಕೊರತೆಯಾಗಲಿದೆ. ಅದನ್ನು 2022ನೇ ಆರ್ಥಿಕ ವರ್ಷದಲ್ಲಿ ವಿದ್ಯುತ್ ದರ ಹೆಚ್ಚಳದ ವಸೂಲಿ ಮಾಡಬೇಕಿದೆ ಎಂದು ಕೆಇಆರ್‌ಸಿ ಹೇಳಿದೆ.

ಹಸಿಗಾಯದ ಮೇಲೆ ಬರೆ: ಸಿದ್ದರಾಮಯ್ಯ ಆರೋಪ



‘ಜನರ ಕಷ್ಟ ಕಾಲದಲ್ಲಿ ನೆರವಿಗೆ ಬರಬೇಕಾಗಿದ್ದ ರಾಜ್ಯದ ಬಿಜೆಪಿ ಸರ್ಕಾರ ನಿರ್ದಯವಾಗಿ ವಿದ್ಯುತ್ ಶುಲ್ಕ ಹೆಚ್ಚಿಸಿ ಹಸಿಗಾಯದ ಮೇಲೆ ಬರೆ ಎಳೆದಿದೆ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದ್ದಾರೆ.

ವಿದ್ಯುತ್ ದರ ಹೆಚ್ಚಳಕ್ಕೆ ರಾಜ್ಯ ಸರ್ಕಾರ ನೀಡಿರುವ ಕಾರಣಗಳು ಜನರನ್ನು ತಪ್ಪುದಾರಿಗೆ ಎಳೆಯುವಂತಿದೆ. ರಾಜ್ಯದ ವಿದ್ಯುತ್ ಸರಬರಾಜು ಕಂಪೆನಿಗಳು ಇಂದು ನಷ್ಟದಲ್ಲಿದ್ದರೆ ಅದಕ್ಕೆ ರಾಜ್ಯ ಸರ್ಕಾರದ ಅದಕ್ಷತೆ, ಭ್ರಷ್ಟಾಚಾರ ಮತ್ತು ಕಾರ್ಪೊರೇಟ್ ಕಂಪೆನಿಗಳ ಓಲೈಕೆ ಕಾರಣ. ಸಮರ್ಥನೀಯವಲ್ಲದ, ಅವೈಜ್ಞಾನಿಕ ಮತ್ತು ಜನವಿರೋಧಿಯಾಗಿರುವ ವಿದ್ಯುತ್ ದರ ಹೆಚ್ಚಳವನ್ನು ರಾಜ್ಯ ಸರ್ಕಾರ ತಕ್ಷಣ ಹಿಂದಕ್ಕೆ ಪಡೆಯದಿದ್ದರೆ ರಾಜ್ಯದಾದ್ಯಂತ ಕಾಂಗ್ರೆಸ್ ತೀವ್ರ ಸ್ವರೂಪದ ಪ್ರತಿಭಟನೆ ನಡೆಸಲಿದೆ ಎಂದು ಎಚ್ಚರಿಸಿದ್ದಾರೆ.

ಲಾಕ್‌ಡೌನ್ ತೆರವಿಗೆ ತಯಾರಿ

ಐದು ಹಂತಗಳಲ್ಲಿ ನಿಯಮ ಸಡಿಲಿಕೆ– ತಾಂತ್ರಿಕ ಸಲಹಾ ಸಮಿತಿ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿರುವುದರಿಂದ ಜೂನ್ 14ರ ಬಳಿಕ ನಾಲ್ಕರಿಂದ ಐದು ಹಂತಗಳಲ್ಲಿ ಲಾಕ್‌ಡೌನ್ ತೆರವುಗೊಳಿಸಲು ರಾಜ್ಯ ಸರ್ಕಾರ ತಯಾರಿ ನಡೆಸಿದೆ.



ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ ಈ ಸುಳಿವು ನೀಡಿದ್ದಾರೆ. ‘ಒಂದೇ ಹಂತದಲ್ಲಿ ಲಾಕ್‌ಡೌನ್ ತೆರವುಗೊಳಿಸುವ ಉದ್ದೇಶವಿಲ್ಲ. ಹಾಗೆ ಮಾಡಿದರೆ ಕೋವಿಡ್ ಪ್ರಕರಣಗಳು ಇದಕ್ಕಿದ್ದಂತೆ ಏರಿಕೆಯಾಗುತ್ತದೆ. ಹೀಗಾಗಿ, ಹಂತ ಹಂತಗಳಲ್ಲಿ ತೆರವುಗೊಳಿಸಲಾಗುವುದು. ಮೊದಲ ಹಂತದಲ್ಲಿ ಸಾರ್ವಜನಿಕರು ಅಗತ್ಯ ವಸ್ತುಗಳನ್ನು ಖರೀದಿಸುವ ಸಮಯವನ್ನು ವಿಸ್ತರಿಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಯವರು ತೀರ್ಮಾನ ತೆಗೆದುಕೊಳ್ಳಲಿದ್ದಾರೆ’ ಎಂದರು.

‘ಕೋವಿಡ್ ಪರಿಸ್ಥಿತಿ ಕುರಿತು ಚರ್ಚಿಸಲು ಕೆಲವು ಜಿಲ್ಲೆಗಳ ಜಿಲ್ಲಾಡಳಿತದ ಜತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇದೇ 11–12 ರಂದು ಸಭೆ ನಡೆಸಲಿದ್ದಾರೆ. ಜಿಲ್ಲೆಯ ಪರಿಸ್ಥಿತಿ ಪರಾಮರ್ಶಿಸಿ, ಯಾವು ಜಿಲ್ಲೆಗಳಲ್ಲಿ ಮೊದಲ ಹಂತದಲ್ಲಿ ಲಾಕ್‌ಡೌನ್ ತೆರವುಗೊಳಿಸಬೇಕು ಎಂಬ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಕೋವಿಡ್ ದೃಢ ಪ್ರಮಾಣ ಶೇ 5ಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ಮೊದಲ ಹಂತದಲ್ಲಿ ಲಾಕ್‌ಡೌನ್ ಅನ್ನು ಹಂತಹಂತವಾಗಿ ತೆರವುಗೊಳಿಸಿ ಪರಿಶೀಲಿಸಲಾಗುವುದು. ಬಳಿಕ, ಅದನ್ನು ಉಳಿದ ಜಿಲ್ಲೆಗಳಿಗೂ ವಿಸ್ತರಿಸುವ ಲೆಕ್ಕಾಚಾರವೂ ಸರ್ಕಾರದ ಮುಂದಿದೆ’ ಎಂದೂ ಮೂಲಗಳು ಹೇಳಿವೆ.

ಏಕಕಾಲಕ್ಕೆ ಲಾಕ್‌ಡೌನ್ ತೆರವು ಮಾಡಿದರೆ, ಮತ್ತೆ ಕೋವಿಡ್ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಹಂತಹಂತವಾಗಿ ನಿಯಮಗಳನ್ನು ಸಡಿಲಗೊಳಿಸಲು ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ಈಗಾಗಲೇ ಸಲಹೆಗಳನ್ನು ನೀಡಿದೆ.

ಯಾವ ಜಿಲ್ಲೆಗಳು ಮತ್ತು ಪ್ರದೇಶಗಳಲ್ಲಿ ಕೋವಿಡ್ ಪ್ರಕರಣಗಳು ಅಧಿಕ ಇವೆಯೋ ಅಲ್ಲಿ ಕಟ್ಟುನಿಟ್ಟಿನ ನಿರ್ಬಂಧಗಳನ್ನು ವಿಧಿಸಬೇಕು. ಹೆಚ್ಚು ಪ್ರಕರಣಗಳು ಇರುವ ಪ್ರದೇಶಗಳ ಜನರು ಕಡಿಮೆ ಸಂಖ್ಯೆ ಇರುವ ಪ್ರದೇಶಕ್ಕೆ ಪ್ರವೇಶ ನೀಡಬಾರದು. ಇಡೀ ವರ್ಷ ಯಾವುದೇ ರೀತಿ ರ‍್ಯಾಲಿಗಳು, ಬೃಹತ್ ಸಭೆಗಳಿಗೆ ಅವಕಾಶ ನೀಡಬಾರದು. ತಜ್ಞರು ವಾರಕ್ಕೊಮ್ಮೆ ಅಥವಾ 15 ದಿನಗಳಿಗೊಮ್ಮೆ ಪರಿಶೀಲನಾ ಸಭೆ ನಡೆಸಬೇಕು ಎಂದೂ ಸಮಿತಿ ಹೇಳಿದೆ.

ಸಮಿತಿಯ ಸಲಹೆಗಳೇನು?

- ಮೊದಲ ಹಂತದಲ್ಲಿ ಮಾರುಕಟ್ಟೆಗಳನ್ನು ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ರವರೆಗೆ ತೆರೆಯಲು ಅವಕಾಶ ನೀಡಲಾಗುವುದು. ಆ ನಂತರದ ಹಂತದಲ್ಲಿ ಒಟ್ಟು 10 ಗಂಟೆಗಳ ಅವಧಿ ವಹಿವಾಟು ನಡೆಸಲು ಅವಕಾಶ.
- ಮಾಲ್‌ಗಳು, ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಶಾಪಿಂಗ್ ಮಳಿಗೆಗಳನ್ನು ಆರಂಭದಲ್ಲಿ 4 ತಾಸುಗಳು ತೆರೆಯಬಹುದು. ಆ ಬಳಿಕ 10 ತಾಸುಗಳಷ್ಟು ಅವಧಿ ವಹಿವಾಟು ನಡೆಸಲು ಅನುಮತಿ ನೀಡಲಾಗುವುದು. ನಂತರ ದಿನಪೂರ್ತಿ ತೆರೆಯಲು ಅನುಮತಿ.
- ರೆಸ್ಟೋರೆಂಟ್, ಕೆಫೆಟೇರಿಯಾ, ಪಬ್ ಮತ್ತು ಬಾರ್‌ಗಳು ಆರಂಭದಲ್ಲಿ 4 ಗಂಟೆ ತೆರೆಯಬಹುದು. ಆ ಬಳಿಕ 10 ಗಂಟೆ ತೆರೆಯಲು ಅವಕಾಶ. ಮೊದಲಿಗೆ ಶೇ 50 ರಷ್ಟು ಜನರು ಕುಳಿತುಕೊಳ್ಳಲು ಅವಕಾಶ. ನಂತರದ ಹಂತದಲ್ಲಿ ಶೇ 100 ರಷ್ಟು ಜನರು ಕುಳಿತು ಆಹಾರ ಸೇವನೆಗೆ ಅವಕಾಶ ನೀಡಲಾಗುವುದು.
- ಕಲ್ಯಾಣ ಮಂಟಪಗಳಲ್ಲಿ ವಿವಾಹ ಮತ್ತು ಆಡಿಟೋರಿಯಂಗಳ ಸಮಾರಂಭಗಳಲ್ಲಿ ಮೊದಲಿಗೆ ಆಸನದ ಸಾಮರ್ಥ್ಯದ ಶೇ 50 ರಷ್ಟು, ನಂತರದ ಹಂತದಲ್ಲಿ ಶೇ 100ರಷ್ಟು ಜನರು ಹಾಜರಾಗಲು ಅವಕಾಶ. ಆದರೆ, ಈ ವರ್ಷದ ಡಿಸೆಂಬರ್ ವರೆಗೆ 100 ರಿಂದ 200 ಜನ ಮಾತ್ರ ಪಾಲ್ಗೊಳ್ಳಬಹುದು. ಹಾಜರಾಗುವವರು ಪಾಸ್ ಪಡೆದುಕೊಳ್ಳುವುದು ಕಡ್ಡಾಯ.
- ಕೈಗಾರಿಕೆಗಳಲ್ಲಿ ಆರಂಭದಲ್ಲಿ ಶೇ50ರಷ್ಟು ಆ ಬಳಿಕ ಶೇ 100 ಉದ್ಯೋಗಿಗಳನ್ನು ಬಳಸಿ ಕೊಂಡು ಕಾರ್ಯಾಚರಣೆ ನಡೆಸಬಹುದು.
- ಬಸ್ ಮತ್ತು ಇತರ ಸಾರಿಗೆ ವಾಹನಗಳಲ್ಲಿ ಆರಂಭದಲ್ಲಿ ಶೇ 50ರಷ್ಟು ನಂತರದ ಹಂತದಲ್ಲಿ ಶೇ 100ರಷ್ಟು ಪ್ರಯಾಣಿಕರನ್ನು ಒಯ್ಯಲು ಅನುಮತಿ ನೀಡಲಾಗುವುದು.
- 1 ರಿಂದ 12ನೇ ತರಗತಿವರೆಗೆ ಆನ್‌ಲೈನ್, ವಿದ್ಯಾಗಮ. ತರಗತಿಗೆ ಹಾಜರಾಗಬೇಕಿದ್ದರೆ ಶೇ 50ರಷ್ಟು ವಿದ್ಯಾರ್ಥಿಗಳಿಗೆ ಅವಕಾಶ. ನಂತರದ ಹಂತದಲ್ಲಿ ಶೇ 100ರಷ್ಟು ವಿದ್ಯಾರ್ಥಿಗಳಿಗೆ ಅವಕಾಶ.
- ಉದ್ಯಾನಗಳಲ್ಲಿ ವಾಕ್ ಮಾಡಲು 60 ವರ್ಷ ವಯಸ್ಸಿನ ಕೆಳಗಿನವರಿಗೆ ಬೆಳಿಗ್ಗೆ ಮತ್ತು ಸಂಜೆ ತಲಾ ಮೂರು ಗಂಟೆ ಅವಕಾಶ.
- ರೆಸಾರ್ಟ್, ಕ್ಲಬ್, ಕ್ಲಬ್ ಹೌಸ್, ಕ್ರೀಡಾಂಗಣ, ಜಿಮ್ ಮತ್ತು ಯೋಗ ಕೇಂದ್ರಗಳು, ಸಲೂನ್‌ಗಳು, ಸ್ಪಾಗಳು, ಈಜುಕೊಳಗಳಲ್ಲಿ ಶೇ 50 ರಷ್ಟು ಜನರಿಗೆ ಅವಕಾಶ. ನಂತರದ ಹಂತದಲ್ಲಿ ಸಂಖ್ಯೆ ಹೆಚ್ಚಿಸಲು ಅವಕಾಶ. ಇವುಗಳನ್ನು ಅಧಿಕ ಅಪಾಯದ ಸ್ಥಳಗಳು ಎಂದೂ ವರ್ಗೀಕರಿಸಲಾಗಿದೆ.

ಧಾರ್ಮಿಕ ಕೇಂದ್ರಗಳಿಗೆ ಸದ್ಯಕ್ಕೆ ಅನುಮತಿ ಇಲ್ಲ?

ದೇವಸ್ಥಾನ, ಮಸೀದಿ, ಚರ್ಚ್‌ಗಳನ್ನು ಸಾರ್ವಜನಿಕರಿಗೆ ಜೂನ್ ಕೊನೆಯವರೆಗೆ ತೆರೆಯಲು ಅವಕಾಶವಿಲ್ಲ. ಇವುಗಳಿಗೆ ಮುಂದಿನ ಹಂತಗಳಲ್ಲಿ ಅನುಮತಿ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಅದೇ ರೀತಿ, ಸಿನಿಮಾ ಮಂದಿರಗಳಲ್ಲಿ ಆರಂಭದಲ್ಲಿ ಶೇ 50 ರಷ್ಟು ಅವಕಾಶ, ನಂತರದ ಹಂತದಲ್ಲಿ ಶೇ 100 ರಷ್ಟು ಜನರಿಗೆ ವೀಕ್ಷಣೆಗೆ ಅನುಮತಿ ನೀಡಲಾಗುವುದು. ಇವುಗಳನ್ನು ಅತ್ಯಧಿಕ ಅಪಾಯದ ಸ್ಥಳಗಳು ಎಂದು ವರ್ಗೀಕರಿಸಲಾಗಿದೆ.

> **ಕೋವಿಡ್ ಪಾಸಿಟಿವಿಟಿ ದರ ಶೇ 5 ಕ್ಕಿಂತ ಕಡಿಮೆ ಅಥವಾ 5 ಸಾವಿರಕ್ಕಿಂತ ಕಡಿಮೆ ಪ್ರಕರಣಗಳು ಇದ್ದರೆ ಲಾಕ್‌ಡೌನ್ ತೆರವು ಮಾಡಬಹುದು ಎಂಬ ಅಭಿಪ್ರಾಯ ಇದೆ**
> **ಡಾ.ಕೆ.ಸುಧಾಕರ್,** ಆರೋಗ್ಯ ಸಚಿವ

ರಾಜ್ಯ ಕೋವಿಡ್ ಅಂಕಿ–ಅಂಶ

27,28,248 ▲	ಒಟ್ಟು ಸೋಂಕಿತರು (27,17,289 ನಿನ್ನೆಯ ವಿವರ)
2,15,525 ▼	ಸಕ್ರಿಯ ಪ್ರಕರಣಗಳು
24,80,411 ▲	ಗುಣಮುಖರಾದವರು
32,291 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	10,959	▲
ಗುಣಮುಖ	20,246	▼
ಸಾವು	192	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ
ಆಟ-ನೋಟ ವನಿತಾ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಿಯಂತ್ರಣದತ್ತ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕು ದೃಢ ಪ್ರಮಾಣದ ಜತೆಗೆ ಕೋವಿಡ್ ಹೊಸ ಪ್ರಕರಣಗಳು ಕೂಡ ಇಳಿಕೆಯ ಹಾದಿ ಹಿಡಿದಿದೆ. ವಾರದಲ್ಲಿ ಸೋಂಕು ದೃಢ ಪ್ರಮಾಣದ ಸರಾಸರಿ ಶೇ 8.91ರಷ್ಟಿದ್ದು, ಬೆಂಗಳೂರು ನಗರ ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಈ ಪ್ರಮಾಣವು ಶೇ 5ಕ್ಕಿಂತ ಕಡಿಮೆಯಿದೆ.

ರಾಜ್ಯದಲ್ಲಿ ಇದೇ 14ರವರೆಗೆ ಲಾಕ್‌ಡೌನ್ ವಿಸ್ತರಿಸಲಾಗಿದೆ. ಸೋಂಕು ದೃಢ ಪ್ರಮಾಣ ದರವು ಶೇ 5 ಹಾಗೂ ಮರಣ ಪ್ರಮಾಣ ದರವು ಶೇ 1ಕ್ಕೆ ಇಳಿಕೆಯಾಗುವವರೆಗೂ ಲಾಕ್‌ಡೌನ್ ಮುಂದುವರಿಸಬೇಕೆಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

ಕಳೆದ ತಿಂಗಳು ಮೊದಲೆರಡು ವಾರ ರಾಜ್ಯದಲ್ಲಿ ಸೋಂಕು ದೃಢ ಪ್ರಮಾಣವು ಶೇ 50ರ ಗಡಿಯ ಆಸುಪಾಸಿಗೆ ಏರಿಕೆಯಾಗಿತ್ತು. ಬಳ್ಳಾರಿ, ಉತ್ತರ ಕನ್ನಡ, ಬೆಳಗಾವಿ, ಮೈಸೂರು ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಸೋಂಕು ದೃಢ ಪ್ರಮಾಣ ಅಧಿಕವಿತ್ತು. ವೈದ್ಯಕೀಯ ತಜ್ಞರ ಪ್ರಕಾರ ಈ ಪ್ರಮಾಣವು ಶೇ 5ಕ್ಕಿಂತ ಕಡಿಮೆ ವರದಿಯಾದಲ್ಲಿ ಮಾತ್ರ ರೋಗ ನಿಯಂತ್ರಣಕ್ಕೆ ಬಂದಿದೆ ಎಂದು ಪರಿಗಣಿಸಲಾಗುತ್ತದೆ.

10ನೇ ಪುಟ ನೋಡಿ

ಶೇ 5ರೊಳಗಿರುವ ಜಿಲ್ಲೆಗಳು*

ಜಿಲ್ಲೆ	ಸೋಂಕು ದೃಢ ಪ್ರಮಾಣ (ಶೇ)
ಬೀದರ್	0.59
ಕಲಬುರ್ಗಿ	2.57
ಹಾವೇರಿ	2.87
ಬೆಂಗಳೂರು ನಗರ	4.41
ಯಾದಗಿರಿ	4.44
ರಾಮನಗರ	4.89

ಶೇಕಡಾವಾರು ಅಧಿಕ ಪ್ರಮಾಣದ ಜಿಲ್ಲೆಗಳು

ಜಿಲ್ಲೆ	ಸೋಂಕು ದೃಢ ಪ್ರಮಾಣ (ಶೇ)
ಚಿಕ್ಕಮಗಳೂರು	22.23
ಮೈಸೂರು	22.06
ದಾವಣಗೆರೆ	21.86
ಚಾಮರಾಜನಗರ	18.93
ಕೊಡಗು	17.35

*ಒಂದು ವಾರದ ಸರಾಸರಿ

ಲಸಿಕೆ ಪ್ರಮಾಣಪತ್ರ: ವೈಯಕ್ತಿಕ ವಿವರ ತಿದ್ದುಪಡಿಗೆ ಅವಕಾಶ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ ಹಾಕಿಸಿಕೊಂಡ ನಂತರ ನೀಡಲಾಗಿರುವ ಪ್ರಮಾಣಪತ್ರದಲ್ಲಿ ನಮೂದಾಗಿರುವ ವೈಯಕ್ತಿಕ ವಿವರಗಳಲ್ಲಿ ತಿದ್ದುಪಡಿಗೆ ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿದೆ.

ಫಲಾನುಭವಿಗಳು ‘ಕೋವಿನ್’ ವೆಬ್‌ಸೈಟ್‌ನಲ್ಲಿ ತಿದ್ದುಪಡಿ ಮಾಡಬಹುದು. ಲಸಿಕೆ ಪ್ರಮಾಣಪತ್ರದಲ್ಲಿ ಹೆಸರು, ಜನ್ಮದಿನಾಂಕ, ಲಿಂಗ ಸೇರಿದಂತೆ ಇತರ ವಿವರಗಳು ತಪ್ಪಾಗಿ ನಮೂದಾಗಿದ್ದರೆ ಅವುಗಳನ್ನು ಸರಿಪಡಿಸಬಹುದು ಎಂದು ಆರೋಗ್ಯ ಸೇತು ಆ್ಯಪ್‌ನ ಟ್ವಿಟರ್ ಖಾತೆಯಲ್ಲಿ ಬುಧವಾರ ತಿಳಿಸಲಾಗಿದೆ.

‘ಕೋವಿನ್ ಲಸಿಕೆ ಪ್ರಮಾಣಪತ್ರ’ವನ್ನು ಪ್ರಯಾಣದ ಸಂದರ್ಭದಲ್ಲಿ ಹಾಗೂ ಇತರ ಕೆಲವು ನಿರ್ದಿಷ್ಟ ಸೇವೆಗಳನ್ನು ಪಡೆಯುವಾಗ ಹಾಜರುಪಡಿಸಬೇಕಾಗುತ್ತದೆ.

‘ಕೋವಿನ್’ ಪೋರ್ಟಲ್‌ನಲ್ಲಿ ನೋಂದಣಿ ಸಮಯದಲ್ಲಿ ನೀಡಿರುವ ಮೊಬೈಲ್ ಸಂಖ್ಯೆಯನ್ನು ಬಳಸಿ ಲಸಿಕೆಯ ಎಷ್ಟನೇ ಡೋಸ್ ಪಡೆಯಲಾಗಿದೆ ಎಂಬ ವಿವರವನ್ನು ಸಹ ಅಪ್‌ಡೇಟ್ ಮಾಡಬಹುದು ಎಂದೂ ತಿಳಿಸಲಾಗಿದೆ.



ಸಾ.ರಾ.ಮಹೇಶ್ ಅವರಿಂದ ದೊಡ್ಡ ಪ್ರಮಾಣದಲ್ಲಿ ಭೂ ಮಾಫಿಯಾ: ಸಿಂಧೂರಿ ಆರೋಪ

ರಾಜಕಾಲುವೆ ಮೇಲೆ ಸಾ.ರಾ.ಚೌಲ್ಟ್ರಿ

ಪ್ರಜಾವಾಣಿ ವಾರ್ತೆ

ಮೈಸೂರು: ಭೂ ಮಾಫಿಯಾದಲ್ಲಿ ಭಾಗಿಯಾಗಿರುವವರೆಲ್ಲಾ ಸೇರಿ ತಮ್ಮನ್ನು ಮೈಸೂರಿನಿಂದ ವರ್ಗಾವಣೆ ಮಾಡಿಸಿದರು ಎಂದಿರುವ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ, ‘ಶಾಸಕ ಸಾ.ರಾ.ಮಹೇಶ್ ಅವರು ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಭೂ ಮಾಫಿಯಾದಲ್ಲಿ ತೊಡಗಿದ್ದಾರೆ’ ಎಂದು ನೇರವಾಗಿ ಆರೋಪಿಸಿದರು.

‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘ಮೈಸೂರು ನಗರದ ದಟ್ಟಗಳ್ಳಿಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿ ಸಾ.ರಾ.ಚೌಲ್ಟ್ರಿ (ಕಲ್ಯಾಣ ಮಂಟಪ) ನಿರ್ಮಿಸಲಾಗಿದೆ. ಅದರ ಸಮೀಕ್ಷೆ ಕೂಡ ನಡೆಸಲಾಗುತ್ತಿದೆ. ಕೋವಿಡ್ ನಿರ್ವಹಣೆಯಲ್ಲಿ ಸಕ್ರಿಯವಾಗಿ ತೊಡಗಿದ್ದರಿಂದ ಅಕ್ರಮಗಳ ವಿಚಾರವಾಗಿ ಕ್ರಮ ಜರುಗಿಸಲು ಸಮಯಾವಕಾಶ ಸಿಗಲಿಲ್ಲ’ ಎಂದು ಹೇಳಿದರು.

‘ಸಾ.ರಾ.ಮಹೇಶ್ ಜೊತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷ ಎಚ್‌.ವಿ.ರಾಜೀವ್ ಕೂಡ ಶಾಮೀಲಾಗಿದ್ದಾರೆ. ರಾಜಕಾರಣಿಗಳ ಜೊತೆ ಐಎಎಸ್ ಅಧಿಕಾರಿ ಶಿಲ್ಪಾನಾಗ್ ಕೂಡ ಕೈಜೋಡಿಸಿ ರಾಜೀನಾಮೆ ನಾಟಕವಾಡಿದರು’ ಎಂದು ಅವರು ಆಪಾದಿಸಿದರು.

ಮುಖ್ಯಾಂಶಗಳು

- ಸಾ.ರಾ.ಮಹೇಶ್, ರಾಜೀವ್ ವಿರುದ್ಧ ತನಿಖೆಗೆ ಆಗ್ರಹ
- ಶಿಲ್ಪಾನಾಗ್ ಸಾಥ್: ಆಪಾದನೆ
- ದಾಖಲೆ ಬಿಡುಗಡೆ ಮಾಡಿದ ಸಿಂಧೂರಿ



> **ಈಜುಕೊಳವನ್ನು ಮನೆಗೆ ತೆಗೆದುಕೊಂಡು ಬಂದಿದ್ದೇನೆಯೇ? ಭೂ ಮಾಫಿಯಾದ ಎಲ್ಲರೂ ಸೇರಿ, ಷಡ್ಯಂತ್ರ ಮಾಡಿ ನನ್ನನ್ನು ವರ್ಗಾವಣೆ ಮಾಡಿಸಿದರು**
> **ರೋಹಿಣಿ ಸಿಂಧೂರಿ,** ಐಎಎಸ್ ಅಧಿಕಾರಿ

6ನೇ ಪುಟ ನೋಡಿ

ಆರೋಪ ಸಾಬೀತಾದರೆ ರಾಜಕೀಯ ತೊರೆಯುವೆ: ಸಾ.ರಾ. ಮಹೇಶ್



‘ನನ್ನ ಪತ್ನಿ ಹೆಸರಿನಲ್ಲಿರುವ ಸಾ.ರಾ.ಚೌಲ್ಟ್ರಿ, ರಾಜಕಾಲುವೆ ಮೇಲಿರುವುದು ಸಾಬೀತಾದರೆ ಚೌಲ್ಟ್ರಿಯನ್ನು ಸಾರ್ವಜನಿಕ ಉದ್ದೇಶಕ್ಕೆ ನೀಡಿ ರಾಜಕೀಯ ತೊರೆಯುವೆ. ಸಾಬೀತು ಆಗದಿದ್ದರೆ ಸಿಂಧೂರಿ ಐಎಎಸ್ ಹುದ್ದೆಗೆ ರಾಜೀನಾಮೆ ನೀಡಿ ಅಡುಗೆ ಮಾಡಿಕೊಂಡಿರಲಿ’ ಎಂದು ಸಾ.ರಾ.ಮಹೇಶ್ ಸವಾಲು ಹಾಕಿದರು.

‘ಈ ಸಂಬಂಧ ಗುರುವಾರ ಬೆಳಿಗ್ಗೆ 10.30ಕ್ಕೆ ಪ್ರಾದೇಶಿಕ ಆಯುಕ್ತರ ಕಚೇರಿ ಮುಂದೆ ಧರಣಿ ಕೂರಲಿದ್ದೇನೆ. ಪೊಲೀಸ್ ಕಮಿಷನರ್ ಹಾಗೂ ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದಿದ್ದೇನೆ. ಈ ಬಗ್ಗೆ ತನಿಖೆಯಾಗಲಿ’ ಎಂದು ಆಗ್ರಹಿಸಿದರು.

ಖಾಸಗಿ ಕೋವಿಡ್ ಕೇರ್ ವಿಚಾರವಾಗಿ ಪ್ರತಿಕ್ರಿಯಿಸಿ, ‘ಎಲ್ಲಿ ಅನ್ಯಾಯವಾಗುತ್ತೋ ಅಲ್ಲಿ ದನಿ ಎತ್ತುವುದು ಶಾಸಕನಾಗಿ ನನ್ನ ಕರ್ತವ್ಯ’ ಎಂದರು.

ದಾಖಲೆ ಬಿಡುಗಡೆ ಮಾಡಲಿ: ರಾಜೀವ್



‘ಸಿಂಧೂರಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ. ಸುಮ್ಮನೆ ಗಾಳಿಯಲ್ಲಿ ಗುಂಡು ಹಾರಿಸುವುದಲ್ಲ’ ಎಂದು ಮುಡಾ ಅಧ್ಯಕ್ಷ ಎಚ್‌.ವಿ.ರಾಜೀವ್ ಪ್ರತಿಕ್ರಿಯಿಸಿದರು.

‘ಮುಡಾ ಅಧ್ಯಕ್ಷನಾಗಿ ಕೆಲವೇ ತಿಂಗಳಾಗಿದೆ. ಯಾವುದೋ ಕಾಲದಲ್ಲಿ ಅಕ್ರಮ ನಡೆದಿದ್ದರೆ ನಾನು ಜವಾಬ್ದಾರನಲ್ಲ. ನನ್ನ ಕಾಲದಲ್ಲಿ ಏನಾದರೂ ನಡೆದಿದ್ದರೆ ಮಾತನಾಡಲಿ. ಶಾಮೀಲಾಗಿದ್ದರೆ ಯಾವುದೇ ತನಿಖೆಗೆ ಸಿದ್ಧ’ ಎಂದು ತಿರುಗೇಟು ನೀಡಿದರು.

ಕೋವಿಡ್ ಕಾಲಘಟ್ಟದಲ್ಲಿ ದಣಿವರಿಯದೆಯೇ ನಿರಂತರ ಸೇವಾ ಕಾರ್ಯ ■ ಬಿಟಿಎಂ ಲೇಔಟ್ ನಿವಾಸಿಗಳಿಗೆ ಆಹಾರ ಪೊಟ್ಟಣ, ದಿನಸಿ ಕಿಟ್ ವಿತರಣೆ

ಜನರ ಸಂಕಷ್ಟಕ್ಕೆ ರಾಮಲಿಂಗಾ ರೆಡ್ಡಿ ನೆರವಿನ ಹಸ್ತ



ಕೋವಿಡ್ ಮೊದಲನೇ ಅಲೆಯಿಂದ ಚೇತರಿಸಿಕೊಳ್ಳುವ ಹೊತ್ತಿಗೆ ಎರಡನೇ ಅಲೆಯು ಬಲವಾದ ಏಟು ನೀಡಿದೆ. ಈ ಸಂದರ್ಭದಲ್ಲಿ ಬಿಟಿಎಂ ಲೇಔಟ್ ವಿಧಾನಸಭೆ ಕ್ಷೇತ್ರದ ಶಾಸಕ ರಾಮಲಿಂಗಾ ರೆಡ್ಡಿ ಅವರು ತಮ್ಮ ಕ್ಷೇತ್ರದ ಜನತೆಯ ಬೇಕು ಬೇಡಗಳನ್ನು ಅರಿತು, ಕೊರೊನಾ ಸೋಂಕಿತರಿಗೆ ಅಗತ್ಯ ಚಿಕಿತ್ಸೆ ಹಾಗೂ ಹಸಿದ ದುರ್ಬಲ ವರ್ಗದವರಿಗೆ ಅಗತ್ಯ ನೆರವು ಒದಗಿಸುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಎರಡನೇ ಅಲೆಯಲ್ಲಿ ಸೋಂಕಿತರ ಸಂಖ್ಯೆ ದಿಢೀರ್ ಏರಿಕೆ ಕಂಡ ಪರಿಣಾಮ ನಗರದ ವೈದ್ಯಕೀಯ ವ್ಯವಸ್ಥೆಯಲ್ಲಿ ಏರುಪೇರಾಗಿತ್ತು. ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದ್ದವು. ವೈದ್ಯಕೀಯ ಆಮ್ಲಜನಕಕ್ಕೆ ಎಲ್ಲಿಲ್ಲದ ಬೇಡಿಕೆ ಸೃಷ್ಟಿಯಾಗಿತ್ತು. ಅದೇ ರೀತಿ, ಪರೀಕ್ಷೆ, ಚಿಕಿತ್ಸೆ ಸೇರಿದಂತೆ ವೈದ್ಯಕೀಯ ವ್ಯವಸ್ಥೆಯಲ್ಲಿ ಗೊಂದಲಗಳು ಉಂಟಾಗಿದ್ದವು. ವಸ್ತುಸ್ಥಿತಿಯನ್ನು ಅರಿತ ರಾಮಲಿಂಗಾ ರೆಡ್ಡಿ ಅವರು, ಕ್ಷೇತ್ರದ ಜನತೆಗೆ ನೆರವಾಗಲು ವೈದ್ಯಕೀಯ ತಜ್ಞರ ತಂಡ ರಚನೆ, ಕ್ಷೇತ್ರದಾದ್ಯಂತ ಸೋಂಕು ನಿವಾರಕ ದ್ರಾವಣದಿಂದ ಸಿಂಪಡಣೆ, ಆಮ್ಲಜನ ಸಾಂದ್ರಕ ಸಾಧನಗಳ ವಿತರಣೆ, ತುರ್ತಾಗಿ ಚಿಕಿತ್ಸೆ ಅಗತ್ಯ ಇರುವವರಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ವ್ಯವಸ್ಥೆ ಸೇರಿದಂತೆ ವಿವಿಧ ಕಾರ್ಯಗಳನ್ನು ಕೈಗೊಂಡಿದ್ದಾರೆ. ಈ ಮೂಲಕ ಕ್ಷೇತ್ರದ ಜನತೆಗೆ ರಕ್ಷಣೆ ಒದಗಿಸುತ್ತಿದ್ದಾರೆ.

ಕೋವಿಡ್ ನಡುವೆಯೂ ಕ್ಷೇತ್ರದಾದ್ಯಂತ ಸಂಚರಿಸಿ, ಜನರ ಅಹವಾಲುಗಳನ್ನು ಆಲಿಸಿ ಪರಿಹಾರ ಕಲ್ಪಿಸಲು ಶ್ರಮಿಸುತ್ತಿದ್ದಾರೆ. ವಲಸೆ ಕಾರ್ಮಿಕರು, ದಿನಗೂಲಿನೌಕರರು, ಬೀದಿ ಬದಿ ವ್ಯಾಪಾರಿಗಳು ಸೇರಿದಂತೆ ವಿವಿಧ ದುರ್ಬಲ ವರ್ಗದವರಿಗೆ ಪ್ರತಿನಿತ್ಯ ಆಹಾರದ ಪಟ್ಟಣಗಳನ್ನು ಒದಗಿಸುವ ಮೂಲಕ ನೆರವಾಗಿದ್ದಾರೆ. ಅದೇ ರೀತಿ, ದಿನಸಿ ಕಿಟ್‌ಗಳನ್ನು ಕೂಡ ನೀಡುವ ಮೂಲಕ ಸಂಕಷ್ಟಕ್ಕೆ ಸಿಲುಕಿದವರ ಹಸಿವು ನೀಗಿಸಲು ಶ್ರಮಿಸುತ್ತಿದ್ದಾರೆ. ಕ್ಷೇತ್ರದ ಜನರ ಆರೋಗ್ಯಕ್ಕೂ ಧಕ್ಕೆಯಾಗದಂತೆ, ಜೀವನಕ್ಕೂ ಕಷ್ಟವಾಗದಂತೆ ಕೈಗೊಳ್ಳಬೇಕಾದ ಕ್ರಮಗಳನ್ನು ಮುತುವರ್ಜಿಯಿಂದ ಸಾಕಾರಗೊಳಿಸುತ್ತಿದ್ದಾರೆ. ಅದೇ ರೀತಿ, ತಮ್ಮ ಕಾರ್ಯಕ್ರಮಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳ್ಳುವಂತೆಯೂ ನೋಡಿಕೊಳ್ಳುತ್ತಿದ್ದಾರೆ.

ಒಮ್ಮೆ ಕಾರ್ಪೊರೇಟರ್, 4 ಬಾರಿ ಸಚಿವ ಹಾಗೂ 7 ಸಲ ಶಾಸಕರಾಗಿರುವ ಅವರು, ಬಿಟಿಎಂ ಬಡಾವಣೆಯ ಜನರೊಂದಿಗೆ ನಿರಂತರ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ಕೋವಿಡ್ ನಿರ್ವಹಣೆಯಲ್ಲಿ ತಮ್ಮ ಅನುಭವವನ್ನು ಒರೆಗೆ ಹಚ್ಚಿರುವ ಅವರು, ಜನಪರ ಕಾರ್ಯಕ್ರಮಗಳ ಮೂಲಕ ಕ್ಷೇತ್ರದ ಜನತೆಗೆ ಮತ್ತಷ್ಟು ಹತ್ತಿರವಾಗಿದ್ದಾರೆ. ಸಂಚಾರಿ ಕ್ಲಿನಿಕ್, ವೈದ್ಯಕೀಯ ಕಿಟ್ ವಿತರಣೆ, ವೈದ್ಯರ ಆನ್‌ಲೈನ್ ಸಮಾಲೋಚನೆಯಂತಹ ಅವರ ಕಾರ್ಯಕ್ರಮಗಳು ಕೋವಿಡ್ ಕಾಯಿಲೆ ಹಾಗೂ ಸೋಂಕು ಶಂಕೆ ಎದುರಿಸುತ್ತಿದ್ದವರಿಗೆ ಸಹಕಾರಿಯಾಗಿದೆ.

60 ಸಾವಿರ ದಿನಸಿ ಕಿಟ್ ವಿತರಣೆ: ಕಲ್ಲಸಂದ್ರ, ಆಡುಗೋಡಿ, ಈಜಿಪುರ, ಕೋರಮಂಗಲ, ಸುದ್ದಗುಂಟೆ ಪಾಳ್ಯ, ಮಡಿವಾಳ, ಜಕ್ಕಸಂದ್ರ, ಬಿಟಿಎಂ ಬಡಾವಣೆ ಒಳಗೊಂಡಂತೆ ತಮ್ಮ ಕ್ಷೇತ್ರದ ಎಲ್ಲ ವಾರ್ಡ್‌ಗಳಲ್ಲಿಯೂ ಆಹಾರ ವಿತರಣೆ ಹಾಗೂ ದಿನಸಿ ಕಿಟ್‌ಗಳ ವಿತರಣೆಗೆ ವ್ಯವಸ್ಥೆ ಮಾಡಿಸಿದ್ದಾರೆ. ಪಕ್ಷದ ಕಾರ್ಯಕರ್ತರು ಪ್ರತಿ ಮನೆಗೆ ತೆರಳಿ, ಕಿಟ್‌ಗಳನ್ನು ವಿತರಿಸುತ್ತಿದ್ದಾರೆ. ಅದೇ ರೀತಿ, ಆಟೋ ರಿಕ್ಷಾ ಚಾಲಕರು, ಟ್ಯಾಕ್ಸಿ ಚಾಲಕರು, ಆಶಾ ಕಾರ್ಯಕರ್ತೆಯರು, ಪೌರಕಾರ್ಮಿಕರು ಸೇರಿದಂತೆ ವಿವಿಧ ವರ್ಗದವರಿಗೆ ಅಕ್ಕಿ, ಬೆಳೆ ಸೇರಿದಂತೆ ದಿನಬಳಕೆ ಸಾಮಗ್ರಿಗಳನ್ನು ಒಳಗೊಂಡ 15 ಕೆ.ಜಿ.ಗಳ 60 ಸಾವಿರ ಕಿಟ್‌ಗಳನ್ನು ವಿತರಿಸುತ್ತಿದ್ದಾರೆ.


ಆಂಬುಲೆನ್ಸ್ ಸೇವೆ: ಕೋವಿಡ್ ಪೀಡಿತರ ಸಂಖ್ಯೆ ಏರಿಕೆ ಕಂಡ ಬಳಿಕ ರೋಗಿಗಳು ಆಸ್ಪತ್ರೆಗಳಿಗೆ ತೆರಳಲು ಆಂಬುಲೆನ್ಸ್ ಕೂಡ ಸಮಸ್ಯೆಯಾಗಿತ್ತು. ಸೋಂಕಿತರು ದಿನವಿಡೀ ಆಂಬುಲೆನ್ಸ್‌ಗಾಗಿ ಕಾಯಬೇಕಾಗಿತ್ತು. ಹೀಗಾಗಿ, ರಾಮಲಿಂಗಾ ರೆಡ್ಡಿ ಅವರು ಒಂದು ಆಂಬುಲೆನ್ಸ್ ಅನ್ನು ಮೀಸಲಿಟ್ಟಿದ್ದರು. ಕೋವಿಡ್ ಪೂರ್ವದಲ್ಲಿ ಕೂಡ ಈ ಆಂಬುಲೆನ್ಸ್ ರೋಗಿಗಳಿಗೆ ನೆರವಾಗಿತ್ತು.

ಮುಖಂಡರ ಸಹಕಾರ: 'ಊಟದ ಪೊಟ್ಟಣ, ದಿನಸಿ ಕಿಟ್‌ಗಳ ವಿತರಣೆ ಸೇರಿದಂತೆ ವಿವಿಧ ಕಾರ್ಯಕ್ಕೆ ಕ್ಷೇತ್ರದ ಪಾಲಿಕೆ ಮಾಜಿ ಸದಸ್ಯರು, ಪಕ್ಷದ ವಿವಿಧ ಮುಖಂಡರು ಹಾಗೂ ದಾನಿಗಳು ಸಹಕಾರ ನೀಡುತ್ತಿದ್ದಾರೆ. ಪಾಲಿಕೆಯ ಮಾಜಿ ಸದಸ್ಯರಾದ ಮಂಜುನಾಥ್ ರೆಡ್ಡಿ, ಮಂಜುನಾಥ್, ಬಿ. ಮೋಹನ್, ರಾಮಚಂದ್ರ, ಮಂಜುಳಾ ಸಂಪತ್, ಚಂದ್ರಪ್ಪ ಹಾಗೂ ಮುನಿರಾಜು ಸಾಮಾಜಿಕ ಕಾರ್ಯಗಳಿಗೆ ಕೈ ಜೋಡಿಸಿದ್ದಾರೆ. ಬ್ಲಾಕ್ ಕಾಂಗ್ರೆಸ್‌ನ ಅಧ್ಯಕ್ಷರಾದ ಗೋವರ್ಧನ ಮತ್ತು ಆನಂದ್ ಅವರು ಕೂಡ ಸಹಕಾರ ನೀಡುತ್ತಿದ್ದಾರೆ. ಹಲವು ದಾನಿಗಳು ನಮ್ಮೊಂದಿಗೆ ನಿಂತಿದ್ದಾರೆ' ಎಂದು ರಾಮಲಿಂಗಾ ರೆಡ್ಡಿ ತಿಳಿಸಿದರು.

ಕೋವಿಡ್ ಹಾಗೂ ಲಾಕ್‌ಡೌನ್ ವೇಳೆ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ರಾಮಲಿಂಗಾ ರೆಡ್ಡಿ ಅವರು ಜನಪ್ರತಿನಿಧಿಗಳಿಗೆ ಮಾದರಿಯಾಗಿದ್ದಾರೆ. ಅವರ ಕಾರ್ಯವೈಖರಿಯನ್ನು ಶ್ಲಾಘಿಸುವ ಕ್ಷೇತ್ರದ ಜನತೆ, ಎಲ್ಲರಿಗೂ ಎಲ್ಲ ವೇಳೆ ದೊರೆಯುವ ಸರಳ ವ್ಯಕ್ತಿ ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

'ನಮ್ಮ ಕ್ಷೇತ್ರದಲ್ಲಿ ಹಾಗೂ ಕಷ್ಟದಲ್ಲಿರುವವರಿಗೆ ಏನೆಲ್ಲ ಸಹಾಯ ಮಾಡಲು ಸಾಧ್ಯವಿದೆಯೋ ಅದನ್ನು ಮಾಡುತ್ತಿದ್ದೇವೆ. ಪಕ್ಷದ ಕಾರ್ಯಕರ್ತರ ಬೆಂಬಲದಿಂದ ಊಟ ಒದಗಿಸುವಿಕೆ ಸೇರಿದಂತೆ ವಿವಿಧ ಕಾರ್ಯಗಳು ನಡೆಯುತ್ತಿವೆ. ಕೋವಿಡ್ ಹಾಗೂ ಲಾಕ್‌ಡೌನ್‌ನಿಂದ ವಿವಿಧ ವರ್ಗದವರು ಸಂಕಷ್ಟದಲ್ಲಿದ್ದಾರೆ. ಅವರಿಗೆ ಕಿಟ್‌ಗಳ ವಿತರಣೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಎಲ್ಲರೂ ಒಟ್ಟಾಗಿ ಕೋವಿಡ್ ಎದುರಿಸಬೇಕಿದೆ.'

ರಾಮಲಿಂಗಾ ರೆಡ್ಡಿ
ಬಿಟಿಎಂ ಲೇಔಟ್ ಶಾಸಕ



ವೈದ್ಯಕೀಯ ಸೇವೆಗೆ ತುರ್ತು ಸಹಾಯವಾಣಿ

ನಗರದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಏರಿಕೆ ಕಂಡ ಬಳಿಕ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದ್ದವು. ಕೆಲವರು ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಸೂಕ್ತ ಮಾರ್ಗದರ್ಶನ ಇಲ್ಲದ ಕಾರಣ ಕೆಲವರು ಚಿಕಿತ್ಸೆಗೆ ಎಲ್ಲಿಗೆ ತೆರಳುವುದು ಎಂದು ತಿಳಿಯದೆಯೇ ಕಂಗಾಲಾಗಿದ್ದರು. ಜನರ ಈ ಸಮಸ್ಯೆಯನ್ನು ಅರಿತ ರಾಮಲಿಂಗಾ ರೆಡ್ಡಿ, ತುರ್ತು ಸಹಾಯವಾಣಿಯನ್ನು ಪ್ರಾರಂಭಿಸಿದ್ದಾರೆ. ಐಸಿಯು ಹಾಸಿಗೆ ಸೇರಿದಂತೆ ವಿವಿಧ ವೈದ್ಯಕೀಯ ಸೌಲಭ್ಯಗಳನ್ನು ದೂರವಾಣಿ ಕರೆ ಮಾಡಿ ಪಡೆಯಬಹುದಾಗಿದೆ. ಕೋವಿಡ್ ಪ್ರಕ್ರಣಗಳ ಸಂಖ್ಯೆ ಇಳಿಕೆಯಾದರೂ ಈ ಸೇವೆಯನ್ನು ಮುಂದುವರೆಸಿದ್ದಾರೆ.

ಸಹಾಯವಾಣಿ ಸಂಖ್ಯೆ: **93411 91411**



ವಲಸೆ ಕಾರ್ಮಿಕರಿಗೆ ದಿನಸಿ ಕಿಟ್ ವಿತರಿಸುತ್ತಿರುವ ರಾಮಲಿಂಗಾ ರೆಡ್ಡಿ

ಉಚಿತ ವೈದ್ಯಕೀಯ ಸಮಾಲೋಚನೆ ವ್ಯವಸ್ಥೆ

ಕೊರೊನಾ ಸೋಂಕಿತರಲ್ಲಿ ಶೇ 80 ರಷ್ಟು ಮಂದಿ ಮನೆ ಆರೈಕೆಗೆ ಒಳಪಡುತ್ತಿದ್ದಾರೆ. ಅದೇ ರೀತಿ, ಕೋವಿಡ್ ಮತ್ತು ಲಾಕ್‌ಡೌನ್ ಕಾರಣ ಕೆಲವರಿಗೆ ಆಸ್ಪತ್ರೆಗಳಿಗೆ ತೆರಳಲು ಸಾಧ್ಯವಾಗುತ್ತಿಲ್ಲ. ಚಿಕಿತ್ಸೆ, ಪರೀಕ್ಷೆ ಸೇರಿದಂತೆ ವಿವಿಧ ಪ್ರಕ್ರಿಯೆಗಳ ಬಗ್ಗೆ ಪ್ರಾರಂಭಿಕ ದಿನಗಳಲ್ಲಿ ಗೊಂದಲಗಳಿದ್ದವು. ಇದನ್ನು ನಿವಾರಿಸಿ, ಅಗತ್ಯ ಮಾರ್ಗದರ್ಶನ ಒದಗಿಸಲು ರಾಮಲಿಂಗಾ ರೆಡ್ಡಿ ಅವರು ತಮ್ಮ ಕ್ಷೇತ್ರದಲ್ಲಿ ಉಚಿತ ವೈದ್ಯಕೀಯ ಸಮಾಲೋಚನೆಗೆ ವ್ಯವಸ್ಥೆ ಮಾಡಿಸಿದ್ದಾರೆ. ಅದೇ ರೀತಿ, ಡಾ. ಶ್ರೀನಿವಾಸ್ (ಮೊ. 9513960250) ನೇತೃತ್ವದಲ್ಲಿ ಚಿಕಿತ್ಸಾ ತಂಡವನ್ನು ರಚಿಸಿದ್ದಾರೆ. ಪ್ರತಿನಿತ್ಯ ನೂರಾರು ಮಂದಿ ಈ ವ್ಯವಸ್ಥೆಯಡಿ ವೈದ್ಯಕೀಯ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ.

ಬಿ.ಯು ಸಂಖ್ಯೆ ಹಾಗೂ ಎಸ್.ಆರ್.ಎಫ್ ಸಂಖ್ಯೆ ಹೊಂದಿದ್ದು, ಮನೆ ಆರೈಕೆಗೆ ಒಳಗಾದವರಿಗೆ ಅಗತ್ಯವಿರುವ ಔಷಧವನ್ನು ಕೂಡ ಒದಗಿಸುತ್ತಿದ್ದಾರೆ. ಇದಕ್ಕಾಗಿ ಆರ್.ಎಲ್.ಆರ್. ಬಾಂಧವ ಎಂಬ ತಂಡವನ್ನು ರಚಿಸಿದ್ದಾರೆ. ಈ ತಂಡದ ಸದಸ್ಯರು ಕೋರಿಕೆಯ ಕರೆಯ ಮೇರೆಗೆ ಸೋಂಕಿತರ ಮನೆಗೆ ಔಷಧ ಸಾಮಗ್ರಿ ಒಳಗೊಂಡಿರುವ ಕಿಟ್‌ಗಳನ್ನು ಒದಗಿಸುತ್ತಿದ್ದಾರೆ. ಪಲ್ಸ್ ಆಕ್ಸಿಮೀಟರ್, ಥರ್ಮಾಮೀಟರ್ ಸೇರಿದಂತೆ ವಿವಿಧ ಸಾಧನಗಳನ್ನು ಒದಗಿಸುವ ಮೂಲಕ ಮನೆ ಆರೈಕೆ ಒಳಗಾದವರಿಗೆ ವೈದ್ಯಕೀಯ ನೆರವು ನೀಡಿದ್ದಾರೆ. ಇದರಿಂದಾಗಿ ಸೋಂಕಿತರು ಆತಂಕಕ್ಕೆ ಒಳಗಾಗದೆಯೇ ಮನೆ ಆರೈಕೆ ಮಾಡಿಕೊಳ್ಳಲು ಸಾಧ್ಯವಾಗಿದೆ.

ಸಮಾಲೋಚನೆಗೆ ವೈದ್ಯರ ಸಮಿತಿ

ಹೆಸರು	ದೂರವಾಣಿ ಸಂಖ್ಯೆ
ಡಾ. ಮಧುಸೂದನ್	9902078244
ಡಾ. ಭರತ್‌ರಾಮ್	8310457935
ಡಾ. ರೂಪೇಶ್	9880452597
ಡಾ. ನವೀನ್	7899789363
ಡಾ. ರಾಜನ್	9916191052
ಡಾ. ಹೇಮಾವತಿ	9448033239
ಡಾ. ಶಂಕರ್‌ಗುಹಾ	9739011119
ಡಾ. ಸಾಧ್ವಿ ಕೆ.ವಿ	9448093035
ಡಾ. ವಾಹಿನಿ	9880021368
ಡಾ. ಕಿಶೋರ್	7795922388
ಡಾ. ಮಹಂತೇಶ್	9448462883
ಡಾ. ಉದಯ್	9945911672
ಡಾ. ಸಂತೋಷ್	9880999649
ಡಾ. ರಾಮಚಂದ್ರ	9845583462
ಡಾ. ವಸಂತ್ ಪವಾರ್	9945110129
ಡಾ. ಅಬ್ಬಾಸ್ ಹುಸೈನ್	9886717197
ಡಾ. ಶಾಜಿಯ	7892799074
ಡಾ. ಮಹೇಶ್	9686162049



ತರಕಾರಿಗಳನ್ನು ವಿತರಿಸುತ್ತಿರುವ ರಾಮಲಿಂಗಾ ರೆಡ್ಡಿ



ಆರೋಗ್ಯ ಹಸ್ತ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ರಾಮಲಿಂಗಾ ರೆಡ್ಡಿ

ಸಂಕಷ್ಟದಲ್ಲಿರುವವರಿಗೆ ಸದಾ ಸ್ಪಂದನೆ

ನೆರೆ, ಬರ ಸೇರಿದಂತೆ ವಿವಿಧ ಸಂಕಷ್ಟಗಳು ರಾಜ್ಯ ಹಾಗೂ ದೇಶಕ್ಕೆ ಬಂದಾಗಲೂ ರಾಮಲಿಂಗಾ ರೆಡ್ಡಿ ಅವರು ಸ್ಪಂದಿಸುತ್ತಾ ಬಂದಿದ್ದಾರೆ. ತಮ್ಮ ಕ್ಷೇತ್ರದ ಜತೆಗೆ ಹೊರಗಡೆಯಲ್ಲಿನ ಜನರ ಸಮಸ್ಯೆಗಳಿಗೆ ಕೂಡ ನೆರವಿನ ಹಸ್ತವನ್ನು ಚಾಚುತ್ತಾ ಬಂದಿದ್ದಾರೆ. 2018ರಲ್ಲಿ ಕೊಡಗು ಮತ್ತು ಕೇರಳದಲ್ಲಿ ಉಂಟಾದ ಪ್ರವಾಹಕ್ಕೆ ಸ್ಪಂದಿಸಿದ ಅವರು, ₹ 1 ಕೋಟಿಗಿಂತ ಅಧಿಕ ಮೌಲ್ಯದ ದಿನಸಿ ಸಾಮಗ್ರಿಗಳನ್ನು 20 ಲಾರಿಗಳ ಮೂಲಕ ಕಳುಹಿಸಿದ್ದರು. ಅಕ್ಕಿ, ಬೆಳೆ ಸೇರಿದಂತೆ ವಿವಿಧ ದಿನಸಿ ಸಾಮಗ್ರಿಗಳ ಜತೆಗೆ ಬಟ್ಟೆ ಸೇರಿದಂತೆ ಅಗತ್ಯ ವಸ್ತುಗಳನ್ನು ನೀಡಿದ್ದರು.

2019ರಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಹ ಕಾಣಿಸಿಕೊಂಡಾಗ ₹ 1.25 ಕೋಟಿ ಮೌಲ್ಯದ ದಿನಸಿ ಸಾಮಗ್ರಿಗಳನ್ನು ಕಳಿಸಿದ್ದಾರೆ. 26 ಲಾರಿಗಳ ಮೂಲಕ ಬಾಗಲಕೋಟೆಯ 50 ಹಳ್ಳಿಗಳಿಗೆ ಅಗತ್ಯ ವಸ್ತುಗಳನ್ನು ಒದಗಿಸಿದ್ದರು. ಈ ಮೂಲಕ ಸಂಕಷ್ಟದಲ್ಲಿ ಸಂದರ್ಭದಲ್ಲಿ ನಾವು ಜತೆಯಲ್ಲಿದ್ದೇವೆ ಎಂಬ ಸಂದೇಶವನ್ನು ಅವರು ರವಾನಿಸಿದ್ದರು.

34 ಸಾವಿರ ಮಂದಿಗೆ ನಿತ್ಯ ಊಟ

ಬಿಟಿಎಂ ಬಡಾವಣೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ವಲಸೆ ಕಾರ್ಮಿಕರು ಇದ್ದಾರೆ. ಕಳೆದ ವರ್ಷ ಏಕಾಏಕಿ ಲಾಕ್‌ಡೌನ್ ಘೋಷಿಸಿದ ಪರಿಣಾಮ ಊಟದ ಸಮಸ್ಯೆ ಹಲವರಿಗೆ ಕಾಡತೊಡಗಿತು. ಆಗ ಹೋಟೆಲ್‌ಗಳು ಇರದ ಕಾರಣ ಒಂದು ಹೊತ್ತಿನ ಊಟಕ್ಕೂ ಪರದಾಟ ನಡೆಸಬೇಕಾದ ಸ್ಥಿತಿ ನಿರ್ಮಾಣವಾಗಿತ್ತು. ಇದನ್ನು ಮನಗಂಡ ರಾಮಲಿಂಗಾ ರೆಡ್ಡಿ, ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆ ಮಾಡಿಸಿದ್ದರು. ದಿನಕ್ಕೆ 50 ಸಾವಿರಕ್ಕೂ ಅಧಿಕ ಊಟದ ಪೊಟ್ಟಣಗಳನ್ನು ವಲಸೆ ಕಾರ್ಮಿಕರು ಹಾಗೂ ಸಂಕಷ್ಟದಲ್ಲಿರುವವರಿಗೆ ನೀಡಲಾಗಿತ್ತು. ಮಧ್ಯಾಹ್ನ ಹಾಗೂ ರಾತ್ರಿ ಎರಡೂ ಹೊತ್ತು ಊಟಗಳನ್ನು ಒದಗಿಸಿದ ಪರಿಣಾಮ ಕಾರ್ಮಿಕರು ನಿಟ್ಟುಸಿರು ಬಿಡುವಂತಾಗಿತ್ತು. ಕೋವಿಡ್ ಮೊದಲನೇ ಅಲೆಯ ಅವಧಿಯಲ್ಲಿ 60 ಸಾವಿರ ದಿನಸಿ ಕಿಟ್‌ಗಳನ್ನು ವಿತರಿಸಿದ್ದಾರೆ. ಈ ಬಾರಿ ಕೂಡ ಲಾಕ್‌ಡೌನ್ ಘೋಷಣೆಯಾದ ಬಳಿಕ ಊಟದ ಸಮಸ್ಯೆ ಕಾಣಿಸಿಕೊಂಡ ಕಾರಣ ಪ್ರತಿನಿತ್ಯ ಮಧ್ಯಾಹ್ನ ವಲಸೆ ಕಾರ್ಮಿಕರು ಸೇರಿದಂತೆ ವಿವಿಧ ದುರ್ಬಲ ವರ್ಗದವರಿಗೆ ಊಟವನ್ನು ಒದಿಸಲಾಗುತ್ತಿದ್ದಾರೆ. ಕ್ಷೇತ್ರದ 20 ಕಡೆ ಆಹಾರ ತಯಾರಿಕಾ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಲಾಕ್‌ಡೌನ್ ಘೋಷಣೆಯಾದ ಪ್ರಾರಂಭಿಕ ದಿನಗಳಲ್ಲಿ 10 ಸಾವಿರ ಊಟದ ಪೊಟ್ಟಣಗಳನ್ನು ಒದಗಿಸಲಾಗುತ್ತಿತ್ತು. ಈಗ ಆ ಸಂಖ್ಯೆ 34 ಸಾವಿರ ದಾಟಿದೆ. ಕ್ಷೇತ್ರದಲ್ಲಿ ಪ್ರತಿನಿತ್ಯ 106 ಕಡೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಬಿಸಿಯೂಟವನ್ನು ಒದಗಿಸುತ್ತಿದ್ದಾರೆ.

'ಊಟ ವಿತರಣೆಯಲ್ಲಿ ರುಚಿ ಮತ್ತು ಶುಚಿಗೆ ಆದ್ಯತೆ ನೀಡಲಾಗಿದೆ. 34 ಸಾವಿರ ಊಟದ ಪೊಟ್ಟಣಗಳನ್ನು 8 ವಾರ್ಡ್‌ಗಳಲ್ಲಿ ವಿತರಿಸಲಾಗುತ್ತಿದೆ. 2.50 ಸಾವಿರ ಊಟವನ್ನು ಅಕ್ಷಯಪಾತ್ರಾ ಒದಗಿಸುತ್ತಿದೆ. ನಿಮ್ಹಾನ್ಸ್‌ನಲ್ಲಿ ರೋಗಿಗಳ 500ಕ್ಕೂ ಅಧಿಕ ಸಂಬಂಧಿಗಳಿಗೆ ಪ್ರತಿನಿತ್ಯ ಊಟವನ್ನು ನೀಡಲಾಗುತ್ತಿದೆ' ಎನ್ನುತ್ತಾರೆ ರಾಮಲಿಂಗಾ ರೆಡ್ಡಿ.



ಕ್ಷೇತ್ರದ ಜನತೆಗೆ ದಿನಸಿ ಕಿಟ್ ವಿತರಿಸುತ್ತಿರುವ ರಾಮಲಿಂಗಾ ರೆಡ್ಡಿ. ಮಾಜಿ ಕಾರ್ಪೊರೇಟರ್ ಮಂಜುನಾಥ್ ರೆಡ್ಡಿ ಇದ್ದಾರೆ



ರಾಮಲಿಂಗಾ ರೆಡ್ಡಿ ಅವರು ಆರೋಗ್ಯ ಕೇಂದ್ರವೊಂದರಲ್ಲಿ ಪರಿಶೀಲನೆ ನಡೆಸುತ್ತಿರುವುದು

20 ಕಡೆ ಆಹಾರ ತಯಾರಿ

ದಿನಗೂಲಿ ನೌಕರರು, ವಲಸೆ ಕಾರ್ಮಿಕರು ಸೇರಿದಂತೆ ವಿವಿಧ ವರ್ಗದವರು ಕೋವಿಡ್ ಕಾಣಿಸಿಕೊಂಡ ಬಳಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೆಲವರು ಒಂದು ಹೊತ್ತಿನ ಊಟಕ್ಕೆ ಕೂಡ ಪರದಾಟ ನಡೆಸಬೇಕಾದ ಪರಿಸ್ಥಿತಿಯಿದೆ. ಲಾಕ್‌ಡೌನ್‌ನಿಂದ ವಿವಿಧ ಸಮಸ್ಯೆಗಳಿಗೆ ಸಿಲುಕಿದವರ ಸಂಕಷ್ಟವನ್ನು ಅರಿತ ರಾಮಲಿಂಗಾ ರೆಡ್ಡಿ, ಪಕ್ಷದ ಕಾರ್ಯಕರ್ತರ ನೆರವಿನಿಂದ ಮನೆ ಮನೆಗೆ ಆಹಾರದ ಪೊಟ್ಟಣಗಳನ್ನು ಒದಗಿಸುತ್ತಿದ್ದಾರೆ. ರಸ್ತೆ ಬದಿಯ ತಳ್ಳುಗಾಡಿ ವ್ಯಾಪಾರಿಗಳು, ವಲಸೆ ಕಾರ್ಮಿಕರನ್ನು ಗುರುತಿಸಿ ಪ್ರತಿನಿತ್ಯ ಆಹಾರದ ಪೊಟ್ಟಣಗಳನ್ನು ಬಿಟಿಎಂ ಬಡಾವಣೆಯಲ್ಲಿ ನೀಡಲಾಗುತ್ತಿದೆ. ಕ್ಷೇತ್ರದ 20 ಕಡೆ ಆಹಾರ ತಯಾರಿಗೆ (ಕಿಚನ್) ವ್ಯವಸ್ಥೆ ಮಾಡಿಸಿದ್ದಾರೆ. ಬಗೆಬಗೆಯ ರೈಸ್ ಬಾತ್ ತಯಾರಿಸಲಾಗುತ್ತಿದೆ. ಆಹಾರ ತಯಾರಿಕಾ ಕೇಂದ್ರಗಳಿಗೆ ರಾಮಲಿಂಗ ರೆಡ್ಡಿ ಅವರು ಖುದ್ದು ಭೇಟಿ ನೀಡಿ, ಗುಣಮಟ್ಟವನ್ನು ಪರಿಶೀಲಿಸುತ್ತಿದ್ದಾರೆ. ಅಷ್ಟೇ ಅಲ್ಲ, ತಾವು ಕೂಡ ಅದೇ ಆಹಾರವನ್ನು ತಮ್ಮ ಪಕ್ಷದ ಕಾರ್ಯಕರ್ತರೊಂದಿಗೆ ಸೇರಿ ಸೇವಿಸುತ್ತಿದ್ದಾರೆ.



ವಿತರಣೆಗೆ ಆಹಾರದ ಪೊಟ್ಟಣಗಳನ್ನು ಸಿದ್ಧಮಾಡುತ್ತಿರುವುದು

ಆಹಾರ ತಯಾರಿಕೆ ಕೇಂದ್ರಗಳು (ಕಿಚನ್‌ಗಳು)

ಜಕ್ಕಸಂದ್ರ (ಶ್ರೀನಿವಾಸ ಬಿಲ್ಡಿಂಗ್), ಕೋರಮಂಗಲ ವಿಲೇಜ್ (ನಡು ಬೀದಿ), ಕೋರಮಂಗಲದ ಅಂಬೇಡ್ಕರ್ ಭವನ (ವೆಂಕಟೇಶ್ ತಂಡ), ಮಡಿವಾಳದ ಸೋಮೇಶ್ವರ ದೇವಾಲಯದ ಆವರಣ, ಮಡಿವಾಳದ ವಿ.ಪಿ. ರಸ್ತೆ (ಸುಬ್ರಮಣಿ ತಂಡ), ತಾವರೆಕೆರೆಯ ರೇಣುಕಾ ಯಲ್ಲಮ್ಮ ದೇವಾಲಯದ ಆವರಣ (ಮುನಿರಾಜ್ ತಂಡ), ಚಿಕ್ಕ ಆಡುಗೋಡಿ (ಲೋಕೇಶ್ ತಂಡ), ಕ್ರೈಸ್ಟ್ ಸ್ಕೂಲ್ ರಸ್ತೆಯ ಎಸ್.ಜಿ. ಪಾಳ್ಯ, ಬಿಟಿಎಂ ಎರಡನೇ ಹಂತ (ಥಾಮಸ್ ತಂಡ), ಕೋರಮಂಗಲದ 80ನೇ ಅಡಿ ರಸ್ತೆ (ಚರಣಜೀತ್ ಸಿಂಗ್ ತಂಡ), ಬಿ.ಟಿ.ಎಂ.ನ ಎನ್.ಎಸ್. ಪಾಳ್ಯ (ಜಿ.ಎನ್.ಆರ. ಬಾಬು ತಂಡ), ರಾಜೇಂದ್ರನಗರ 1ನೇ ರಸ್ತೆ (ಮುತ್ತು ಮಾರಿಯಮ್ಮ ದೇವಾಲಯ ತಂಡ), ರಾಜೇಂದ್ರನಗರ 7ನೇ ಮುಖ್ಯ ರಸ್ತೆ (ಜಾನ್ ತಂಡ), ರಾಜೇಂದ್ರನಗರದ ಅಂಬೇಡ್ಕರ್ ಭವನ (ನೆಹರು ತಂಡ), ರಾಜೇಂದ್ರನಗರದ 7ನೇ ಮುಖ್ಯರಸ್ತೆ (ಕರುಮಾರಿಯಮ್ಮ ದೇವಾಲಯ ತಂಡ), ರಾಜೇಂದ್ರನಗರ 1ನೇ ಮುಖ್ಯ ರಸ್ತೆ (ಸೈರಾ ತಂಡ), ರಾಜೇಂದ್ರನಗರ 14ನೇ ಕ್ರಾಸ್ (ಮುತ್ತು ಮಾರಿಯಮ್ಮ ದೇವಾಲಯ ತಂಡ), ರಾಜೇಂದ್ರನಗರ 12ನೇ ಕ್ರಾಸ್ (ಜಾಫರ್ ತಂಡ), ರಾಜೇಂದ್ರನಗರ 7ನೇ ಮುಖ್ಯರಸ್ತೆ (ನಜೀಮ್ ತಂಡ), ರಾಜೇಂದ್ರನಗರದ ತಮಿಳು ಶಾಲೆ ಬಳಿ (ಬಾಬು ತಂಡ)

ಉಚಿತವಾಗಿ ಆಮ್ಲಜನಕ ಸಾಂದ್ರಕ

ಕೋವಿಡ್ ಮೊದಲ ಅಲೆಯಲ್ಲಿ ಸೋಂಕಿತರಾದವರಲ್ಲಿ ಹೆಚ್ಚಿನವರು ಲಕ್ಷಣ ರಹಿತರಾಗಿದ್ದರು. ಕೆಲವರಲ್ಲಿ ಸೌಮ್ಯ ಮತ್ತು ಮಧ್ಯಮ ಪ್ರಮಾಣದಲ್ಲಿ ಲಕ್ಷಣಗಳು ಕಾಣಿಸಿಕೊಂಡಿಸಿದ್ದವು. ಹೀಗಾಗಿ, ವಿಶೇಷ ಚಿಕಿತ್ಸೆ ಅಗತ್ಯವಿರಲಿಲ್ಲ. ಆದರೆ, ಎರಡನೇ ಅಲೆಯಲ್ಲಿ ಸೋಂಕಿನ ತೀವ್ರತೆಗೆ ಹಲವರು ಶ್ವಾಸಕೋಶ ಹಾಗೂ ಉಸಿರಾಟದ ಸಮಸ್ಯೆ ಎದುರಿಸಿದ್ದಾರೆ. ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಕೂಡ ದಿಢೀರ್ ಇಳಿಕೆಯಾಗುತ್ತಿದ್ದ ಕಾರಣ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿತ್ತು. ಹೆಚ್ಚಿನವರು ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಾಗಿ ಎದುರು ನೋಡುತ್ತಿದ್ದರು.

ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ರಾಮಲಿಂಗಾ ರೆಡ್ಡಿ ಅವರು, ವೈದ್ಯಕೀಯ ಆಮ್ಲಜನಕ ಸಾಂದ್ರಕ ಸಾಧನವನ್ನು ಖರೀದಿಸಿ, ಕ್ಷೇತ್ರದ ಜನತೆಗೆ ಉಚಿತವಾಗಿ ಒದಗಿಸಿದರು. ಇದಕ್ಕಾಗಿ ಯಾವುದೇ ರೀತಿಯ ಮುಂಗಡ ಹಣವನ್ನು ಕೂಡ ಅವರು ಕಟ್ಟಿಕೊಳ್ಳದೆಯೇ ವಿತರಿಸಿದರು. ಇದರಿಂದಾಗಿ ಕೋವಿಡ್ ಪೀಡಿತರಿಗೆ ಆಸ್ಪತ್ರೆಗಳ ಅಲೆದಾಟ ತಪ್ಪಿತು. ಕ್ಷೇತ್ರದ ಜನತೆಗಾಗಿ 30 ಆಮ್ಲಜನಕ ಸಾಂದ್ರಕ ಸಾಧನವನ್ನು ತಮ್ಮ ಕಚೇರಿಯ ಮೂಲಕ ಹಾಗೂ 200 ಕ್ಕೂ ಅಧಿಕ ಸಾಧನಗಳನ್ನು ತಮ್ಮ ಸಂಪರ್ಕ ಜಾಲದ ಮೂಲಕ ಅಗತ್ಯ ಇರುವವರಿಗೆ ನೀಡುತ್ತಿದ್ದಾರೆ.



ಕೊರೊನಾ ಯೋಧರಾದ ಪೊಲೀಸರನ್ನು ಗೌರವಿಸುತ್ತಿರುವ ರಾಮಲಿಂಗಾ ರೆಡ್ಡಿ

ಲಸಿಕೆ ವಿತರಣೆಗೆ ಆದ್ಯತೆ

ಕೋವಿಡ್‌ನಿಂದ ರಕ್ಷಿಸಿಕೊಳ್ಳಲು ಲಸಿಕೆ ಸಹಕಾರಿಯಾಗಿದೆ. ಹೀಗಾಗಿ, ರಾಮಲಿಂಗಾ ರೆಡ್ಡಿ ಅವರು, ತಮ್ಮ ಕ್ಷೇತ್ರದ ಎಲ್ಲ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಒದಗಿಸಲು ಶ್ರಮಿಸುತ್ತಿದ್ದಾರೆ. ಈ ಬಗ್ಗೆ ನಿರಂತರ ಅಧಿಕಾರಿಗಳ ಜತೆಗೆ ಸಂಪರ್ಕವನ್ನು ಕಾಯ್ದುಕೊಂಡು, ವಿಚಾರಿಸುತ್ತಿದ್ದಾರೆ. ಹಿರಿಯ ನಾಗರಿಕರು, ಅಂಗವಿಕಲರಿಗೆ ಲಸಿಕೆ ವಿತರಣೆಗೆ ಅಗತ್ಯ ವ್ಯವಸ್ಥೆ ಮಾಡಿಸುತ್ತಿದ್ದಾರೆ. ಅದೇ ರೀತಿ, ಶಿಕ್ಷಕರು, ಪೌರಕಾರ್ಮಿಕರು, ಆಟೋ ರಿಕ್ಷಾ ಚಾಲಕರು ಸೇರಿದಂತೆ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಲಸಿಕೆ ಒದಗಿಸುತ್ತಿದ್ದಾರೆ. ಕ್ಷೇತ್ರದಲ್ಲಿ ಈಗಾಗಲೇ 1,14,193 ಡೋಸ್ ಲಸಿಕೆಯನ್ನು (ಜೂನ್ 8ರವರೆಗೆ) ಫಲಾನುಭವಿಗಳಿಗೆ ನೀಡಲಾಗಿದೆ.



ಸೌಮ್ಯಾ ರೆಡ್ಡಿ

ತಂದೆಯ ಹಾದಿಯಲ್ಲೇ ಪುತ್ರಿ

ಜಯನಗರ ವಿಧಾನಸಭೆ ಕ್ಷೇತ್ರದ ಶಾಸಕಿಯಾಗಿರುವ ರಾಮಲಿಂಗಾ ರೆಡ್ಡಿ ಅವರ ಪುತ್ರಿ ಸೌಮ್ಯಾ ರೆಡ್ಡಿ ಅವರು ಕೂಡ ಕ್ಷೇತ್ರದಲ್ಲಿ ಸಕ್ರಿಯರಾಗಿ ಕಾರ್ಯನಿರ್ವಹಿಸುತ್ತಿದ್ದು, ಸಂಕಷ್ಟದಲ್ಲಿರುವವರಿಗೆ ನೆರವು ಒದಗಿಸುತ್ತಿದ್ದಾರೆ. ಆಹಾರದ ಪೊಟ್ಟಣಗಳ ವಿತರಣೆ, ದಿನಸಿ ಕಿಟ್‌ಗಳನ್ನು ನೀಡುವುದು ಸೇರಿದಂತೆ ವಿವಿಧ ಕಾರ್ಯಗಳ ಮೂಲಕ ದುರ್ಬಲ ವರ್ಗದವರಿಗೆ ಸಹಾಯ ಮಾಡುತ್ತಿದ್ದಾರೆ. ವೈದ್ಯಕೀಯ ಆಮ್ಲಜನಕ ಅಗತ್ಯ ಇರುವವರಗೆ ಆಮ್ಲಜನ ಸಾಂದ್ರಕ ಸಾಧನಗಳನ್ನು ವ್ಯವಸ್ಥೆ ಮಾಡಿದ್ದಾರೆ. ವಲಸೆ ಕಾರ್ಮಿಕರು, ದಿನಗೂಲಿನೌಕರರು, ಪೌರಕಾರ್ಮಿಕರು, ಆಟೋ ರಿಕ್ಷಾ ಚಾಲಕರು ಸೇರಿದಂತೆ ವಿವಿಧ ವರ್ಗದವರಿಗೆ ದಿನಸಿ ಕಿಟ್‌ಗಳನ್ನು ಒದಗಿಸುತ್ತಿದ್ದಾರೆ.

ಕ್ಷೇತ್ರದ ಜನತೆಗೆ ಲಸಿಕೆ ಒದಗಿಸಲು ಕೂಡ ಶ್ರಮಿಸುತ್ತಿದ್ದಾರೆ. ಆಸ್ಪತ್ರೆಗಳಿಗೆ ಖುದ್ದು ಭೇಟಿ ನೀಡಿ, ಸೋಂಕಿತರ ಆರೋಗ್ಯವನ್ನು ವಿಚಾರಿಸುತ್ತಿದ್ದಾರೆ. ಮನೆ ಆರೈಕೆಗೆ ಒಳಗಾದವರಿಗೆ ಔಷಧ ವಿತರಣೆಗೆ ಕೂಡ ವ್ಯವಸ್ಥೆ ಮಾಡಿದ್ದಾರೆ. ಕೋವಿಡ್ ಮುಂಚೂಣಿ ಯೋಧರಿಗೆ ಧೈರ್ಯ ತುಂಬುವ ಜತೆಗೆ ಕೋವಿಡ್ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಕ್ಷೇತ್ರದ ಜನತೆಯಿಂದ ಇವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಕೂಡ ಇವರ ಕೆಲಸಕ್ಕೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ.



ಆಹಾರದ ಪೊಟ್ಟಣಗಳನ್ನು ವಿತರಿಸುತ್ತಿರುವ ಸೌಮ್ಯಾ ರೆಡ್ಡಿ

ಕೊರೊನಾ ನಿಯಂತ್ರಣ ಕರ್ನಾಟಕ ಮಾದರಿ

ಅನವರತ ದುಡಿವ ಯಡಿಯೂರಪ್ಪ ನೇತೃತ್ವದ ಪಡೆ

ಲಸಿಕೆಯು ಕೊರೊನಾ ವೈರಾಣುವಿನ ವಿರುದ್ಧ ರಕ್ಷಾ ಕವಚದಂತೆ ಕೆಲಸ ಮಾಡುತ್ತದೆ. 18 ವರ್ಷಕ್ಕಿಂತ ಮೇಲಿನ ಎಲ್ಲರಿಗೂ ಕೋವಿಡ್ ಲಸಿಕೆಯನ್ನು ಉಚಿತವಾಗಿ ನೀಡಲಾಗುವುದು . ಅಂತರರಾಷ್ಟ್ರೀಯ ಯೋಗದಿನವಾದ ಜೂನ್ 21ರಿಂದ ಇದು ಜಾರಿಗೆ ಬರಲಿದೆ

ನರೇಂದ್ರ ಮೋದಿ, ಪ್ರಧಾನಿ



ಆರ್ಥಿಕ ಪ್ಯಾಕೇಜ್ ನೆರವಿನ ಆಸರೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯಿಂದ ಸಂಕಷ್ಟದಲ್ಲಿರುವ ವಿವಿಧ ವರ್ಗಗಳಿಗೆ ಮೊದಲ ಹಂತದಲ್ಲಿ ₹1,250 ಕೋಟಿ ಮೊತ್ತದ ಆರ್ಥಿಕ ಪ್ಯಾಕೇಜ್ ಮೂಲಕ ನೆರವಿನ ಹಸ್ತ ಚಾಚಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಎರಡನೇ ಹಂತದಲ್ಲಿ ಇನ್ನೂ ಕೆಲವು ಸಮುದಾಯಗಳಿಗೆ ₹ 500 ಕೋಟಿಯ ಪರಿಹಾರ ಘೋಷಿಸಿದ್ದಾರೆ.

ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದಿದ್ದರೂ ಸಂಕಷ್ಟದಲ್ಲಿ ಇರುವವರ ನೆರವಿಗೆ ನಿಂತಿದ್ದಾರೆ.

ಯಾರಿಗೆ ಎಷ್ಟು ಪರಿಹಾರ?

* ತಲಾ ₹ **3000**
ಕಲಾವಿದರು, ಕಲಾತಂಡಗಳು, ಕಟ್ಟಡ ಕಾರ್ಮಿಕರು, ಆಟೋ,ಟ್ಯಾಕ್ಸಿ, ಕ್ಯಾಬ್ ಚಾಲಕರು, ಆಶಾ ಕಾರ್ಯಕರ್ತೆಯರು, ವಿದ್ಯುತ್ ಮಗ್ಗದಲ್ಲಿ ಇಬ್ಬರು ಕೆಲಸಗಾರರು, ಚಲನಚಿತ್ರೋದ್ಯಮ ಮತ್ತು ಕಿರುತೆರೆಯಲ್ಲಿ ತೊಡಗಿಸಿಕೊಂಡ ಕಲಾವಿದರು, ತಂತ್ರಜ್ಞರು, ಮೀನುಗಾರರು, ಒಳನಾಡು ದೋಣಿ ಮಾಲೀಕರು, ಅರ್ಚಕರು, ಅಡುಗೆ ಕೆಲಸಗಾರರು ಮತ್ತು ಸಿಬ್ಬಂದಿ, ಮಸೀದಿಗಳಲ್ಲಿ ಕಾರ್ಯ ನಿರ್ವಹಿಸುವ ಪೇಶ್ ಇಮಾಮ್ ಮತ್ತು ಮೌಜಿಂ.

* ತಲಾ ₹ **2,000**
ಅಂಗನವಾಡಿ ಕಾರ್ಯಕರ್ತರು, ಕ್ಷೌರಿಕರು, ಅಗಸರು, ಟೈಲರ್‌ಗಳು, ಹಮಾಲಿಗಳು, ಚಿಂದಿ ಆಯುವವರು, ಕುಂಬಾರರು, ಭಟ್ಟಿ ಕಾರ್ಮಿಕರು, ಅಕ್ಕಸಾಲಿಗರು, ಮೆಕ್ಯಾನಿಕ್‌ಗಳು, ಕಮ್ಮಾರರು, ಗೃಹ ಕಾರ್ಮಿಕರು, ಚಮ್ಮಾರರು ಮತ್ತು ರಸ್ತೆ ಬದಿ ವ್ಯಾಪಾರಿಗಳು

* ತಲಾ ₹ **5,000**
ಅನುದಾನ ರಹಿತ ಶಾಲೆಗಳ ಶಿಕ್ಷಕರು

* ತಲಾ ₹ **10** ಸಾವಿರ
ಹೂವು, ತರಕಾರಿ ಬೆಳೆಗಾರರು

* ₹ **5** ಕೋಟಿ
ನ್ಯಾಯವಾದಿಗಳ ಕಲ್ಯಾಣ ನಿಧಿಗೆ

ಪ್ರತಿ ಗ್ರಾ.ಪಂ. ಗೆ ₹**50** ಸಾವಿರ
ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ಹರಡುವುದನ್ನು ತಡೆದು ಜನರ ಜೀವ ರಕ್ಷಿಸಲು, ಆರೋಗ್ಯ ಸೌಲಭ್ಯ ಕಲ್ಪಿಸಲು ಪ್ರತಿ ಗ್ರಾಮ ಪಂಚಾಯಿತಿಗೆ ₹50 ಸಾವಿರ ಅನುದಾನ

ಉಚಿತ ಊಟ, ಸಾಲ ಪಾವತಿ ವಿಸ್ತರಣೆ

ಬಿಬಿಎಂಪಿ ಮತ್ತು ನಗರ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಕಾರ್ಮಿಕರು ಮತ್ತು ಬಡವರಿಗೆ ಇಂದಿರಾ ಕ್ಯಾಂಟೀನಿನಲ್ಲಿ ಉಚಿತವಾಗಿ ಊಟದ ವ್ಯವಸ್ಥೆ. ರೈತರು ಪಡೆದ ಸಣ್ಣ, ಮಧ್ಯಮ ಮತ್ತು ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ 2020ರ ಮೇ 1ರಿಂದ ಮರುಪಾವತಿ ಅವಧಿ 2021ರ ಜುಲೈ 31ರವರೆಗೆ ವಿಸ್ತರಣೆ.

ಮುಖ್ಯಮಂತ್ರಿ ಬಾಲಸೇವಾ ಯೋಜನೆ

ಕೋವಿಡ್‌ನಿಂದ ಅನಾಥರಾದ ಮಕ್ಕಳಿಗೆ ಪ್ರತಿ ತಿಂಗಳು ₹ 3,500. ಹತ್ತು ವರ್ಷದೊಳಗಿನ ಮಕ್ಕಳ ಪಾಲನೆಗೆ ವಿಸ್ತೃತ ಕುಟುಂಬದ ಸದಸ್ಯರು ಇಲ್ಲದಿದ್ದಲ್ಲಿ ಮಕ್ಕಳ ಪಾಲನಾ ಕೇಂದ್ರದಲ್ಲಿ ಆರೈಕೆ. ಕಸ್ತೂರ್ ಬಾ ಗಾಂಧಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಂತಹ ಮಾದರಿ ವಸತಿ ಶಾಲೆಗಳಲ್ಲಿ ಶಿಕ್ಷಣ. ಎಸ್ಸೆಸ್ಸೆಲ್ಸಿ ಪೂರೈಸಿದ ಮಕ್ಕಳಿಗೆ ಲ್ಯಾಪ್‌ಟಾಪ್ ಅಥವಾ ಟ್ಯಾಬ್ ವಿತರಣೆ. 21 ವರ್ಷ ತುಂಬಿದ ಹೆಣ್ಣು ಮಕ್ಕಳಿಗೆ ತಲಾ ₹ 1 ಲಕ್ಷ

ಜವಾಬ್ದಾರಿ ಹಂಚಿಕೆ ಮೂಲಕ ಹೊಸ ಮಾದರಿ ಸೃಷ್ಟಿಸಿದ ಬಿ.ಎಸ್. ಯಡಿಯೂರಪ್ಪ

ಕೋವಿಡ್ ಮಣಿಸಲು ಅವಿರತ ಶ್ರಮ



ಆಮ್ಲಜನಕ ಶೇಖರಣಾ ಘಟಕವನ್ನು ಉದ್ಘಾಟಿಸಿದ ಬಿ.ಎಸ್. ಯಡಿಯೂರಪ್ಪ. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಎಸ್.ಟಿ. ಸೋಮಶೇಖರ್ ಇದ್ದಾರೆ.

ಬೆಂಗಳೂರು: ಎಲ್ಲ ರೀತಿಯ ವೈದ್ಯಕೀಯ ಲೆಕ್ಕಾಚಾರ, ತರ್ಕ, ಅಂದಾಜುಗಳನ್ನೂ ಮೀರಿ ರಾಜ್ಯದಾದ್ಯಂತ ವ್ಯಾಪಿಸಿರುವ ಕೋವಿಡ್ ನಿಯಂತ್ರಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವಿರತ ಶ್ರಮಿಸುತ್ತಿದ್ದಾರೆ. ಎರಡನೇ ಅಲೆಯ ಸಮಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ಹಲವು ಸಚಿವರನ್ನು ನಿಯೋಜಿಸುವ ಮೂಲಕ ಸಾಮೂಹಿಕ ಹೊಣೆಗಾರಿಕೆಯ ಹೊಸ ಮಾದರಿಯೊಂದನ್ನು ಸೃಷ್ಟಿಸಿ, ಯಶಸ್ಸಿನತ್ತ ದಾಪುಗಾಲು ಇಟ್ಟಿದ್ದಾರೆ.

ಮಾರ್ಚ್ ಎರಡನೆ ವಾರದಲ್ಲಿ ರಾಜ್ಯದಲ್ಲಿ ಮತ್ತೆ ಕೋವಿಡ್ ಪ್ರಕರಣಗಳಲ್ಲಿ ಗಣನೀಯ ಏರಿಕೆ ಕಂಡುಬಂದಿತ್ತು. ಏಪ್ರಿಲ್ ಮಧ್ಯಭಾಗದ ವೇಳೆಗೆ ಬಹುತೇಕ ಎಲ್ಲ ಜಿಲ್ಲೆಗಳಲ್ಲೂ ಸೋಂಕು ವ್ಯಾಪಕವಾಗಿತ್ತು. ಆಗಲೇ ಎರಡನೆ ಬಾರಿಗೆ ಕೋವಿಡ್ ಸೋಂಕಿಗೆ ಒಳಗಾಗಿದ್ದ ಯಡಿಯೂರಪ್ಪ ಆಸ್ಪತ್ರೆಯಲ್ಲಿದ್ದರು. ಅಲ್ಲಿಂದಲೇ ಪರಿಸ್ಥಿತಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುತ್ತಿದ್ದ ಅವರು, ಆಸ್ಪತ್ರೆಯಿಂದ ಹೊರಬಂದ ಕ್ಷಣದಿಂದಲೂ ಅನವರತ ತೊಡಗಿಸಿಕೊಂಡು, ಯಶಸ್ಸಿನ ಮೆಟ್ಟಿಲೇರುತ್ತ ಸಾಗಿದ್ದಾರೆ.

ಕಾರ್ಯಪಡೆ ಪುನರ್‌ರಚನೆ: ಕೋವಿಡ್ ಕೈಮೀರಿ ಹರಡುತ್ತಿರುವ ಸುಳಿವು ಸಿಗುತ್ತಿದ್ದಂತೆ ಎಚ್ಚೆತ್ತ ಮುಖ್ಯಮಂತ್ರಿ, ಕೋವಿಡ್ ಕಾರ್ಯಪಡೆಯನ್ನೇ ಪುನರ್‌ರಚಿಸಿದರು. ಕಾರ್ಯಪಡೆಯ ಅಧ್ಯಕ್ಷರಾಗಿದ್ದ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಬದಲಿಗೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರನ್ನು ನೇಮಿಸಿದರು.

ಸಿದ್ಧತೆಗಳು ಚುರುಕಾಗುತ್ತಿರುವಾಗಲೇ ರಾಜ್ಯದಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಹಾಸಿಗೆಗಳ ಕೊರತೆ ತೀವ್ರವಾಗತೊಡಗಿತ್ತು. ಆಮ್ಲಜನಕ, ರೆಮ್‌ಡಿಸಿವಿರ್ ಚುಚ್ಚುಮದ್ದು ಸೇರಿದಂತೆ ಔಷಧಿಗಳ ಕೊರತೆಯೂ ಉಲ್ಬಣಿಸಿತ್ತು. ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಒಬ್ಬರೇ ಎಲ್ಲವನ್ನೂ ನಿಭಾಯಿಸುವುದು ಅಸಾಧ್ಯ ಎಂದರಿತ ಯಡಿಯೂರಪ್ಪ, ಐವರು ಸಚಿವರಿಗೆ ಜವಾಬ್ದಾರಿ ಹಂಚಿಕೆ ಮಾಡುವ ಮೂಲಕ ಕೋವಿಡ್ ನಿಯಂತ್ರಣ ಮತ್ತು ರೋಗಿಗಳ ಚಿಕಿತ್ಸಾ ವ್ಯವಸ್ಥೆಯಲ್ಲಿ ಸಂಚಲನವನ್ನೇ ಮೂಡಿಸಿದರು.

ಆಮ್ಲಜನಕ ಪೂರೈಕೆಯ ಉಸ್ತುವಾರಿಯನ್ನು ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್, ಔಷಧ ಮತ್ತು ಮಾನವ ಸಂಪನ್ಮೂಲ ಒದಗಿಸುವುದರ ಉಸ್ತುವಾರಿಯನ್ನು ಡಾ.ಸಿ. ಎನ್. ಅಶ್ವತ್ಥನಾರಾಯಣಗೆ ವಹಿಸಿದರು. ಹಾಸಿಗೆಗಳ ವ್ಯವಸ್ಥೆ ಮತ್ತು ಹಂಚಿಕೆಯ ಹೊಣೆಯನ್ನು ಕಂದಾಯ ಸಚಿವ ಆರ್. ಅಶೋಕ ಮತ್ತು ಗೃಹ ಸಚಿವ ಬಸವರಾಜ ಬೊಮ್ಮಾಯಿಗೆ ವಹಿಸಿದರೆ, ವಾರ್‌ರೂಮ್ ಜವಾಬ್ದಾರಿಯನ್ನು ಅರಣ್ಯ ಸಚಿವ ಅರವಿಂದ ಲಿಂಬಾವಳಿಗೆ ನೀಡಿದರು. ಈ ಎಲ್ಲವೂ ನಿರೀಕ್ಷಿತ ಫಲ ನೀಡಿರುವುದು ವ್ಯವಸ್ಥೆಯಲ್ಲಾಗಿರುವ ಸುಧಾರಣೆಯಲ್ಲಿ ಗೋಚರಿಸತೊಡಗಿದೆ.

ನಿರಂತರ ಸಭೆ: ಏಪ್ರಿಲ್ ಕೊನೆಯ ವಾರದಿಂದ ಸತತವಾಗಿ ಕೋವಿಡ್‌ಗೆ ಸಂಬಂಧಿಸಿದ ಉನ್ನತಮಟ್ಟದ ಸಭೆಗಳನ್ನು ನಡೆಸುತ್ತಿರುವ ಯಡಿಯೂರಪ್ಪ, ಸಚಿವರು, ಅಧಿಕಾರಿಗಳು ಎಲ್ಲರಿಗೂ ಅಗತ್ಯ ಮಾರ್ಗದರ್ಶನ ನೀಡುತ್ತಿದ್ದಾರೆ. ಕೋವಿಡ್ ತಾಂತ್ರಿಕ ಸಲಹಾ ಸಮಿತಿ, ಕಾರ್ಯಪಡೆಯ ತಜ್ಞರ ಜತೆ ಸಮಾಲೋಚನೆ ನಡೆಸಿ, ವರದಿಗಳನ್ನು ಪರಿಶೀಲಿಸಿ ಬಿಗಿಯಾದ ಕ್ರಮಗಳನ್ನು ಕೈಗೊಂಡಿದ್ದಾರೆ.


ಕೆಲವು ದಿನಗಳ ಕಾಲ ಆನ್‌ಲೈನ್ ಮೂಲಕವೇ ಜಿಲ್ಲಾವಾರು ಸಭೆಗಳನ್ನು ನಡೆಸಿ ಪರಿಸ್ಥಿತಿ ನಿಯಂತ್ರಣಕ್ಕೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದ್ದ ಅವರು, ಈಗ ತುಮಕೂರು, ಬೆಳಗಾವಿ, ಧಾರವಾಡ ಸೇರಿದಂತೆ ಕೋವಿಡ್ ಪ್ರಕರಣಗಳು ಹೆಚ್ಚಿರುವ ಜಿಲ್ಲೆಗಳಿಗೆ ಖುದ್ದಾಗಿ ತೆರಳಿ ಸಭೆಗಳನ್ನು ನಡೆಸುತ್ತಿದ್ದಾರೆ.

ವಾರಕ್ಕೊಮ್ಮೆ ಸಚಿವರು, ಅಧಿಕಾರಿಗಳ ಸಭೆ ನಡೆಸುತ್ತಿರುವ ಯಡಿಯೂರಪ್ಪ, ಪ್ರಮುಖ ನಿರ್ಣಯಗಳನ್ನು ಖುದ್ದಾಗಿ ಪ್ರಕಟಿಸುತ್ತಿದ್ದಾರೆ.

ಸಹೃದಯಿ ಕರುನಾಡ ಬಂಧುಗಳೇ

ಕೊರೊನಾ ಸೋಂಕಿನ ಸರಪಳಿ ತುಂಡರಿಸಲು, ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ನಮ್ಮ ಸರ್ಕಾರ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ. ಆರೋಗ್ಯ ಕ್ಷೇತ್ರದ ಸಿಬ್ಬಂದಿ ಹಾಗೂ ವಿವಿಧ ಇಲಾಖೆಗಳ ನೌಕರರು ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು ಕೋವಿಡ್ ವಿರುದ್ಧ ಹೋರಾಟ ಮುಂದುವರಿಸಿದ್ದಾರೆ.

ಪರೀಕ್ಷೆ, ಸೋಂಕಿತರ ಚಿಕಿತ್ಸೆ, ಮನೆ ಆರೈಕೆಯಲ್ಲಿರುವವರಿಗೆ ಅಗತ್ಯ ನೆರವು, ಲಸಿಕೆ ವಿತರಣೆ, ಅಗತ್ಯ ಇರುವವರಿಗೆ ಆರ್ಥಿಕ ನೆರವು ಸೇರಿದಂತೆ ನಮ್ಮ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ.



ಕೋವಿಡ್ ತಡೆಯಲ್ಲಿ ನಾಡಿನ ಜನರ ಸಹಕಾರವೂ ಅಷ್ಟೇ ಮುಖ್ಯ. ತೀರಾ ಅನಿವಾರ್ಯ ಇದ್ದಲ್ಲಿ ಮಾತ್ರವೇ ಮನೆಯಿಂದ ಜನರು ಹೊರಗೆ ಓಡಾಡಬೇಕು. ಸೋಂಕು ನಿಯಂತ್ರಣಕ್ಕೆ ಬರುವವರೆಗೂ ಅನಗತ್ಯವಾಗಿ ತಿರುಗಾಡುವುದಕ್ಕೆ ಸ್ವಯಂ ಕಡಿವಾಣ ಹಾಕಿಕೊಳ್ಳಬೇಕು. ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ವ್ಯಕ್ತಿಗತ ಅಂತರ ಕಾಯ್ದುಕೊಳ್ಳಬೇಕು. ಲಸಿಕೆ ಪಡೆದು, ಈ ಹೋರಾಟದಲ್ಲಿ ರಾಜ್ಯವನ್ನು ಗೆಲುವಿನ ದಡ ಮುಟ್ಟಿಸಬೇಕು ಎಂದು ಮನವಿ ಮಾಡುತ್ತೇನೆ.

ಬಿ.ಎಸ್. ಯಡಿಯೂರಪ್ಪ,
ಮುಖ್ಯಮಂತ್ರಿ

3ನೇ ಅಲೆ ಎದುರಿಸಲು ತಜ್ಞರ ಸಮಿತಿ

ಬೆಂಗಳೂರು: ಕೋವಿಡ್ ಮೂರನೇ ಅಲೆ ಸೆಪ್ಟೆಂಬರ್ ವೇಳೆಗೆ ಬರಬಹುದು ಎಂಬ ಅಂದಾಜು ಇದೆ. ಅದನ್ನು ಎದುರಿಸುವುದಕ್ಕೂ ಸಿದ್ಧತೆ ಆರಂಭಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ, ಹೃದ್ರೋಗ ತಜ್ಞ ಡಾ. ದೇವಿ ಪ್ರಸಾದ್ ಶೆಟ್ಟಿ ನೇತೃತ್ವದ ಉನ್ನತಮಟ್ಟದ ತಜ್ಞರ ಸಮಿತಿಯೊಂದನ್ನು ರಚಿಸಿದೆ.

ನಿಮ್ಹಾನ್ಸ್ ನಿರ್ದೇಶಕ ಡಾ.ಸತೀಶ್ ಗಿರಿಮಾಜಿ, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಬಸವರಾಜ್ ಜಿ.ವಿ. ಸೇರಿದಂತೆ 13 ಸದಸ್ಯರ ಸಮಿತಿಯಲ್ಲಿ ಕ್ಯಾನ್ಸರ್ ತಜ್ಞರು, ಮಕ್ಕಳ ತಜ್ಞರು, ಸಾಂಕ್ರಾಮಿಕ ರೋಗ ನಿಯಂತ್ರಣ ತಜ್ಞರು, ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿನಿಧಿಗಳು ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳು ಇದ್ದಾರೆ.

ಕೋವಿಡ್ ಮೂರನೇ ಅಲೆ ಮಕ್ಕಳಿಗೆ ಹೆಚ್ಚು ತೊಂದರೆ ಉಂಟುಮಾಡಬಹುದು ಎಂಬ ಊಹೆ ಇದೆ. ಈ ಕಾರಣದಿಂದಾಗಿ ತಜ್ಞರ ಸಮಿತಿಯಲ್ಲಿ ಆರು ಮಂದಿ ಮಕ್ಕಳ ತಜ್ಞರನ್ನು ನೇಮಿಸಲಾಗಿದೆ.

ಸಹಕಾರ ಪಡೆಯುವ ದೂರದೃಷ್ಟಿ

ಕೋವಿಡ್ ರೋಗಿಗಳಿಗೆ ತುರ್ತು ಆಸ್ಪತ್ರೆಗಳ ನಿರ್ಮಾಣ, ಆಮ್ಲಜನಕ ಪೂರೈಕೆ, ವೆಂಟಿಲೇಟರ್, ಆಮ್ಲಜನಕ ಸಾಂದ್ರಕಗಳ ಪೂರೈಕೆಯಂತಹ ಕೆಲಸಗಳಿಗೆ ಕಾರ್ಪೊರೇಟ್ ವಲಯ, ಮಠಗಳು, ಶಿಕ್ಷಣ ಸಂಸ್ಥೆಗಳ ಸಹಕಾರ ಪಡೆಯುವಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಯಶಸ್ವಿಯಾಗಿದ್ದಾರೆ.

ಅವರ ಮನವಿಗೆ ಸ್ಪಂದಿಸಿದ ಜೆಎಸ್‌ಡಬ್ಲ್ಯು ಕಂಪನಿ ಬಳ್ಳಾರಿಯಲ್ಲಿ ಕೋವಿಡ್ ಕೇರ್ ಫೀಲ್ಡ್ ಆಸ್ಪತ್ರೆ ನಿರ್ಮಿಸಿದೆ. ವೇದಾಂತ ಕಂಪನಿ ಚಿತ್ರದುರ್ಗ ಜಿಲ್ಲೆಯಲ್ಲಿ ಆಸ್ಪತ್ರೆ ಆರಂಭಿಸಿದೆ. ತುಮಕೂರಿನ ಸಿದ್ದಗಂಗಾ ಮಠ, ಮೈಸೂರಿನ ಸುತ್ತೂರುಮಠ ಕೊಪ್ಪಳದ ಗವಿಸಿದ್ದೇಶ್ವರ ಮಠ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ಮಂಡ್ಯದ ಆದಿ ಚುಂಚನಗಿರಿ ಮಠ ಸೇರಿದಂತೆ ಹಲವು ಸಂಸ್ಥೆಗಳೂ ಕೈಜೋಡಿಸಿವೆ.


ನರ್ಸ್‌ಗಳೊಂದಿಗೆ ಸಂವಾದ

ಕೋವಿಡ್ ಯೋಧರಿಗೆ ವಿಶ್ವಾಸದ ಬೆಸುಗೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ವೈದ್ಯರೂ ಸೇರಿದಂತೆ ಆರೋಗ್ಯ ಕಾರ್ಯಕರ್ತರ ಮೇಲೆ ಒತ್ತಡ ಹೇರಿದೆ. ಇಂಥ ಸಂದರ್ಭದಲ್ಲಿ, ಕೋವಿಡ್ ವಿರುದ್ಧದ ಸಮರದಲ್ಲಿ ನಿರತರಾಗಿರುವ ವೈದ್ಯರು, ಸ್ಟಾಫ್ ನರ್ಸ್‌ಗಳ ಜೊತೆ ಸಂವಾದ ನಡೆಸಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರಲ್ಲಿ ಆತ್ಮವಿಶ್ವಾಸ ತುಂಬಿದರು.

ಅಪಾಯವನ್ನು ಲೆಕ್ಕಿಸದೆ ಸೋಂಕಿತರ ಶುಶ್ರೂಷೆಯಲ್ಲಿ ನಿರತರಾಗಿರುವ ಆರೋಗ್ಯ ಕಾರ್ಯಕರ್ತರ ಸೇವೆಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ವೈಯಕ್ತಿಕ ಕಷ್ಟ- ನಷ್ಟ ಬದಿಗೊತ್ತಿ, ಕುಟುಂಬದವರಿಂದ ಅಂತರ ಕಾಯ್ದುಕೊಂಡು ಕಾರ್ಯನಿರ್ವಹಿಸುತ್ತಿರುವ ವೈದ್ಯರು, ಸಾಫ್ಟ್ ನರ್ಸ್‌ಗಳ ಜೊತೆ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಸಿಬ್ಬಂದಿಯ ಸಮಸ್ಯೆಗಳನ್ನು ತೆರೆದ ಮನಸ್ಸಿನಿಂದ ಆಲಿಸಿದ ಮುಖ್ಯಮಂತ್ರಿ, ಅವರೆಲ್ಲರ ಕರ್ತವ್ಯ ಪ್ರಜ್ಞೆ ಅನುಕರಣೀಯ ಎಂದಿದ್ದಾರೆ. ಕೋವಿಡ್ ಸೋಂಕಿಗೆ ತುತ್ತಾಗಿ, ಗುಣಮುಖರಾದ ಬಳಿಕ, ಮತ್ತೆ ಸೇವೆಗೆ ಹಿಂದಿರುಗಿದ ಹಲವು ಸಿಬ್ಬಂದಿಯ ಮತ್ತು ಅವರ ಮನೆಯವರ ಆರೋಗ್ಯ ವಿಚಾರಿಸಿದ ಯಡಿಯೂರಪ್ಪ ಅವರ ಈ ನಡೆ ವೈದ್ಯರು, ಆರೋಗ್ಯ ಕಾರ್ಯಕರ್ತರ ಚೈತನ್ಯ ಹೆಚ್ಚಿಸಿತು.

ರಾಜ್ಯದಲ್ಲಿ ಒಟ್ಟು 21,574 ಸ್ಟಾಫ್ ನರ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಸ್ಟಾಫ್ ನರ್ಸ್‌ಗಳ ಕಾರ್ಯವನ್ನು ಉತ್ತೇಜಿಸಲು ಮಾಸಿಕ ವೇತನದ ಜೊತೆಗೆ ಹೆಚ್ಚುವರಿಯಾಗಿ ₹ 8 ಸಾವಿರ ವಿಶೇಷ ಕೋವಿಡ್ ಭತ್ಯೆ ನೀಡಲಾಗುತ್ತಿದೆ. ಕೋವಿಡ್‌ನಿಂದ ಮೃತಪಟ್ಟ ಸ್ಟಾಫ್ ನರ್ಸ್‌ಗಳಿಗೆ 'ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ವಿಮಾ ಯೋಜನೆ' ಅಡಿಯಲ್ಲಿ ₹ 50 ಲಕ್ಷ ನೀಡುವ ಸೌಲಭ್ಯವಿದ್ದು, ಈವರೆಗೆ ಆರು ಪ್ರಕರಣಗಳಿಗೆ ಅರ್ಜಿ ಸ್ವೀಕರಿಸಿದ್ದು, ಮೂರು ಪ್ರಕರಣಗಳಿಗೆ ಮೊತ್ತವನ್ನು ನೀಡಲಾಗಿದೆ ಎಂದರು.

ಸೇವಾ ನಿರತರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಸಂವಾದ ವೇಳೆ ಪ್ರಶ್ನಿಸಿದ ಮುಖ್ಯಮಂತ್ರಿ, 'ಕೋವಿಡ್ ಸಂದರ್ಭ ತಂದೊಡ್ಡಿರುವ ಸವಾಲುಗಳನ್ನು ಮಾನವೀಯ ನೆಲೆಗಟ್ಟಿನಲ್ಲಿ ಸಮರ್ಥವಾಗಿ ಎದುರಿಸಬೇಕಿದೆ. ಲಭ್ಯವಿರುವ ಸೌಲಭ್ಯಗಳನ್ನು ಪ್ರಾಮಾಣಿಕ ವಾಗಿ, ಪಾರದರ್ಶಕತೆಯಿಂದ ಬಳಸುವ ಅಗತ್ಯವಿದೆ' ಎಂದು ಕಿವಿಮಾತು ಹೇಳಿದ್ದಾರೆ. ಕೋವಿಡ್ ಆರಂಭವಾದ ದಿನದಿಂದಲೂ ಮನೆಗೇ ತೆರಳದೆ ಆಸ್ಪತ್ರೆಯಲ್ಲೇ ಮೊಕ್ಕಾಂ ಹೂಡಿರುವ ವೈದ್ಯರು ಹಾಗೂ ಸಿಬ್ಬಂದಿಯ ಕರ್ತವ್ಯ ಗಮನಿಸಿದ ಮುಖ್ಯಮಂತ್ರಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಲಸಿಕೆ ಪಡೆದಿದ್ದೀರಾ' ಎಂದು ವೈದ್ಯರನ್ನು ಪ್ರಶ್ನಿಸಿದ ಮುಖ್ಯಮಂತ್ರಿ, ನಿಮ್ಮ ಆರೋಗ್ಯ ರಕ್ಷಣೆಯೂ ಮುಖ್ಯ ಎಂಬ ಕಿವಿಮಾತು ಹೇಳಲು ಮರೆಯಲಿಲ್ಲ.

> **ವೈದ್ಯರು, ದಾದಿಯರು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರು ಸೇರಿದಂತೆ ಎಲ್ಲ ಸರ್ಕಾರಿ ನೌಕರರು ತಮ್ಮ ಪ್ರಾಣದ ಹಂಗನ್ನೇ ತೊರೆದು, ಕುಟುಂಬವನ್ನೆ ಒತ್ತೆಯಿಟ್ಟು ಕೋವಿಡ್ ನಿಗ್ರಹದಲ್ಲಿ ತೊಡಗಿದ್ದಾರೆ. ಅವರೆಲ್ಲರ ಅವಿಶ್ರಾಂತ ದುಡಿಮೆಯನ್ನು ಸದಾ ಸ್ಮರಿಸೋಣ.**
> **ಬಿ.ಎಸ್. ಯಡಿಯೂರಪ್ಪ**, ಮುಖ್ಯಮಂತ್ರಿ

ಲಾಕ್‌ಡೌನ್‌ನಲ್ಲೂ ಎಚ್ಚರಿಕೆಯ ಹೆಜ್ಜೆ

ಕೋವಿಡ್ ನಿಯಂತ್ರಣಕ್ಕಾಗಿ ಮೇ 10ರಿಂದ ರಾಜ್ಯದಲ್ಲಿ ಲಾಕ್‌ಡೌನ್ ಜಾರಿಯಲ್ಲಿದೆ. ಮೊದಲ ದಿನ ಪೊಲೀಸರು ಜನರ ಮೇಲೆ ಕಂಡಕಂಡಲ್ಲಿ ಲಾಠಿ ಬೀಸಿದ್ದರು. ತಕ್ಷಣವೇ ಮಧ್ಯಪ್ರವೇಶಿಸಿದ್ದ ಯಡಿಯೂರಪ್ಪ, ಜನರ ಮೇಲೆ ದೌರ್ಜನ್ಯ ನಡೆಸದಂತೆ ತಾಕೀತು ಮಾಡಿದ್ದರು. ಆ ಬಳಿಕ ಪರಿಸ್ಥಿತಿ ಪೂರ್ಣ ಬದಲಾಯಿತು.

ಆಸ್ಪತ್ರೆಗಳಿಗೆ ಮೂಲಸೌಕರ್ಯ: ದೇಶಕ್ಕೇ ಮಾದರಿಯಾದ ಕರ್ನಾಟಕ

ಆರೋಗ್ಯ ವ್ಯವಸ್ಥೆಯಲ್ಲಿ ಕ್ರಾಂತಿ

ಬೆಂಗಳೂರು: ಕೋವಿಡ್ ಎರಡನೇ ಅಲೆಯಿಂದ ಆರೋಗ್ಯ ಕ್ಷೇತ್ರದಲ್ಲಿ ಅನಿರೀಕ್ಷಿತವಾಗಿ ಸೃಷ್ಟಿಯಾಗಿದ್ದ ತುರ್ತು ಪರಿಸ್ಥಿತಿಗೆ ಇಡೀ ದೇಶವೇ ತಲ್ಲಣಗೊಂಡಿದೆ. ಇಂತಹ ಸಂದರ್ಭದಲ್ಲಿ ಕೋವಿಡ್ ನಿಯಂತ್ರಣಕ್ಕೆ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಿರುವ ರಾಜ್ಯ ಸರ್ಕಾರ, ಅಚ್ಚರಿ ಪಡುವಂತೆ ವೈದ್ಯಕೀಯ ವ್ಯವಸ್ಥೆಗೆ ಬಲ ತುಂಬಿದೆ.

ರಾಜ್ಯದಲ್ಲಿ ಈ ವರ್ಷ ಮಾರ್ಚ್ ಬಳಿಕ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಪಡೆದುಕೊಂಡಿತು. ಇದರ ಬೆನ್ನಲ್ಲಿಯೇ ಮುಂಜಾಗ್ರತೆ ವಹಿಸಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ತಮ್ಮ ರಾಜಕೀಯ ಅನುಭವವನ್ನು ಒರೆಗಚ್ಚಿ ಮುತ್ಸದ್ದಿತನವನ್ನು ಮೆರೆದರು. ಅಧಿಕಾರಿಗಳ ಜತೆಗೆ ಪ್ರತಿ ನಿತ್ಯ ಸಭೆ ನಡೆಸುವ ಮೂಲಕ ವಸ್ತುಸ್ಥಿತಿಯ ಬಗ್ಗೆ ಮಾಹಿತಿ ಪಡೆದುಕೊಳ್ಳುವ ಜತೆಗೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ತಜ್ಞರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿದರು. ಪರಿಣಾಮ ಸೋಂಕು ನಿಯಂತ್ರಣಕ್ಕೆ ಕಾರ್ಯತಂತ್ರಗಳನ್ನು ಹೆಣೆದು, ವೈದ್ಯಕೀಯ ವ್ಯವಸ್ಥೆಗೆ ಅತ್ಯಾಧುನಿಕ ಸ್ಪರ್ಶ ನೀಡಲು ಸಾಧ್ಯವಾಯಿತು.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಿಂದಲೇ ವೈದ್ಯಕೀಯ ವ್ಯವಸ್ಥೆಯನ್ನು ಬಲಗೊಳಿಸಲಾಯಿತು. ಗ್ರಾಮೀಣ ಪ್ರದೇಶದ ಜನರು ಗಂಟಲು ದ್ರವದ ಮಾದರಿಗಳನ್ನು ಪರೀಕ್ಷೆ ನೀಡಲು ನಗರ ಪ್ರದೇಶಗಳಿಗೆ ತೆರಳುವುದನ್ನು ತಪ್ಪಿಸಲು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೇ ವ್ಯವಸ್ಥೆ ಮಾಡಲಾಯಿತು. ಸೋಂಕಿತರ ಸಂಖ್ಯೆ ಏರಿಕೆ ಕಂಡು, ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕ, ಐಸಿಯು ಹಾಸಿಗೆ, ವೆಂಟಿಲೇಟರ್‌ಗಳಿಗೆ ಬೇಡಿಕೆ ಹೆಚ್ಚಿದಾಗ ಲಭ್ಯ ಸೌಲಭ್ಯಗಳ ದಕ್ಷ ನಿರ್ವಹಣೆಗೆ ಸರ್ಕಾರ ಕ್ರಮ ಕೈಗೊಂಡಿತು.

ಖಾಸಗಿ ಆಸ್ಪತ್ರೆಗಳನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡು, ಶಿಫಾರಸು ಮಾಡುವ ರೋಗಿಗಳಿಗೆ ಶೇ 50ರಷ್ಟು ಹಾಸಿಗೆಗಳನ್ನು ಅಲ್ಲಿ ವ್ಯವಸ್ಥೆ ಮಾಡಲಾಯಿತು. ಕೋವಿಡ್ ಆರೈಕೆ ಕೇಂದ್ರಗಳ ನಿರ್ಮಾಣ, ಟ್ರಯಾಜ್ ಸೆಂಟರ್‌ಗಳನ್ನು ಗುರುತಿಸುವಿಕೆ ಸೇರಿದಂತೆ ವಿವಿಧ ಕ್ರಮಗಳಿಂದ ಎಲ್ಲರಿಗೂ ಗುಣಮಟ್ಟದ ಚಿಕಿತ್ಸೆ ಒದಗಿಸಲು ಸಾಧ್ಯವಾಯಿತು.

ಆಸ್ಪತ್ರೆಗಳಿಗೆ ಆಮ್ಲಜನಕ: ರಾಜ್ಯದ ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ಮಾತ್ರ ಸೀಮಿತವಾಗಿದ್ದ ಆಮ್ಲಜನಕ ಪೂರೈಕೆ ಹಾಗೂ ವಿವಿಧ ಅತ್ಯಾಧುನಿಕ ಸೌಲಭ್ಯಗಳನ್ನು ಕೋವಿಡ್ ಕಾಣಿಸಿಕೊಂಡ ಬಳಿಕ ಸರ್ಕಾರವು ಸಾಮಾನ್ಯ ಹಾಸಿಗೆಗಳಿಗೆ ಕೂಡ ವಿಸ್ತರಿಸಿತು. ಈ ಮೂಲಕ ಸರ್ಕಾರಿ ಆಸ್ಪತ್ರೆಗಳ ಸ್ವರೂಪವನ್ನು ಸಂಪೂರ್ಣವಾಗಿ ಬದಲಾಯಿಸಲಾಯಿತು. ಲಭ್ಯವಿರುವ ಎಲ್ಲ ಮೂಲಗಳಿಂದ ಆಮ್ಲಜನಕ ಸಂಗ್ರಹಿಸುವ ಜೊತೆಗೆ ರೆಮ್‌ಡಿಸಿವಿರ್ ಔಷಧವನ್ನು ಹೆಚ್ಚುವರಿಯಾಗಿ ಖರೀದಿಸಿ, ಔಷಧ ನಿಯಂತ್ರಕರ ಪೋರ್ಟಲ್ ಮೂಲಕವೇ ಬೇಡಿಕೆ ಆಧರಿಸಿ ವಿತರಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. ಇದರಿಂದಾಗಿ ಆಸ್ಪತ್ರೆಗಳಿಗೆ ಅಗತ್ಯತೆಗೆ ಅನುಸಾರವಾಗಿ ಈ ಔಷಧವು ದೊರೆಯಿತು.

ಕಾಳಸಂತೆಯಲ್ಲಿ ರೆಮ್‌ಡಿಸಿವಿರ್ ಇಂಜೆಕ್ಷನ್ ಮಾರಾಟಕ್ಕೆ ಕೂಡ ಕಡಿವಾಣ ಹಾಕಲಾಯಿತು. ಈಗ ಈ ಔಷಧಕ್ಕೆ ಬೇಡಿಕೆ ಕಡಿಮೆಯಾಗಿರುವ ಕಾರಣ ಔಷಧ ವಿತರಕರಿಂದ ಆಸ್ಪತ್ರೆಗಳು ಹಾಗೂ ಸಾರ್ವಜನಿಕರು ನೇರವಾಗಿ ಖರೀದಿಸಲು ಅವಕಾಶವನ್ನು ನೀಡಲಾಗಿದೆ. ಅದೇ ರೀತಿ, ಹಾಸಿಗೆಗಳ ಕೊರತೆ ನೀಗಿಸಲು ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಸ್ಟೆಪ್ ಡೌನ್ ಆಸ್ಪತ್ರೆಗಳನ್ನು ಸ್ಥಾಪಿಸಲಾಯಿತು. ಇದಕ್ಕಾಗಿ ವಿವಿಧ ತಾರಾ ಹೋಟೆಲ್‌ಗಳನ್ನು ಕೂಡ ಬಳಸಿಕೊಳ್ಳಲಾಯಿತು.

ಆರೈಕೆ ಕೇಂದ್ರಗಳ ನಿರ್ಮಾಣ: ಸೋಂಕು ಲಕ್ಷಣಗಳು ಅಷ್ಟಾಗಿ ಇಲ್ಲದವರಿಗೆ ಚಿಕಿತ್ಸೆ ಒದಗಿಸಲು ಕೋವಿಡ್ ಕೇರ್ ಸೆಂಟರುಗಳನ್ನು ಸ್ಥಾಪಿಸಲಾಯಿತು. ಭಾರತೀಯ ಸೇನೆಯ ವತಿಯಿಂದಲೂ ಕೋವಿಡ್ ಆಸ್ಪತ್ರೆ ಸ್ಥಾಪಿಸಲಾಯಿತು. ಹೋಬಳಿ ಮಟ್ಟದಲ್ಲಿ ಕೋವಿಡ್ ಕೇರ್ ಸೆಂಟರುಗಳನ್ನು ಸ್ಥಾಪಿಸಿ, ಸೋಂಕಿತರ ಆರೈಕೆಗೆ ಕ್ರಮ ವಹಿಸಲಾಗುತ್ತಿದೆ. ಸೋಂಕಿನ ತೀವ್ರತೆಗೆ ಅನುಗುಣವಾಗಿ ರೋಗಿಗಳನ್ನು ವರ್ಗೀಕರಣ ಮಾಡಿ, ಆನ್ ಲೈನ್ ವ್ಯವಸ್ಥೆಯ ಮೂಲಕ ಹಾಸಿಗೆಗಳ ಹಂಚಿಕೆ ಮಾಡಲಾಗುತ್ತಿದೆ. ಈ ಮೂಲಕ ತ್ವರಿತವಾಗಿ ಹಾಗೂ ಪಾರದರ್ಶಕವಾಗಿ ಚಿಕಿತ್ಸೆ ಒದಗಿಸಲಾಗುತ್ತಿದೆ.

ರಾಜ್ಯದ ಕೈಗಾರಿಕೋದ್ಯಮಿಗಳು, ಕಾರ್ಪೊರೇಟ್ ಸಂಸ್ಥೆಗಳು, ವಿದೇಶಿ ಸರ್ಕಾರಗಳು ರಾಜ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಾಡ್ಯುಲಾರ್ ಐಸಿಯು ಘಟಕಗಳು, ವೈದ್ಯಕೀಯ ಆಮ್ಲಜನಕದ ಸಿಲಿಂಡರುಗಳು, ವೈದ್ಯಕೀಯ ಆಮ್ಲಜನಕ ಸಾಂದ್ರಕದ ಸಾಧನಗಳು, ವೆಂಟಿಲೇಟರುಗಳು ಮತ್ತಿತರ ಸೌಲಭ್ಯಗಳನ್ನು ಒದಗಿಸಿ, ಔದಾರ್ಯ ಮೆರೆದಿವೆ. ಜೆಎಸ್‌ಡಬ್ಲ್ಯು ಮತ್ತು ವೇದಾಂತ ಕಂಪೆನಿಯು ಕೋವಿಡ್ ಕೇರ್ ಫೀಲ್ಡ್ ಆಸ್ಪತ್ರೆಗಳನ್ನು ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಾರಂಭಿಸಿವೆ. ಈ ಮೂಲಕ ವೈದ್ಯಕೀಯ ಕ್ಷೇತ್ರವನ್ನು ಬಲಗೊಳಿಸಲು ನೆರವಾಗಿವೆ.

ತುಮಕೂರಿನ ಸಿದ್ದಗಂಗಾ ಮಠ, ಕೊಪ್ಪಳದ ಗವಿಸಿದ್ದೇಶ್ವರ ಮಠ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ಆದಿಚುಂಚನಗಿರಿ ಮಹಾಸಂಸ್ಥಾನ ಮತ್ತಿತರ ಧಾರ್ಮಿಕ ಹಾಗೂ ಸಾಮಾಜಿಕ ಸಂಸ್ಥೆಗಳು ಕೂಡ ಸರ್ಕಾರದೊಂದಿಗೆ ಕೋವಿಡ್ ನಿಯಂತ್ರಣದಲ್ಲಿ ಕೈಜೋಡಿಸಿವೆ. ಇದರಿಂದಾಗಿ ರಾಜ್ಯದಲ್ಲಿ ಸೋಂಕು ದೃಢ ಪ್ರಮಾಣ ಇಳಿಕೆಯಾಗುವ ಜತೆಗೆ ವೈದ್ಯಕೀಯ ವ್ಯವಸ್ಥೆಯು ಕಂಡು ಕೇಳರಿಯದ ರೀತಿಯಲ್ಲಿ ಪ್ರಗತಿ ಹೊಂದಿದೆ. ಎಲ್ಲೆಡೆ ಗುಣಮಟ್ಟದ ವೈದ್ಯಕೀಯ ವ್ಯವಸ್ಥೆಯು ಸಾಕಾರಗೊಂಡಿದೆ.



ಟಿವಿಎಸ್ ಸಂಸ್ಥೆ ನೀಡಿದ ವೈದ್ಯಕೀಯ ಆಮ್ಲಜನಕ ಸಾಂದ್ರಕ ಸಾಧನಗಳನ್ನು ಉದ್ಘಾಟಿಸಿದ ಬಿ.ಎಸ್. ಯಡಿಯೂರಪ್ಪ

ಆಮ್ಲಜನಕ ಉತ್ಪಾದನಾ ಘಟಕಗಳಿಗೆ ಆದ್ಯತೆ

- **127** ರಾಜ್ಯದ ವೈದ್ಯಕೀಯ ಕಾಲೇಜುಗಳು, ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು ಸೇರಿದಂತೆ ವಿವಿಧೆಡೆ ಸ್ಥಾಪಿಸಲಾಗುತ್ತಿರುವ ಆಮ್ಲಜನಕ ಉತ್ಪಾದನಾ ಘಟಕಗಳು
- **62** ರಾಜ್ಯ ಸರ್ಕಾರದ ಅನುದಾನದಲ್ಲಿ ಆಮ್ಲಜನಕ ಉತ್ಪಾದನಾ ಘಟಕಗಳ ಸ್ಥಾಪನೆ
- **28** ಕೇಂದ್ರ ಸರ್ಕಾರದಿಂದ ಹಂಚಿಕೆಯಾದ ಆಮ್ಲಜನಕ ಉತ್ಪಾದನಾ ಘಟಕಗಳು
- **24** ಎನ್‌ಎಚ್‌ಎಐ ಸ್ಥಾಪಿಸಿದ ಆಮ್ಲಜನಕ ಉತ್ಪಾದನಾ ಘಟಕಗಳು
- **11** ವಿವಿಧ ಕಂಪನಿಗಳು ಸಿಎಸ್‌ಆರ್ ನಿಧಿಯಡಿ ಒದಗಿಸಿದ ಘಟಕಗಳು
- **2** ವಿದೇಶಗಳು ಒದಗಿಸಿದ ಆಮ್ಲಜನಕ ಉತ್ಪಾದನಾ ಘಟಕಗಳು

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ವೈದ್ಯಕೀಯ ಆಮ್ಲಜನಕಕ್ಕೆ ಆದ್ಯತೆ

ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಆಸ್ಪತ್ರೆಗಳಲ್ಲಿ ದಿಢೀರ್ ಆಗಿ ಆಮ್ಲಜನಕಕ್ಕೆ ಬೇಡಿಕೆ ಹೆಚ್ಚಿತ್ತು. ಹೀಗಾಗಿ, ಕೇಂದ್ರ ಸರ್ಕಾರದ ಸಹಯೋಗದಲ್ಲಿ ಆಮ್ಲಜನಕ ಪೂರೈಕೆಗೆ ರಾಜ್ಯ ಸರ್ಕಾರವು ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಿತು. ಅಗತ್ಯವಿರುವ ವೈದ್ಯಕೀಯ ಆಮ್ಲಜನಕವನ್ನು ಸರ್ಕಾರವು ಹೊರ ರಾಜ್ಯಗಳಿಂದ ಕೂಡ ತರಿಸುವಲ್ಲಿ ಯಶಸ್ವಿಯಾಯಿತು. ಮೂರು ಅಂಶಗಳ ಕಾರ್ಯತಂತ್ರ ಹೆಣೆದ ಸರ್ಕಾರ, ದ್ರವರೂಪದ ಆಮ್ಲಜನಕದ ಪೂರೈಕೆಯನ್ನು ಹೆಚ್ಚಳ ಮಾಡಿತು.

ಆಮ್ಲಜನಕದ ಜನರೇಟರ್ ಮೂಲಕ ಸ್ಥಳೀಯವಾಗಿ ಆಮ್ಲಜನಕ ಉತ್ಪಾದನೆಗೆ ಪ್ರೋತ್ಸಾಹ ನೀಡಿತು. ಆಮ್ಲಜನಕದ ಸಾಂದ್ರಕ ಸಾಧನಗಳು ಮತ್ತು ಸಿಲಿಂಡರ್‌ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲಾಯಿತು. ಬಹರೇನ್‌ನಿಂದ 40 ಟನ್, ಕುವೈತ್‌ನಿಂದ 100 ಟನ್ ಹಾಗೂ ಜೆಮ್‌ಶೆಡ್ ಪುರದಿಂದ 120 ಟನ್ ವೈದ್ಯಕೀಯ ಆಮ್ಲಜನಕವನ್ನು ತರಿಸಿಕೊಳ್ಳಲಾಯಿತು. ಇದರಿಂದಾಗಿ ಆಮ್ಲಜನಕದ ಕೊರತೆಯು ನೀಗಿತು. ಆಸ್ಪತ್ರೆಗಳಲ್ಲಿ ಕೂಡ ಆಮ್ಲಜನಕ ಸಂಗ್ರಹಣಾ ಘಟಕಗಳು ತಲೆಯೆತ್ತಲು ಸಾಧ್ಯವಾಯಿತು.

ಆಸ್ಪತ್ರೆಗಳಲ್ಲಿ ಹಾಸಿಗೆಗಳ ಹೆಚ್ಚಳ

ಹಾಸಿಗೆಗಳು	2020 ಮಾರ್ಚ್	2021 ಮೇ
ಆರೋಗ್ಯ ಇಲಾಖೆ ವ್ಯಾಪ್ತಿಯಲ್ಲಿ		
ವೈದ್ಯಕೀಯ ಆಮ್ಲಜನಕ ಹಾಸಿಗೆಗಳು	1,970	24,000
ಐಸಿಯು ಹಾಸಿಗೆಗಳು	444	1,145
ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು	610	2,059
ಎಚ್.ಎಫ್.ಎನ್.ಸಿ. ಸೌಲಭ್ಯ (ಆಮ್ಲಜನಕ ಪೂರೈಕೆ ವ್ಯವಸ್ಥೆ)	--	1,248
ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ		
ವೈದ್ಯಕೀಯ ಆಮ್ಲಜನಕ ಹಾಸಿಗೆಗಳು	4,700	9,405
ಐಸಿಯು ಹಾಸಿಗೆಗಳು	341	646
ಎಚ್.ಎಫ್.ಎನ್.ಸಿ.	15	570

ಪ್ರಯೋಗಾಲಯಗಳ ಸಂಖ್ಯೆ ಏರಿಕೆ

ದೇಶದಲ್ಲಿ ಮೊದಲ ಕೋವಿಡ್ ಪ್ರಕರಣ ವರದಿಯಾದಾಗ ಮಾದರಿಗಳ ಪರೀಕ್ಷೆಗೆ ರಾಜ್ಯದಲ್ಲಿ ಒಂದೇ ಒಂದು ಪ್ರಯೋಗಾಲಯ ಇರಲಿಲ್ಲ. 2020ರ ಫೆಬ್ರವರಿ ಅಂತ್ಯಕ್ಕೆ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಹಾಗೂ ಎನ್‌ಐವಿ ಬೆಂಗಳೂರು ಕೇಂದ್ರದ ಪ್ರಯೋಗಾಲಯಕ್ಕೆ ಐಸಿಎಂಆರ್ ಅನುಮೋದನೆ ನೀಡಿತು. ಬಳಿಕ ಸರ್ಕಾರವು ಪ್ರಯೋಗಾಲಯಗಳ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ ಪರೀಕ್ಷೆಗಳ ಸಂಖ್ಯೆಯನ್ನು ಏರಿಕೆ ಮಾಡಿತು. ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಮಾರುಕಟ್ಟೆ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶಗಳಲ್ಲಿ ಗಂಟಲ ದ್ರವ ಮಾದರಿಗಳ ಸಂಗ್ರಹಕ್ಕೆ ವ್ಯವಸ್ಥೆ ಮಾಡಲಾಯಿತು.

ಸದ್ಯ ರಾಜ್ಯದಲ್ಲಿ ಐಸಿಎಂಆರ್‌ನಿಂದ 196 ಪ್ರಯೋಗಾಲಯಗಳು ಮಾನ್ಯತೆ ಪಡೆದಿವೆ. ಇದರಲ್ಲಿ 68 ಸರ್ಕಾರಿ ಪ್ರಯೋಗಾಲಯಗಳಾಗಿವೆ. ದಿನವೊಂದಕ್ಕೆ 2 ಲಕ್ಷಕ್ಕೂ ಅಧಿಕ ಮಾದರಿಗಳನ್ನು ಪರೀಕ್ಷಿಸುವ ಸಾಮರ್ಥ್ಯವನ್ನು ಪ್ರಯೋಗಾಲಯಗಳು ಹೊಂದಿವೆ. ರಾಜ್ಯದಲ್ಲಿ ಈವರೆಗೆ 3 ಕೋಟಿಗೂ ಅಧಿಕ ಪರೀಕ್ಷೆಗಳನ್ನು ನಡೆಸಲಾಗಿದೆ. ಇದರಲ್ಲಿ ಶೇ 80 ರಷ್ಟು ಪರೀಕ್ಷೆಗಳನ್ನು ಆರ್‌ಟಿ-ಪಿಸಿಆರ್ ಮಾದರಿಯಲ್ಲಿ ಮಾಡಲಾಗಿದೆ.

ರಾಜ್ಯಕ್ಕೆ ಆಮ್ಲಜನಕ ಹಂಚಿಕೆ ಹೆಚ್ಚಳ

- **1,015** ಟನ್ — ಕೇಂದ್ರ ಸರ್ಕಾರದಿಂದ ವೈದ್ಯಕೀಯ ಆಮ್ಲಜನಕ ಹಂಚಿಕೆ
- **765** ಟನ್ — ರಾಜ್ಯದಲ್ಲಿಯೇ ದೊರೆಯುತ್ತಿರುವ ವೈದ್ಯಕೀಯ ಆಮ್ಲಜನಕ
- **60** ಟನ್ — ಪಿಎಸ್‌ಎ ಪ್ಲಾಂಟ್‌ಗಳಿಂದ ಹಂಚಿಕೆಯಾಗಿರುವ ವೈದ್ಯಕೀಯ ಆಮ್ಲಜನಕ
- **160** ಟನ್ — ಒಡಿಶಾದಿಂದ ಪೂರೈಕೆಯಾಗುತ್ತಿರುವ ವೈದ್ಯಕೀಯ ಆಮ್ಲಜನಕ
- **30** ಟನ್ — ವಿಶಾಖಪಟ್ಟಣದಿಂದ ಪೂರೈಕೆಯಾಗುತ್ತಿರುವ ವೈದ್ಯಕೀಯ ಆಮ್ಲಜನಕ

ಕ್ಷೇಮ ಕೇಂದ್ರಗಳ ನಿರ್ಮಾಣದಲ್ಲಿ ಮುಂಚೂಣಿ

ಗ್ರಾಮೀಣ ಪ್ರದೇಶಗಳ ಜನರಿಗೆ ಪ್ರಾಥಮಿಕ ಹಂತದ ಆರೋಗ್ಯ ಸೇವೆ ನೀಡುವ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಸ್ಥಾಪನೆಯಲ್ಲಿ ಕರ್ನಾಟಕವು ದೇಶದಲ್ಲಿಯೇ ಮುಂಚೂಣಿಯಲ್ಲಿದ್ದು, ಈ ಯೋಜನೆಯ ಅನುಷ್ಠಾನದಲ್ಲಿ ಉತ್ತಮ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 2020-21ನೇ ಸಾಲಿನಲ್ಲಿ ಉಪಕೇಂದ್ರಗಳ ವಿಭಾಗದಲ್ಲಿ 2,263 ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಆರಂಭಿಸುವ ಗುರಿಯನ್ನು ಕೇಂದ್ರ ಸರ್ಕಾರ ನೀಡಿತ್ತು. ರಾಜ್ಯ ಸರ್ಕಾರವು ಈ ವರ್ಷ ಮಾರ್ಚ್ ಅಂತ್ಯಕ್ಕೆ 3,300 ಕೇಂದ್ರಗಳನ್ನು ಆರಂಭಿಸಿದೆ. ನಿಗದಿತ ಗುರಿಗಿಂತ ಶೇ 146 ರಷ್ಟು ಸಾಧನೆಯನ್ನು ಮಾಡಿದೆ.

2,096 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಮಾರ್ಪಾಡು ಮಾಡುವ ಗುರಿಯನ್ನು ಕೇಂದ್ರ ಸರ್ಕಾರ ನೀಡಿದ್ದು, ಈಗಾಗಲೇ 2,168 ಕೇಂದ್ರಗಳು ಪೂರ್ಣಗೊಂಡಿವೆ. ನಿಗದಿತ ಗುರಿಗಿಂತ ಶೇ 103 ರಷ್ಟು ಸಾಧನೆಯಾಗಿದೆ. 294 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿಸುವ ಗುರಿಯಲ್ಲಿ 364 ಕೇಂದ್ರಗಳನ್ನು ಈಗಾಗಲೇ ರೂಪಿಸಲಾಗಿದೆ. ಶೇ 124 ರಷ್ಟು ಸಾಧನೆಯಾಗಿದೆ.

ರಾಜ್ಯದಲ್ಲಿ ಒಟ್ಟಾರೆಯಾಗಿ 4,653 ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಸ್ಥಾಪಿಸುವ ಗುರಿಯನ್ನು ಕೇಂದ್ರ ಸರ್ಕಾರ ನೀಡಿತ್ತು. ಈ ಗುರಿಯನ್ನು ಮೀರಿರುವ ಸರ್ಕಾರ, 5,832 ಕೇಂದ್ರಗಳನ್ನು ಮಾರ್ಪಾಡುಗೊಳಿಸಿದೆ. ಈ ಮೂಲಕ ಒಟ್ಟಾರೆಯಾಗಿ ಶೇ 125 ರಷ್ಟು ಸಾಧನೆ ಮಾಡುವ ಮೂಲಕ ದೇಶಕ್ಕೇ ಮಾದರಿಯಾಗಿದೆ.

ಕೋವಿಡ್ ಲಸಿಕೆ: ₹843 ಕೋಟಿ ಮೀಸಲು

ಬೆಂಗಳೂರು: ರಾಜ್ಯ ಸರ್ಕಾರ ಲಸಿಕೆ ವಿತರಣಾ ಅಭಿಯಾನಕ್ಕೆ ವೇಗ ನೀಡಿದ್ದು, ಈಗಾಗಲೇ ಗುರುತಿಸಲಾದ ಫಲಾನುಭವಿಗಳಿಗೆ ಲಸಿಕೆ ಒದಗಿಸುವ ಪ್ರಕ್ರಿಯೆಯಲ್ಲಿ ಕೂಡ ರಾಜ್ಯವು ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿದೆ. ಲಸಿಕೆ ಖರೀದಿಗಾಗಿಯೇ ₹ 843 ಕೋಟಿ ಮೀಸಲಿಟ್ಟಿದೆ.

18ರಿಂದ 44 ವರ್ಷದವರಿಗೂ ಉಚಿತವಾಗಿ ಲಸಿಕೆ ಒದಗಿಸುವ ಸಂಬಂಧ ಎರಡು ಕೋಟಿ ಡೋಸ್ ಲಸಿಕೆ ಖರೀದಿಗೆ ಸರ್ಕಾರ ಮುಂದಾಗಿದೆ.

ಉಪ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ರಾಜ್ಯದ ಎಲ್ಲೆಡೆ ಕೋವಿಡ್ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ. ಕೇಂದ್ರ ಸರ್ಕಾರ ಒದಗಿಸುವ ಲಸಿಕೆಯ ಜತೆಗೆ ರಾಜ್ಯ ಸರ್ಕಾರ ಕೂಡ ಲಸಿಕೆ ಉತ್ಪಾದನಾ ಕಂಪನಿಗಳಿಂದ ನೇರವಾಗಿ ಖರೀದಿ ಮಾಡುತ್ತಿದೆ. 45 ವರ್ಷ ಮೇಲ್ಪಟ್ಟವರಿಗೆ ಹೆಚ್ಚಿನ ಅಪಾಯ ಇರುವುದರಿಂದ ಅವರಿಗೆ ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ ಆದ್ಯತೆ ನೀಡಲಾಗಿದೆ.

18ರಿಂದ 44 ವರ್ಷದವರೆಗಿನ ಮುಂಚೂಣಿ ಕಾರ್ಯಕರ್ತರಿಗೆ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಒದಗಿಸಲುಸರ್ಕಾರಕ್ರಮಕೈಗೊಂಡಿದೆ. ಹಿರಿಯ ನಾಗರಿಕರು ಹಾಗೂ ಅಂಗವಿಕಲರಿಗೆ ಮನೆಯ ಸಮೀಪವೇ ಲಸಿಕೆ ಒದಗಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಸದ್ಯ ರಾಜ್ಯದಲ್ಲಿ 3,630 ಸರ್ಕಾರಿ ಹಾಗೂ 180 ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದೆ.

ಈಗಾಗಲೇ 1.48 ಕೋಟಿಗೂ ಅಧಿಕ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ಒದಗಿಸಲಾಗಿದೆ.


ಕೊಳಗೇರಿ ಪ್ರದೇಶದಲ್ಲಿ ಹಮ್ಮಿಕೊಳ್ಳಲಾದ ಲಸಿಕೆ ವಿತರಣಾ ಅಭಿಯಾನವನ್ನು ಬಿ.ಎಸ್. ಯಡಿಯೂರಪ್ಪ ಅವರು ಪರಿಶೀಲನೆ ನಡೆಸುತ್ತಿರುವುದು

ಕೈಯಲ್ಲಿ ಹಣವೇ ಇಲ್ಲ, ಮಾಡಲು ದುಡಿಮೆ ಇಲ್ಲ– ಶುಲ್ಕ ಕಟ್ಟುವುದು ಹೇಗೆ– ಸಾರ್ವಜನಿಕರ ಪ್ರಶ್ನೆ

ವಿದ್ಯುತ್ ದರ ಏರಿಕೆ: ತೀವ್ರ ಆಕ್ರೋಶ

ಬೆಂಗಳೂರು: ರಾಜ್ಯ ಸರ್ಕಾರವು ಪ್ರತಿ ಯುನಿಟ್‌ಗೆ 30 ಪೈಸೆ ವಿದ್ಯುತ್ ದರ ಹೆಚ್ಚಿಸಿರುವುದು ಮತ್ತು ಏಪ್ರಿಲ್‌ನಿಂದಲೇ ಇದು ಅನ್ವಯವಾಗಲಿದೆ ಎಂದು ಹೇಳಿರುವುದು ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಕೈಯಲ್ಲಿ ದುಡ್ಡೇ ಇಲ್ಲದಿರುವಾಗ ಹೆಚ್ಚುವರಿ ವಿದ್ಯುತ್ ಶುಲ್ಕವನ್ನು ಭರಿಸುವುದು ಹೇಗೆ ಎಂದು ಸಾರ್ವಜನಿಕರು ಕೇಳಿದರೆ, ವ್ಯಾಪಾರ–ವಹಿವಾಟು ಇಲ್ಲದೆ ಕಂಪನಿಗಳನ್ನು ಮುಚ್ಚುವ ಸ್ಥಿತಿಯಲ್ಲಿದ್ದೇವೆ. ಈ ಸಮಯದಲ್ಲಿ ವಿದ್ಯುತ್ ದರ ಏರಿಸಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಉದ್ಯಮಿಗಳು ಅಳಲು ತೋಡಿಕೊಳ್ಳುತ್ತಾರೆ.

‘ಸಣ್ಣ ಕೈಗಾರಿಕೆಗಳಿಗೆ ಹೊರೆ’



‘ಒಂದೂವರೆ ವರ್ಷಗಳಿಂದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (ಎಂಎಸ್‌ಎಂಇ) ಬಹಳ ತೊಂದರೆಗೆ ಸಿಲುಕಿವೆ. ಒಂದು ವರ್ಷದವರೆಗೆ ವಿದ್ಯುತ್ ದರವನ್ನು ಹೆಚ್ಚಿಸಬಾರದು, ಇರುವ ದರವನ್ನೂ ಕಡಿತಗೊಳಿಸಬೇಕು ಎಂದು ನಾವು ಸರ್ಕಾರಕ್ಕೆ ಮನವಿ ಮಾಡಿದ್ದೆವು. ಆದರೂ ದರ ಏರಿಸಿರುವುದು ಸರಿಯಲ್ಲ’ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಅಧ್ಯಕ್ಷ ಕೆ.ಬಿ. ಅರಸಪ್ಪ ಅಸಮಾಧಾನ ವ್ಯಕ್ತಪಡಿಸಿದರು.

’ರಾಜ್ಯದಲ್ಲಿ 6.5 ಲಕ್ಷಕ್ಕೂ ಅಧಿಕ ಎಂಎಸ್‌ಎಂಇಗಳು ಇವೆ. ಈಗ ವಿದ್ಯುತ್ ದರ ಏರಿಕೆ ಮಾಡಿರುವುದರಿಂದ ಇದಕ್ಕೆ ಪೂರಕವಾಗಿ ನಿರ್ವಹಣಾ ವೆಚ್ಚವೂ ಹೆಚ್ಚಲಿದೆ. ಒಂದು ತಿಂಗಳಲ್ಲೇ ಪೆಟ್ರೋಲ್, ಡೀಸೆಲ್ ಬೆಲೆ ₹10 ಜಾಸ್ತಿ ಆಗಿದೆ. ಬೇರೆ ಎಲ್ಲ ರಾಜ್ಯಗಳಲ್ಲಿ ಸಣ್ಣ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ. ನಮ್ಮ ರಾಜ್ಯದಲ್ಲಿ ಮಾತ್ರ ರಫ್ತು ಆಧಾರದ ಬೃಹತ್ ಕೈಗಾರಿಕೆಗಳಿಗಷ್ಟೇ ಅವಕಾಶ ನೀಡಲಾಗಿದೆ. ಎಂಎಸ್‌ಇ ಬಗ್ಗೆ ನಿರ್ಲಕ್ಷ್ಯ ತಾಳಲಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಒಂದೂವರೆ ತಿಂಗಳಿನಿಂದ ಲಾಕ್‌ಡೌನ್ ಇದೆ. ಕಟ್ಟಡದ ಬಾಡಿಗೆ, ಸಿಬ್ಬಂದಿಗೆ ವೇತನ, ಭವಿಷ್ಯ ನಿಧಿ, ವಿಮೆ, ಬ್ಯಾಂಕ್ ಸಾಲ ಪಾವತಿ ಮಾಡಬೇಕು. ಇಷ್ಟೊಂದು ಹೊರೆಯ ನಡುವೆಯೂ ವಿದ್ಯುತ್ ದರ ಏರಿಸಿದರೆ ಹೇಗೆ’ ಎಂದು ಪ್ರಶ್ನಿಸಿದರು.

‘ಒಂದು ವರ್ಷ ದರ ಏರಿಸಬಾರದು’



‘ಲಾಕ್‌ಡೌನ್ ಘೋಷಿಸಿರುವುದು ಕೈಗಾರಿಕೆಗಳು ಸಾಮಾನ್ಯ ಸ್ಥಿತಿಗೆ ಮರಳಲು ಇನ್ನೂ ಎರಡು ವರ್ಷಗಳು ಬೇಕು. ಇಂತಹ ಸಂದರ್ಭದಲ್ಲಿ ವಿದ್ಯುತ್ ದರ ಏರಿಸಿರುವುದು ಸರ್ವಥಾ ಸರಿಯಲ್ಲ. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಮನವಿ ಮಾಡಿಕೊಳ್ಳಲಾಗುವುದು’ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸತತವಾಗಿ ಇಂಧನ ಬೆಲೆ ಏರುತ್ತಿರುವುದರಿಂದ ಉತ್ಪಾದನಾ ವೆಚ್ಚವೂ ಜಾಸ್ತಿಯಾಗುತ್ತಿದೆ. ಲಾಕ್‌ಡೌನ್ ಮಾಡಿರುವುದರಿಂದ ನಮ್ಮ ವ್ಯಾಪಾರ ಕೂಡ (ಆರ್ಡರ್) ಬೇರೆ ರಾಜ್ಯದ ಪಾಲಾಗುತ್ತಿವೆ. ಮುಂದಿನ ವರ್ಷದವರೆಗೆ ವಿದ್ಯುತ್ ದರವನ್ನು ಯಾವುದೇ ಕಾರಣಕ್ಕೂ ಏರಿಸಬಾರದು’ ಎಂದು ಅವರು ಒತ್ತಾಯಿಸಿದರು.

‘ಬಡಮಧ್ಯಮ ವರ್ಗದವರಿಗೆ ಬರೆ’



’ಜನರಿಗೆ ತಿನ್ನುವುದಕ್ಕೆ ಆಹಾರ ಇಲ್ಲ. ಆಸ್ಪತ್ರೆ ಖರ್ಚು ಭರಿಸುವುದಕ್ಕೇ ಕಷ್ಟವಾಗುತ್ತಿದೆ. ಕೋವಿಡ್ ಬಂದು ಯಾರಾದರೂ ಐಸಿಯುಗೆ ದಾಖಲಾದರೆ ಕನಿಷ್ಠ ₹2 ಲಕ್ಷ ಕಟ್ಟಬೇಕಾಗುತ್ತದೆ. ಶಾಲೆಗೆ ಹೋಗಿರದಿದ್ದರೂ ಮಕ್ಕಳ ಫೀಸ್ ಕಟ್ಟಿ ಎಂದು ಶಾಲೆಗಳಿಂದ ಕರೆ ಬರುತ್ತಿದೆ. ಈ ನಡುವೆ, ವಿದ್ಯುತ್ ದರವನ್ನೂ ಹೆಚ್ಚಿಸಿದರೆ ಜನಸಾಮಾನ್ಯರು ಏನು ಮಾಡಬೇಕು’ ಎಂದು ಗೃಹಿಣಿ, ತಿರುಪತಿ ತಿರುಮಲ ದೇವಸ್ಥಾನ ಟ್ರಸ್ಟ್ ಸದಸ್ಯರಾದ ವಸಂತಕವಿತಾ ಪ್ರಶ್ನಿಸಿದರು.

’ದುಡಿಮೆ ಇಲ್ಲದೆ ಬಡ–ಮಧ್ಯಮ ವರ್ಗದವರು ಕಷ್ಟಕ್ಕೆ ಸಿಲುಕಿದ್ದಾರೆ. ಒಂದೊಂದು ರೂಪಾಯಿ ಸಂಪಾದನೆಯೂ ಕಷ್ಟವಾಗಿರುವ ಈ ಸಂದರ್ಭದಲ್ಲಿ ದರ ಏರಿಸಿರುವುದು ಸರಿಯಲ್ಲ. ರಾಜ್ಯದ ಶಾಸಕರು ಪಕ್ಷಭೇದ ಮರೆತು ಸರ್ಕಾರದ ಈ ಕ್ರಮವನ್ನು ವಿರೋಧಿಸಬೇಕು’ ಎಂದು ಅವರು ಒತ್ತಾಯಿಸಿದರು.

’ಬಹಳಷ್ಟು ಜನರು ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿದ್ದಾರೆ. ಮಕ್ಕಳಿಗೆ ಆನ್‌ಲೈನ್ ತರಗತಿಗಳು ನಡೆಯುತ್ತಿವೆ. ವಿದ್ಯುತ್ ಶುಲ್ಕ ಕಟ್ಟದಿದ್ದರೆ ಕರೆಂಟ್ ತೆಗೆಯಲಾಗುತ್ತದೆ. ಸರ್ಕಾರದ ಈ ಆದೇಶದಿಂದ ಬಡ–ಮಧ್ಯಮ ವರ್ಗದವರಿಗೆ ಮಾತ್ರವಲ್ಲದೆ, ರೈತರು ಕೂಡ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ’ ಎಂದು ಅವರು ಹೇಳಿದರು.

‘ಶೂನ್ಯ ವರ್ಷ ಎಂದು ಪರಿಗಣಿಸಿ’



’ಜನರು ಮತ್ತು ಕೈಗಾರಿಕೆಗಳಿಗೆ ಆದಾಯವೇ ಇಲ್ಲದ ಸಂದರ್ಭದಲ್ಲಿ ದರ ಏರಿಕೆ ಮಾಡಿರುವುದು ಸೂಕ್ತ ಅಲ್ಲ. ನಗರದಲ್ಲಿ ಆಹಾರ ಉತ್ಪಾದಕ ಸಂಸ್ಥೆಗಳು ಸೇರಿದಂತೆ ಸಣ್ಣ ವ್ಯಾಪಾರಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಸಂದರ್ಭದಲ್ಲಿ ಆದಾಯ, ತೆರಿಗೆ ಎಂದು ನೋಡಬಾರದು. ಈ ವರ್ಷವನ್ನು ಶೂನ್ಯ ವರ್ಷ ಎಂದು ಘೋಷಿಸಬೇಕು’ ಎಂದು ಬಿ ಪ್ಯಾಕ್ ಸಂಸ್ಥೆಯ ಸದಸ್ಯ ಎನ್. ಹರೀಶ್ ಹೇಳಿದರು.

‘ಜನರು ಸಂಕಷ್ಟದಲ್ಲಿರುವ ಈ ಸಂದರ್ಭದಲ್ಲಿ ದರ ಏರಿಸುವ ಬದಲು ಇಳಿಸಬೇಕಾಗಿತ್ತು. ಬೇಕಾದರೆ ಮದ್ಯದ ದರ ಹೆಚ್ಚಿಸಿ, ಅಬಕಾರಿ ಶುಲ್ಕ ಜಾಸ್ತಿ ಮಾಡಲಿ. ಕುಡಿಯುವ ನೀರು, ವಿದ್ಯುತ್ ಮತ್ತು ಬಸ್ ಪ್ರಯಾಣ ದರವನ್ನು ಹೆಚ್ಚಿಸಬಾರದು’ ಎಂದೂ ಹೇಳಿದರು.

ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಮನವಿ ಮಾಡಿಕೊಳ್ಳಲಾಗುವುದು’ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ‘ಪ್ರಜಾವಾಣಿ’ಗೆ ತಿಳಿಸಿದರು.


‘ಎಲ್ಲರಿಗೂ ಸಂಕಷ್ಟ’



’ಕಾಯಂ ಉದ್ಯೋಗದಲ್ಲಿರುವವರನ್ನು ಬಿಟ್ಟರೆ ಉಳಿದ ಎಲ್ಲರೂ ಸಂಕಷ್ಟದಲ್ಲಿದ್ದಾರೆ. ಕೈ ಗಾಡಿಗಳಲ್ಲಿ ಪಾನಿಪುರಿ ಮಾರುತ್ತಿದ್ದವರು, ಬೇಕರಿಯವರು ತೊಂದರೆಗೆ ಸಿಲುಕಿದ್ದಾರೆ. ಅವರಿಗೆ ಆದಾಯವಿಲ್ಲ. ಆದರೆ, ಕಟ್ಟಡದ ಬಾಡಿಗೆ, ವಿದ್ಯುತ್ ಶುಲ್ಕ ತಪ್ಪದೇ ಪಾವತಿಸಬೇಕಾಗಿದೆ. ವಾಣ್ಯಜ್ಯೋದ್ಯಮಿಗಳು ಇನ್ನೂ ಹೆಚ್ಚಿನ ಶುಲ್ಕ ಪಾವತಿಸಬೇಕಾಗಿದೆ. ಲಾಕ್‌ಡೌನ್ ಅವಧಿಯ ವಿದ್ಯುತ್ ಮತ್ತು ನೀರಿನ ಶುಲ್ಕವನ್ನು ಸರ್ಕಾರ ತೆಗೆದುಕೊಳ್ಳಬಾರದು’ ಎಂದು ಗೃಹಿಣಿ ಜಿ. ಚೈತ್ರಾ ಸಲಹೆ ನೀಡಿದರು.

’ಅಗತ್ಯ ವಸ್ತುಗಳ ಬೆಲೆ ಜಾಸ್ತಿ ಆಗಿದೆ. ಆಟೊ–ಟ್ಯಾಕ್ಸಿ ಚಾಲಕರು ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಈಡಾಗಿದ್ದಾರೆ. ಎಷ್ಟೋ ಜನ ಕೆಲಸ ಕಳೆದುಕೊಂಡಿದ್ದಾರೆ. ಕೆಳಮಧ್ಯಮ ವರ್ಗದವರಿಗೆ ಕುಟುಂಬ ನಿರ್ವಹಣೆಯೇ ಕಷ್ಟವಾಗಿರುವಾಗ ವಿದ್ಯುತ್ ದರ ಏರಿಸಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ’ ಎಂದು ಅವರ ಅಸಮಾಧಾನ ವ್ಯಕ್ತಪಡಿಸಿದರು.


ಜನರ ಮೇಲೆ ದೌರ್ಜನ್ಯ: ಎಚ್‌ಡಿಕೆ



ಬೆಂಗಳೂರು: ವಿದ್ಯುತ್ ದರ ಏರಿಕೆ ಮತ್ತು ಬಾಕಿ ವಸೂಲಿ ನಿರ್ಧಾರದ ಮೂಲಕ ರಾಜ್ಯ ಸರ್ಕಾರವು ಜನರ ಮೇಲೆ ದೌರ್ಜನ್ಯ ನಡೆಸುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ದೂರಿದ್ದಾರೆ.

ದರ ಏರಿಕೆಗೆ ಪ್ರತಿಕ್ರಿಯಿಸಿ ಬುಧವಾರ ಟ್ವೀಟ್ ಮಾಡಿರುವ ಅವರು, ‘ಕೋವಿಡ್‌ನಿಂದ ಸಂಕಷ್ಟದಲ್ಲಿರುವ ಜನರನ್ನು ಪ್ಯಾಕೇಜ್ ಹೆಸರಿನಲ್ಲಿ ವಂಚಿಸಲಾಗಿತ್ತು. ಈಗ ದರ ಏರಿಸಿ ಜನರನ್ನು ಸುಲಿಯುತ್ತಿದೆ. ಬಿಜೆಪಿ ತೋರಿದ ಅಚ್ಛೇ ದಿನದ ಕನಸು ಇದೇನಾ’ ಎಂದು ಪ್ರಶ್ನಿಸಿದ್ದಾರೆ.

ನರಕಕ್ಕೆ ದೂಡಲು ಮುಂದಾದ ಸರ್ಕಾರ: ಸಿದ್ದರಾಮಯ್ಯ ಟೀಕೆ



ಬೆಂಗಳೂರು: ‘ವಿದ್ಯುತ್ ದರ ಹೆಚ್ಚಿಸುವ ಮೂಲಕ, ಈಗಾಗಲೇ ಕೊರೊನಾದಿಂದ ತತ್ತರಿಸುತ್ತಿರುವ ಜನರನ್ನು ಬೆಲೆ ಏರಿಕೆಯ ನರಕಕ್ಕೆ ದೂಡಲು ರಾಜ್ಯ ಸರ್ಕಾರ ಮುಂದಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

‘ಸರ್ಕಾರ ತಕ್ಷಣ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಪರಿಣತರು ಮತ್ತು ವಿರೋಧ ಪಕ್ಷಗಳ ಮುಖಂಡರ ಸಭೆ ಕರೆದು ದರ ಕಡಿಮೆ ಮಾಡುವುದು ಹೇಗೆ ಎಂದು ಸಲಹೆ ಪಡೆಯಬೇಕು. ಅಲ್ಲಿಯವರೆಗೆ ಹೆಚ್ಚಿಸಬಾರದು’ ಎಂದು ಒತ್ತಾಯಿಸಿದ್ದಾರೆ.

‘ಕಳೆದ ವರ್ಷ ಹೆಚ್ಚಿಸಿದ್ದ ದರಗಳನ್ನು ಅನುಷ್ಠಾನ ಮಾಡಿಲ್ಲ. ಹೀಗಾಗಿ, ಈ ವರ್ಷ ದರ ಹೆಚ್ಚಿಸಲಾಗಿದೆ ಎಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಸುಳ್ಳು ಹೇಳಿದೆ. ದಾಖಲೆಗಳನ್ನು ಪರಿಶೀಲಿಸಿದಾಗ ರಾಜ್ಯದ ಎಲ್ಲಾ ಎಸ್ಕಾಂಗಳ ವ್ಯಾಪ್ತಿಯಲ್ಲೂ ಕಳೆದ ವರ್ಷ ಕೂಡಾ ವಿದ್ಯುತ್ ದರ ಹೆಚ್ಚಿಸಲಾಗಿದೆ’ ಎಂದಿದ್ದಾರೆ. ‘ಮೂರು ವರ್ಷಗಳಿಂದ ವಿದ್ಯುತ್ ಬಳಕೆ ಅಧೋಗತಿಗೆ ಇಳಿದಿದೆ. ಈ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಬಳಕೆಯನ್ನು ಉತ್ತೇಜಿಸಬೇಕಾದ ಅನಿವಾರ್ಯತೆ ಇದೆ. ರಾಜ್ಯದಲ್ಲಿ ಉತ್ಪಾದನೆ ಆಗುತ್ತಿರುವ ವಿದ್ಯುತ್ ಉತ್ಪಾದನೆಯಲ್ಲಿ ಮೂರನೇ ಎರಡು ಭಾಗದಷ್ಟು ಸೋಲಾರ್ ಮತ್ತು ಗಾಳಿ ಮೂಲದಿಂದ ಉತ್ಪಾದನೆ ಆಗುತ್ತಿದೆ. ಹೀಗಾಗಿ, ವಿದ್ಯುತ್ ದರಗಳನ್ನು ಇಳಿಸಿ ಬಳಕೆಯನ್ನು ಪ್ರೋತ್ಸಾಹಿಸಬೇಕಾದ ಸರ್ಕಾರ, ಹೆಚ್ಚು ಬಳಸುತ್ತಿದ್ದಾರೆಂದು ದಂಡ ವಿಧಿಸುವುದು ಹಾಗೂ ಪದೇ ಪದೇ ದರಗಳನ್ನು ಹೆಚ್ಚಿಸುತ್ತಿದೆ. ದರ ಏರಿಕೆಯಿಂದ ಕುಡಿಯುವ ನೀರಿನಿಂದ ಹಿಡಿದು ಎಲ್ಲದರ ಬೆಲೆಗಳೂ ಹೆಚ್ಚಾಗುತ್ತವೆ’ ಎಂದು ಅಭಿಪ್ರಾಯಪಟ್ಟಿದ್ದಾರೆ.

‘ಜನರ ಮೇಲೆ ವಿದ್ಯುತ್ ಏರಿಕೆಯ ಬರೆ ಹಾಕದೇ ಕಷ್ಟ ಕಾಲದಲ್ಲಿ ತೆರಿಗೆಯ ಹೊರೆ ಇಳಿಸಿ, ಆರ್ಥಿಕತೆಗೆ ಚೈತನ್ಯ ನೀಡಬೇಕೆಂದು ನಾನು ಹಿಂದೆ ಆಗ್ರಹಿಸಿದ್ದೆ. ಅವಧಿ ಮುಗಿದಿರುವ ವಿದ್ಯುತ್ ಒಪ್ಪಂದಗಳನ್ನು ಕೂಡಲೇ ರದ್ದು ಮಾಡಿ ಎಂದೂ ಒತ್ತಾಯಿಸಿದ್ದೆ. ಆದರೆ, ಸರ್ಕಾರ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ’ ಎಂದು ಟೀಕಿಸಿದರು.

ಬೆಸ್ಕಾಂ: ಯುನಿಟ್‌ಗೆ 10 ಪೈಸೆ ಏರಿಕೆ

ಪರಿಷ್ಕೃತ ವಿದ್ಯುತ್ ದರದ ಅನ್ವಯ, ಬೆಸ್ಕಾಂನ ಬಿಬಿಎಂಪಿ ವ್ಯಾಪ್ತಿಯಲ್ಲಿನ ಎಲ್‌ಟಿ ಕೈಗಾರಿಕೆಗಳು ಅಥವಾ ಸಣ್ಣ ಕೈಗಾರಿಕೆಗಳಿಗೆ ಪ್ರತಿ ಯುನಿಟ್‌ಗೆ 10 ಪೈಸೆ ಏರಿಸಲಾಗಿದೆ. ಅಂದರೆ, ಪ್ರತಿ ಯುನಿಟ್ ಶುಲ್ಕ ಈಗ ₹6ಕ್ಕೆ ಏರಿದಂತಾಗಿದೆ. ಮೊದಲು ₹5.90 ಇತ್ತು.

ಈ ಕೈಗಾರಿಕೆಗಳು ಬಳಸುವ ಮೊದಲ 500 ಯುನಿಟ್‌ಗೆ ಮಾತ್ರ ₹6 ನಿಗದಿ ಪಡಿಸಲಾಗಿದೆ. 500 ಯುನಿಟ್‌ನ ನಂತರದ ಬಳಕೆಗೆ ಪ್ರತಿ ಯುನಿಟ್‌ಗೆ ₹7.30 ಕಟ್ಟಬೇಕಾಗುತ್ತದೆ. ಮೊದಲು ₹7.20 ಇತ್ತು.

ಬಿಬಿಎಂಪಿ ವ್ಯಾಪ್ತಿ ಬಿಟ್ಟು, ಬೆಸ್ಕಾಂನ ಇತರೆ ಕಡೆಗಳಲ್ಲಿನ ಎಲ್‌ಟಿ ಕೈಗಾರಿಕೆಗಳು ಮೊದಲ 500 ಯುನಿಟ್‌ವರೆಗೆ ಪ್ರತಿ ಯುನಿಟ್‌ಗೆ ₹5.70 ಪಾವತಿಸಬೇಕಾಗುತ್ತದೆ. ಮೊದಲು ಈ ದರ ₹5.60 ಇತ್ತು. 501ರಿಂದ 1000 ಯುನಿಟ್‌ಗೆ ₹6.65 ಮತ್ತು 1000 ಯುನಿಟ್ ನಂತರ ₹6.95 ಪಾವತಿಸಬೇಕಾಗುತ್ತದೆ.

ಬೆಸ್ಕಾಂನ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಬೃಹತ್ ಕೈಗಾರಿಕೆಗಳು ಅಂದರೆ ಎಚ್‌ಟಿ ಕೈಗಾರಿಕೆಗಳು ಪ್ರತಿ ಯುನಿಟ್‌ಗೆ ₹7.45 ಪಾವತಿಸಬೇಕಾಗುತ್ತದೆ. ಮೊದಲು ಈ ದರ ₹7.35 ಇತ್ತು. ಗೃಹೋಪಯೋಗಿ ಬಳಕೆಯ ವಿದ್ಯುತ್ ದರವನ್ನೂ ಯುನಿಟ್‌ಗೆ 10 ಪೈಸೆ ಹೆಚ್ಚಿಸಲಾಗಿದೆ.

ಸುದ್ದಿ 2 ನಿಮಿಷ

ವರ್ಗಾವಣೆ ಪ್ರಶ್ನಿಸಿದ್ದ ಅರ್ಜಿ ವಜಾ

ಬೆಂಗಳೂರು: ಅತ್ತಿಬೆಲೆ ಉಪವಿಭಾಗದಿಂದ ಚಂದಾಪುರ ಉಪವಿಭಾಗಕ್ಕೆ ವರ್ಗಾವಣೆ ಮಾಡಿರುವುದನ್ನು ಪ್ರಶ್ನಿಸಿ ಬೆಸ್ಕಾಂ ಎಂಜಿನಿಯರ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಸಹಾಯಕ ಎಂಜಿನಿಯರ್ (ಎಲೆಕ್ಟ್ರಿಕಲ್) ಎಂ.ಸುರೇಶ್ ಅರ್ಜಿ ಸಲ್ಲಿಸಿ, ‘ಕೋವಿಡ್ ಕರ್ತವ್ಯದಲ್ಲಿ ಇರುವ ಕಾರಣ ವರ್ಗಾವಣೆ ಮಾಡಬಾರದು ಎಂದು ಸರ್ಕಾರ ಆದೇಶಿಸಿದೆ. ಆದರೂ, ಮುಖ್ಯಮಂತ್ರಿ ಅನುಮೋದನೆ ಇಲ್ಲದೆ ವರ್ಗಾವಣೆ ಆದೇಶ ಹೊರಡಿಸಲಾಗಿದೆ’ ಎಂದು ವಾದಿಸಿದ್ದಾರೆ.

‘ಐದು ಕಿಲೋ ಮೀಟರ್ ದೂರಕ್ಕೆ ವರ್ಗಾವಣೆ ಮಾಡಲಾಗಿದೆ. ಇದರಿಂದ ಕೋವಿಡ್ ಕರ್ತವ್ಯದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

‘ದಾನದಿಂದ ವ್ಯಕ್ತಿತ್ವಕ್ಕೆ ಹೊಳಪು’



ಕೆಂಗೇರಿ: ’ದಾನದಿಂದ ವ್ಯಕ್ತಿತ್ವಕ್ಕೆ ಮೆರುಗು ದೊರಕುತ್ತದೆ; ಧರಿಸುವ ಆಭರಣದಿಂದಲ್ಲ’ ಎಂದು ಕನಕಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೇಳೀದರು.

ಯಶವಂತಪುರ ಕ್ಷೇತ್ರ ವ್ಯಾಪ್ತಿಯ ಭೀಮನಕುಪ್ಪೆ ಗ್ರಾಮದಲ್ಲಿ ರಾಮೋಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮಹೇಶ್, ಮುಖಂಡ ಪ್ರಭು ಹಾಗೂ ಸಂಗಡಿಗರಿಂದ ಆಯೋಜಿಸಲಾಗಿದ್ದ ಪಡಿತರ ಕಿಟ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಹಾಗೂ ಉಚಿತ ಅಂಬುಲೆನ್ಸ್ ವಾಹನವನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿ ಅವರು ಮಾತನಾಡಿದರು.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ’ಕ್ಷೇತ್ರದಲ್ಲಿ ಸುಮಾರು 4.5 ಲಕ್ಷ ಜನರು ವಾಸ ಮಾಡುತ್ತಿದ್ದಾರೆ. ಪ್ರಸ್ತುತ ಸುಮಾರು 1.5 ಲಕ್ಷ ಮಂದಿಗೆ ಲಸಿಕೆ ಹಾಕಲಾಗಿದೆ. ಇನ್ನುಳಿದವರಿಗೆ ಇದೇ ಜುಲೈ ಅಂತ್ಯದ ವೇಳೆಗೆ ಲಸಿಕೆ ಹಾಕಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು‘ ಎಂದರು.

ಹೊಸದುರ್ಗ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ಮಾತನಾಡಿ, ’ಕೊರೊನಾ ಅವಧಿ ಜನನಾಯಕರ ಪಾಲಿಗೆ ಪರೀಕ್ಷಾ ಸಮಯ. ಕ್ಷೇತ್ರದ ಜನರನ್ನು ಸಲಹುವ ರೀತಿಯಿಂದ ಅವರ ನಾಯಕತ್ವ ಗುಣ ಬಹಿರಂಗವಾಗಲಿದೆ‘ ಎಂದು ಹೇಳಿದರು.



ಚಾಮರಾಜಪೇಟೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸ್ಥಳೀಯ ಶಾಸಕ ಜಮೀರ್ ಅಹ್ಮದ್ ಖಾನ್ ಆಹಾರಧಾನ್ಯಗಳ ಕಿಟ್ ವಿತರಿಸಿದರು

ಸರ್ವಧರ್ಮಗಳ ಪ್ರಮುಖರಿಗೆ ಜಮೀರ್ ನೆರವಿನ ಹಸ್ತ

ಬೆಂಗಳೂರು: ಚಾಮರಾಜಪೇಟೆ ಕ್ಷೇತ್ರ ವ್ಯಾಪ್ತಿಯ ಅರ್ಚಕರು, ಮಸೀದಿಗಳ ಇಮಾಮ್ ಮತ್ತು ಮೌಸಾನ್, ಚರ್ಚ್‌ಗಳ ಪಾದ್ರಿಗಳು ಮತ್ತು ಸಿಖ್ ಧರ್ಮ-ಗುರುಗಳಿಗೆ ಸ್ಥಳೀಯ ಶಾಸಕ ಜಮೀರ್ ಅಹ್ಮರ್ ಖಾನ್ ಅವರು ಬುಧವಾರ ಆಹಾರಧಾನ್ಯಗಳ ಕಿಟ್ ಹಾಗೂ ₹ 5 ಸಾವಿರ ಆರ್ಥಿಕ ನೆರವು ನೀಡಿದರು.

ಚಾಮರಾಜಪೇಟೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ 130 ದೇವಾಲಯಗಳ ಅರ್ಚಕರು, 95 ಮಸೀದಿಗಳ ಇಮಾಮ್, ಮೌಸಾನ್, 45 ಚರ್ಚ್‌ಗಳ ಪಾದ್ರಿಗಳು, 4 ಸಿಖ್ ಧರ್ಮಗುರುಗಳಿಗೆ ಜಮೀರ್ ಅವರು ತಮ್ಮ ವೈಯಕ್ತಿಕ ವೆಚ್ಚದಲ್ಲಿ ಎರಡು ತಿಂಗಳಿಗೆ ಆಗುವಷ್ಟು ಆಹಾರಧಾನ್ಯಗಳ ಕಿಟ್ ಮತ್ತು ಆರ್ಥಿಕ ನೆರವು ನೀಡಿ ಗೌರವಿಸಿದರು.

ಈ ವೇಳೆ ಮಾತನಾಡಿದ ಜಮೀರ್, ‘ಕೋವಿಡ್ ಕಾರಣದಿಂದ ಅರ್ಚಕರು, ಇಮಾಮ್, ಪಾದ್ರಿಗಳು ಸಂಕಷ್ಟದಲ್ಲಿದ್ದಾರೆ. ಜನರ ಪ್ರಾರ್ಥನೆಯನ್ನು ದೇವರಿಗೆ ಸಲ್ಲಿಸುವ ಕೆಲಸ ಮಾಡುವ ಅವರ ನೆರವಿಗೆ ಧಾವಿಸಿದ್ದೇನೆ’ ಎಂದರು.

ಮೈಸೂರು ಸ್ಯಾಂಡಲ್ ಸೋಪ್ ನಕಲು: ಆಕ್ಷೇಪ

ಬೆಂಗಳೂರು: ಮೈಸೂರು ಸ್ಯಾಂಡಲ್ ಸೋಪ್‌ನ ಆಕಾರ ಮತ್ತು ಪೊಟ್ಟಣವನ್ನು ಕೇರಳ ಸೋಪ್ ಆ್ಯಂಡ್ ಆಯಿಲ್ಸ್ ನಕಲು ಮಾಡಿದೆ ಎಂದು ಕನ್ನಡ ಗೆಳೆಯರ ಬಳಗ ಆರೋಪಿಸಿದೆ.

‘ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ತಯಾರಿಸುವ ಮೈಸೂರು ಸ್ಯಾಂಡಲ್ ಸೋಪು ವಿದೇಶದಲ್ಲಿ ಕೂಡ ಜನಮನ್ನಣೆ ಪಡೆದಿದೆ. 2006ರಲ್ಲಿ ಭೌಗೋಳಿಕ ಕುರುಹು ದೊರೆತಿದೆ. ಕೇರಳ ಸ್ಯಾಂಡಲ್ ಸೋಪು ಕೂಡ ಮೈಸೂರು ಸ್ಯಾಂಡಲ್ ಸೋಪಿನ ಮಾದರಿಯಲ್ಲಿಯೇ ಇದೆ. ಆದರೆ, ಇದನ್ನು ಪ್ರಶ್ನಿಸಬೇಕಾಗಿದ್ದ ರಾಜ್ಯದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆ ತಟಸ್ಥವಾಗಿದೆ. ಇದು ಖಂಡನೀಯ’ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

ಪದವಿ ಪರೀಕ್ಷೆಯಲ್ಲಿ ಅಕ್ರಮ ಆರೋಪ

ಮೈಸೂರು: ಮೈಸೂರು ವಿಶ್ವವಿದ್ಯಾಲಯ ವತಿಯಿಂದ ಏ.15 ಮತ್ತು 17ರಂದು ನಡೆಸಿದ ಬಿ.ಎಸ್ಸಿ ರಸಾಯನ ವಿಜ್ಞಾನದ ಪರೀಕ್ಷೆಯಲ್ಲಿ ಅಕ್ರಮ ನಡೆಸಲು ಪ್ರಯತ್ನಿಸಿರುವುದು ಗೊತ್ತಾಗಿದೆ.

ಪರೀಕ್ಷೆ ಬಳಿಕ ಉತ್ತರ ಪತ್ರಿಕೆಯನ್ನು ಅದಲು ಬದಲು ಮಾಡಲು ಮಹಾರಾಣಿ ಕಾಲೇಜಿನ ಅಟೆಂಡರ್ ಒಬ್ಬರು ಕೆಲ ವಿದ್ಯಾರ್ಥಿಗಳೊಂದಿಗೆ ಸೇರಿ ಲಾಡ್ಜ್‌ವೊಂದರಲ್ಲಿ ಬೇರೆ ಉತ್ತರ ಪತ್ರಿಕೆ ಸಿದ್ಧಪಡಿಸುತ್ತಿದ್ದರು ಎನ್ನಲಾಗಿದೆ. ಈ ಸಂದರ್ಭದಲ್ಲಿ ಪೊಲೀಸರು ದಾಳಿ ನಡೆಸಿದ್ದಾರೆ.

‘ದಾಳಿ ವೇಳೆ ಅಕ್ರಮ ನಡೆಯುತ್ತಿರುವುದು ಗಮನಕ್ಕೆ ಬಂದಿದ್ದರೂ ಈ ಪ್ರಕರಣವನ್ನು ಪೊಲೀಸರು ಮುಚ್ಚಿ ಹಾಕುತ್ತಿದ್ದಾರೆ’ ಎಂದು ದೂರಿ ನಗರ ಪೊಲೀಸ್ ಕಮಿಷನರ್ ಹಾಗೂ ಮೈಸೂರು ವಿಶ್ವವಿದ್ಯಾಲಯ ಕುಲಪತಿಗೆ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಪದಾಧಿಕಾರಿಗಳು ಮನವಿ ಪತ್ರ ಸಲ್ಲಿಸಿದ್ದಾರೆ.

‘ಮಕ್ಕಳಿಗೆ ರೆಮಿಡಿಸಿವಿರ್ ಬೇಡ’

ನವದೆಹಲಿ (ಪಿಟಿಐ): ಮಕ್ಕಳಿಗೆ ಕೋವಿಡ್ ಚಿಕಿತ್ಸೆ ನೀಡುವ ವಿಷಯದಲ್ಲಿ ಕೇಂದ್ರ ಸರ್ಕಾರವು ಬುಧವಾರ ಸಮಗ್ರ ಮಾರ್ಗಸೂಚಿಯೊಂದನ್ನು ರೂಪಿಸಿದ್ದು, ರೆಮಿಡಿಸಿವಿರ್ ಬಳಕೆಗೆ ಶಿಫಾರಸು ಮಾಡಿಲ್ಲ. ಎಚ್‌ಆರ್‌ಸಿಟಿ ಸ್ಕ್ಯಾನ್ ಮಾಡಿಸುವಾಗ ವಿವೇಚನೆ ಬಳಸಬೇಕು ಎಂದು ತಿಳಿಸಲಾಗಿದೆ.

ನಿಧನ ವಾರ್ತೆ

ವೆಂಕಟಪ್ಪ



ಬೆಂಗಳೂರು: ಪತ್ರಿಕಾ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ ವೆಂಕಟಪ್ಪ ಪೂಜಾರಪ್ಪ (68) ಬುಧವಾರ ನಿಧನರಾದರು. ಕೆ.ಗೊಲ್ಲಹಳ್ಳಿಯಲ್ಲಿ ವಾಸವಿದ್ದ ಅವರಿಗೆ ಆರು ಪುತ್ರಿಯರು ಹಾಗೂ ಪುತ್ರ ಇದ್ದಾರೆ. ಹಳೆಕೆರೆ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಡಿಡಿಗೆ ಕೆಐಎಡಿಬಿ ಭೂಮಿ ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುದ್ಧ ವಿಮಾನಗಳಿಗೆ ಮತ್ತು ಇತರೆ ರಕ್ಷಣಾ ಕ್ಷೇತ್ರಕ್ಕೆ ಬೇಕಾದ ಕಟ್ಟಿಂಗ್ ಟೂಲ್ಸ್ ಉತ್ಪಾದನೆಗೆ ಸಂಬಂಧಿಸಿದಂತೆ ಘಟಕ ಸ್ಥಾಪಿಸಲು ಎಡಿಡಿ ಎಂಜಿನಿಯರಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ ತುಮಕೂರು ಮಷಿನ್ ಟೂಲ್ಸ್ ಪಾರ್ಕ್‌ನಲ್ಲಿ ಕೊನೆಗೂ ಭೂಮಿ ಲಭಿಸಿದೆ.

ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ) ಜಾಗ ಮಂಜೂರು ಮಾಡಿದ್ದು, ಇದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಕೆಐಎಡಿಬಿ ಅಧಿಕಾರಿಗಳು ಎಡಿಡಿ ಎಂಜಿನಿಯರಿಂಗ್ ಕಾಂಪೊನೆಂಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಎಇಐಪಿಎಲ್) ನಿರ್ದೇಶಕ ಗಿರೀಶ್ ಲಿಂಗಣ್ಣ ಅವರಿಗೆ ಹಸ್ತಾಂತರಿಸಿದರು.

‘ಸರ್ಕಾರದಿಂದ ಭೂಮಿಯನ್ನು ಪಡೆದುಕೊಳ್ಳಲು ಈ ಕಂಪನಿ ಕಳೆದ ಎರಡು ವರ್ಷಗಳಿಂದ ಹರಸಾಹಸಪಟ್ಟಿತ್ತು. ಮೊದಲಿಗೆ ನೆಲಮಂಗಲ ಕೈಗಾರಿಕಾ ಪ್ರದೇಶದಲ್ಲಿ ಭೂಮಿ ನೀಡುವಂತೆ ಕೆಎಸ್‌ಎಸ್‌ಐಡಿಸಿಗೆ ಮನವಿ ಮಾಡಿತ್ತು. ಆದರೆ, ಕೆಎಸ್‌ಎಸ್‌ಐಡಿಸಿ ಈ ಮನವಿಗೆ ಎರಡು ವರ್ಷಗಳಿಂದ ಸ್ಪಂದಿಸಲೇ ಇಲ್ಲ. ಭೂಮಿಗಾಗಿ ಕೆಐಎಡಿಬಿಗೆ ಅರ್ಜಿ ಸಲ್ಲಿಸುವಂತೆ ರಾಜ್ಯ ಸರ್ಕಾರದ ಅಧಿಕಾರಿಗಳು ಸಲಹೆ ಮಾಡಿದ್ದರು. ಈಗ ಭೂಮಿ ಮಂಜೂರಾಗಿದೆ’ ಎಂದು ಗಿರೀಶ್ ಲಿಂಗಣ್ಣ ತಿಳಿಸಿದರು.

ಕಂಪನಿಯು ಎಚ್‌ಎಎಲ್, ಬ್ರಹ್ಮೋಸ್ ಮತ್ತು ರಕ್ಷಣಾ ಕ್ಷೇತ್ರದ ಮತ್ತಿತರೆ ವಿಭಾಗಗಳಿಗೆ ಬಿಡಿಭಾಗಗಳ ಪೂರೈಸಲು ಉತ್ಪಾದನಾ ಘಟಕ ಸ್ಥಾಪನೆ ಮಾಡಲು ಮುಂದಾಗಿದೆ. ಇದಕ್ಕಾಗಿ ದೇವನಹಳ್ಳಿ ಏರೋಸ್ಪೇಸ್ ಪಾರ್ಕ್‌ನಲ್ಲಿ ಭೂಮಿ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಕಂಪನಿಯು ಈಗಾಗಲೇ ಏರೋ ಇಂಡಿಯಾ 2021ರ ವೇಳೆಯಲ್ಲಿ ರಾಜ್ಯ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದೆ.

‘ಎಡಿಡಿ ಎಂಜಿನಿಯರಿಂಗ್‌ನ (ಇಂಡಿಯಾ) ಮಾತೃ ಸಂಸ್ಥೆಯಾಗಿರುವ ಎಡಿಡಿ ಎಂಜಿನಿಯರಿಂಗ್ ಜಿಎಂಬಿಎಚ್ ಕಂಪನಿಯು ಅರಬ್ ರಾಷ್ಟ್ರದ (ಯುಎಇ) ರಕ್ಷಣಾ ಉದ್ಯಮವಾದ ಎಡ್ಜ್ ಗ್ರೂಪ್ ಪಿಜೆಎಸ್‌ಸಿ ಜತೆ ಒಪ್ಪಂದಕ್ಕೆ ಸಹಿ ಮಾಡಿವೆ. ರಕ್ಷಣಾ ವೈಮಾನಿಕ ಕ್ಷೇತ್ರದಲ್ಲಿನ ನಿರ್ವಹಣೆ, ದುರಸ್ತಿ, ಕಾರ್ಯಕ್ಷಮತೆ ಸುಧಾರಣೆ ಮತ್ತು ಉತ್ಪಾದನೆ ಹೆಚ್ಚಳ ಮಾಡಲು ಈ ಒಪ್ಪಂದ ಸಹಕಾರಿ ಆಗಲಿದೆ’ ಎಂದು ಹೇಳಿದರು.



ಬೆಂಗಳೂರು ನಗರ ದಿನಪತ್ರಿಕೆ ವಿತರಕರ ಹಾಗೂ ಹಂಚಿಕೆದಾರರ ಬಳಗವು ಮಲ್ಲೇಶ್ವರ, ಪಿ.ಜಿ. ಹಳ್ಳಿ, ಶೇಷಾದ್ರಿಪುರ, ಶ್ರೀರಾಂಪುರ, ನವರಂಗ ವಿಭಾಗದ ಪತ್ರಿಕಾ ವಿತರಕರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿತು.

ಪರಿಸರ ಸೂಕ್ಷ್ಮ ವಲಯ: ಕಟ್ಟಡಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ): ತಾಲ್ಲೂಕಿನ ಮೇಲುಕಾಮನಹಳ್ಳಿ ಗ್ರಾಮದಲ್ಲಿ ಬಂಡೀಪುರ ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮ ವಲಯದಲ್ಲಿ ಕಟ್ಟಡವೊಂದು ನಿರ್ಮಾಣವಾಗುತ್ತಿದ್ದು, ಇದರ ಬಗ್ಗೆ ಆಕ್ಷೇಪ ವ್ಯಕ್ತವಾಗಿದೆ.



ನಿರ್ಮಾಣ ಹಂತದಲ್ಲಿರುವ ಕಟ್ಟಡ

ಬೆಂಗಳೂರಿನಲ್ಲಿ ಉದ್ಯಮ ನಡೆಸುತ್ತಿರುವ ಆನಂದ್ ಕುಮಾರ್ ಎಂಬುವವರು ಕಟ್ಟಡ ನಿರ್ಮಿಸುತ್ತಿದ್ದಾರೆ. ವಾಣಿಜ್ಯ ಉದ್ದೇಶದಿಂದ ಕಟ್ಟಡ ನಿರ್ಮಿಸಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿರುವುದರ ನಡುವೆಯೇ ಗೋಪಾಲಸ್ವಾಮಿ ಬೆಟ್ಟ ವಲಯದ ಅರಣ್ಯ ಅಧಿಕಾರಿ ನವೀನ್ ಕುಮಾರ್ ಅವರು ಬುಧವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ವಲಯ ಅರಣ್ಯಾಧಿಕಾರಿ ಕಚೇರಿಯಿಂದ ಅಂದಾಜು 600 ಮೀಟರ್ ದೂರದಲ್ಲಿ ಕಟ್ಟಡ ತಲೆ ಎತ್ತುತ್ತಿದೆ.

‘ವಾಸದ ಉದ್ದೇಶಕ್ಕಾಗಿ ಮನೆಯನ್ನು ನಿರ್ಮಿಸುತ್ತಿದ್ದೇನೆಯೇ ವಿನಾ, ಹೋಂ ಸ್ಟೇ ಮಾಡುವುದಕ್ಕೆ ಅಲ್ಲ’ ಎಂದು ಮಾಲೀಕ ಆನಂದ್ ಕುಮಾರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಮನೆ ನಿರ್ಮಿಸುವ ಸಂಬಂಧ ಗ್ರಾಮ ಪಂಚಾಯಿತಿ ಹಾಗೂ ಅರಣ್ಯ ಇಲಾಖೆಯ ಗಮನಕ್ಕೆ ತಂದಿರುವುದಾಗಿ ಅವರು ಹೇಳಿದ್ದಾರೆ. ಆದರೆ, ಗ್ರಾಮ ಪಂಚಾಯಿತಿ ಇನ್ನೂ ಅನುಮತಿ ನೀಡಿಲ್ಲ. ಲಾಕ್‌ಡೌನ್ ಮುಗಿದ ಬಳಿಕ ಅನುಮತಿ ನೀಡುವ ಭರವಸೆಯನ್ನು ಅವರು ನೀಡಿದ್ದಾರೆ ಎಂದು ತಿಳಿದು ಬಂದಿದೆ. ಅದರ ನಡುವೆಯೇ ಕಟ್ಟಡ ಕೆಲಸ ಆರಂಭಿಸಲಾಗಿದೆ.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ವಲಯ ಅರಣ್ಯ ಅಧಿಕಾರಿ ನವೀನ್ ಕುಮಾರ್ ಅವರು, ‘ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಗಿದೆ. ಕಟ್ಟಡ ನಿರ್ಮಾಣವಾಗುತ್ತಿರುವ ಬಗ್ಗೆ ಪರಿಸರ ಸೂಕ್ಷ್ಮ ವಲಯಕ್ಕೆ ಸಂಬಂಧಿಸಿದ ಮೇಲ್ವಿಚಾರಣಾ ಸಮಿತಿಗೆ ಮಾಹಿತಿ ನೀಡಲಾಗುವುದು. ಸಮಿತಿ ತೆಗೆದುಕೊಳ್ಳುವ ತೀರ್ಮಾನದಂತೆ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ಪರಿಸರ ಸೂಕ್ಷ್ಮ ವಲಯದಲ್ಲಿ ಕಟ್ಟಡ ನಿರ್ಮಾಣ ಆಗುತ್ತಿರುವ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ’ ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಎಸ್.ಆರ್.ನಟೇಶ್ ಅವರು ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ನೀರು ಪೂರೈಕೆ ವ್ಯತ್ಯಯ

ಬೆಂಗಳೂರು: ನಗರದ ಮಿಲ್ಲರ್ ರಸ್ತೆಯ ಅಂಚೆ ಕಚೇರಿ ಬಳಿ 600 ಮಿ.ಮೀ. ವ್ಯಾಸದ ಕೊಳವೆ ಮಾರ್ಗದ ಜೋಡಣಾ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ವಿವಿಧೆಡೆ ಗುರುವಾರ (ಜೂ.10) ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ತಿಳಿಸಿದೆ.

ಬ್ಯಾಡರಹಳ್ಳಿ, ಹ್ಯಾರಿಸ್ ರಸ್ತೆ, ಮಿಲ್ಲರ್ ರಸ್ತೆ, ಬೋರ್ ಬ್ಯಾಂಕ್ ರಸ್ತೆ, ಎನ್‌ಸಿ ಕಾಲೊನಿ, ಎಸ್.ಕೆ. ಗಾರ್ಡನ್, ಚಿನ್ನಪ್ಪ ಗಾರ್ಡನ್, ಎಕೆ ಕಾಲೊನಿ, ಪೆರಿಯಾರ್ ನಗರ, ಕುಶಾಲ ನಗರ, ಮುನೇಶ್ವರ ನಗರ, ಸಗಾಯಪುರ, ಕಾಡುಗೊಂಡನಹಳ್ಳಿ, ಮಾರುತಿ ಸೇವಾ ನಗರ, ಜೀವನಹಳ್ಳಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ

ಬೆಂಗಳೂರು: ಸಾಮರಸ್ಯ ವೇದಿಕೆಯ ರಾಜ್ಯ ಘಟಕವು ‘ಸಾಮಾಜಿಕ ಸಾಮರಸ್ಯಕ್ಕಾಗಿ ನಡೆದ ವಿವಿಧ ಪ್ರಯತ್ನಗಳು’ (Various efforts to achieve Social Harmony) ವಿಷಯ ಕುರಿತು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ ಆಯೋಜಿಸಿದೆ.

ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ 18 ರಿಂದ 30 ವರ್ಷದ ಒಳಗಿನ ಯುವಕ-ಯುವತಿಯರು ಪಾಲ್ಗೊಳ್ಳಬಹುದು. ಪ್ರಥಮ ₹10 ಸಾವಿರ, ದ್ವಿತೀಯ ₹7,500, ತೃತೀಯ ₹5,000 ಹಾಗೂ ಹತ್ತು ಜನರಿಗೆ ತಲಾ ₹1 ಸಾವಿರ ನಗದು ಬಹುಮಾನ ನಿಗದಿ ಪಡಿಸಲಾಗಿದೆ.

ಪದಗಳು ಮಿತಿ 1,500. ಪ್ರಬಂಧಗಳನ್ನು essaysamarasyavedike@gmail.com ಗೆ ಜುಲೈ 25ರೊಳಗೆ ಪ್ರಬಂಧಗಳನ್ನು ಕಳುಹಿಸಬೇಕು ಎಂದು ವೇದಿಕೆಯ ಪ್ರಾಂತ ಸಂಯೋಜಕ ಲಕ್ಷ್ಮೀನಾರಾಯಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ 98809 23907, 72590 11545.

ಕಣ್ವ ಸೊಸೈಟಿ: ವರದಿ ನೀಡದಿದ್ದರೆ ಕ್ರಮ

ಬೆಂಗಳೂರು: ಕಣ್ವ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಹಗರಣಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರ ಎರಡು ವಾರಗಳಲ್ಲಿ ವರದಿ ಸಲ್ಲಿಸಬೇಕು. ಇಲ್ಲದಿದ್ದರೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ಜರುಗಿಸಬೇಕಾಗುತ್ತದೆ ಎಂದು ಹೈಕೋರ್ಟ್ ಎಚ್ಚರಿಸಿದೆ.

ಈ ಸಂಬಂಧ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ವಿಚಾರಣೆಯನ್ನು ಜೂ.25ಕ್ಕೆ ಮುಂದೂಡಿತು.

ವರದಿ ಸಲ್ಲಿಸಲು 2021ರ ಏ.12ರಂದು ಪೀಠ ಸೂಚಿಸಿದ್ದರೂ, ಸಕ್ರಮ ಪ್ರಾಧಿಕಾರ ಸಲ್ಲಿಸಿಲ್ಲ. ಹೂಡಿಕೆದಾರರ ಹಿತರಕ್ಷಣೆಗೆ ಯಾವುದೇ ಕ್ರಮ ಜರುಗಿಸಿಲ್ಲ ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು.

ಚಿನ್ನ ಅಕ್ರಮ ಸಾಗಣೆ: ಬಂಧನ

ನವದೆಹಲಿ: ಕೇರಳದ ಚಿನ್ನ ಅಕ್ರಮ ಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬುಧವಾರ ಪಿ.ಎಚ್. ಮೊಹಮ್ಮದ್ ಮನ್ಸೂರ್ ಎಂಬಾತನನ್ನು ಬಂಧಿಸಿದೆ.

ಈ ಪ್ರಕರಣದಲ್ಲಿ ಮನ್ಸೂರ್ ಪ್ರಮುಖ ಸಂಚುಕೋರ. ದುಬೈನಿಂದ ಬಂದಿಳಿದಾಗ ಕೋಯಿಕ್ಕೋಡ್‌ನ ವಿಮಾನ ನಿಲ್ದಾಣದಲ್ಲಿ ಈತನನ್ನು ಬಂಧಿಸಲಾಗಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ಕೋವಿಡ್ ಮೂರನೇ ಅಲೆ: ಎದುರಿಸಲು ಸಜ್ಜಾಗುತ್ತಿದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಕ್ಕಳ ಆರೈಕೆ: ವೈದ್ಯರಿಗೆ ವಿಶೇಷ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆಯಲ್ಲಿ ಮಕ್ಕಳು ಹೆಚ್ಚಿನ ಸಮಸ್ಯೆ ಎದುರಿಸದಂತೆ ನೋಡಿಕೊಳ್ಳಲು ಬಿಬಿಎಂಪಿ ಈಗಾಗಲೇ ಸಿದ್ಧತೆ ಆರಂಭಿಸಿದೆ. ನಗರದಲ್ಲಿ ಮಕ್ಕಳ ತಜ್ಞರ ಕೊರತೆ ಇರುವುದರಿಂದ ಇತರ ವೈದ್ಯರನ್ನೂ ಈ ಉದ್ದೇಶಕ್ಕೆ ಬಳಸಿಕೊಳ್ಳಲು ನಿರ್ಧರಿಸಿದೆ. ಕೋವಿಡ್ ಪೀಡಿತ ಮಕ್ಕಳ ಆರೈಕೆಗೆ ಹೇಗೆ ಸಜ್ಜಾಗಬೇಕು ಎಂಬ ಕುರಿತು ವೈದ್ಯರಿಗೆ ಬಿಬಿಎಂಪಿ ವತಿಯಿಂದ ಬುಧವಾರ ವಿಶೇಷ ತರಬೇತಿ ಏರ್ಪಡಿಸಲಾಯಿತು.

ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಕಂದಾಯ ಸಚಿವ ಆರ್.ಅಶೋಕ, 'ನಗರದಲ್ಲಿ 25 ಲಕ್ಷ ಮಕ್ಕಳಿದ್ದಾರೆ. ಮಕ್ಕಳ ಹಿತವನ್ನು ಗಮನದಲ್ಲಿಟ್ಟುಕೊಂಡು, ಕೋವಿಡ್ ಮೂರನೇ ಅಲೆಯಲ್ಲಿ ಏನು ತಯಾರಿ ನಡೆಸಬೇಕು ಎಂದು ಯೋಜನೆ ರೂಪಿಸಿದ್ದೇವೆ. ನಗರದಲ್ಲಿ ಮಕ್ಕಳ ತಜ್ಞರ ಸಂಖ್ಯೆ ತುಂಬಾ ಕಡಿಮೆ ಇದೆ. ಬೇರೆ ಬೇರೆ ವೈದ್ಯರನ್ನು ಹಾಗೂ ಇತರ ರೋಗ-ತಜ್ಞರನ್ನು ಬಳಸಿಕೊಂಡು ಮಕ್ಕಳ ಚಿಕಿತ್ಸೆಗೆ ಕೊರತೆ ಆಗದಂತೆ ಕ್ರಮ ವಹಿಸಿದ್ದೇವೆ. ಬಿಬಿಎಂಪಿ ವೈದ್ಯರ ಜೊತೆ ಖಾಸಗಿ ಆಸ್ಪತ್ರೆಗಳ ವೈದ್ಯರಿಗೂ ಎರಡು ದಿನಗಳ ತರಬೇತಿ ಹಮ್ಮಿಕೊಳ್ಳಲಾಗಿದೆ' ಎಂದರು.

'ಮಕ್ಕಳ ಚಿಕಿತ್ಸೆ ಒಂದು ಸವಾಲು. ದೊಡ್ಡವರಿಗೆ ಚಿಕಿತ್ಸೆ ನೀಡಿದಂತೆ ಮಕ್ಕಳಿಗೆ ಚಿಕಿತ್ಸೆ ನೀಡಲು ಸಾಧ್ಯವಿಲ್ಲ. ಮಕ್ಕಳೊಂದಿಗೆ ಸಮಾಧಾನ ಚಿತ್ತದಿಂದ ನಡೆದುಕೊಳ್ಳಬೇಕು. ತಾಯಿ ಹೃದಯದಿಂದ ಅವರ ಮನಸ್ಸನ್ನು ಒಲಿಸಿಕೊಂಡು ಚಿಕಿತ್ಸೆ ನೀಡುವುದು ಕೂಡಾ ಸವಾಲಿನ ವಿಷಯ' ಎಂದರು.

'5 ವರ್ಷದ ಒಳಗಿನ ಮಕ್ಕಳು ತಾಯಿಯನ್ನು ಬಿಟ್ಟು ಇರಲು ಸಾಧ್ಯವಿಲ್ಲ. ತಾಯಿಗೆ ಕೋವಿಡ್ ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ. ಚಿಕಿತ್ಸೆ ಸಂದರ್ಭದಲ್ಲಿ ಮಕ್ಕಳನ್ನು ದಾಖಲು ಮಾಡಿದ ವಾರ್ಡ್‌ನಲ್ಲೇ ಅವರ ತಂದೆ ಅಥವಾ ತಾಯಿಯೂ ಉಳಿದುಕೊಳ್ಳಬೇಕಾಗುತ್ತದೆ. ಇದಕ್ಕೆ ಸೌಕರ್ಯ ಒದಗಿಸುವ ಸವಾಲೂ ನಮ್ಮ ಮುಂದಿದೆ' ಎಂದರು.

'ವಯಸ್ಕರಿಗೆ ನೀಡುವ ಔಷಧಗಳೇ ಬೇರೆ. ಮಕ್ಕಳಿಗೆ ನೀಡುವ ಔಷಧಗಳು ಹಾಗೂ ಅದರ ಡೋಸೇಜ್‌ಗಳು ಬೇರೆ. ಮಕ್ಕಳಿಗೆ ಯಾವ ಸಂದರ್ಭದಲ್ಲಿ ಎಂತಹ ಔಷಧ ನೀಡಬೇಕಾಗುತ್ತದೆ ಎಂಬ ಬಗ್ಗೆಯೂ ಸಾಮಾನ್ಯ ವೈದ್ಯರಿಗೆ ತರಬೇತಿ ನೀಡಲಾಗುತ್ತಿದೆ' ಎಂದು ಅವರು ಮಾಹಿತಿ ನೀಡಿದರು.

ಮಕ್ಕಳ ಚಿಕಿತ್ಸೆಗೆ ಸಿಮ್ಯುಲೇಟರ್ ಗಳ ಮೂಲಕ ತಿಳಿವಳಿಕೆ ನೀಡುವ ವ್ಯವಸ್ಥೆ, ಶಿಶುಗಳ ಆರೈಕೆ ಮತ್ತು ಆಮ್ಲಜನಕ ಪೂರೈಸುವಾಗ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿವಳಿಕೆ ನೀಡಲಾಯಿತು. 60ಕ್ಕೂ ಅಧಿಕ ವೈದ್ಯರು ಕಾರ್ಯಕ್ರಮದ ಪ್ರಯೋಜನ ಪಡೆದರು. ಆನ್‌ಲೈನ್‌ನಲ್ಲೂ ಕಾರ್ಯಕ್ರಮ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು.




ಕೋವಿಡ್‌ನಿಂದ ಬಳಲುವ ಶಿಶುಗಳ ಚಿಕಿತ್ಸೆ ಕುರಿತ ಸಿಮ್ಯುಲೇಟರ್ ಅನ್ನು ಸಚಿವ ಆರ್.ಅಶೋಕ ವೀಕ್ಷಿಸಿದರು. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಇದ್ದಾರೆ.

'ದೂರವಾಣಿ ಮೂಲಕ ಸಮಾಲೋಚನೆ'

'ಬೆಂಗಳೂರಿನಲ್ಲಿ 10 ಮಂದಿ ಮಕ್ಕಳ ತಜ್ಞರ ತಂಡವನ್ನು ರಚಿಸಲಿದ್ದೇವೆ. ಈ ತಂಡದ ತಜ್ಞರು ದೂರವಾಣಿ ಮೂಲಕ ವೈದ್ಯಕೀಯ ಸಲಹೆ ನೀಡಲಿದ್ದಾರೆ. ಬೆಂಗಳೂರಿನಲ್ಲಿ ನೂರಾರು ಕಡೆ ಮಕ್ಕಳಿಗೆ ಚಿಕಿತ್ಸೆ ನೀಡುವ ಕೇಂದ್ರಗಳಿರುತ್ತವೆ. ಮಕ್ಕಳನ್ನು ಯಾವ ರೀತಿ ಆರೈಕೆ ಮಾಡಬೇಕು, ತುರ್ತು ಸಂದರ್ಭದಲ್ಲಿ ಯಾವ ಔಷಧ ನೀಡಬೇಕಾಗುತ್ತದೆ ಎಂದು ಅಲ್ಲಿನ ವೈದ್ಯರು ಕರೆ ಮಾಡಿ ಈ ಸಮಾಲೋಚನಾ ತಂಡದಿಂದ ಮಾಹಿತಿ ಪಡೆಯಬಹುದು' ಎಂದು ಆರ್.ಅಶೋಕ ತಿಳಿಸಿದರು.

'ಕೋವಿಡ್ ಪೀಡಿತ ಮಕ್ಕಳ ಚಿಕಿತ್ಸೆಗಾಗಿ ಕೆಲವು ಆಸ್ಪತ್ರೆಗಳನ್ನು ಗುರುತಿಸಲಾಗುತ್ತಿದೆ. ಅಲ್ಲದೇ ಮಕ್ಕಳ ಚಿಕಿತ್ಸೆಗಾಗಿಯೇ ಪದ್ಮನಾಭ ನಗರದಲ್ಲಿ ಹೊಸ ಆಸ್ಪತ್ರೆ ನಿರ್ಮಿಸಲು ಬಿಬಿಎಂಪಿಗೆ ಸೂಚಿಸಿದ್ದೇನೆ. ಈಗಾಗಲೇ ಅಲ್ಲಿನ ಹಾಸಿಗೆ ವ್ಯವಸ್ಥೆ ಹಾಗೂ ತಂದೆ ತಾಯಿಯೂ ಮಕ್ಕಳ ಜೊತೆ ಉಳಿದುಕೊಳ್ಳಲು ಅಗತ್ಯವಿರುವ ಸೌಕರ್ಯ ಕಲ್ಪಿಸಲಾಗುತ್ತಿದೆ' ಎಂದು ಅವರು ಮಾಹಿತಿ ನೀಡಿದರು.



ತೈಲ ಬೆಲೆ ಇಳಿಕೆಯ ಲಕ್ಷಣ ಇಲ್ಲ

ನವದೆಹಲಿ: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ನಿರಂತರ ಏರಿಕೆ ಆಗುತ್ತಿರುವುದರಿಂದ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಇನ್ನಷ್ಟು ಏರುವ ಸಾಧ್ಯತೆ ಇದೆ. ಈಗಾಗಲೇ ಪೆಟ್ರೋಲ್ ದರ ಗಗನಕ್ಕೇರಿದ್ದರೆ, ದೇಶದ ಕೆಲವೆಡೆ ಡೀಸೆಲ್ ಬೆಲೆಯೂ ಲೀಟರ್‌ಗೆ ₹ 100ರ ಆಸುಪಾಸಿನಲ್ಲಿದೆ.

ಬ್ರೆಂಟ್ ತೈಲ ದರವು ಬುಧವಾರ ಬ್ಯಾರೆಲ್‌ಗೆ 72 ಡಾಲರ್‌ಗಳಷ್ಟಿತ್ತು. ಒಂದೆಡೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಏರುತ್ತಿದ್ದರೆ, ಇನ್ನೊಂದೆಡೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೈಲದ ಮೇಲಿನ ತೆರಿಗೆಯನ್ನು ಕಡಿಮೆ ಮಾಡುವ ಲಕ್ಷಣಗಳು ಗೋಚರಿಸುತ್ತಿಲ್ಲ. ಹಾಗಾಗಿ ಸದ್ಯಕ್ಕೆ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಇಳಿಕೆಯಾಗುವ ಲಕ್ಷಣಗಳಿಲ್ಲ.

ನಿಮ್ಹಾನ್ಸ್: ರೋಗಿಗಳಿಗೆ ದೂರವಾಣಿ ಸೇವೆ

ಬೆಂಗಳೂರು: ಕೋವಿಡ್ ಕಾರಣ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಈಗಾಗಲೇ ಚಿಕಿತ್ಸೆ ಪಡೆದಿರುವ ಹಳೆಯ ರೋಗಿಗಳಿಗೆ ನೆರವಾಗಲು ದೂರವಾಣಿ ಸೇವೆ ಆರಂಭಿಸಿದೆ.

ಕೋವಿಡ್ 2ನೇ ಅಲೆ ಬಳಿಕ ಆಸ್ಪತ್ರೆ ಚಿಕಿತ್ಸೆ ಅಗತ್ಯ ಇರುವವರಿಗೆ ಕೋವಿಡ್ ಪರೀಕ್ಷೆ ನಡೆಸಿ, ಅಲ್ಲಿ ದಾಖಲಿಸಿಕೊಳ್ಳಲಾಗುತ್ತಿದೆ.

'ಮಾನಸಿಕ ಅನಾರೋಗ್ಯ ಸಮಸ್ಯೆ ಸೇರಿದಂತೆ ವಿವಿಧ ಕಾಯಿಲೆಗಳಿಗೆ ಲಕ್ಷಾಂತರ ಮಂದಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಅವರಲ್ಲಿ ಹಲವರು ಫಾಲೋ ಅಪ್ ಚಿಕಿತ್ಸೆಯಲ್ಲಿದ್ದಾರೆ. ಕೋವಿಡ್, ಲಾಕ್‌ಡೌನ್ ಕಾರಣ ಸಂಸ್ಥೆಗೆ ಬಂದು ಆರೋಗ್ಯ ಸೌಲಭ್ಯ ಪಡೆಯಲು ಬಹುತೇಕರಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ, ಪ್ರತ್ಯೇಕ ದೂರವಾಣಿ ಸಂಖ್ಯೆಯನ್ನು ಮೀಸಲಿಡಲಾಗಿದೆ. ಸೇವೆ ಅಗತ್ಯ ಇರುವವರು ಕರೆ ಮಾಡಿ, ಸಲಹೆಗಳನ್ನು ಪಡೆಯಬಹುದು' ಎಂದು ಸಂಸ್ಥೆಯ ಮನೋವೈದ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಜಗದೀಶ್ ತೀರ್ಥಳ್ಳಿ ತಿಳಿಸಿದ್ದಾರೆ.

'ವೈದ್ಯರು ರೋಗಿಗಳ ಸಮಸ್ಯೆಯನ್ನು ದೂರವಾಣಿ ಮೂಲಕ ಆಲಿಸಿ, ಚಿಕಿತ್ಸೆ, ಔಷಧ ಸೂಚಿಸಲಿದ್ದಾರೆ. ಈ ಸೇವೆಯು ಈಗಾಗಲೇ ಸಂಸ್ಥೆಯಲ್ಲಿ ನೋಂದಾಯಿತರಾದ (ಈ ಹಿಂದೆ ಚಿಕಿತ್ಸೆ ಪಡೆದ) ರೋಗಿಗಳಿಗೆ ಮಾತ್ರ ಲಭ್ಯವಿರಲಿದೆ' ಎಂದು ಹೇಳಿದ್ದಾರೆ.

ದೂರವಾಣಿ: 080 4680 1771 (ಬೆಳಿಗ್ಗೆ 10 ರಿಂದ ಮಧ್ಯಾಹ್ನ 4).

'ಖಾಸಗಿ ಆಸ್ಪತ್ರೆಗಳಿಗೆ ಹಾಸಿಗೆ ವಾಪಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ಸೋಂಕಿತರ ಸಂಖ್ಯೆ ಇಳಿಮುಖವಾಗಿದೆ. ಹೀಗಾಗಿ, ಸರ್ಕಾರಿ ಕೋಟಾದಲ್ಲಿ ಸದ್ಯದ ಪರಿಸ್ಥಿತಿಗೆ ಸಾಕಾಗುವಷ್ಟು ಹಾಸಿಗೆಗಳನ್ನು ಉಳಿಸಿಕೊಂಡು ಉಳಿದವುಗಳನ್ನು ಖಾಸಗಿ ಆಸ್ಪತ್ರೆಯವರಿಗೆ ಹಿಂದಿರುಗಿಸಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಖಾಸಗಿ ಆಸ್ಪತ್ರೆಗಳಿಂದ ಸರ್ಕಾರ ಪಡೆದುಕೊಂಡ ಹಾಸಿಗೆ ವಿಚಾರದ ಕುರಿತು ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಮತ್ತು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಜೊತೆ ಬುಧವಾರ ಚರ್ಚಿಸಿದ ಬಳಿಕ ಅವರು ಈ ವಿಷಯ ತಿಳಿಸಿದರು.

'ಖಾಸಗಿ ಆಸ್ಪತ್ರೆಗಳ ಒಟ್ಟು ಹಾಸಿಗೆಗಳ ಪೈಕಿ ಶೇ 50ರಷ್ಟನ್ನು ಸರ್ಕಾರ ಪಡೆದುಕೊಂಡಿತ್ತು. ಅದರಲ್ಲಿ ಶೇ 30ರಷ್ಟು ಸಾಮಾನ್ಯ ಹಾಸಿಗೆಗಳನ್ನು ಮತ್ತು ಶೇ 20ರಷ್ಟು ಆಮ್ಲಜನಕ ಸೌಲಭ್ಯದ ಹಾಸಿಗೆಗಳನ್ನ ಹಿಂದಿರುಗಿಸಲು ನಿರ್ಧರಿಸಲಾಗಿದೆ. ಆದರೆ, ಐಸಿಯು ಮತ್ತು ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳನ್ನು ಹಿಂದಿರುಗಿಸದೆ ಸರ್ಕಾರದ ಬಳಿಯೇ ಇಟ್ಟುಕೊಳ್ಳಲಾಗುವುದು. ಕೋವಿಡ್ ಅಲ್ಲದ ರೋಗಿಗಳಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸರ್ಕಾರ ತನ್ನ ಪಾಲಿನ ಕೋಟಾದಷ್ಟು ಹಾಸಿಗೆಗಳನ್ನು ಅಗತ್ಯಬಿದ್ದರೆ ಯಾವಾಗ ಬೇಕಾದರೂ ವಾಪಸು ಪಡೆಯಬಹುದು' ಎಂದರು.

ಹಣ ವಸೂಲಿ ಆರೋಪ: ಐದು ಆಸ್ಪತ್ರೆಗಳಿಗೆ ನೋಟಿಸ್

ಬೆಂಗಳೂರು: ಕೋವಿಡ್ ಚಿಕಿತ್ಸೆಗೆ ಸರ್ಕಾರ ನಿಗದಿಪಡಿಸಿದ ಶುಲ್ಕಕ್ಕಿಂತ ಹೆಚ್ಚಿನ ದರವನ್ನು ವಸೂಲಿ ಮಾಡಿದ ಆರೋಪಕ್ಕೆ ಕಾರಣ ಕೇಳಿ ಐದು ಆಸ್ಪತ್ರೆಗಳಿಗೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ನೋಟಿಸ್ ನೀಡಿದ್ದಾರೆ.

ಅಶ್ವಿನಿ ಆಸ್ಪತ್ರೆ, ಸೇಂಟ್ ಜಾನ್ಸ್ ಆಸ್ಪತ್ರೆ, ಆತ್ರೇಯ ಆಸ್ಪತ್ರೆ, ಕೆ.ಕೆ. ಆಸ್ಪತ್ರೆ ಮತ್ತು ಸ್ಪರ್ಶ ಆಸ್ಪತ್ರೆ ನೋಟಿಸ್ ಪಡೆದಿವೆ.

'ಖಾಸಗಿ ಆಸ್ಪತ್ರೆಗಳು ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಹಣ ಪಡೆದು, ಚಿಕಿತ್ಸೆ ಒದಗಿಸಿರುವುದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯನಿರ್ವಾಹಕ ನಿರ್ದೇಶಕರ ಗಮನಕ್ಕೆ ಬಂದಿದೆ. ಸರ್ಕಾರದ ಆದೇಶದಂತೆ ಟ್ರಸ್ಟ್‌ನಡಿ ನೋಂದಾಯಿತ ಆಸ್ಪತ್ರೆಗಳು ಸರ್ಕಾರ ನಿಗದಿಪಡಿಸಿದ ದರದಲ್ಲಿಯೇ ಕೋವಿಡ್ ಚಿಕಿತ್ಸೆ ಒದಗಿಸಬೇಕು. ಅಧಿಕ ದರವನ್ನು ಪಡೆದಿರುವ ಆಸ್ಪತ್ರೆಗಳು ಏಪ್ರಿಲ್ 1ಕ್ಕೆ ಅನ್ವಯವಾಗುವಂತೆ ಇಲ್ಲಿಯವರೆಗೆ ಕೋವಿಡ್ ಚಿಕಿತ್ಸೆಗೆ ಖಾಸಗಿಯಾಗಿ ದಾಖಲಾಗಿರುವ ರೋಗಿಗಳ ವಿವರ ಹಾಗೂ ಭರಿಸಲಾದ ವೆಚ್ಚದ ವಿವರವನ್ನು ಮೂರು ದಿನಗಳ ಒಳಗಾಗಿ ನೀಡಬೇಕು' ಎಂದು ಜೆ. ಮಂಜುನಾಥ್ ತಿಳಿಸಿದ್ದಾರೆ.

'ನಿಗದಿತ ಅವಧಿಯೊಳಗೆ ವಿವರವನ್ನು ಒದಗಿಸದಿದ್ದಲ್ಲಿ ತಮ್ಮ ಸಂಸ್ಥೆಯ ವಿರುದ್ಧ ಕೆಪಿಎಂಇ ಕಾಯ್ದೆ, ಸಾಂಕ್ರಾಮಿಕ ರೋಗಗಳ ಕಾಯ್ದೆ ಸೇರಿದಂತೆ ವಿವಿಧ ಕಾಯ್ದೆಗಳ ಅಡಿಯಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದೂ ಅವರು ಎಚ್ಚರಿಸಿದ್ದಾರೆ.

ಉದ್ಯಮಗಳಿಗೆ ಆಮ್ಲಜನಕ ಪೂರೈಕೆ: ಕೇಂದ್ರದ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮತ್ತು ದೇಶದಲ್ಲಿ ವೈದ್ಯಕೀಯ ಆಮ್ಲಜನಕದ ಬೇಡಿಕೆ ಪ್ರಮಾಣ ದಿನೇ ದಿನೇ ಕಡಿಮೆ ಆಗುತ್ತಿರುವುದರಿಂದ ಕೈಗಾರಿಕೆಗಳಿಗೆ ಸ್ವಲ್ಪ ಪ್ರಮಾಣದಲ್ಲಿ ಆಮ್ಲಜನಕ ಪೂರೈಕೆ ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಹೇಳಿದ್ದಾರೆ.

ರಾಜ್ಯದಲ್ಲಿ ಆಮ್ಲಜನಕ ಉತ್ಪಾದನೆ ಮತ್ತು ಸರಬರಾಜು ಕುರಿತು ಹಿರಿಯ ಅಧಿಕಾರಿಗಳೊಂದಿಗೆ ವಿಧಾನಸೌಧದಲ್ಲಿ ಸಭೆ ನಡೆಸಿದ ಬಳಿಕ ಸುದ್ದಿಗಾರರಿಗೆ ಈ ಮಾಹಿತಿ ನೀಡಿದರು.

ಕಳೆದ ಎರಡು ದಿನಗಳಲ್ಲಿ ರಾಜ್ಯದಲ್ಲಿ 580 ಮೆಟ್ರಿಕ್ ಟನ್ ಆಮ್ಲಜನಕಕ್ಕೆ ಬೇಡಿಕೆ ಇತ್ತು. ಬೇಡಿಕೆ ಕಡಿಮೆ ಆಗಿದೆ ಎಂದು ಕಡೆಗಣಿಸಬಾರದು. ಮೂರನೇ ಅಲೆ ಬಂದಲ್ಲಿ ಅದನ್ನು ಎದುರಿಸಲು ಅಗತ್ಯ ತಯಾರಿ ನಡೆಸಿಕೊಳ್ಳಬೇಕು. ಎಲ್ಲ ಜಿಲ್ಲಾ ಆಸ್ಪತ್ರೆಗಳೂ ಆಮ್ಲಜನಕ ತಯಾರಿಸುವಲ್ಲಿ ಸ್ವಾವಲಂಬಿಯಾಗಿಸಬೇಕು. ಅಲ್ಲದೆ, ಜಿಲ್ಲೆಗಳಲ್ಲಿ ಬಫರ್ ಸ್ಟಾಕ್ ಸಂಗ್ರಹಣೆಗೆ ಅಗತ್ಯವಿರುವ ಸೌಲಭ್ಯಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದೂ ಸಲಹೆ ನೀಡಿದರು.

ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಕೆಗೆ ಸಂಬಂಧಿಸಿದಂತೆ ಹೊಸ ತಂತ್ರಾಂಶವನ್ನು ಅಭಿವೃದ್ಧಿಗೊಳಿಸಲಾಗಿದೆ. ಈ ತಂತ್ರಾಂಶದ ಮೂಲಕ ಆಸ್ಪತ್ರೆಗಳು ಬೇಡಿಕೆ ಸಲ್ಲಿಸಬಹುದು. ಸದ್ಯವೇ ಈ ತಂತ್ರಾಂಶ ಕಾರ್ಯಾರಂಭ ಮಾಡಲಿದೆ. ಕೋವಿಡ್ ಮೂರನೇ ಅಲೆ ಬಂದರೆ ಅದನ್ನು ಎದುರಿಸಲು ಸಹಾಯಕವಾಗಲಿದೆ ಎಂದು ಜಗದೀಶ ಶೆಟ್ಟರ್ ಅವರು ಹೇಳಿದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

11,89,541 ಒಟ್ಟು ಸೋಂಕಿತರು (11,87,146 ನಿನ್ನೆಯ ವಿವರ)

98,125 ಸಕ್ರಿಯ ಪ್ರಕರಣ	10,76,247 ಗುಣಮುಖ ಆದವರು	15,168 ಒಟ್ಟು ಸಾವು

ಮಂಗಳವಾರದ ಏರಿಕೆ

ಹೊಸ ಪ್ರಕರಣ	2,395
ಗುಣಮುಖ	6,185
ಸಾವು	50

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಹೆಚ್ಚುವರಿ ಶುಲ್ಕ: 'ಕಂಫರ್ಟ್' ಆಸ್ಪತ್ರೆ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರ ಚಿಕಿತ್ಸೆಗಾಗಿ ಹೆಚ್ಚುವರಿ ಶುಲ್ಕ ವಸೂಲಿ ಮಾಡಿದ ಆರೋಪದಡಿ ಕಗ್ಗದಾಸಪುರ ಮುಖ್ಯರಸ್ತೆಯಲ್ಲಿರುವ 'ಕಂಫರ್ಟ್ ಮಲ್ಟಿ ಸ್ಪೆಷಾಲಿಟಿ' ಆಸ್ಪತ್ರೆ ವಿರುದ್ಧ ಬೈಯಪ್ಪನಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಬಿಬಿಎಂಪಿಯ ಸಿ.ವಿ.ರಾಮನ್ ನಗರ ವಿಭಾಗದ ಆರೋಗ್ಯ ವೈದ್ಯಾಧಿಕಾರಿ ವಿ. ಶಿವೇಗೌಡ ದೂರು ನೀಡಿದ್ದಾರೆ. ಅದರನ್ವಯ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಜಾಕ್ಲಿನ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಸರ್ಕಾರ ನಿಗದಿಪಡಿಸಿದ್ದ ದರಕ್ಕಿಂತಲೂ ಹೆಚ್ಚು ದರ ವಸೂಲಿ ಮಾಡುತ್ತಿದ್ದ ಬಗ್ಗೆ ದೂರುಗಳು ಬಂದಿದ್ದವು. ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಹಾಗೂ ಐಎಎಸ್ ಅಧಿಕಾರಿ ಪಿ. ಮಣಿವಣ್ಣನ್ ನೇತೃತ್ವದ ಉನ್ನತ ಅಧಿಕಾರಿಗಳ ತಂಡ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು.

ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಸುಮಾರು ₹ 65 ಲಕ್ಷ ಹೆಚ್ಚುವರಿ ಶುಲ್ಕ ವಸೂಲಿ ಮಾಡಿರುವುದನ್ನು ಪತ್ತೆ ಹಚ್ಚಿದ್ದ ತಂಡ, ವಾರದೊಳಗೆ ರೋಗಿಗಳಿಗೆ ಹಣ ಮರುಪಾವತಿ ಮಾಡುವಂತೆ ಸೂಚಿಸಿ ನೋಟಿಸ್ ನೀಡಿತ್ತು. ನೋಟಿಸ್‌ಗೆ ಉತ್ತರಿಸದ ಡಾ. ಜಾಕ್ಲಿನ್, ಆರೋಗ್ಯ ಸರಿ ಇಲ್ಲವೆಂದು ಸಬೂಬು ನೀಡಿ ತಲೆಮರೆಸಿಕೊಂಡಿದ್ದಾರೆ. ಅವರ ವಿರುದ್ಧ ಇದೀಗ ವಿ. ಶಿವೇಗೌಡ ದೂರು ದಾಖಲಿಸಿದ್ದಾರೆ.

ರೋಗಿಗಳಿಗೆ ವಂಚನೆ; 'ಸರ್ಕಾರದ ಆದೇಶ ಹಾಗೂ ದರಪಟ್ಟಿಯನ್ನು ಲೆಕ್ಕಿಸದೇ ಆಸ್ಪತ್ರೆಯವರು ತಮ್ಮಿಷ್ಟದಂತೆ ರೋಗಿಗಳಿಂದ ದರ ವಸೂಲಿ ಮಾಡಿದ್ದಾರೆ. ಈ ಮೂಲಕ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ರೋಗಿಗಳನ್ನು ವಂಚಿಸಿದ್ದಾರೆ ಎಂಬುದಾಗಿ ಶಿವೇಗೌಡ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ಅಪರಾಧ ಸಂಚು (ಐಪಿಸಿ 34), ವಂಚನೆ (ಐಪಿಸಿ 420) ಆರೋಪ ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿ ಪತ್ತೆಗಾಗಿ ತನಿಖೆ ಮುಂದುವರಿದಿದೆ' ಎಂದು ತಿಳಿಸಿದರು.



ಲಗ್ಗೆರೆಯ ಹೊರವರ್ತುಲ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ನಡೆಯುತ್ತಿರುವುದರಿಂದ ಬುಧವಾರ ಕಂಡುಬಂದ ವಾಹನ ದಟ್ಟಣೆ —ಪ್ರಜಾವಾಣಿ ಚಿತ್ರ

ಟಿಎಂಸಿಗೆ ಮರಳಲು ಬಿಜೆಪಿ ನಾಯಕರ ಸಿದ್ಧತೆ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಗೆ ಮುನ್ನ ತೃಣಮೂಲ ಕಾಂಗ್ರೆಸ್ ಪಕ್ಷ ತ್ಯಜಿಸಿ ಬಿಜೆಪಿ ಸೇರಿದ್ದ ಹಲವು ನಾಯಕರು ಈಗ ಮತ್ತೆ ವಾಪಸ್ ಮಾತೃಪಕ್ಷಕ್ಕೆ ಸೇರಲು ತುದಿಗಾಲಲ್ಲಿದ್ದಾರೆ.

ಹೀಗಾಗಿಯೇ ಈ ನಾಯಕರು ಬಿಜೆಪಿಯನ್ನು ಬಹಿರಂಗವಾಗಿ ಟೀಕಿಸುತ್ತಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಜಯ ಸಾಧಿಸುವ ಭರವಸೆಯೊಂದಿಗೆ ಈ ನಾಯಕರು ಬಿಜೆಪಿ ಸೇರಿದ್ದರು. ಆದರೆ, ಅಧಿಕಾರ ಪಡೆಯಲು ಬಿಜೆಪಿ ವಿಫಲವಾಗಿರುವುದರಿಂದ ರಾಜಕೀಯವಾಗಿ ಅಪ್ರಸ್ತುತವಾಗಬಹುದು ಎನ್ನುವ ಆತಂಕ ಈ ನಾಯಕರನ್ನು ಕಾಡುತ್ತಿದೆ.

ಸುವೇಂದು ಅಧಿಕಾರಿ ಅವರಂಥ ಕೆಲವು ನಾಯಕರನ್ನು ಹೊರತುಪಡಿಸಿದರೆ ಟಿಎಂಸಿಯಿಂದ ಬಿಜೆಪಿ ಸೇರಿದ ಬಹುತೇಕರು ವಿಧಾನಸಭೆ ಚುನಾವಣೆಯಲ್ಲಿ ಪರಾಭವಗೊಂಡಿದ್ದಾರೆ.

ಈ ನಾಯಕರನ್ನು ಸೇರಿಸಿಕೊಳ್ಳಲು ಬಿಜೆಪಿಯ ಮೂಲ ನಾಯಕರು ಸಹ ವಿರೋಧ ವ್ಯಕ್ತಪಡಿಸಿದ್ದರು.

25 ಸಾವಿರ ಕಲಾವಿದರನ್ನು ಅಂತಿಮಗೊಳಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ

₹ 3 ಸಾವಿರ ನೆರವಿಗೆ 26 ಸಾವಿರ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಕಲಾವಿದರಿಗೆ ಸರ್ಕಾರ ಘೋಷಿಸಿದ ₹ 3 ಸಾವಿರ ನೆರವಿಗೆ 26 ಸಾವಿರ ಮಂದಿ ಅರ್ಜಿ ಸಲ್ಲಿಸಿ ದ್ದಾರೆ. ಇದರಲ್ಲಿ 25 ಸಾವಿರ ಕಲಾವಿದರು ನೆರವು ಪಡೆಯಲು ಅರ್ಹರಾಗಿದ್ದಾರೆ.

ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡಾಗಿನಿಂದ ಸಾಂಸ್ಕೃತಿಕ ಚಟುವಟಿಕೆಗಳು ಸ್ತಬ್ಧವಾಗಿವೆ. ಇದರಿಂದಾಗಿ ಕಲಾವಿದರು ಹಾಗೂ ಸಾಂಸ್ಕೃತಿಕ ಸಂಘ–ಸಂಸ್ಥೆಗಳು ಸಂಕಷ್ಟ ಎದುರಿಸುತ್ತಿವೆ. ಎರಡನೇ ಅಲೆಯ ಬಳಿಕ ಲಾಕ್‌ಡೌನ್ ಹೇರಿದ ಸರ್ಕಾರ, ಕಲಾವಿದರು ಸೇರಿದಂತೆ ವಿವಿಧ ವರ್ಗದವರಿಗೆ ಆರ್ಥಿಕ ಪ್ಯಾಕೇಜ್ ಘೋಷಿಸಿದೆ. 16 ಸಾವಿರ ಕಲಾವಿದರಿಗೆ ನೆರವು ಒದಗಿಸಲು ₹ 4.82 ಕೋಟಿ ಮಂಜೂರು ಮಾಡಲಾಗಿತ್ತು.

ನಾಟಕ, ಸಂಗೀತ, ನೃತ್ಯ, ಜಾನಪದ, ಯಕ್ಷಗಾನ, ಶಿಲ್ಪಕಲೆ, ಲಲಿತಕಲೆ ಸೇರಿದಂತೆ ವಿವಿಧ ಕಲಾ ಪ್ರಕಾರಗಳಲ್ಲಿ ಗುರುತಿಸಿಕೊಂಡಿರುವ 35 ವರ್ಷ ಮೇಲ್ಪಟ್ಟವರಿಗೆ ಮಾತ್ರ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಅದೇ ರೀತಿ, ಕನಿಷ್ಠ 10 ವರ್ಷಗಳ ಕಲಾ ಸೇವೆ ಮಾಡಿರಬೇಕು.



ಎಸ್. ರಂಗಪ್ಪ

ಇಲಾಖೆಯಿಂದ ಮಾಸಾಶನ ಪಡೆಯುತ್ತಿರಬಾರದು. ಸರ್ಕಾರಿ ನೌಕರಿಯಲ್ಲಿ ಇರಕೂಡದು. 2020–21ನೇ ಸಾಲಿನ ಸಾಮಾನ್ಯ, ವಿಶೇಷ ಘಟಕ, ಗಿರಿಜನ ಉಪಯೋಜನೆಯಡಿ ಧನಸಹಾಯ ಪಡೆದಿರಬಾರದು ಎಂಬ ನಿರ್ಬಂಧವನ್ನು ವಿಧಿಸಲಾಗಿತ್ತು. ಇಷ್ಟಾಗಿಯೂ ಸರ್ಕಾರದ ನಿರೀಕ್ಷೆಗೂ ಮೀರಿ ಈ ಬಾರಿ ಅರ್ಜಿಗಳು ಸಲ್ಲಿಕೆಯಾಗಿವೆ.

1 ಸಾವಿರ ಅರ್ಜಿ ತಿರಸ್ಕಾರ: ಸಲ್ಲಿಕೆಯಾಗಿದ್ದ ಅರ್ಜಿಗಳಲ್ಲಿ ಸಾವಿರ ಅರ್ಜಿಗಳು ತಿರಸ್ಕರಿಸಲ್ಪಟ್ಟಿವೆ. ಕಳೆದ ವರ್ಷ ಅರ್ಜಿಗಳನ್ನು ಸಂಗ್ರಹಿಸಿ, ಪರಿಷ್ಕರಿಸುವ ಜವಾಬ್ದಾರಿಯನ್ನು ಅಕಾಡೆಮಿಗಳಿಗೆ ನೀಡಲಾಗಿತ್ತು. ಆರ್ಥಿಕವಾಗಿ ಸಬಲರಾಗಿರುವವರನ್ನೂ ಆಯ್ಕೆ ಮಾಡಿ, ಕೆಲ ಅರ್ಹರನ್ನು ಕೈಬಿಡಲಾಗಿದೆ ಎಂಬ ಆರೋಪಗಳು ವ್ಯಕ್ತವಾಗಿದ್ದವು.

ಈ ಬಾರಿ ಪ್ರತಿ ಜಿಲ್ಲೆಯಲ್ಲೂ ಇಲಾಖೆಯ ಸಹಾಯಕ ನಿರ್ದೇಶಕರನ್ನು ಒಳಗೊಂಡ ಐದು ಜನರ ಸಮಿತಿಗೆ ಈ ಜವಾಬ್ದಾರಿ ನೀಡಲಾಗಿತ್ತು. ಅಲ್ಲಿ ಆಯ್ಕೆಯಾದ ಕಲಾವಿದರ ಪಟ್ಟಿಯನ್ನು ಕೇಂದ್ರ ಕಚೇರಿಗೆ ಕಳುಹಿಸಲು ಸೂಚಿಸಲಾಗಿತ್ತು. ಸೂಕ್ತ ದಾಖಲಾತಿ ಒದಗಿಸದಿರುವುದು ಸೇರಿದಂತೆ ವಿವಿಧ ಕಾರಣಗಳಿಂದ ಕೆಲ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

'ಈಗಾಗಲೇ ಮಾಸಾಶನ ಪಡೆಯುತ್ತಿರುವವರು, ಸರ್ಕಾರಿ ನೌಕರಿಯಲ್ಲಿರುವವರು ಕೂಡ ಆರ್ಥಿಕ ನೆರವಿಗೆ ಅರ್ಜಿ ಸಲ್ಲಿಸಿದ್ದರು. ಕೆಲವರು ನಿಗದಿಪಡಿಸಲಾದ ಮಾನದಂಡಕ್ಕೆ ಅನ್ವಯವಾಗುತ್ತಿರಲಿಲ್ಲ. ಇನ್ನೂ ಕೆಲವು ಅರ್ಜಿಗಳ ಜತೆಗೆ ಆಧಾರ್ ಸೇರಿದಂತೆ ವಿವಿಧ ಅಗತ್ಯ ಮಾಹಿತಿಗಳನ್ನು ಒದಗಿಸಿರಲಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಮುಂದಿನ ಸೋಮವಾರದಿಂದ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಪ್ರಕ್ರಿಯೆ ಪ್ರಾರಂಭವಾಗಲಿದೆ' ಎಂದು ಇಲಾಖೆ ನಿರ್ದೇಶಕ ಎಸ್. ರಂಗಪ್ಪ ಅವರು ತಿಳಿಸಿದರು.

₹ 3 ಕೋಟಿಗೆ ಪ್ರಸ್ತಾವ ಸಲ್ಲಿಕೆ

ಕೋವಿಡ್ ಮೊದಲನೇ ಅಲೆಯ ಸಮಯದಲ್ಲಿ ಸಂಕಷ್ಟದಲ್ಲಿರುವ 10 ಸಾವಿರ ಕಲಾವಿದರಿಗೆ ತಲಾ ₹ 2 ಸಾವಿರ ಆರ್ಥಿಕ ನೆರವನ್ನು ಸರ್ಕಾರ ಘೋಷಿಸಿತ್ತು. ಬಳಿಕ 7 ಸಾವಿರ ಕಲಾವಿದರನ್ನು ಹೆಚ್ಚುವರಿಯಾಗಿ ಸೇರಿಸಿ, ನೆರವು ಒದಗಿಸಲಾಗಿತ್ತು. ಈ ಬಾರಿ 25 ಸಾವಿರ ಕಲಾವಿದರ ಪಟ್ಟಿಯನ್ನು ಸಂಸ್ಕೃತಿ ಇಲಾಖೆ ಅಂತಿಮಗೊಳಿಸಿದೆ. ಈ ಮೊದಲು 16 ಸಾವಿರ ಕಲಾವಿದರಿಗೆ ಮಾತ್ರ ನೆರವು ಒದಗಿಸುವುದಾಗಿ ಸರ್ಕಾರ ಘೋಷಿಸಿತ್ತು. 9 ಸಾವಿರ ಕಲಾವಿದರು ಹೆಚ್ಚುವರಿಯಾಗಿ ಸೇರಿದ್ದರಿಂದ ಮತ್ತೆ ₹ 3 ಕೋಟಿ ಒದಗಿಸುವಂತೆ ಇಲಾಖೆಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಐಎಸ್‌ಡಿ ಕರೆಗಳ ಪರಿವರ್ತನೆ ಜಾಲ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ


ಇಬ್ರಾಹಿಂ


ಗೌತಮ್

ಬೆಂಗಳೂರು: ಅನಧಿಕೃತ ಟೆಲಿಫೋನ್ ಎಕ್ಸ್‌ಚೇಂಜ್ ವ್ಯವಸ್ಥೆಯ ಮೂಲಕ ಅಂತರರಾಷ್ಟ್ರೀಯ ಕರೆಗಳನ್ನು (ಐಎಸ್‌ಡಿ) ಸ್ಥಳೀಯ ಕರೆಗಳನ್ನಾಗಿ ಪರಿವರ್ತಿಸಿ, ದೂರಸಂಪರ್ಕ ಇಲಾಖೆಗೆ ವಂಚಿಸುತ್ತಿದ್ದ ಜಾಲದಲ್ಲಿದ್ದ ಇಬ್ಬರು ಆರೋಪಿಗಳನ್ನು ಮಿಲಿಟರಿ ಇಂಟೆಲಿಜೆನ್ಸ್ ಸಹಕಾರದೊಂದಿಗೆ ಸಿಸಿಬಿಯ 'ಭಯೋತ್ಪಾದನೆ ನಿಗ್ರಹ ದಳ'ದ (ಎಟಿಸಿ) ಅಧಿಕಾರಿಗಳು ಬಂಧಿಸಿದ್ದಾರೆ.

ಬಿಟಿಎಂ ಬಡಾವಣೆಯಲ್ಲಿ ವಾಸವಿದ್ದ ಕೇರಳದ ಇಬ್ರಾಹಿಂ ಪುಲ್ಲಟ್ಟಿ (36) ಹಾಗೂ ತಮಿಳುನಾಡಿನ ಗೌತಮ್ (27) ಬಂಧಿತರು.

'ಆರೋಪಿಗಳು ಒಂದೇ ಬಾರಿಗೆ 32 ಸಿಮ್ ಕಾರ್ಡ್‌ಗಳನ್ನು ಬಳಸುವ 30 ಸಿಮ್ ಬಾಕ್ಸ್ ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಿಟಿಎಂ ಬಡಾವಣೆಯ ಆರು ಸ್ಥಳಗಳಲ್ಲಿ ಅಳವಡಿಸಿಕೊಂಡಿದ್ದರು, ಸುಮಾರು 900ಕ್ಕೂ ಹೆಚ್ಚು ಸಿಮ್ ಕಾರ್ಡ್‌ಗಳನ್ನು ಬಳಸಿ, ಅನಧಿಕೃತವಾಗಿ ಅಂತರರಾಷ್ಟ್ರೀಯ ಕರೆಗಳನ್ನು (ಐಎಸ್‌ಡಿ) ಸ್ಥಳೀಯ ಕರೆಗಳನ್ನಾಗಿ ಪರಿವರ್ತಿಸುತ್ತಿದ್ದರು. ಆರೋಪಿಗಳ ವಿರುದ್ಧ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ್ ತಿಳಿಸಿದರು.

'ಈ ಜಾಲಕ್ಕೆ ಹವಾಲಾದಾರನಾಗಿ (ಏಜೆಂಟ್) ಕೆಲಸ ಮಾಡುತ್ತಿದ್ದ ಭಟ್ಕಳ ಮೂಲದ ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆಯಲಾಗಿದೆ' ಎಂದೂ ಅವರು ಹೇಳಿದರು.

ಆರೋಪಿಗಳಿಗೆ ಹವಾಲಾ ಹಣ: 'ಐಎಸ್‌ಡಿ ಕರೆಗಳನ್ನು ಸ್ಥಳೀಯ ಕರೆಯಾಗಿ ಪರಿವರ್ತಿಸುವುದು ಕಾನೂನು ಬಾಹಿರ. ಬೇರೆ ದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವ ಭಾರತೀಯರು ಇಲ್ಲಿನವರೊಂದಿಗೆ ಮಾತನಾಡಲು ಐಎಸ್‌ಡಿ ಕರೆಗಳನ್ನು ಬಳಸುತ್ತಾರೆ. ಈ ಕರೆಗಳ ದರ ಸ್ಥಳೀಯ ಕರೆಗಳಿಗಿಂತ ಹೆಚ್ಚು. ಕರೆಗಳನ್ನು ಪರಿವರ್ತಿಸುವುದರಿಂದ ಸ್ಥಳೀಯ ಕರೆಯ ದರದಲ್ಲೇ ಅಂತರರಾಷ್ಟ್ರೀಯ ಕರೆಗಳನ್ನು ಮಾಡಬಹುದು. ಎರಡೂ ದೇಶಗಳಲ್ಲಿ ಒಂದೇ ತಂತ್ರಜ್ಞಾನ ಬಳಸಿದಾಗ ಮಾತ್ರ ಇದು ಸಾಧ್ಯ. ಈ ಉದ್ದೇಶದಿಂದ ಆರೋಪಿಗಳು ದುಬಾರಿ ಕರೆಗಳನ್ನು ಸ್ಥಳೀಯ ಕರೆಗಳನ್ನಾಗಿ ಬದಲಾಯಿಸುತ್ತಿದ್ದರು. ಇದಕ್ಕಾಗಿ ಇವರಿಗೆ ಹವಾಲಾ ಮೂಲಗಳಿಂದ ಹಣ ಬರುತ್ತಿತ್ತು' ಎಂದೂ ಪೊಲೀಸರು ವಿವರಿಸಿದರು.

ತಿಂಗಳಿಗೆ ₹15 ಲಕ್ಷ ವಹಿವಾಟು !


ಕಮಲ್ ಪಂತ್

'ದುಬೈನ ವ್ಯಕ್ತಿಯೊಬ್ಬನಿಂದ ಈ ತಂತ್ರಜ್ಞಾನದ ತರಬೇತಿ ಪಡೆದಿದ್ದ ಆರೋಪಿಗಳು, ಪ್ರತಿ ತಿಂಗಳು ₹15 ಲಕ್ಷದವರೆಗೆ ಹಣ ಸಂಪಾದಿಸುತ್ತಿದ್ದರು. ಒಂದು ವರ್ಷದಿಂದ ನಡೆಯುತ್ತಿರುವ ಈ ಜಾಲದಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಮಾಹಿತಿ ಸಿಕ್ಕಿದ್ದು, ಅವರನ್ನು ಬಂಧಿಸುವ ಕಾರ್ಯಾಚರಣೆ ನಡೆಯುತ್ತಿದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.


ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, 'ಈ ತಂತ್ರಜ್ಞಾನದಿಂದ ಕರೆಗಳ ತೆರಿಗೆ ವಂಚನೆ ಮಾತ್ರವಲ್ಲದೇ, ಮಹತ್ವದ ಮಾಹಿತಿ ಸಂಗ್ರಹಣೆಯೂ ಸಾಧ್ಯ. ರಾಷ್ಟ್ರದ ಭದ್ರತೆಗೂ ಈ ತಂತ್ರಜ್ಞಾನ ಮಾರಕ' ಎಂದರು.

'ಗ್ರಾಮೀಣ ಭಾಗದ ಜನರು ಸಿಮ್ ಖರೀದಿಸುವಾಗ ಅವರ ದಾಖಲೆಗಳು ಹಾಗೂ ಬೆರಳಚ್ಚುಗಳನ್ನು ಆರೋಪಿಗಳು ನಕಲಿ ಮಾಡಿ, ಈ ಕೃತ್ಯಕ್ಕಾಗಿ ಸಿಮ್ ಕಾರ್ಡ್‌ಗಳನ್ನು ಖರೀದಿಸುತ್ತಿದ್ದರು' ಎಂದು ಕಮಲ್ ಪಂತ್ ಹೇಳಿದರು.

'ಇಲ್ಲಿನ ಜಾಲಹಳ್ಳಿ ಹಾಗೂ ತಮಿಳುನಾಡಿನ ಹಳ್ಳಿಗಳಲ್ಲಿ ಸಿಮ್ ಖರೀದಿ ವೇಳೆ ಜನರಿಂದ ಎರಡು ಮೂರು ಬಾರಿ ಬೆರಳಚ್ಚು ಪಡೆದು, ಆ ಮಾಹಿತಿಗಳಿಂದ ಸಿಮ್ ಖರೀದಿಸಿ, ಕೃತ್ಯಕ್ಕೆ ಬಳಸಿಕೊಳ್ಳುತ್ತಿದ್ದರು' ಎಂದರು.

ಸಚಿವ ಕೋಟ ಶ್ರೀನಿವಾಸ ಪೂಜಾರಿ
ಹಿಂದೂ ದೇಗುಲಗಳ ಹಣ ಅನ್ಯ ಉದ್ದೇಶಕ್ಕೆ ಬಳಕೆ ಇಲ್ಲ

ಪ್ರಜಾವಾಣಿ ವಾರ್ತೆ


ಶ್ರೀನಿವಾಸ ಪೂಜಾರಿ

ಮಂಗಳೂರು: ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಇಲಾಖೆಯ ತಸ್ತೀಕ್ ಹಣವನ್ನು ಹಿಂದೂ ಧರ್ಮ ಹೊರತುಪಡಿಸಿ ಅನ್ಯ ಧರ್ಮೀಯ ಪ್ರಾರ್ಥನಾ ಮಂದಿರಗಳಿಗೆ ನೀಡುವುದನ್ನು ತಡೆಹಿಡಿಯಲು ಸಚಿವ ಕೋಟ ಶ್ರೀನಿವಾಸ ಪೂಜಾರಿ ಸೂಚಿಸಿದ್ದಾರೆ.

ಇತರೆ ಯಾವುದೇ ಧರ್ಮದ ಧಾರ್ಮಿಕ ಕೇಂದ್ರಗಳಿಗೆ ಹಣದ ಅವಶ್ಯಕತೆಯಿದ್ದಲ್ಲಿ ಅದು ಆಯಾ ಇಲಾಖೆಯ ಜವಾಬ್ದಾರಿ. ಆಯಾ ಇಲಾಖೆಯ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗುವುದು ಎಂದು ತಿಳಿಸಿದ್ದಾರೆ.

'ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಇಲಾಖೆಯಲ್ಲಿನ ಅನುದಾನ, ಇತರ ಧರ್ಮದ ಪ್ರಾರ್ಥನಾ ಮಂದಿರಗಳಿಗೆ ತಸ್ತೀಕ್ ರೂಪದಲ್ಲಿ ತಲುಪಿದ್ದು, ಈ ಬಗ್ಗೆ ಹಿಂದೂ ಧಾರ್ಮಿಕ ಮುಖಂಡರಿಂದ ಬಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ರಾಜ್ಯದಲ್ಲಿ ನಮ್ಮ ಸರ್ಕಾರ ಬರುವ ಮುಂಚೆ ಇಲಾಖೆಯ ಮೂಲಕ ಮಂಜೂರಾಗುತ್ತಿರುವ ತಸ್ತೀಕ್ ಹಣ ಅನ್ಯ ಧರ್ಮೀಯ ಪ್ರಾರ್ಥನಾ ಮಂದಿರಗಳಿಗೆ ಕೂಡ ಬಿಡುಗಡೆ ಮಾಡುತ್ತಿರುವ ಬಗ್ಗೆ ಮಾಹಿತಿ ದೊರೆತಿತ್ತು' ಎಂದು ಹೇಳಿದ್ದಾರೆ.

'ರಾಜ್ಯದಲ್ಲಿ 27 ಸಾವಿರಕ್ಕೂ ಹೆಚ್ಚು ಹಿಂದೂ ದೇವಸ್ಥಾನಗಳಿಗೆ ತಸ್ತೀಕ್ ನೀಡಲಾಗುತ್ತಿದ್ದು, ಸರ್ಕಾರ ಸುಮಾರು ₹133 ಕೋಟಿ ವಾರ್ಷಿಕ ಅನುದಾನ ನೀಡುತ್ತಿದೆ. ಈ ಪೈಕಿ ಸುಮಾರು 764 ಅನ್ಯ ಧರ್ಮೀಯ ಪ್ರಾರ್ಥನಾ ಮಂದಿರಗಳು ಇಲಾಖೆಯಿಂದ ತಸ್ತೀಕ್ ಪಡೆಯುತ್ತಿದ್ದು, ಸಚಿವರ ಸೂಚನೆ ಮೇರೆಗೆ ಅನ್ಯ ಧರ್ಮೀಯ ಪ್ರಾರ್ಥನಾ ಮಂದಿರಗಳಿಗೆ ಹಣ ಬಿಡುಗಡೆ ಮಾಡುವುದನ್ನು ನಿಲ್ಲಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಹಿಂದೂ ಧಾರ್ಮಿಕ ಮತ್ತು ಧರ್ಮದಾಯ ದತ್ತಿ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

686 ಕ್ವಿಂಟಲ್ ಮೆಕ್ಕೆಜೋಳ ಬಿತ್ತನೆ ಬೀಜ ವಶ

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯ ವಿವಿಧ ಮಾರಾಟ ಮಳಿಗೆಗಳ ಮೇಲೆ ಬುಧವಾರ ದಾಳಿ ನಡೆಸಿದ ಕೃಷಿ ಅಧಿಕಾರಿಗಳು ₹2.1 ಕೋಟಿ ಮೌಲ್ಯದ 686 ಕ್ವಿಂಟಲ್ ಮೆಕ್ಕೆಜೋಳ ಬಿತ್ತನೆ ಬೀಜವನ್ನು ವಶಪಡಿಸಿಕೊಂಡಿದ್ದಾರೆ.

ರಾಣೆಬೆನ್ನೂರು ತಾಲ್ಲೂಕಿನ ಗುಡ್ಡದ ಆನ್ವೇರಿ ಗ್ರಾಮದಲ್ಲಿ ಮಾತಾ ಸೀಡ್ಸ್ ಕಂಪನಿಯವರು ಅನಧಿಕೃತವಾಗಿ ದಾಸ್ತಾನು ಮಾಡಿದ್ದ ಬಿತ್ತನೆ ಬೀಜವನ್ನು ವಶಪಡಿಸಿಕೊಂಡು, ವರ್ತಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಉಪ ಕೃಷಿ ನಿರ್ದೇಶಕಿ ಸ್ಫೂರ್ತಿ, ಸಹಾಯಕ ಕೃಷಿ ನಿರ್ದೇಶಕರಾದ ಪ್ರಾಣೇಶ, ನಾರನಗೌಡ, ಸುನಿಲ್ ನಾಯ್ಕ, ಹಿತೇಂದ್ರ ಗೌಡಪ್ಪಳವರ ತಂಡ ದಾಳಿ ನಡೆಸಿತು.

'ಯಾವುದೇ ಮಾರಾಟಗಾರರು ಪರವಾನಗಿ ಇಲ್ಲದೆ ಬಿತ್ತನೆ ಬೀಜ, ರಸಗೊಬ್ಬರ ಮಾರಾಟ ಮಾಡುವುದು ಹಾಗೂ ಅಕ್ರಮವಾಗಿ ದಾಸ್ತಾನು ಮಾಡಿರುವುದು ಕಂಡುಬಂದಲ್ಲಿ ಅಂತಹವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಜಂಟಿ ಕೃಷಿ ನಿರ್ದೇಶಕ ಬಿ.ಮಂಜುನಾಥ ಎಚ್ಚರಿಕೆ ನೀಡಿದ್ದಾರೆ.

ಕೋವಿಡ್ ನಿರ್ವಹಣೆ ನಿರ್ಲಕ್ಷ್ಯ: ಆರೋಪ ● ಲಾಕ್‌ಡೌನ್ ಪರಿಹಾರ ಹೆಚ್ಚಳಕ್ಕೆ ಎಡ, ಪ್ರಜಾಸತ್ತಾತ್ಮಕ ಪಕ್ಷಗಳ ಆಗ್ರಹ

ಸಿ.ಎಂ ಕಚೇರಿ ಮುಂದೆ ಪ್ರತಿಭಟನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆ ನಿರ್ಲಕ್ಷ್ಯ ಖಂಡಿಸಿ ಮತ್ತು ಲಾಕ್‌ಡೌನ್ ಪರಿಹಾರ ಹೆಚ್ಚಳಕ್ಕೆ ಆಗ್ರಹಿಸಿ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರುಗಳು, ಶಾಸಕರ ಕಚೇರಿಗಳ ಎದುರು ಜೂ.15ರಂದು ಪ್ರತಿಭಟನೆ ನಡೆಸಲು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ನಿರ್ಧರಿಸಿವೆ.

ಸಿಪಿಐ(ಎಂ) ಕಾರ್ಯದರ್ಶಿ ಯು. ಬಸವರಾಜ, ಸಿಪಿಐ ಕಾರ್ಯದರ್ಶಿ ಸಾತಿ ಸುಂದರೇಶ್, ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ(ಎಸ್‌ಯುಸಿಐ) ಕಾರ್ಯದರ್ಶಿ ಕೆ.ಉಮಾ, ಸಿಪಿಐ(ಎಂಎಲ್) ಕಾರ್ಯದರ್ಶಿ ಕ್ಲಿಫ್ಟನ್ ರೋಜಾರಿಯೋ, ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್(ಎಐಎಫ್‌ಬಿ) ಕಾರ್ಯದರ್ಶಿ ಜಿ.ಆರ್. ಶಿವಶಂಕರ್, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ(ಆರ್‌ಪಿಐ) ಅಧ್ಯಕ್ಷ ಮೋಹನ್‌ರಾಜ್, ಸ್ವರಾಜ್ ಇಂಡಿಯಾ ರಾಜ್ಯ ಘಟಕದ ಅಧ್ಯಕ್ಷ ಚಾಮರಸ ಮಾಲೀ ಪಾಟೀಲ ಅವರು ಬುಧವಾರ ಜಂಟಿ ಸುದ್ದಿಗೋಷ್ಠಿ ನಡೆಸಿದರು.


'ಮೇ 28ರಂದು ಆನ್‌ಲೈನ್ ಪ್ರತಿಭಟನಾ ಸಭೆ, ಜೂ.1ರಂದು ರಾಜ್ಯದಾದ್ಯಂತ 10 ಸಾವಿರಕ್ಕೂ ಹೆಚ್ಚು ಜನರು ತಮ್ಮ ಮನೆಗಳ ಎದುರು ಪ್ರತಿಭಟನೆ ನಡೆಸಿದರು. ಆದರೂ, ಜನರ ಹಕ್ಕುಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ಜೂ.14ರೊಳಗೆ ಸರ್ಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಪ್ರತಿಭಟನೆ ನಡೆಸುವುದು ಅನಿವಾರ್ಯ' ಎಂದು ಹೇಳಿದರು.

ಕೋವಿಡ್ ನಿಯಂತ್ರಣವನ್ನು ಪರಿಣಾಮಕಾರಿಯಾಗಿ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ವಿವೇಚನಾ ರಹಿತ ಲಾಕ್‌ಡೌನ್ ಮಾಡುವ ಮೂಲಕ ದುಡಿಯುವ ವರ್ಗವನ್ನು ಸಂಕಷ್ಟಕ್ಕೆ ಸಿಲುಕಿಸಿದೆ ಎಂದು ಆರೋಪಿಸಿದರು.

'ಕೋವಿಡ್ ಸಂದರ್ಭದಲ್ಲಿ ಹಾಸಿಗೆ ಹಗರಣ, ಲಸಿಕೆ, ಆಮ್ಲಜನಕ ಹಗರಣ, ಜಾತಿ ತಾರತಮ್ಯವನ್ನು ಶಾಸಕರೇ ಮಾಡುತ್ತಿದ್ದಾರೆ. ಈ ರೀತಿಯ ಆರೋಪ ಇರುವ ಎಲ್ಲಾ ಶಾಸಕರ ರಾಜೀನಾಮೆ ಪಡೆಯಬೇಕು. ಎಲ್ಲರ ವಿರುದ್ಧ ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

ಉಚಿತ ಲಸಿಕೆ ನೀಡಿಕೆಯನ್ನು ಕೂಡಲೇ ಆರಂಭಿಸಬೇಕು. ಆದಾಯ ತೆರಿಗೆ ವ್ಯಾಪ್ತಿಗೆ ಬಾರದ ಎಲ್ಲಾ ಕುಟುಂಬಗಳಿಗೆ ಆಹಾರ ಧಾನ್ಯ ಮತ್ತು ₹10 ಸಾವಿರ ನೆರವು ನೀಡಬೇಕು. ಹೊಲಗಳಲ್ಲೇ ಕೊಳೆತು ಹೋದ ಹೂವು, ಹಣ್ಣು, ಆಲೂಗಡ್ಡೆ, ಈರುಳ್ಳಿ ಬೆಳೆಗಳಿಗೆ ಎಕರೆಗೆ ಕನಿಷ್ಠ ₹25 ಸಾವಿರ ನೀಡಬೇಕು. ಕಾರ್ಮಿಕರಿಗೆ ಲಾಕ್‌ಡೌನ್ ಅವಧಿಯ ವೇತನ ಮತ್ತು ಉದ್ಯೋಗ ರಕ್ಷಿಸಲು ಅಗತ್ಯ ಆದೇಶ ಹೊರಡಿಸಬೇಕು. ಉದ್ಯೋಗ ಖಾತ್ರಿಯನ್ನು ವರ್ಷಕ್ಕೆ 200 ದಿನಗಳಿಗೆ ಹೆಚ್ಚಿಸಿ ನಗರ ಪ್ರದೇಶಕ್ಕೂ ವಿಸ್ತರಿಸಬೇಕು' ಎಂದು ಒತ್ತಾಯಿಸಿದರು.

'ಅಧಿಕಾರ ಲಾಲಸೆ ಪ್ರದರ್ಶಿಸಿದರೆ ಸುಮ್ಮನಿರಬೇಕೆ'


ಕುಮಾರಸ್ವಾಮಿ

ಬೆಂಗಳೂರು: 'ಕೋವಿಡ್ ಸಂಕಷ್ಟದ ಕಾಲದಲ್ಲಿ ಸರ್ಕಾರವನ್ನು ಟೀಕಿಸಿ ರಾಜಕೀಯ ಮಾಡುವುದು ಬೇಡ ಎಂದು ಜೆಡಿಎಸ್ ನಿರ್ಧರಿಸಿತ್ತು. ಆದರೆ, ಬಿಜೆಪಿ ಅಧಿಕಾರದ ಲಾಲಸೆ ಪ್ರದರ್ಶಿಸಿದರೆ ಸುಮ್ಮನಿರಬೇಕೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕೇಳಿದ್ದಾರೆ.

ಬಿಜೆಪಿಯನ್ನು ಗುರಿಯಾಗಿಸಿ ಬುಧವಾರ ಸರಣಿ ಟ್ವೀಟ್ ಮಾಡಿರುವ ಅವರು, 'ರಾಜ್ಯದಲ್ಲಿ ಚಿತೆಗಳಿಗೆ ಹಚ್ಚಿದ ಜ್ವಾಲೆ ಇನ್ನೂ ಆರಿಲ್ಲ. ಅದು ಆರುತ್ತದೆಯೋ ಎಂಬುದು ಯಾರಿಗೂ ತಿಳಿಯುತ್ತಿಲ್ಲ. ಈ ಹೊತ್ತಿನಲ್ಲಿ ಇದೆಂಥ ರಾಜಕೀಯ? ಈಗ ರಾಜ್ಯದ ಎದುರಿಗೆ ಇರುವುದು ನಾಯಕತ್ವದ ಪ್ರಶ್ನೆಯೊ ಅಥವಾ ಜನರ ಹಿತದ ಪ್ರಶ್ನೆಯೊ' ಎಂದು ವಾಗ್ದಾಳಿ ನಡೆಸಿದ್ದಾರೆ.

'ಬಿ.ಎಸ್. ಯಡಿಯೂರಪ್ಪ ಅವರು ತಾವು ಖರೀದಿಸಿ ತಂದ ಕುದುರೆಗಳ ಮೇಲೆ ತಾವೇ ಸವಾರಿ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಮಾಧ್ಯಮಗಳು ಬಣ್ಣಿಸುವ 'ಹುಲಿ', 'ಬಾಹುಬಲಿ' ಮುಂತಾದವರನ್ನು ಮುಖ್ಯಮಂತ್ರಿ ಕುರ್ಚಿಯ ಮೇಲೆ ಕೂರಿಸಿದ್ದೇ ಸದ್ಯದ ರಾಜಕೀಯ ದುಸ್ಥಿತಿಗೆ ಕಾರಣ. ಇದು ಯಡಿಯೂರಪ್ಪನವರ ಸ್ವಯಂಕೃತ ಅಪರಾಧ' ಎಂದು ಟೀಕಿಸಿದ್ದಾರೆ.

ರಾಜ್ಯ ಸಂಕಷ್ಟದಲ್ಲಿರುವಾಗ ಬಿಜೆಪಿಯಲ್ಲಿ ಅಧಿಕಾರದ ಲಾಲಸೆಯ ಪ್ರದರ್ಶನವಾಗುತ್ತಿದೆ. ಅದನ್ನು ಬಳಸಿಕೊಂಡು ಅಧಿಕಾರಕ್ಕೆ ಬರಲು ಕಾಂಗ್ರೆಸ್ ಪಕ್ಷ ಕೋವಿಡ್ ನಿಯಮಗಳನ್ನೆಲ್ಲ ಮೀರಿ ಬೀದಿಗೆ ಬಿದ್ದಿದೆ. ಸಂಕಷ್ಟದ ಪರಿಸ್ಥಿತಿಯನ್ನೇ ಅಧಿಕಾರಕ್ಕೇರಲು ಏಣಿ ಮಾಡಿಕೊಳ್ಳುತ್ತಿರುವ ಎರಡೂ ಪಕ್ಷಗಳನ್ನು ಜನರು ಗಮನಿಸಬೇಕು ಎಂದು ಹೇಳಿದ್ದಾರೆ.

ಕುಮಾರಸ್ವಾಮಿ–ಜಮೀರ್ ಬೆಂಬಲಿಗರ ಜಟಾಪಟಿ

ಬೆಂಗಳೂರು: ಸದಾಶಿವ ನಗರದಲ್ಲಿರುವ ಅತಿಥಿಗೃಹದ ವಿಚಾರವಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹಾಗೂ ಕಾಂಗ್ರೆಸ್ ಶಾಸಕ ಬಿ.ಜಡ್.ಜಮೀರ್ ಅಹಮದ್ ಖಾನ್ ಬೆಂಬಲಿಗರ ಮಧ್ಯೆ ಬುಧವಾರ ಗಲಾಟೆ ನಡೆದಿದೆ.

ಜಮೀರ್ ಅವರಿಗೆ ಸೇರಿದ್ದ ಅತಿಥಿಗೃಹವನ್ನು ಹಲವು ವರ್ಷಗಳ ಹಿಂದೆ ಕುಮಾರಸ್ವಾಮಿ ಅವರಿಗೆ ಬಿಟ್ಟುಕೊಡಲಾಗಿತ್ತು. ಅತಿಥಿಗೃಹದ ಮಾಲೀಕತ್ವದ ವಿಚಾರವಾಗಿ ಇಬ್ಬರು ನಾಯಕರ ಬೆಂಬಲಿಗರು ಗಲಾಟೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಗಲಾಟೆ ಸಂಬಂಧ ದೂರು ನೀಡಲು ಜಮೀರ್ ಅವರ ಆಪ್ತ ಸಹಾಯಕ ಫಾರೂಕ್, ಸದಾಶಿವನಗರ ಠಾಣೆಗೆ ಹೋಗಿದ್ದರು. ಆದರೆ, ವಿಚಾರವನ್ನು ಇತ್ಯರ್ಥಪಡಿಸಿಕೊಳ್ಳುವ ಸಲುವಾಗಿ ಜಮೀರ್, ಅವರನ್ನು ವಾಪಸ್ ಕರೆಸಿಕೊಂಡಿದ್ದಾರೆ ಎನ್ನಲಾಗಿದೆ.

ಈ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಎಚ್.ಡಿ.ಕುಮಾರಸ್ವಾಮಿ, 'ನಾಲ್ಕೈದು ವರ್ಷದಿಂದ ಅತಿಥಿಗೃಹಕ್ಕೆ ಹೋಗಿಲ್ಲ. ಸಿನಿಮಾ ಕ್ಷೇತ್ರದ ಕೆಲವರು ಅಲ್ಲಿದ್ದರು. ಅವರ ಸಾಮಗ್ರಿಗಳು ಅಲ್ಲಿದ್ದು, ಅವರು ಊರಿಗೆ ಹೋಗಿದ್ದಾಗ ಆರೋಪ ಮಾಡುತ್ತಿರುವ ಕಡೆಯವರು ಬೀಗ ಹಾಕಿದ್ದಾರೆ. ಸಾಮಗ್ರಿ ತೆರವು ಮಾಡಲು ಭೋಜೇಗೌಡರಿಗೆ ಹೇಳಿದ್ದೆ. ಸಾಮಗ್ರಿ ತರಲು ಸಿನಿಮಾದವರು ಹೋಗಿರಬೇಕು. ಗಲಾಟೆ ಮಾಡುವ ಉದ್ದೇಶ ನನಗಿಲ್ಲ. ಅವರ ಮಟ್ಟಕ್ಕೆ ನಾನು ಇಳಿಯುವುದಿಲ್ಲ' ಎಂದರು.

'ಬುಧವಾರದ ಕಾರ್ಯಕ್ರಮದಲ್ಲಿ ಕುಮಾರಸ್ವಾಮಿ ವಿರುದ್ಧ ಮಾತನಾಡಿದಕ್ಕಾಗಿ ಅವರ ಕಡೆಯವರು ಗೆಸ್ಟ್‌ಹೌಸ್‌ಗೆ ಹಾಕಿದ್ದ ಬೀಗ ಒಡೆದಿದ್ದಾರೆ. ಭೋಜೇಗೌಡರು ಘಟನೆ ಸಂಬಂಧ ಕ್ಷಮೆ ಕೇಳುವುದಾಗಿ ಹೇಳಿದ್ದಾರೆ. ಅಲ್ಲಿರುವ ಸಾಮಗ್ರಿ ತೆರವು ಮಾಡಿ, ನನ್ನ ಜಾಗ ನನಗೆ ನೀಡಬೇಕು' ಎಂದು ಶಾಸಕ ಜಮೀರ್ ಅಹಮದ್ ಖಾನ್ ಪ್ರತಿಕ್ರಿಯಿಸಿದರು.

ಗಿಡ್ಡೇನಹಳ್ಳಿ ಬಯಲು ಚಿತಾಗಾರ ಸ್ಥಗಿತ

ಪ್ರಜಾವಾಣಿ ವಾರ್ತೆ


ಚನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಿಡ್ಡೇನಹಳ್ಳಿಯಲ್ಲಿ ವ್ಯವಸ್ಥೆ ಮಾಡಲಾಗಿದ್ದ ಬಯಲು ಸ್ಮಶಾನವನ್ನು ಈಗ ತೆರವು ಮಾಡಲಾಗುತ್ತಿದೆ. ಬಿಬಿಎಂಪಿ ಸಿಬ್ಬಂದಿ ಜೆಸಿಬಿ ಯಂತ್ರದ ಮೂಲಕ ಶವದಹನ ಉಪಕರಣಗಳನ್ನು ತೆಗೆದುಕೊಂಡು ಹೋಗುತ್ತಿದ್ದ ದೃಶ್ಯ ಬುಧವಾರ ಕಂಡು ಬಂತು ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

ಬೆಂಗಳೂರು: ಕೋವಿಡ್ ಸಾವು ಸತತವಾಗಿ ಏರುತ್ತಿದ್ದ ಸಂದರ್ಭದಲ್ಲಿ ಶವಗಳ ದಹನಕ್ಕೆ ನಗರದ ಹೊರವಲಯದಲ್ಲಿ ತಾತ್ಕಾಲಿಕವಾಗಿ ವ್ಯವಸ್ಥೆ ಮಾಡಿದ್ದ ಗಿಡ್ಡೇನಹಳ್ಳಿ ಬಯಲು ಚಿತಾಗಾರವನ್ನು ಮುಚ್ಚಲಾಗಿದೆ. ಕೋವಿಡ್ ಸಾವುಗಳ ಸಂಖ್ಯೆಯಲ್ಲಿ ಇಳಿಮುಖವಾಗಿರುವುದು ಇದಕ್ಕೆ ಕಾರಣ.

ಎರಡು ದಿನಗಳ ಹಿಂದೆಯೇ ಈ ಸ್ಮಶಾನವನ್ನು ಸ್ಥಗಿತಗೊಳಿಸಲಾಗಿದೆ. ಆದರೆ, ತಾವರೆಕೆರೆ ಬಳಿಯ ಕುರುಬರಹಳ್ಳಿಯಲ್ಲಿನ ಬಯಲು ಚಿತಾಗಾರವನ್ನು ಬಳಸಲಾಗುತ್ತಿದ್ದು, ಇಲ್ಲಿಯೂ ದಿನಕ್ಕೆ ಬೆರಳೆಣಿಕೆಯಷ್ಟು ಶವಗಳು ಬರುತ್ತಿವೆ.

'ಮೂರು ದಿನಗಳಿಂದ ಐದು, ಆರು ಶವಗಳು ಬರುತ್ತಿದ್ದವು. ಮಂಗಳವಾರ ಮೂರು ಶವಗಳು ಬಂದಿದ್ದವು. ಬುಧವಾರ ಮಧ್ಯಾಹ್ನದವರೆಗೂ ಒಂದೂ ಬಂದಿರಲಿಲ್ಲ. ಮೊದಲು 50 ಶವಗಳ ದಹನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಈಗ 28 ಶವಗಳ ದಹನಕ್ಕೆ ಆಗುವಷ್ಟು ಸ್ಥಳವನ್ನು ಮಾತ್ರ ಬಳಸಿಕೊಳ್ಳಲಾಗುತ್ತಿದೆ' ಎಂದು ಕುರುಬರಹಳ್ಳಿ ಸ್ಮಶಾನದ ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕುರುಬರಹಳ್ಳಿಯಲ್ಲಿ ದಿನಕ್ಕೆ ಎರಡು–ಮೂರು ಶವಗಳು ಮಾತ್ರ ಬರುತ್ತಿದ್ದರೂ ಸ್ಥಳದಲ್ಲಿ ಸಿಬ್ಬಂದಿ ಸಂಖ್ಯೆ ಕಡಿಮೆ ಯೇನೂ ಇರಲಿಲ್ಲ. ಕಂದಾಯ ಇಲಾಖೆಯ ಇಬ್ಬರು, ಬಿಬಿಎಂಪಿಯ ಮೂವರು ಸಿಬ್ಬಂದಿಯಲ್ಲದೆ, ಶವ ಸುಡುವ ಇಬ್ಬರು ಸ್ಥಳದಲ್ಲಿದ್ದರು. ಪೊಲೀಸರೂ ಇದ್ದರು.

'ಗಿಡ್ಡೇನಹಳ್ಳಿಯಲ್ಲಿನ ಬಯಲು ಚಿತಾಗಾರವನ್ನು ಸ್ಥಗಿತಗೊಳಿಸಲಾಗಿದ್ದು, ಸಿಬ್ಬಂದಿಯನ್ನು ವಾಪಸ್ ಕರೆಸಿಕೊಳ್ಳಲಾಗಿದೆ' ಎಂದು ಬೆಂಗಳೂರು ಉತ್ತರ ತಹಶೀಲ್ದಾರ್ ರಂಗನಾಥ್ ತಿಳಿಸಿದರು.

ಬ್ಯೂಟಿ ಪಾರ್ಲರ್ ದಾಳಿ ಪ್ರಕರಣ: ತಪ್ಪೊಪ್ಪಿಕೊಂಡ ರವಿ ಪೂಜಾರಿ

ಕೊಚ್ಚಿ: ಇಲ್ಲಿನ ಬ್ಯೂಟಿ ಪಾರ್ಲರ್ ಮೇಲೆ 2018ರಲ್ಲಿ ನಡೆದ ಗುಂಡಿನ ದಾಳಿ ಪ್ರಕರಣದಲ್ಲಿ ತನ್ನ ಪಾತ್ರ ಇರುವುದಾಗಿ ಭೂಗತ ಪಾತಕಿ ರವಿ ಪೂಜಾರಿ ತಪ್ಪೊಪ್ಪಿಕೊಂಡಿರುವುದಾಗಿ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಎರ್ನಾಕುಲಂನ ಹೆಚ್ಚುವರಿ ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ (ಆರ್ಥಿಕ ಅಪರಾಧಗಳು) ಮಂಗಳವಾರ ಎಟಿಎಸ್ ವರದಿ ಸಲ್ಲಿಸಿದ್ದು, ರವಿ ಪೂಜಾರಿಯನ್ನು ಪೊಲೀಸ್ ಕಸ್ಟಡಿಯಲ್ಲಿದ್ದಾಗ ವಿವರವಾಗಿ ವಿಚಾರಣೆ ನಡೆಸಲಾಗಿದೆ ಎಂದು ತಿಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಕಳೆದ ಬುಧವಾರ ರವಿ ಪೂಜಾರಿ ಅವರನ್ನು ಬೆಂಗಳೂರಿನಿಂದ ಕೊಚ್ಚಿಗೆ ಕರೆತರಲಾಗಿತ್ತು.

58 ಬಾಕ್ಸ್‌ಗಳಲ್ಲಿ 509 ಲೀಟರ್‌ಗಳಷ್ಟು ಮದ್ಯ ಜಪ್ತಿ

ತರಕಾರಿ ವಾಹನದಲ್ಲಿ ಅಕ್ರಮ ಮದ್ಯ ಸಾಗಣೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ


ರಾಮಕೃಷ್ಣನ್


ರಾಜಕುಮಾರ್

ಬೆಂಗಳೂರು: ತರಕಾರಿ ಚೀಲಗಳನ್ನು ತುಂಬಿದ ವಾಹನದಲ್ಲಿ ಭಾರಿ ಪ್ರಮಾಣದ ಮದ್ಯದ ಬಾಕ್ಸ್‌ಗಳನ್ನು ತಮಿಳುನಾಡಿಗೆ ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಜಾಲವನ್ನು ಕೆ.ಆರ್.ಮಾರುಕಟ್ಟೆ ಪೊಲೀಸರು ಪತ್ತೆ ಹಚ್ಚಿ, ಇಬ್ಬರನ್ನು ಬಂಧಿಸಿದ್ದಾರೆ.

ವಾಹನದ ಚಾಲಕ ತಮಿಳುನಾಡಿನ ರಾಮಕೃಷ್ಣನ್ (24) ಹಾಗೂ ರಾಜಕುಮಾರ್ (27) ಬಂಧಿತರು.

ವಾಹನ ತಪಾಸಣೆಗೆಂದು ಕೆ.ಆರ್. ಮಾರುಕಟ್ಟೆ ಬಳಿ ಹಾಕಲಾಗಿದ್ದ ಚೆಕ್‌ಪೋಸ್ಟ್ ಬಳಿ ಪೊಲೀಸರು ತಪಾಸಣೆ ನಡೆಸಿದ ವೇಳೆ ಕೃತ್ಯ ಬೆಳಕಿಗೆ ಬಂದಿದೆ.

'ಒಟ್ಟು 58 ಬಾಕ್ಸ್‌ಗಳಲ್ಲಿ 509 ಲೀಟರ್‌ಗಳಷ್ಟು ಮದ್ಯದ ಬಾಕ್ಸ್‌ಗಳನ್ನು ತರಕಾರಿ ಚೀಲಗಳಲ್ಲಿ ತುಂಬಿಸಿ, ಕಳ್ಳಸಾಗಣೆ ಮಾಡಲು ಮುಂದಾಗಿದ್ದರು. ತಪಾಸಣೆ ವೇಳೆ ಆರೋಪಿಗಳನ್ನು ಬಂಧಿಸಿ, ಮದ್ಯದ ಬಾಕ್ಸ್ ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ತಮಿಳುನಾಡಿನಲ್ಲಿ ಸದ್ಯ ಮದ್ಯ ಮಾರಾಟ ನಿಷೇಧಿಸಿರುವುದರಿಂದ ಮದ್ಯವನ್ನು ಬೆಂಗಳೂರಿನಿಂದ ಅಕ್ರಮವಾಗಿ ಸಾಗಿಸಿ ಮಾರಾಟ ಮಾಡುತ್ತಿದ್ದರು. ಬೇಡಿಕೆ ಇರುವುದರಿಂದ ಕಡಿಮೆ ಬೆಲೆಯ ಮದ್ಯವನ್ನು ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದರು. ಅಗತ್ಯ ಸೇವೆಯಡಿ ತರಕಾರಿ ಸರಬರಾಜಿಗೆ ಅವಕಾಶ ಕಲ್ಪಿಸಿರುವುದರಿಂದ ತರಕಾರಿ ಚೀಲಗಳಲ್ಲಿ ಮದ್ಯ ಸಾಗಿಸುವ ಉಪಾಯ ಮಾಡಿದ್ದರು' ಎಂದು ಹೇಳಿದರು.

ಜಾನುವಾರು ಸಾಗಣೆ: ಕಠಿಣ ಕ್ರಮ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನುವಾರು ಸಾಗಣೆದಾರರ ವಿರುದ್ಧ ಕರ್ನಾಟಕ ಜಾನುವಾರು ಸಂರಕ್ಷಣೆ ಕಾಯ್ದೆ –2020ರ ಅಡಿಯಲ್ಲಿ ಕಠಿಣ ಕ್ರಮಗಳನ್ನು ಕೈಗೊಂಡಿಲ್ಲ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ಕಾಯ್ದೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಅಂತಿಮ ವಿಚಾರಣೆಯ ದಿನಾಂಕವನ್ನು ಸೋಮವಾರಕ್ಕೆ ನಿಗದಿ ಮಾಡಿತು.

'ಹೊಸ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ 29 ಪ್ರಕರಣಗಳನ್ನು ದಾಖಲಿಸಲಾಗಿದೆ. ಜಾನುವಾರು ವಧೆ ಸಂಬಂಧ ಸೆಕ್ಷನ್ 6ರ ಅಡಿಯಲ್ಲಿ 18 ಪ್ರಕರಣಗಳನ್ನು ದಾಖಲಿಸಲಾಗಿದೆ. ಸಾಗಣೆ ಸಂಬಂಧ ಸೆಕ್ಷನ್ 5ರ ಅಡಿಯಲ್ಲಿ 11 ಪ್ರಕರಣ ದಾಖಲಿಸಲಾಗಿದೆ. ನಿರ್ದೇಶನಗಳ ಕುರಿತು ಸಂವಹನ ಕೊರತೆಯಿಂದ ಸೆಕ್ಷನ್ 5ರ ಅಡಿಯಲ್ಲಿ ಕೆಲ ಪ್ರಕರಣ ದಾಖಲಾಗಿದ್ದು, ಈ ಸೆಕ್ಷನ್ ಅಡಿಯಲ್ಲಿ ಎಫ್‌ಐಆರ್ ದಾಖಲಿಸದಂತೆ ಸುತ್ತೋಲೆ ಹೊರಡಿಸಲಾಗುವುದು' ಎಂದು ಅಡ್ವೊಕೇಟ್ ಜನರಲ್ ವಿವರಿಸಿದರು.

ಗುಜರಾತ್‌ನಲ್ಲಿ ಜಾರಿಗೆ ತಂದ ಪ್ರಾಣಿ ಸಂರಕ್ಷಣಾ ಕಾಯ್ದೆ ಪ್ರಶ್ನಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನ 7 ಸದಸ್ಯರ ಸಂವಿಧಾನ ಪೀಠ ತಿರಸ್ಕರಿಸಿತ್ತು. ಮಹಾರಾಷ್ಟ್ರದ ಪ್ರಾಣಿ ಸಂರಕ್ಷಣಾ ಕಾಯ್ದೆಯ ತಿದ್ದುಪಡಿಗಳನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಅಲ್ಲಿನ ಹೈಕೋರ್ಟ್ 2016ರಲ್ಲಿ ತಿರಸ್ಕರಿಸಿತ್ತು ಎಂಬುದನ್ನು ಸರ್ಕಾರ ತನ್ನ ಆಕ್ಷೇಪಣೆಯಲ್ಲಿ ಉಲ್ಲೇಖಿಸಿದೆ.

ನಮ್ಮ ಮೆಟ್ರೊ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಹೇಳಿಕೆ

ನಾಯಂಡಹಳ್ಳಿ– ಕೆಂಗೇರಿ ಮಾರ್ಗ: ಜುಲೈನಿಂದ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ನಾಯಂಡಹಳ್ಳಿಯಿಂದ ಕೆಂಗೇರಿವರೆಗಿನ ಮೆಟ್ರೊ ರೈಲು ಮಾರ್ಗವನ್ನು ಜುಲೈ ತಿಂಗಳಿನಲ್ಲಿ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ತಮ್ಮ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಬುಧವಾರ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಮತ್ತು ಉಪನಗರ ರೈಲು ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, 'ಯಲಚೇನಹಳ್ಳಿ– ರೇಷ್ಮೆ ಸಂಸ್ಥೆ ಮಾರ್ಗವನ್ನು ಜನವರಿಯಲ್ಲಿ ಸಂಚಾರಕ್ಕೆ ಮುಕ್ತಗೊಳಿಸಲಾಗಿತ್ತು. ನಾಯಂಡಹಳ್ಳಿ– ಕೆಂಗೇರಿ ಮಾರ್ಗದ ಕಾಮಗಾರಿ ಅಂತಿಮ ಹಂತದಲ್ಲಿದ್ದು, ತ್ವರಿತವಾಗಿ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು' ಎಂದರು.

'ನಮ್ಮ ಮೆಟ್ರೊ' 2, 2ಎ ಮತ್ತು 2ಬಿ ಹಂತದ ಕಾಮಗಾರಿಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಬಿಎಂಆರ್‌ಸಿಎಲ್ ಅಧಿಕಾರಿಗಳು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ತ್ವರಿತವಾಗಿ ಕಾಮಗಾರಿ ಆರಂಭಕ್ಕೆ ಸಿದ್ಧತೆ ನಡೆಸಬೇಕು. ಮೆಟ್ರೊ ರೈಲು ಮಾರ್ಗಗಳಲ್ಲಿ ಲಭ್ಯವಿರುವ ವಾಣಿಜ್ಯ ಪ್ರದೇಶಗಳು ಮತ್ತು ನಿಲ್ದಾಣಗಳ ಸ್ಥಳಗಳನ್ನು ಲಾಭದಾಯಕವಾಗಿ ಬಳಸಿಕೊಳ್ಳಬೇಕು' ಎಂದು ಸೂಚಿಸಿದರು.

ಕಾಲಮಿತಿ ಪಾಲಿಸಲು ತಾಕೀತು: ಸಂಚಾರ ದಟ್ಟಣೆ ತಗ್ಗಿಸುವ ಉದ್ದೇಶದಿಂದ ಉಪನಗರ ರೈಲು ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಬೇಕು. ಬೈಯಪ್ಪನಹಳ್ಳಿ– ಬಾಣಾವರ ನಡುವಿನ 25.01 ಕಿ.ಮೀ. ಉದ್ದದ ಉಪನಗರ ರೈಲು ಮಾರ್ಗದ ಕಾಮಗಾರಿಯ ಟೆಂಡರ್ ಅಕ್ಟೋಬರ್ ವೇಳೆ ಪೂರ್ಣಗೊಳಿಸಬೇಕು. ಗಡುವಿನೊಳಗೆ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿ ಪ್ರಾರಂಭಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ರೈಲ್ವೆ ಮಾರ್ಗಗಳ ದ್ವಿಪಥ ನಿರ್ಮಾಣ ಯೋಜನೆಯಡಿ ಬೈಯಪ್ಪನಹಳ್ಳಿ– ಹೊಸೂರು (48 ಕಿ.ಮೀ.), ಯಶವಂತಪುರ– ಚನ್ನಸಂದ್ರ (21.70 ಕಿ.ಮೀ.) ಕಾಮಗಾರಿಗಳು ಪ್ರಗತಿಯಲ್ಲಿವೆ. ₹ 323 ಕೋಟಿ ಮೊತ್ತದ ಕಾಮಗಾರಿಗಳಿಗೆ ಗುತ್ತಿಗೆ ನೀಡಲಾಗಿದೆ. 45 ಲಕ್ಷ ಘನ ಮೀಟರ್ ಪ್ರದೇಶದಲ್ಲಿ ಸಮತಟ್ಟು ಕೆಲಸ ನಡೆದಿದೆ. 12 ಸೇತುವೆ ನಿರ್ಮಾಣ ಪೂರ್ಣಗೊಂಡಿದ್ದು, 20 ಸೇತುವೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸ್ಮಾರ್ಟ್ ಸಿಟಿ ಕಾಮಗಾರಿ ವಿಳಂಬಕ್ಕೆ ಅಸಮಾಧಾನ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ಮಾರ್ಟ್ ಯೋಜನೆಯ ಕಾಮಗಾರಿಗಳು ವಿಳಂಬವಾಗಿ ನಡೆಯುತ್ತಿರುವುದಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಅವರು, 'ನಗರದಲ್ಲಿ ಸ್ಮಾರ್ಟ್ ಸಿಟಿ ಅಡಿಯಲ್ಲಿ 27 ರಸ್ತೆ ಕಾಮಗಾರಿಗಳು ನಡೆಯುತ್ತಿವೆ. ಮೇ 31ರೊಳಗೆ ಎಲ್ಲವನ್ನೂ ಪೂರ್ಣಗೊಳಿಸುವಂತೆ ಸೂಚಿಸಿದ್ದೆ. ಎಲ್ಲ ಕಡೆಯೂ ಕೆಲಸ ಕುಂಟುತ್ತಾ ಸಾಗಿದೆ. ಮಳೆಗಾಲ ಆರಂಭವಾಗಿದೆ. ಇನ್ನು ಯಾವಾಗ ಕೆಲಸ ಮಾಡುತ್ತೀರಿ' ಎಂದು ಪ್ರಶ್ನಿಸಿದರು.

'ಮಿನ್ಕ್ಸ್ ವೃತ್ತ, ಬಾಲಬ್ರೂಯಿ ಅತಿಥಿಗೃಹದಿಂದ ಮಾಣಿಕ್ಯವೇಲು ಮ್ಯಾನ್ಷನ್ ವೃತ್ತ, ವಸಂತನಗರದಿಂದ ಬಸವೇಶ್ವರ ರಸ್ತೆ ಸೇರಿದಂತೆ ಹಲವು ಕಡೆಗಳಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿಗಳ ವಿಳಂಬದಿಂದ ಜನರು ನಡೆದಾಡುವುದೂ ಕಷ್ಟವಾಗಿದೆ. ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಷ್ಟು ದಿನ ಸಮಯ ಬೇಕು' ಎಂದು ಸ್ಮಾರ್ಟ್ ಸಿಟಿ ಮುಖ್ಯ ಎಂಜಿನಿಯರ್ ಅವರನ್ನು ಕೇಳಿದರು.

ಜೂನ್ 30ರೊಳಗೆ ಎಲ್ಲ ಕಾಮಗಾರಿ ಪೂರ್ಣಗೊಳಿಸುವುದಾಗಿ ಮುಖ್ಯ ಎಂಜಿನಿಯರ್ ಉತ್ತರಿಸಿದರು. ತ್ವರಿತವಾಗಿ ಕಾಮಗಾರಿ ಮುಗಿಸಲು ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಅವರಿಗೆ ಮುಖ್ಯಮಂತ್ರಿ ಸೂಚಿಸಿದರು.


ಚಿಕ್ಕಪೇಟೆ ವಿಧಾನಸಭೆ ವ್ಯಾಪ್ತಿಯಲ್ಲಿ ಗರುಡ ಫೌಂಡೇಷನ್ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಸಕ ಉದಯ್ ಗರುಡಾಚಾರ್ ಅವರು ತೃತೀಯ ಲಿಂಗಿಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು

'ಸ್ನೇಹಿತರ ಜೊತೆ ಮಲಗುವಂತೆ ಪತಿ ಕಿರುಕುಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸಕ್ಕೆ ತೆರಳಿದ್ದಾಗ ತನ್ನ ಸ್ನೇಹಿತರೊಂದಿಗೆ ಮಲಗುವಂತೆ ಪತಿ ಕಿರುಕುಳ ನೀಡಿದ್ದರು ಎಂದು ಆರೋಪಿಸಿ ಪತ್ನಿ ಪೊಲೀಸರಿಗೆ ದೂರು ನೀಡಿದ್ದಾರೆ.

ಮಹಿಳೆ ನೀಡಿದ ದೂರಿನ ಮೇರೆಗೆ ಆಕೆಯ ಪತಿ ಬಿಟಿಎಂ ಬಡಾವಣೆಯ ನಿವಾಸಿ ವಾಸೀಮ್ (38) ವಿರುದ್ಧ ಪ್ರಕರಣ ದಾಖಲಾಗಿದೆ. ಬಸವನಗುಡಿ ಮಹಿಳಾ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವು ಪೂರ್ವ ವಿಭಾಗದ ಮಹಿಳಾ ಠಾಣೆಗೆ ವರ್ಗಾವಣೆಯಾಗಿದೆ.

'ಎರಡು ವರ್ಷಗಳ ಹಿಂದೆ ವಾಸೀಮ್ ಜತೆಗೆ ವಿವಾಹವಾಯಿತು. ಗೋವಾಗೆ ಪ್ರವಾಸ ತೆರಳಿದ್ದಾಗ ಮದ್ಯ ಕುಡಿಯಲು ಪತಿ ಬಲವಂತ ಮಾಡಿದ್ದರು. ಬಳಿಕ ಊಟಿಗೆ ಹೋಗಿದ್ದಾಗ ಪತಿಯ ಸ್ನೇಹಿತರೂ ಪ್ರವಾಸಕ್ಕೆ ಬಂದಿದ್ದರು. ಅವರೊಂದಿಗೆ ನನ್ನನ್ನು ಮಲಗುವಂತೆ ಪತಿ ಕಿರುಕುಳ ನೀಡಿದ್ದರು. ಇದಕ್ಕೆ ನಾನು ಒಪ್ಪಲಿಲ್ಲ' ಎಂದು ಮಹಿಳೆ ದೂರಿನಲ್ಲಿ ತಿಳಿಸಿರುವುದಾಗಿ ಪೊಲೀಸರು ಹೇಳಿದರು.

'ಗರ್ಭಾವಸ್ಥೆಯಲ್ಲಿದ್ದಾಗ ಪತಿ ನನ್ನ ಮೇಲೆ ಹಲ್ಲೆ ನಡೆಸಿದ್ದರು. ಕುಟುಂಬದವರೂ ವರದಕ್ಷಿಣೆ ಕಿರುಕುಳ ನೀಡಿದ್ದರು' ಎಂದೂ ಮಹಿಳೆ ಆರೋಪಿಸಿದ್ದಾರೆ.

₹8 ಕೋಟಿ ಮೌಲ್ಯದ 'ತಿಮಿಂಗಿಲ ವಾಂತಿ' ಮಾರಾಟ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಟ್ಯಂತರ ರೂಪಾಯಿ ಬೆಲೆಬಾಳುವ 'ತಿಮಿಂಗಿಲದ ವಾಂತಿ'ಯನ್ನು (ಅಂಬೆರ್ಗ್ರಿಸ್) ಮಾರಾಟ ಮಾಡಲು ಯತ್ನಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಕೆ.ಜಿ.ಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಸೈಯದ್ ತಜ್ಮುಲ್ ಪಾಷಾ (54), ಸಲೀಂ ಪಾಷಾ (48), ರಫೀ ಉಲ್ಲಾ ಶರೀಫ್ (45), ನಾಸಿರ್ ಪಾಷಾ (34) ಬಂಧಿತರು.

'ಆರೋಪಿಗಳು ಕೆ.ಜಿ.ಹಳ್ಳಿ ಠಾಣಾ ವ್ಯಾಪ್ತಿಯ ಲಕ್ಷ್ಮೀಪತಿ ಗಾರ್ಡನ್‌ನ ತೆಂಗಿನ ತೋಟದ ಬಳಿ ಈ ನಿಷೇಧಿತ ವಸ್ತುವನ್ನು ಇಟ್ಟುಕೊಂಡು ಮಾರಾಟ ಮಾಡಲು ಮುಂದಾಗಿದ್ದರು. ಈ ಮಾಹಿತಿ ಮೇರೆಗೆ ದಾಳಿ ನಡೆಸಿ ನಾಲ್ವರನ್ನು ಬಂಧಿಸಲಾಯಿತು. ಆರೋಪಿಗಳ ಬಳಿ ಇದ್ದ ₹8 ಕೋಟಿ ಬೆಲೆಬಾಳುವ 6.7 ಕೆ.ಜಿ ತೂಕದ ತಿಮಿಂಗಿಲ ವಾಂತಿಯನ್ನು ಜಪ್ತಿ ಮಾಡಲಾಯಿತು' ಎಂದು ಪೊಲೀಸರು ತಿಳಿಸಿದರು.


ಪೊಲೀಸರು ಜಪ್ತಿ ಮಾಡಿರುವ ತಿಮಿಂಗಿಲ ವಾಂತಿ

'ತಿಮಿಂಗಿಲ ವಾಂತಿಯು ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ನಿಷೇಧಿತ ವಸ್ತು. ಇದನ್ನು ಸುಗಂಧ ದ್ರವ್ಯ ಹಾಗೂ ಔಷಧ ತಯಾರಿಯಲ್ಲೂ ಹೆಚ್ಚಾಗಿ ಬಳಸುತ್ತಾರೆ. ಈ ವಸ್ತುವಿಗೆ ಅರಬ್, ಚೀನಾ ಹಾಗೂ ಪಾಶ್ಚಿಮಾತ್ಯ ದೇಶಗಳಲ್ಲಿ ಹೆಚ್ಚು ಬೇಡಿಕೆ ಇದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹1.5 ಕೋಟಿಯಷ್ಟು ಬೆಲೆಯಿದೆ' ಎಂದು ವಿವರಿಸಿದರು.

'ಆರೋಪಿಗಳಿಗೆ ಈ ವಸ್ತು ಎಲ್ಲಿಂದ ಲಭ್ಯವಾಯಿತು ಹಾಗೂ ಯಾರಿಗೆ ಮಾರಲು ಯೋಜನೆ ರೂಪಿಸಿದ್ದರು ಎಂಬ ಮಾಹಿತಿ ಕಲೆಹಾಕಲಾಗುತ್ತಿದೆ. ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ ಹಾಗೂ ಐಪಿಸಿಯಡಿ ಪ್ರಕರಣ ದಾಖಲಿಸಲಾಗಿದೆ' ಎಂದೂ ಹೇಳಿದರು.

‘ರಾಜ್ಯ ರಾಜಕಾರಣಕ್ಕೆ ಶಿವಕುಮಾರ ಉದಾಸಿ’

ಪ್ರಜಾವಾಣಿ ವಾರ್ತೆ


ಶಿವಕುಮಾರ ಉದಾಸಿ

ಹಾವೇರಿ: ‘ತಂದೆಯ ಜಾಗವನ್ನು ಸಂಸದ ಶಿವಕುಮಾರ ಉದಾಸಿ ತುಂಬುತ್ತಾರೆ. ಅವರ ಸ್ಥಾನದಲ್ಲಿ ಪುತ್ರನೇ ನಿಲ್ಲುತ್ತಾರೆ. ತಂದೆಯವರ ಹಾದಿಯಲ್ಲಿ ನಡೆಯಲು ನಾವು ಮನವಿ ಮಾಡುತ್ತೇವೆ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಈ ಮೂಲಕ, ರಾಜ್ಯ ರಾಜಕಾರಣಕ್ಕೆ ಶಿವಕುಮಾರ ಉದಾಸಿ ಬರುವುದನ್ನು ಪರೋಕ್ಷವಾಗಿ ತಿಳಿಸಿದರು.

ಹಾನಗಲ್‌ನಲ್ಲಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ತಂದೆಯವರ ಕೆಲಸಗಳನ್ನು ಪುತ್ರ ಮುಂದುವರಿಸಿಕೊಂಡು ಹೋಗಬೇಕು. ಉತ್ತರ ಕರ್ನಾಟಕಕ್ಕೆ ಉದಾಸಿ ಅವರ ಕೊಡುಗೆ ಅಪಾರವಾಗಿದೆ. ನಾನು ರಾಜಕೀಯಕ್ಕೆ ಬರಲು ಉದಾಸಿ ಅವರೇ ಕಾರಣ. ಅವರೇ ನನ್ನ ಗಾಡ್‌ಫಾದರ್’ ಎಂದು ಬೊಮ್ಮಾಯಿ ಹೇಳಿದರು.

ಯಾರೂ ಆತಂಕಕ್ಕೆ ಒಳಗಾಗಬೇಕಿಲ್ಲ– ಶಿಕ್ಷಣ ಸಚಿವ ಎಸ್‌. ಸುರೇಶ್‌ಕುಮಾರ್

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸುರಕ್ಷಿತ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ನೀಡಲಿರುವ ಸುಧಾರಿತ ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣೆ ವಿಧಾನ) ಪ್ರಕಾರ ಸುರಕ್ಷಿತ ವ್ಯವಸ್ಥೆಯೊಳಗೆ ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯಲಿದೆ. ಹೀಗಾಗಿ, ಯಾರೂ ಆತಂಕಕ್ಕೆ ಒಳಗಾಗಬೇಕಿಲ್ಲ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್‌. ಸುರೇಶ್‌ಕುಮಾರ್ ತಿಳಿಸಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಕುರಿತು ಇಲಾಖೆಯ ಹಿರಿಯ ಅಧಿಕಾರಿಗಳು, ಎಲ್ಲ 34 ಶೈಕ್ಷಣಿಕ ಜಿಲ್ಲೆಗಳ ಉಪನಿರ್ದೇಶಕರು, ಬಿಇಒ ಜೊತೆ ಬುಧವಾರ ವಿಡಿಯೊ ಸಂವಾದ ನಡೆಸಿದ ಅವರು, ‘ಪರೀಕ್ಷೆ ಕುರಿತು ಮಕ್ಕಳು ಮತ್ತು ಪೋಷಕರಲ್ಲಿ ಆತ್ಮ ವಿಶ್ವಾಸ ಮೂಡಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಈ ಬಾರಿಯ ಬದಲಾಗಿರುವ ಪರೀಕ್ಷೆ ಪದ್ಧತಿ ಬಗ್ಗೆ ತಿಳಿವಳಿಕೆ ನೀಡಲು ಕ್ರಮ ವಹಿಸಬೇಕು’ ಎಂದರು.

‘ಕೋವಿಡ್ ನಿಯಂತ್ರಣಕ್ಕೆ ಬಂದ ನಂತರ ಕೇವಲ ಎರಡು ದಿನ ಪರೀಕ್ಷೆ ನಡೆಯಲಿದೆ. ವಾರಾಂತ್ಯಕ್ಕೆ ಮಾದರಿ ಪ್ರಶ್ನೆಪತ್ರಿಕೆಗಳು ಶಾಲೆಗಳಿಗೆ ತಲುಪಲಿವೆ. ಮಕ್ಕಳಿಗೆ ಒಎಂಆರ್ ಶೀಟ್ ರೂಪದಲ್ಲಿರುವ ಪ್ರಶ್ನೆಪತ್ರಿಕೆಗಳಿಗೆ ಉತ್ತರಿಸುವ ಕುರಿತು ಶಿಕ್ಷಕರು ಸಲಹೆ ನೀಡಬೇಕು. ಪ್ರತಿ ವಿಷಯಕ್ಕೆ ತಲಾ 40 ಅಂಕದ ಪ್ರಶ್ನೆಪತ್ರಿಕೆಯಿದ್ದು, ನಾಲ್ಕು ಉತ್ತರಗಳಲ್ಲಿ ಒಂದನ್ನು ಗುರುತಿಸಬೇಕು. ಪ್ರಶ್ನೆಗಳು ನೇರ ಮತ್ತು ಸುಲಭವಾಗಿ ಇರಲಿವೆ’ ಎಂದರು.


ಸುರೇಶ್ ಕುಮಾರ್

‘ಪರೀಕ್ಷೆ ಯಶಸ್ವಿಗಾಗಿ ವಾರದೊಳಗೆ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಮತ್ತು ಆಯುಕ್ತರು, ನಿರ್ದೇಶಕರ ಸಭೆ ನಡೆಸಲಾಗುವುದು ಹಾಗೆಯೇ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ವಿಡಿಯೊ ಸಂವಾದ ನಡೆಸಲಾಗುವುದು. ಪರೀಕ್ಷಾ ಸಿದ್ಧತೆ ಪರಿಶೀಲಿಸಲು ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡುವ ಬಗ್ಗೆಯೂ ಚಿಂತನೆ ನಡೆಸಿದ್ದೇನೆ’ ಎಂದು ಹೇಳಿದರು.

ಎಲ್ಲ ಮಕ್ಕಳಿಗೂ ಎನ್‌-95 ಮಾಸ್ಕ್

‘ಕಳೆದ ಬಾರಿಗಿಂತ ಈ ಬಾರಿ ಪರೀಕ್ಷಾ ಕೇಂದ್ರಗಳನ್ನು ಹೆಚ್ಚಿಸಲಾಗುವುದು. ಕೋವಿಡ್ ಲಸಿಕೆ ಪಡೆದ ಶಿಕ್ಷಕರನ್ನು ಮಾತ್ರ ಮೇಲ್ವಿಚಾರಕರಾಗಿ ನೇಮಿಸಲಾಗುವುದು. ಶಿಕ್ಷಕರಿಗೆ ಲಸಿಕೆ ನೀಡುವಂತೆ ಈಗಾಗಲೇ ಆರೋಗ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಎಲ್ಲ ಮಕ್ಕಳಿಗೂ ಎನ್‌-95 ಮಾಸ್ಕ್ ಒದಗಿಸಲಾಗುವುದು’ ಎಂದು ಸುರೇಶ್‌ಕುಮಾರ್ ತಿಳಿಸಿದರು.

‘ಕಳೆದ ವರ್ಷದಂತೆ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರತಿನಿಧಿಗಳು ಸಮವಸ್ತ್ರದಲ್ಲಿ ಪರೀಕ್ಷಾ ಕೇಂದ್ರದಲ್ಲಿ ಹಾಜರಿದ್ದು, ಮಕ್ಕಳಿಗೆ ಮಾರ್ಗದರ್ಶನ ನೀಡಲಿದ್ದಾರೆ. ವಾಸಸ್ಥಳದ ಸಮೀಪದ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಈ ಬಾರಿಯೂ ಅವಕಾಶ ನೀಡಲಾಗುವುದು. ಕಳೆದ ಬಾರಿಗಿಂತ 30 ಸಾವಿರಕ್ಕೂ ಹೆಚ್ಚು ಮಕ್ಕಳು ಈ ಬಾರಿ ನೋಂದಾಯಿಸಿಕೊಂಡಿದ್ದಾರೆ’ ಎಂದರು.

ಎಸ್ಸೆಸ್ಸೆಲ್ಸಿ ಫಲಿತಾಂಶದ ಬಳಿಕ ಪ್ರಥಮ ಪಿಯುಸಿ ದಾಖಲಾತಿ

ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟಗೊಂಡ ಬಳಿಕ ಮತ್ತು ‘ದಾಖಲಾತಿ ಮಾರ್ಗಸೂಚಿ 2021–22’ ಬಿಡುಗಡೆ ಮಾಡಿದ ನಂತರ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021–22) ಪ್ರಥಮ ಪಿಯುಸಿ ತರಗತಿಗೆ ವಿದ್ಯಾರ್ಥಿಗಳ ದಾಖಲಾತಿ ಪ್ರಕ್ರಿಯೆ ಆರಂಭಿಸಬೇಕು’ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಅಲ್ಲಿಯವರೆಗೆ ಕಾಲೇಜುಗಳು ಯಾವುದೇ ಕಾರಣಕ್ಕೂ ಪ್ರಥಮ ಪಿಯುಸಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು. ಅಲ್ಲದೆ, ಆನ್‌ಲೈನ್ ತರಗತಿಗಳನ್ನೂ ಆರಂಭಿಸಬಾರದು ಎಂದು ಅವರು ತಿಳಿಸಿದ್ದಾರೆ.

ಈ ಸೂಚನೆಯನ್ನು ಉಲ್ಲಂಘಿಸಿದ ಕಾಲೇಜುಗಳ ಮೇಲೆ ಕಠಿಣ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ, ಕಾಲೇಜುಗಳ ಮಾನ್ಯತೆಯನ್ನೇ ರದ್ದುಪಡಿಸಲಾಗುವುದು ಎಂದೂ ಎಚ್ಚರಿಕೆ ನೀಡಿದ್ದಾರೆ. ಈ ಬಗ್ಗೆ ತಮ್ಮ ವ್ಯಾಪ್ತಿಯ ಕಾಲೇಜುಗಳ ಪ್ರಾಂಶುಪಾಲರಿಗೆ ಮಾಹಿತಿ ನೀಡಬೇಕು. ಅಲ್ಲದೆ, ನಿಗಾವಹಿಸಿ, ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಎಲ್ಲ ಜಿಲ್ಲೆಗಳ ಉಪ ನಿರ್ದೇಶಕರಿಗೆ ಅವರು ಸುತ್ತೋಲೆ ಹೊರಡಿಸಿದ್ದಾರೆ.

ಸುದ್ದಿ 2 ನಿಮಿಷ

‘ಸಿ.ಎಂ ಹುದ್ದೆ ಆಕಾಂಕ್ಷಿಗಳು ಪಂಕ್ಚರ್ ಆದ ಬಸ್ಸಿನಲ್ಲಿದ್ದಾರೆ’

ಬೆಂಗಳೂರು: ‘ಮುಖ್ಯಮಂತ್ರಿ ಆಗಬೇಕು ಎಂಬ ಬಯಕೆ ಹೊಂದಿರುವ ಕೆಲವರು ಖಾಲಿ ಇಲ್ಲದ ಕುರ್ಚಿಗೆ ಟವಲ್ ಹಾಕಿದ್ದಾರೆ. ಇವರು ಪಂಕ್ಚರ್ ಆದ ಮತ್ತು ಪೆಟ್ರೋಲ್ ಇಲ್ಲದ ಬಸ್ಸುಗಳನ್ನು ಹತ್ತಿದ್ದಾರೆ. ಆ ಬಸ್ಸು ಹೊರಡುವುದಿಲ್ಲ’ ಎಂದು ಕಂದಾಯ ಸಚಿವ ಆರ್.ಅಶೋಕ ಮಾರ್ಮಿಕವಾಗಿ ಹೇಳಿದ್ದಾರೆ.

ನಿಮ್ಹಾನ್ಸ್‌ನಲ್ಲಿ ನಡೆದ ಕಾರ್ಯಾಗಾರವೊಂದರಲ್ಲಿ ಭಾಗವಹಿಸಿದ್ದ ಅವರು ಬಳಿಕ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ, ಹೊರಡದೇ ಇರುವ ಬಸ್ಸಿನ ಸೀಟಿಗೆ ಟವಲ್ ಹಾಕಿ ಕೂತರೇ ಪ್ರಯೋಜನವೇನು ಎಂದು ವ್ಯಂಗ್ಯವಾಡಿದರು.



‘ಹಾಗಿದ್ದರೆ ಬಿಜೆಪಿ ಪಂಕ್ಚರ್ ಆಗಿರುವ ಬಸ್ಸೇ’ ಎಂಬ ಪ್ರಶ್ನೆಗೆ, ‘ಬಿಜೆಪಿ ಪಂಕ್ಚರ್ ಬಸ್ ಅಲ್ಲ, ಮುಖ್ಯಮಂತ್ರಿ ಆಗಲು ಹೊರಟಿರುವವರ ಬಸ್ಸುಗಳ ಸ್ಥಿತಿ ಹೇಳಿದ್ದೇನೆ. ನಾನಂತೂ ಮುಖ್ಯಮಂತ್ರಿ ರೇಸ್‌ನಲ್ಲಿ ಇಲ್ಲ. ಆದರೆ, ಭವಿಷ್ಯದ ಬಗ್ಗೆ ನನಗೆ ಗೊತ್ತಿಲ್ಲ’ ಎಂದರು.

‘ಮುಖ್ಯಮಂತ್ರಿಯವರ ಬಸ್ಸು ಚೆನ್ನಾಗಿದೆ, ಅದರ ಕುರ್ಚಿಯೂ ಸರಿ ಇದೆ, ಬಸ್ಸು ಕೂಡ ಸರಿಯಾದ ವೇಗದಲ್ಲೇ ಓಡುತ್ತಿದೆ’ ಎಂದರು.

‘ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ನಮ್ಮ ಪಕ್ಷದ ಚಿಂತೆ ಏಕೆ ಬೇಕು? ಅವರಲ್ಲೇ ಸಾಕಷ್ಟು ತಿಕ್ಕಾಟ ನಡೆಯುತ್ತಿದೆ. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬ ಬಗ್ಗೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಮಧ್ಯೆ ಪೈಪೋಟಿ ನಡೆದಿದೆ. ಮೊದಲು ಆ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿ’ ಎಂದು ಅಶೋಕ ತಿಳಿಸಿದರು.

ಚನ್ನಣ್ಣವರ, ದೇವರಾಜು ಸಿಐಡಿಗೆ

ಬೆಂಗಳೂರು: ಐಪಿಎಸ್ ಅಧಿಕಾರಿಗಳಾದ ರವಿ ಡಿ.ಚನ್ನಣ್ಣನವರ ಮತ್ತು ಕೆ.ಜಿ. ದೇವರಾಜು ಅವರನ್ನು ಸಿಐಡಿ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಇವರೂ ಸೇರಿ ಒಟ್ಟು 12 ಪೊಲೀಸ್ ವರಿಷ್ಠಾಧಿಕಾರಿಗಳ ವರ್ಗಾವಣೆಯಾಗಿದೆ.

ವರ್ಗಾವಣೆಗೊಂಡ ಅಧಿಕಾರಿಗಳು: ರಾಹುಲ್ ಕುಮಾರ್ ಶಹಪೂರವಾಡ್– ಎಸ್ಪಿ, ತುಮಕೂರು ಜಿಲ್ಲೆ , ಡಾ.ವಂಶಿ ಕೃಷ್ಣ– ಎಸ್ಪಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಡಾ.ಎ.ಎನ್.ಪ್ರಕಾಶ್ ಗೌಡ– ಎಸ್ಪಿ ಐಎಸ್‌ಡಿ, ಬೆಂಗಳೂರು, ಪ್ರದೀಪ್ ಗುಂಟಿ– ಉಪ ಪೊಲೀಸ್ ಆಯುಕ್ತ, ಕಾನೂನು– ಸುವ್ಯವಸ್ಥೆ, ಮೈಸೂರು ನಗರ, ದೆಕ್ಕಾ ಕಿಶೋರ್ ಬಾಬು– ಎಸ್ಪಿ, ಕೋಲಾರ ಜಿಲ್ಲೆ , ಅಡ್ಡೂರು ಶ್ರೀನಿವಾಸುಲು– ಉಪ ಪೊಲೀಸ್ ಆಯುಕ್ತ, ಕಾನೂನು ಮತ್ತು ಸುವ್ಯವಸ್ಥೆ, ಕಲಬುರ್ಗಿ ನಗರ.

ಹನುಮಂತರಾಯ– ಎಸ್ಪಿ, ಹಾವೇರಿ ಜಿಲ್ಲೆ, ಆರ್.ಚೇತನ– ಎಸ್ಪಿ, ಮೈಸೂರು ಜಿಲ್ಲೆ, ಸಿ.ಬಿ.ರಿಷ್ಯಂತ್– ಎಸ್ಪಿ, ದಾವಣಗೆರೆ ಜಿಲ್ಲೆ, ಕಾರ್ತಿಕ್ ರೆಡ್ಡಿ–ಎಸ್ಪಿ, ನಿಸ್ತಂತು ವಿಭಾಗ, ಬೆಂಗಳೂರು.



ಭತ್ತ ಒಕ್ಕಣೆ

ಕೊರೊನಾ ಲಾಕ್‌ಡೌನ್ ನಡುವೆಯೂ ದಾವಣಗೆರೆಯ ಎಪಿಎಂಸಿಗೆ ಭತ್ತದ ಆವಕ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿದ್ದು, ಮಹಿಳಾ ಕಾರ್ಮಿಕರು ಭತ್ತವನ್ನು ರಾಶಿ ಮಾಡುವುದರಲ್ಲಿ ತೊಡಗಿದ್ದರು

ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಪೆಟ್ರೋಲ್ ದರ ಏರಿಕೆ ಖಂಡಿಸಿ ‘100 ನಾಟೌಟ್’: ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೆಟ್ರೋಲ್ ದರ ಏರಿಕೆ ಖಂಡಿಸಿ ರಾಜ್ಯದಲ್ಲಿ ಐದು ದಿನ 5 ಸಾವಿರ ಪೆಟ್ರೋಲ್ ಬಂಕ್‌ಗಳಲ್ಲಿ ‘100 ನಾಟೌಟ್’ ಅಭಿಯಾನ ಆರಂಭಿಸುತ್ತಿದ್ದೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆ ಏರಿಕೆ ಮೂಲಕ ಜನರ ಜೇಬು ಲೂಟಿ ಮಾಡುತ್ತಿದೆ. ಇದನ್ನು ಪ್ರತಿಭಟಿಸಿ ಇದೇ 11ರಿಂದ 15ರವರೆಗೆ ಅಭಿಯಾನ ಹಮ್ಮಿಕೊಳ್ಳುತ್ತೇವೆ’ ಎಂದರು.


ಶಿವಕುಮಾರ್

‘11ರಂದು ಜಿಲ್ಲಾ ಕೇಂದ್ರ, 12ರಂದು ತಾಲ್ಲೂಕು ಕೇಂದ್ರ, 13ರಂದು ಜಿಲ್ಲಾ ಪಂಚಾಯಿತಿ ಹಾಗೂ ಹೋಬಳಿ, 14ರಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೆಟ್ರೋಲ್ ಬಂಕ್‌ಗಳಲ್ಲಿ, 15ರಂದು ಪ್ರಮುಖ ಪೆಟ್ರೋಲ್ ಬಂಕ್‌ಗಳಲ್ಲಿ ಪ್ರತಿಭಟನೆ ನಡೆಸಲಾಗುವುದು. ಪಕ್ಷದ ಮುಂಚೂಣಿ ಘಟಕಗಳಾದ ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್, ಎನ್‌ಎಸ್‌ಯುಐ, ರೈತ ಘಟಕ, ಹಿಂದುಳಿದ, ಅಲ್ಪಸಂಖ್ಯಾತ ಘಟಕ, ಬ್ಲಾಕ್, ಜಿಲ್ಲಾ ಕಾಂಗ್ರೆಸ್ ಸದಸ್ಯರು ಬೆಳಿಗ್ಗೆ 11 ಗಂಟೆಯಿಂದ 12ರವರೆಗೂ ನಡೆಯಲಿರುವ ಈ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ’ ಎಂದರು.

‘ಕೊರೊನಾ ಭ್ರಷ್ಟಾಚಾರ ವಿಚಾರವಾಗಿ ಪಕ್ಷದ ನಾಯಕರು ಜಿಲ್ಲೆಗೆ ಹೋಗಿ ಪತ್ರಿಕಾಗೋಷ್ಠಿ ನಡೆಸಿದಂತೆ, ಪ್ರತಿಭಟನೆ ನೇತೃತ್ವಕ್ಕೂ ನಾಯಕರನ್ನು ನೇಮಿಸಲಾಗುವುದು. ಈ ಉಸ್ತುವಾರಿ ಹೊತ್ತಿರುವ ನಾಯಕರು ಜೂಮ್ ಮೂಲಕ ಪ್ರತಿಭಟನೆ ವೀಕ್ಷಿಸಬೇಕು. ಈ ಪ್ರತಿಭಟನೆಯ ಒಂದು ನಿಮಿಷದ ವಿಡಿಯೊ ಮಾಡಿ, ಪಕ್ಷದ ಐಟಿ ಸೆಲ್ ಹಾಗೂ ಸಾಮಾಜಿಕ ಜಾಲತಾಣ ವಿಭಾಗಕ್ಕೆ ಕಳುಹಿಸಬೇಕು. ಅದನ್ನು ಎಐಸಿಸಿಗೂ ಕಳುಹಿಸಲಾಗುವುದು’ ಎಂದು ವಿವರಿಸಿದರು.

ರೋಹಿಣಿ ಸಿಂಧೂರಿ ಜಿಲ್ಲಾಧಿಕಾರಿಯಾಗಿದ್ದ ಅವಧಿ: ಆರೋಪ

ಡಿ.ಸಿ ನಿವಾಸ: ತಿಂಗಳಿಗೆ ₹50 ಸಾವಿರ ವಿದ್ಯುತ್ ಬಿಲ್

ಪ್ರಜಾವಾಣಿ ವಾರ್ತೆ

ಮೈಸೂರು: ‘ರೋಹಿಣಿ ಸಿಂಧೂರಿ ಅವರು ವಾಸ್ತವ್ಯವಿದ್ದ ಮೈಸೂರಿನ ಜಿಲ್ಲಾಧಿಕಾರಿ ನಿವಾಸದ ಪ್ರತಿ ತಿಂಗಳ ವಿದ್ಯುತ್ ಬಿಲ್ ₹ 50 ಸಾವಿರ ದಾಟುತ್ತಿತ್ತು’ ಎಂದು ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಆರೋಪಿಸಿದರು.

ಮೈಸೂರಿನಿಂದ ವರ್ಗಾವಣೆಯಾಗಿರುವ ರೋಹಿಣಿ ಅವರ ವಿರುದ್ಧ ವಾಗ್ದಾಳಿ ಮುಂದುವರಿಸಿದ ಅವರು, ಬುಧವಾರ ಸುದ್ದಿಗೋಷ್ಠಿಯಲ್ಲಿ ಇದಕ್ಕೆ ಸಂಬಂಧಿಸಿದ್ದು ಎನ್ನಲಾದ ದಾಖಲೆಗಳನ್ನು ಬಿಡುಗಡೆ ಮಾಡಿದರು.

ಈ ಹಿಂದಿನ ಜಿಲ್ಲಾಧಿಕಾರಿಗಳು ಇದ್ದಾಗ ವಿದ್ಯುತ್ ಬಿಲ್ ಗರಿಷ್ಠ ಎಂದರೆ ತಿಂಗಳಿಗೆ ₹ 7ರಿಂದ ₹ 8 ಸಾವಿರದವರೆಗೆ ಬರುತ್ತಿತ್ತು. ಇವರು ಬಂದ ಬಳಿಕ ವಿದ್ಯುತ್ ಬಳಕೆ ಪ್ರಮಾಣ ಏಕಾಏಕಿ ಏರಿಕೆಯಾಗಿತ್ತು ಆರೋಪಿಸಿದರು.

‘ಜಿಲ್ಲಾಧಿಕಾರಿಗಳ ನಿವಾಸಕ್ಕೆ ಒಟ್ಟು ಮೂರು ವಿದ್ಯುತ್ ಮೀಟರ್‌ಗಳು ಇವೆ. ಅವುಗಳಲ್ಲಿ ಎರಡು ಮೀಟರ್‌ಗಳಲ್ಲಿ ಏಪ್ರಿಲ್ ತಿಂಗಳಲ್ಲಿ ₹ 42,371, ಮೇ ತಿಂಗಳಲ್ಲಿ ₹ 36,406 ಬಿಲ್ ಬಂದಿವೆ. ಇನ್ನೊಂದು ಮೀಟರ್‌ಗೆ ಬಂದಿರುವ ಬಿಲ್ ಸೇರಿಸಿದರೆ ತಿಂಗಳ ಒಟ್ಟು ಬಿಲ್ ₹ 50 ಸಾವಿರ ದಾಟುತ್ತದೆ. ಜಿಮ್, ಈಜುಕೊಳ ನಿರ್ಮಾಣ ಆಗಿರುವುದೇ ಇದಕ್ಕೆ ಕಾರಣ’ ಎಂದು ದೂರಿದರು.

ಕರ್ತವ್ಯಲೋಪ ಮುಚ್ಚಿಡಲು ಪ್ರಯತ್ನ: ‘ರೋಹಿಣಿ ಸಿಂಧೂರಿ ತಮ್ಮ ಕರ್ತವ್ಯ ಲೋಪ, ವೈಫಲ್ಯಗಳನ್ನು ಮುಚ್ಚಿಡಲು ಭೂ ಮಾಫಿಯಾ ವಿಚಾರ ಪ್ರಸ್ತಾಪಿಸಿದ್ದಾರೆ. ಎಂಟು ತಿಂಗಳ ಅವಧಿಯಲ್ಲಿ ಒಂದೇ ಒಂದು ಗುಂಟೆ ಭೂಮಿ ಒತ್ತುವರಿ ತೆರವು ಮಾಡಲು ಆಸಕ್ತಿ ತೋರಿಲ್ಲ. ಅವರನ್ನು ವರ್ಗಾವಣೆ ಮಾಡುವ ಬದಲು ಅಮಾನತು ಮಾಡಬೇಕಿತ್ತು’ ಎಂದು ಕಿಡಿಕಾರಿದರು.

‘ಅವರ ವಿರುದ್ಧ ನಾನು ಮಾಡಿರುವ 10 ಆರೋಪಗಳ ಕುರಿತು ಮುಖ್ಯಮಂತ್ರಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದೇನೆ. ಎಲ್ಲ ದಾಖಲೆಗಳನ್ನೂ ಒದಗಿಸಿದ್ದೇನೆ. ಇವುಗಳ ಬಗ್ಗೆ ಸಮಗ್ರ ತನಿಖೆ ಆಗಲಿ. ಇದೇ ವಿಷಯವನ್ನು ವಿಧಾನಸಭೆಯಲ್ಲೂ ಪ್ರಸ್ತಾಪಿಸುತ್ತೇನೆ’ ಎಂದು ತಿಳಿಸಿದರು.

‘ನಾನೂ ಸಿನಿಮಾ ನಿರ್ಮಾಣ ಮಾಡುತ್ತೇನೆ’: ‘ಆಂಧ್ರ ಮೂಲದ ಐಎಎಸ್ ಅಧಿಕಾರಿಯೊಬ್ಬರ ಜೀವನದ ಕುರಿತು ಚಲನಚಿತ್ರ ನಿರ್ಮಾಣಕ್ಕೆ ಸಿದ್ಧತೆ ನಡೆದಿರುವುದು ಮಾಧ್ಯಮಗಳ ಮೂಲಕ ಗಮನಕ್ಕೆ ಬಂದಿದೆ. ಆ ಸಿನಿಮಾ ಬಿಡುಗಡೆಯಾಗಲಿ. ಆ ಬಳಿಕ ನಾವೂ ನಿರ್ಮಾಣಕ್ಕೆ ಇಳಿಯುವೆವು. ಬಡ ರೈತನ ಮಗನೊಬ್ಬ ಕಷ್ಟಪಟ್ಟು ಓದಿ ಐಎಎಸ್ ಅಧಿಕಾರಿಯಾದದ್ದು; ಅವರ ಜೀವನ ಹೇಗೆ ದುರಂತ ಅಂತ್ಯ ಕಂಡಿತು ಎಂಬ ಕುರಿತು ಸಿಬಿಐ ವರದಿಯನ್ನಾಧರಿಸಿ ಸಿನಿಮಾ ನಿರ್ಮಾಣ ಮಾಡುತ್ತೇನೆ’ ಎಂದ ಸಾ.ರಾ.ಮಹೇಶ್, ಹೆಸರು ಹೇಳದೆಯೇ ರೋಹಿಣಿ ಸಿಂಧೂರಿ ಅವರನ್ನು ಕುಟುಕಿದರು.

ಡಿ.ಸಿ ನಿವಾಸದ ಏಪ್ರಿಲ್, ಮೇ ತಿಂಗಳ ವಿದ್ಯುತ್ ಬಿಲ್ ವಿವರ

ಮೀಟರ್ ಸಂಖ್ಯೆ	ತಿಂಗಳು	ಬಳಸಿದ ಯುನಿಟ್	ಬಿಲ್ ಮೊತ್ತ
1ಎನ್‌ಇಎಚ್413	ಏಪ್ರಿಲ್	1768	₹15,592
1ಎನ್‌ಇಎಚ್413	ಮೇ	1723	₹ 15,886
ಎ196	ಏಪ್ರಿಲ್	2957	₹26,779
ಎ196	ಮೇ	2263	₹20,520

ಡಿ.ಸಿ ನಿವಾಸದ ಮೂರು ಮೀಟರ್‌ಗಳಲ್ಲಿ ಕಳೆದ 8 ತಿಂಗಳ ವಿದ್ಯುತ್ ಬಳಕೆ ವಿವರ (ಯುನಿಟ್‌ಗಳಲ್ಲಿ)

ತಿಂಗಳು	ಮೀಟರ್‌ಗಳು 1	2	3
ಅಕ್ಟೋಬರ್	600	924	18
ನವೆಂಬರ್	-	-	-
ಡಿಸೆಂಬರ್	1,257	2052	211
ಜನವರಿ	693	961	121
ಫೆಬ್ರುವರಿ	441	1083	85
ಮಾರ್ಚ್	925	1759	103
ಏಪ್ರಿಲ್	1,768	2957	129
ಮೇ	1723	2263	152

ರಾಜಕಾಲುವೆ ಮೇಲೆ ಸಾ.ರಾ.ಚೌಲ್ಟ್ರಿ

ಒಂದನೇ ಪುಟದಿಂದ...

ಭೂ ಒತ್ತುವರಿ, ಅಕ್ರಮ ಭೂ ಪರಿವರ್ತನೆ, ಒಂದೇ ಜಮೀನಿಗೆ ಎರಡು ಬಾರಿ ಪರಿಹಾರ, ಹರಾಜಿಗೆ ಸುಳ್ಳು ದಾಖಲೆ ಸೃಷ್ಟಿ ವಿಚಾರವಾಗಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನೀಡಿರುವ ನೋಟಿಸ್‌ಗಳನ್ನು ವಾಟ್ಸ್‌ಆ್ಯಪ್‌ನಲ್ಲಿ ಬಿಡುಗಡೆ ಮಾಡಿರುವ ಸಿಂಧೂರಿ, ‘ದಾಖಲೆಗಳನ್ನು ಪರಿಶೀಲಿಸಿದ್ದು, ಮೇಲ್ನೋಟಕ್ಕೆ ಅಕ್ರಮ ನಡೆದಿರುವುದು ಕಂಡು ಬಂದಿದೆ. ಮಾಹಿತಿ ಪಡೆದು ಕ್ರಮಕ್ಕೆ ಸೂಚಿಸಿದ್ದೇನೆ’ ಎಂದರು.

‘ಸಾ.ರಾ.ಮಹೇಶ್ ಅವರು ನನ್ನನ್ನು ಮಾಡೆಲ್ ಎಂದು ಕರೆದು ವೈಯಕ್ತಿಕ ಟೀಕೆಗಿಳಿದಿದ್ದಾರೆ. ವರ್ಗಾವಣೆ ಮಾಡಿಸಿದ ಮೇಲೂ ನನ್ನ ಮೇಲೆ ಮುಗಿಬೀಳುತ್ತಿದ್ದಾರೆ. ತನಿಖೆ ನಡೆದರೆ ಅಕ್ರಮ ವ್ಯವಹಾರಗಳು ಬಯಲಾಗಲಿವೆ ಎಂಬ ಭಯವೇ ಇದಕ್ಕೆ ಕಾರಣ. ಸಾ.ರಾ.ಮಹೇಶ್ ಹಾಗೂ ರಾಜೀವ್ ವಿರುದ್ಧ ತನಿಖೆ ನಡೆಯಲಿ’ ಎಂದು ಆಗ್ರಹಿಸಿದರು.

ವರ್ಗಾವಣೆ ಹಿಂದಿನ ದಿನ ನೋಟಿಸ್: ಮೈಸೂರು ತಾಲ್ಲೂಕು ಲಿಂಗಾಂಬುದಿ ಗ್ರಾಮದ ಸರ್ವೆ ನಂ 124/2ರಲ್ಲಿ 1.39 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಗೊಳಿಸಿ ಹೊರಡಿಸಿದ್ದ ಆದೇಶ ರದ್ದುಪಡಿಸುವಂತೆ ಸೂಚನೆ ನೀಡಿ, ಮುಡಾ ಆಯುಕ್ತರಿಗೆ ಜೂನ್ 4ರಂದು (ವರ್ಗಾವಣೆಗೂ ಹಿಂದಿನ ದಿನ) ಸಿಂಧೂರಿ ಪತ್ರ ಬರೆದಿದ್ದಾರೆ.

ಮುಡಾದಲ್ಲಿ ದಾಖಲೆ ಪರಿಶೀಲಿಸಿದಾಗ ಈ ಜಮೀನನ್ನು ಕೃಷಿ ಉದ್ದೇಶಕ್ಕೆ ಮೀಸಲಿಡಲಾಗಿದೆ. ಹೀಗಾಗಿ, ತಪ್ಪು ವರದಿ ಸಲ್ಲಿಸಿದವರ ವಿರುದ್ಧ ಶಿಸ್ತು ಕ್ರಮಕೈಗೊಂಡು, ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ.

ಮೈಸೂರು ತಾಲ್ಲೂಕು ದಟ್ಟಗಳ್ಳಿ ಗ್ರಾಮದ ಸರ್ವೆ ನಂ.123ರ 5.02 ಎಕರೆ ವಿಸ್ತೀರ್ಣದ ಗೋಮಾಳವನ್ನು ಹರಾಜಿನ ಮುಖಾಂತರ ಪಡೆದಿರುವುದಾಗಿ ಸುಳ್ಳು ದಾಖಲೆ ಸೃಷ್ಟಿಸಿರುವ ಆರೋಪ ಸಂಬಂಧ ಪರಿಶೀಲಿಸಿ ವಾರದಲ್ಲಿ ವರದಿ ನೀಡುವಂತೆ ಉಪವಿಭಾಗಾಧಿಕಾರಿಗೆ ಪತ್ರ ಬರೆದಿದ್ದಾರೆ.

ಲಿಂಗಾಂಬುದಿ ಕೆರೆಯ ಬಳಿ 2 ಎಕರೆ ಜಾಗದಲ್ಲಿ ರೆಸಾರ್ಟ್ ನಿರ್ಮಿಸಲು ಪ್ರಯತ್ನ ನಡೆಸುತ್ತಿರುವ ಬಗ್ಗೆ ದೂರು ಬಂದಿದ್ದು, ಆ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮುಡಾ ಆಯುಕ್ತರಿಗೆ ಸೂಚನೆ ನೀಡಿದ್ದಾಗಿ ಹೇಳಿದ್ದಾರೆ.

ಶಿಲ್ಪಾನಾಗ್ ವಿರುದ್ಧ ಮುಖ್ಯ ಕಾರ್ಯದರ್ಶಿಗೆ ದೂರು

ಪಾಲಿಕೆ ಆಯುಕ್ತರಾಗಿದ್ದ ಶಿಲ್ಪಾನಾಗ್ ವಿರುದ್ಧ ಸಿಂಧೂರಿ, ತಮ್ಮ ವರ್ಗಾವಣೆಯಾದ ಮಾರನೇ ದಿನ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ದೂರು ನೀಡಿದ್ದಾರೆ.

‘ಶಿಲ್ಪಾನಾಗ್ ಅನುಚಿತವಾಗಿ, ಅಶಿಸ್ತಿನಿಂದ ವರ್ತಿಸಿದ್ದಾರೆ. ಪತ್ರಿಕಾಗೋಷ್ಠಿ ಕರೆದು ರಾಜೀನಾಮೆಯ ನಾಟಕವಾಡಿದ್ದಾರೆ. ನನ್ನ ವಿರುದ್ಧ ಕಿರುಕುಳ ಆರೋಪ ಮಾಡಿದ್ದು, ಅದು ಸಂಪೂರ್ಣ ಸುಳ್ಳು. ಅವರ ಉದ್ದೇಶ ನನ್ನನ್ನು ಜಿಲ್ಲೆಯಿಂದ ವರ್ಗಾವಣೆ ಮಾಡಿಸುವುದೇ ಆಗಿತ್ತು. ಅದರಲ್ಲಿ ಯಶಸ್ವಿಯಾಗಿರುವುದಾಗಿ ಮಾಧ್ಯಮವರ ಮುಂದೆ ನಂತರದ ದಿನಗಳಲ್ಲಿ ಹೇಳಿಕೊಂಡಿದ್ದಾರೆ. ಐಎಎಸ್ ಅಧಿಕಾರಿಯಾಗಿ ಈ ರೀತಿ ನಡೆದುಕೊಳ್ಳಬಾರದು. ಅವರ ವಿರುದ್ಧ ಕ್ರಮಕೈಗೊಳ್ಳಬೇಕು’ ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

‘ಕೋವಿಡ್ ಕೇಂದ್ರದಲ್ಲೂ ತಲೆ ಹಾಕಿದರು’

‘ಮೈಸೂರು ನಗರದಲ್ಲಿನ ಖಾಸಗಿ ಕೋವಿಡ್ ಕೇರ್ ಕೇಂದ್ರದ ವಿಚಾರದಲ್ಲೂ ಸಾ.ರಾ.ಮಹೇಶ್ ತಲೆಹಾಕಿದರು. ಇದರಲ್ಲಿ ಅವರ ಹಿತಾಸಕ್ತಿ ಏನಿತ್ತು? ಅವರೊಂದಿಗೆ ಶಿಲ್ಪಾನಾಗ್ ಕೂಡ ಕೈಜೋಡಿಸಿದ್ದರು. ಹೀಗಾಗಿ, ಪಾಲಿಕೆ ಆಯುಕ್ತರಾಗಿದ್ದಾಗ ಶಿಲ್ಪಾನಾಗ್, ಸರ್ಕಾರಿ ಕೋವಿಡ್ ಕೇರ್ ಕೇಂದ್ರ ತೆರೆಯಲಿಲ್ಲ. ಖಾಸಗಿ ಕೇಂದ್ರಗಳಲ್ಲಿ ಸೋಂಕಿತರಿಗೆ ದುಬಾರಿ ಶುಲ್ಕ ವಿಧಿಸಲಾಗುತ್ತಿತ್ತು. ನಾನೇ ಖುದ್ದಾಗಿ ಅವುಗಳನ್ನು ಮುಚ್ಚಿಸಿ, ತನಿಖೆಗೆ ಆದೇಶಿಸಿದ್ದೆ’ ಎಂದು ರೋಹಿಣಿ ಸಿಂಧೂರಿ ಹೇಳಿದರು.

ಕರಾವಳಿಯಲ್ಲಿ ಮಳೆ ಚುರುಕು

ಪ್ರಜಾವಾಣಿ ವಾರ್ತೆ

ಕಾರವಾರ: ಮುಂಗಾರು ಮಾರುತದ ಪರಿಣಾಮ ಜಿಲ್ಲೆಯ ಕರಾವಳಿಯ ವಿವಿಧೆಡೆ ಬುಧವಾರ ಬೆಳಿಗ್ಗೆಯಿಂದ ಆಗಾಗ ಜೋರಾಗಿ ಮಳೆಯಾಗುತ್ತಿದೆ. ಕಾರವಾರದಲ್ಲಿ ಮಧ್ಯಾಹ್ನದವರೆಗೆ ಮೋಡ, ಬಿಸಿಲಿನ ವಾತಾವರಣವಿತ್ತು. ಸಂಜೆ ಮಳೆ ಬೀಳತೊಡಗಿತು.

ಇದೇ ರೀತಿ, ಅಂಕೋಲಾ, ಗೋಕರ್ಣ, ಕುಮಟಾ, ಭಟ್ಕಳದಲ್ಲೂ ಮಳೆಯಾಗಿದೆ. ಮಲೆನಾಡಿನ ತಾಲ್ಲೂಕುಗಳಾದ ಶಿರಸಿ, ಜೊಯಿಡಾ, ಸಿದ್ದಾಪುರ, ದಾಂಡೇಲಿ ಸುತ್ತಮುತ್ತ ತುಂತುರು ಹನಿಗಳು ಬಿದ್ದಿವೆ. ಆಗಾಗ ದಟ್ಟವಾದ ಮೋಡ ಕವಿದ ವಾತಾವರಣವಿತ್ತು.

ಮಂಗಳವಾರ ಬೆಳಿಗ್ಗೆ 8ರಿಂದ ಬುಧವಾರ ಬೆಳಿಗ್ಗೆ 8ರ ಅವಧಿಯಲ್ಲಿ ಕುಮಟಾದಲ್ಲಿ 3.5 ಸೆಂ.ಮೀ, ಕಾರವಾರದಲ್ಲಿ 2.5 ಸೆಂ.ಮೀ, ಹೊನ್ನಾವರದಲ್ಲಿ 1.9 ಸೆಂ.ಮೀ ಹಾಗೂ ಅಂಕೋಲಾದಲ್ಲಿ 1.6 ಸೆಂ.ಮೀ ಮಳೆಯಾಗಿದೆ.

ಮಡಿಕೇರಿ ವರದಿ: ಕೊಡಗು ಜಿಲ್ಲೆಯ ಮಡಿಕೇರಿ, ಕಾಟಕೇರಿ, ಮೇಕೇರಿ, ಭಾಗಮಂಡಲ, ತಲಕಾವೇರಿ ಭಾಗದಲ್ಲಿ ಉತ್ತಮ ಮಳೆಯಾಗಿದೆ

ಶಿವಮೊಗ್ಗ ವರದಿ: ಸಾಗರ ತಾಲ್ಲೂಕು ಕಾರ್ಗಲ್ ಜೋಗದಲ್ಲಿ ಧಾರಾಕಾರ ಮಳೆ ಸುರಿದಿದೆ. ಸೊರಬ, ಶಿಕಾರಿಪುರದಲ್ಲಿ ಉತ್ತಮ ಮಳೆಯಾಗಿದೆ. ಕೋಣಂದೂರು, ತೀರ್ಥಹಳ್ಳಿ ಭಾಗದ ಅಲ್ಲಲ್ಲಿ ತುಂತುರು ಮಳೆಯಾಗಿದೆ.

ದಾವಣಗೆರೆ ನಗರ, ಹೊನ್ನಾಳಿ ತಾಲ್ಲೂಕಿನಲ್ಲಿ ಸಾಧಾರಣ ಮಳೆಯಾಗಿದೆ. ವಿಜಯನಗರ ಜಿಲ್ಲೆಯ ಅರಸೀಕೆರೆ ಹೋಬಳಿ ವ್ಯಾಪ್ತಿಯಲ್ಲಿ ಬುಧವಾರ ಬಿರುಗಾಳಿ ಸಹಿತ ಉತ್ತಮ ಮಳೆಯಾಗಿದೆ.

ಬೀದರ್ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆ ಆಗಿದೆ.

ನಿಧನ ವಾರ್ತೆ

ಡಾ. ಎಂ.ಐ.ಸವದತ್ತಿ



ಧಾರವಾಡ: ಮಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಎಂ.ಐ.ಸವದತ್ತಿ (90) ಇಲ್ಲಿನ ನವೋದಯ ನಗರದಲ್ಲಿರುವ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಮೃತರ ಅಂತ್ಯಕ್ರಿಯೆ ಕರ್ನಾಟಕ ವಿಶ್ವವಿದ್ಯಾಲಯದ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು.

ಭೌತವಿಜ್ಞಾನ ವಿಭಾಗದ ಪ್ರಾಧ್ಯಾಪಕರಾಗಿದ್ದ ಡಾ. ಸವದತ್ತಿ ಅವರು ಕರ್ನಾಟಕ ಕಾಲೇಜು ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ, ಡೀನ್ ಹಾಗೂ ಸಿಂಡಿಕೇಟ್ ಸದಸ್ಯರಾಗಿದ್ದರು. ನಂತರ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಎರಡು ಅವಧಿಗೆ ಕುಲಪತಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಯುಜಿಸಿ ಸದಸ್ಯರಾಗಿ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಸಮಿತಿಯ ಸಂಸ್ಥಾಪಕ ಉಪಾಧ್ಯಕ್ಷರಾಗಿಯೂ ಡಾ. ಸವದತ್ತಿ ಅವರು ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿದ್ದರು.

ಕರ್ನಾಟಕ ವಿಶ್ವವಿದ್ಯಾಲಯದ ಭೌತವಿಜ್ಞಾನ ವಿಭಾಗದಲ್ಲಿ ಅತ್ಯಾಧುನಿಕ ಲೇಸರ್ ಪ್ರಯೋಗಾಲಯವನ್ನು ಪ್ರಾರಂಭಿಸಿದ್ದರು. ಅವರಿಗೆ ರಾಜ್ಯೋತ್ಸವ ಪ್ರಶಸ್ತಿ, ಸರ್ ಎಂ. ವಿಶ್ವೇಶ್ವರಯ್ಯ ಜೀವಮಾನ ಸಾಧನೆ ಪ್ರಶಸ್ತಿ ಸೇರಿದಂತೆ ಪ್ರಮುಖ ಪ್ರಶಸ್ತಿಗಳು ಸಂದಿವೆ.

ಕನ್ನಡದಲ್ಲಿ ಎಂಜಿನಿಯರಿಂಗ್: ವಿಟಿಯು ತಯಾರಿ

• ಎಂ. ಮಹೇಶ

ಬೆಳಗಾವಿ: ಎಂಜಿನಿಯರಿಂಗ್ ಶಿಕ್ಷಣವನ್ನು ಕನ್ನಡದಲ್ಲಿ ನೀಡುವುದಕ್ಕೆ ಅಗತ್ಯವಾದ ತಯಾರಿಯನ್ನು ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಆರಂಭಿಸಿದೆ.

ಎಲ್ಲವೂ ಅಂದುಕೊಂಡಂತೆ ನಡೆದರೆ ಇದೇ ಸಾಲಿನಲ್ಲಿ ಕನ್ನಡದ ವಿದ್ಯಾರ್ಥಿಗಳು ಮಾತೃಭಾಷೆಯಲ್ಲಿ ಎಂಜಿನಿಯರಿಂಗ್ ವ್ಯಾಸಂಗ ಮಾಡಬಹುದಾಗಿದೆ.

ಕನ್ನಡ ಸೇರಿದಂತೆ ಏಳು ಪ್ರಾದೇಶಿಕ ಭಾಷೆಗಳಲ್ಲಿ ಎಂಜಿನಿಯರಿಂಗ್ ಶಿಕ್ಷಣ ನೀಡುವಂತೆ ಎಐಸಿಟಿಇ (ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು) ಎಂಜಿನಿಯರಿಂಗ್ ಕಾಲೇಜುಗಳಿಗೆ ಸೂಚಿಸಿದೆ. 2021–22ನೇ ಸಾಲಿನಲ್ಲಿ ಕನ್ನಡ, ಹಿಂದಿ, ಬಂಗಾಳಿ, ತೆಲುಗು, ತಮಿಳು, ಗುಜರಾತಿ ಮತ್ತು ಮಲಯಾಳಂ ಭಾಷೆಗಳಲ್ಲಿ ವಿದ್ಯಾರ್ಥಿಗಳು ಕಲಿಯಬಹುದಾಗಿದೆ.

ಪ್ರತ್ಯೇಕ ವಿಭಾಗಕ್ಕೆ ಅವಕಾಶ: ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಪ್ರಕಾರ ಪ್ರಾದೇಶಿಕ ಭಾಷೆಗಳಲ್ಲಿ ಬೋಧನೆಗೆ ಅವಕಾಶ ಕಲ್ಪಿಸಲಾಗಿದೆ. ಈ ವಿಷಯದಲ್ಲಿ ಆಯಾ ಕಾಲೇಜುಗಳವರು ಕ್ರಮ ವಹಿಸಬೇಕು ಎಂದು ಎಐಸಿಟಿಇ ಸೂಚಿಸಿದೆ. ಕನ್ನಡದಲ್ಲಿ ಓದಲು ಬಯಸುವ 30 ಅಥವಾ 60 ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿಭಾಗ ಮಾಡುವುದಕ್ಕೂ ಅವಕಾಶವಿದೆ.



ಎಂಜಿನಿಯರಿಂಗ್ ಶಿಕ್ಷಣವನ್ನು ಕನ್ನಡದಲ್ಲಿ ನೀಡುವುದರಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಆತ್ಮವಿಶ್ವಾಸವೂ ಬೆಳೆಯಲಿದೆ

ಪ್ರೊ.ಎ.ಎಸ್. ದೇಶಪಾಂಡೆ,
ಕುಲಸಚಿವ, ವಿಟಿಯು

ಕನ್ನಡದ ಪಠ್ಯ ಪರಿಕರಗಳಿಗಾಗಿ ವಿಟಿಯು ಕುಲಪತಿ ಪ್ರೊ.ಕರಿಸಿದ್ದಪ್ಪ ಅವರ ಅಧ್ಯಕ್ಷತೆಯಲ್ಲಿ ‘ಕನ್ನಡ ತಾಂತ್ರಿಕ ಪುಸ್ತಕ ಪ್ರಕಟಣಾ ಸಮಿತಿ’ ರಚಿಸಲಾಗಿದೆ.

ತಾಂತ್ರಿಕ ಪುಸ್ತಕಗಳನ್ನು ಸಿದ್ಧಪಡಿಸಲು ಎಐಸಿಟಿಇ ವಿಟಿಯುಗೆ ಜವಾಬ್ದಾರಿ ನೀಡಿದೆ. ‘ಕನ್ನಡ ತಾಂತ್ರಿಕ ಪುಸ್ತಕ ಪ್ರಕಟಣಾ ಸಮಿತಿ’ಯಿಂದ ಸದ್ಯಕ್ಕೆ ಮೊದಲನೇ ಸೆಮಿಸ್ಟರ್‌ಗೆ ಬೇಕಾಗುವ ಪುಸ್ತಕಗಳನ್ನು ಅನುವಾದಿಸಲು ಅನುವಾದಕರು, ವಿಜ್ಞಾನ ಬರಹಗಾರರಿಂದ ಅರ್ಜಿ ಆಹ್ವಾನಿಸಲಾಗಿತ್ತು. ಕೆಲವು ಹೆಸರುಗಳನ್ನು ಅಂತಿಮಗೊಳಿಸಿ ಅನುಮೋದನೆಗಾಗಿ ಎಐಸಿಟಿಇಗೆ ಕಳುಹಿಸಲಾಗಿದೆ. ಅನುಮೋದನೆ ಸಿಕ್ಕ ಕೂಡಲೇ ಅನುವಾದ ಕಾರ್ಯ ಆರಂಭವಾಗಲಿದೆ ಎಂದು ವಿಟಿಯು ಮೂಲಗಳು ತಿಳಿಸಿವೆ.

ಕನ್ನಡಕ್ಕೆ ಅನುವಾದಿಸಲು: ಎಐಸಿಟಿಇ ಮತ್ತು ವಿಟಿಯು ಪಠ್ಯಕ್ರಮಗಳನ್ನು ಪ್ರತ್ಯೇಕವಾಗಿ ಕನ್ನಡಕ್ಕೆ ಅನುವಾದಿಸುವ ಕಾರ್ಯ ನಡೆಯಬೇಕಾಗಿದೆ. ಇದರೊಂದಿಗೆ ‘ಕನ್ನಡ ತಾಂತ್ರಿಕ ಶಬ್ದಕೋಶ’ ರಚನೆಗೂ ನಿರ್ಧರಿಸಲಾಗಿದೆ. ಶಬ್ದಗಳ ಅನುವಾದಕ್ಕೆ ಆಯಾ ಬ್ರಾಂಚ್‌ವಾರು ಉಪ ಸಮಿತಿಗಳನ್ನು ರಚಿಸಲಾಗಿದೆ. ‘ಎಲ್ಲ ತಾಂತ್ರಿಕ ಶಬ್ದಗಳನ್ನೂ ಕನ್ನಡದಲ್ಲಿ ಅನುವಾದಿಸಲಾಗದು; ಅಂಥವನ್ನು ಇಂಗ್ಲಿಷ್‌ನಲ್ಲೇ ಉಳಿಸಿ ಅದಕ್ಕೆ ವಿವರಣೆಯನ್ನು ಕನ್ನಡದಲ್ಲಿ ನೀಡಬೇಕು’ ಎಂದು ಎಐಸಿಟಿಇ ಸೂಚಿಸಿದೆ.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಕುಲಸಚಿವ ಪ್ರೊ.ಎ.ಎಸ್. ದೇಶಪಾಂಡೆ, ‘ಎಐಸಿಟಿಇ ಸೂಚನೆ ಪ್ರಕಾರ ತಯಾರಿ ಮಾಡಿಕೊಳ್ಳುತ್ತಿದ್ದೇವೆ. ಕಾಲೇಜುಗಳು ಪ್ರಸ್ತಾವ ಸಲ್ಲಿಸಿದರೆ ಅನುಮೋದನೆ ನೀಡುತ್ತೇವೆ. ಇದಕ್ಕೆ ಪೂರಕವಾಗಿ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ರೂಪಿಸಲು ತಜ್ಞರನ್ನು ಗುರುತಿಸಲಾಗಿದೆ. ವಿಷಯವಾರು ಪುಸ್ತಕಗಳನ್ನು ಸಿದ್ಧಪಡಿಸಲಾಗುವುದು. ಮೊದಲನೇ ಸೆಮಿಸ್ಟರ್ ಪುಸ್ತಕಗಳು ಸಿದ್ಧಗೊಂಡ ನಂತರ ಮುಂದಿನ ಸೆಮಿಸ್ಟರ್ ಪುಸ್ತಕಗಳ ಅನುವಾದ ಶುರುವಾಗಲಿದೆ’ ಎಂದು ತಿಳಿಸಿದರು.

‘ಯಡಿಯೂರಪ್ಪ ವಿರುದ್ಧ ಎತ್ತಿಕಟ್ಟಿದ್ದು ಮರೆತುಹೋಯ್ತಾ?’

ಹೊನ್ನಾಳಿ: ‘ನನ್ನ ಬಳಿ ಇರುವುದು ಯಾವುದೋ ಕಾಮಗಾರಿಗಳಿಗೆ ಸಹಿ ಮಾಡಿಸಿದ ಪತ್ರವಲ್ಲ. ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿ ಮುಂದುವರಿಯುವಂತೆ 65ಕ್ಕೂ ಹೆಚ್ಚು ಶಾಸಕರು ಸಹಿ ಮಾಡಿದ ಪತ್ರ. ನನ್ನನ್ನು ಯಡಿಯೂರಪ್ಪನವರ ವಿರುದ್ಧ ಎತ್ತಿಕಟ್ಟಿದ್ದು ಮರೆತು ಹೋಯ್ತಾ’ ಎಂದು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಅವರು ಸಚಿವ ಈಶ್ವರಪ್ಪ ವಿರುದ್ಧ ಹರಿಹಾಯ್ದರು.

ತಾಲ್ಲೂಕಿನ ಅರಬಗಟ್ಟೆಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನನ್ನದು ಹುಲಿವೇಷ ಎಂದು ವಿನಾಕಾರಣ ನನ್ನ ಹೆಸರನ್ನು ತಂದು ಸಹಿ ಸಂಗ್ರಹದ ಕುರಿತು ಮಾತನಾಡಿದ್ದೀರಿ. ಚುನಾವಣಾ ಪೂರ್ವದಲ್ಲಿ ನೀವು ಏನು ಮಾಡಿದ್ದೀರಿ ಎಂದು ನನಗೆ ಗೊತ್ತಿದೆ. ನೀವು ರಾಜ್ಯಪಾಲರಿಗೆ ಪತ್ರ ಬರೆದಿದ್ದಿರಲ್ಲ, ಅದು ಯಾವ ಕಾರಣಕ್ಕಾಗಿ. ನಾವು ಏನಾದರೂ ಮಾತನಾಡಿದರೆ ವರಿಷ್ಠರು ಸಹಿಸೋಲ್ಲ ಎಂದು ಹೇಳಿದ್ದೀರಿ. ನಮಗೊಂದು ನ್ಯಾಯ, ನಿಮಗೊಂದು ನ್ಯಾಯವಾ’ ಎಂದು ಪ್ರಶ್ನಿಸಿದರು.

ಅನಾಹುತದ ಬಳಿಕ ಎಚ್ಚೆತ್ತ ಅರಣ್ಯ ಇಲಾಖೆ

ಗಜಗಿರಿ: 800 ಇಂಗುಗುಂಡಿ ಮುಚ್ಚಿದ ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಮಡಿಕೇರಿ/ನಾಪೋಕ್ಲು: ಮುಂಗಾರು ಆರಂಭವಾಗುತ್ತಿದ್ದಂತೆಯೇ ಕೊಡಗು ಜಿಲ್ಲಾಡಳಿತವು ಮಳೆಯ ಅನಾಹುತ ತಪ್ಪಿಸಲು ಹಲವು ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದು, ತಲಕಾವೇರಿಯ ಗಜಗಿರಿಯಲ್ಲಿ ತೆಗೆದಿದ್ದ ಸುಮಾರು 800 ಇಂಗುಗುಂಡಿಗಳನ್ನು ಮುಚ್ಚಿಸಿದೆ.

ಕಳೆದ ವರ್ಷದ ಆಗಸ್ಟ್ 6ರಂದು ತಲಕಾವೇರಿಯ ಗಜಗಿರಿ ಕುಸಿತದಿಂದ, ಪ್ರಧಾನ ಅರ್ಚಕ ನಾರಾಯಣ ಆಚಾರ್ ಸೇರಿ ಐವರು ಭೂಸಮಾಧಿ ಆಗಿದ್ದರು. ಬೆಟ್ಟ ಕುಸಿಯಲು ಗಜಗಿರಿ ಬೆಟ್ಟದಲ್ಲಿ ತೆಗೆದಿದ್ದ ಇಂಗುಗುಂಡಿಗಳೇ ಕಾರಣವೆಂದು ತಜ್ಞರು ವರದಿ ನೀಡಿದ್ದರು. ಮಳೆಗಾಲದಲ್ಲಿ ನೀರು ಒಳಕ್ಕೆ ಇಳಿದು ಬೆಟ್ಟವು ಸಡಿಲಗೊಂಡು, ಅತಿಯಾದ ಮಳೆಯಿಂದ ಒತ್ತಡ ಉಂಟಾಗಿ ಭೂಕುಸಿತವಾಗಿದೆ ಎಂದು ತಜ್ಞರೂ 16 ಪುಟಗಳ ವರದಿ ಸಲ್ಲಿಸಿದ್ದರು.

ತಜ್ಞರಾದ ಕಪಿಲ್ ಸಿಂಗ್ ಹಾಗೂ ಕಮಲ್ ಕುಮಾರ್ ಅವರು ತಲಕಾವೇರಿಗೆ ಭೇಟಿ ನೀಡಿ ಅಧ್ಯಯನ ನಡೆಸಿದ್ದರು. ಬೆಟ್ಟದ ಮೇಲೆ ಉಂಟಾದ ಬಿರುಕು, ಅವೈಜ್ಞಾನಿಕ ರಸ್ತೆ ನಿರ್ಮಾಣ ಹಾಗೂ ಅನಗತ್ಯ ಮಾನವ ಹಸ್ತಕ್ಷೇಪ, ಅಧಿಕ ಮಳೆಯಿಂದ ಭೂಕುಸಿತವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದ್ದರು. 2015-16 ಹಾಗೂ 2016–17ನೇ ಸಾಲಿನಲ್ಲಿ ನಿರ್ಮಿಸಿದ್ದ ಇಂಗುಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚುವಂತೆ ಭಾಗಮಂಡಲದಲ್ಲಿ ಈ ಹಿಂದೆ ನಡೆದಿದ್ದ ಸಭೆಯಲ್ಲೂ ನಿರ್ಣಯ ಕೈಗೊಳ್ಳಲಾಗಿತ್ತು.

ಅನಾಹುತದ ಬಳಿಕ ಅರಣ್ಯ ಇಲಾಖೆ ಎಚ್ಚೆತ್ತುಗೊಂಡಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿ ಎಸ್. ಪ್ರಭಾಕರನ್ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ದಯಾನಂದ ಮಾರ್ಗದರ್ಶನದಲ್ಲಿ ಬ್ರಹ್ಮಗಿರಿ ಹಾಗೂ ಗಜಗಿರಿ ಬೆಟ್ಟದಲ್ಲಿದ್ದ 800 ಇಂಗುಗುಂಡಿಗಳನ್ನು ಕಾರ್ಮಿಕರ ಸಹಾಯದಿಂದ ಮುಚ್ಚಿಸಲಾಗಿದೆ.

ಮುಖ್ಯಾಂಶಗಳು

- ಭೂಕುಸಿತ ತಡೆಗಟ್ಟಲು ಹಣ್ಣಿನ ಗಿಡ ನೆಡುವ ಕಾರ್ಯ
- 10 ಕೆ.ಜಿ ಬಿದಿರು ಬೀಜ ನಾಟಿ
- ಅನಾಹುತದ ಬಳಿಕ ಎಚ್ಚೆತ್ತಿದ್ದ ಜಿಲ್ಲಾಡಳಿತ



ತಲಕಾವೇರಿಯ ಗಜಗಿರಿ ಬೆಟ್ಟದಲ್ಲಿ ಇಂಗುಗುಂಡಿಗಳನ್ನು ಮುಚ್ಚಿ ಗಿಡಗಳನ್ನು ನೆಡಲಾಯಿತು

‘ಭೂಕುಸಿತ ತಡೆಗಟ್ಟಲು ಹಣ್ಣಿನ ಗಿಡಗಳನ್ನು ನೆಟ್ಟು ಹುಲ್ಲಿನ ಬೀಜಗಳನ್ನು ಬಿತ್ತಲಾಗಿದೆ. ಬ್ರಹ್ಮಗಿರಿ ಬೆಟ್ಟದಲ್ಲಿ ನೈಸರ್ಗಿಕವಾಗಿ ಬರುವಂತಹ ಆಮೆ, ಸೀಬೆ ಮುಂತಾದ ಜಾತಿಯ ಮರಗಳ ಬೀಜಗಳನ್ನು ಸಂಗ್ರಹಿಸಿ, ನಾಟಿ ಮಾಡಲಾಗಿದೆ. ವೆಟ್ರಿವೇರ ಜಾತಿಯ ಹುಲ್ಲನ್ನು ನಾಟಿ ಮಾಡಲಾಗಿದೆ. ಹಸಿರೀಕರಣ ಹೆಚ್ಚಿಸಲು ನೇರಳೆ, ಸೀಬೆ ಗಿಡಗಳ ಜೊತೆಗೆ ಬಿದಿರನ್ನೂ ನಾಟಿ ಮಾಡಲಾಗಿದೆ’ ಎಂದು ಭಾಗಮಂಡಲದ ವಲಯ ಅರಣ್ಯಾಧಿಕಾರಿ ಎಚ್.ಜಿ.ದೇವರಾಜು ತಿಳಿಸಿದ್ದಾರೆ.

ಜಿಲ್ಲೆಗೆ ಮುಂಗಾರು ಪ್ರವೇಶಿಸಿದ್ದು ಎನ್‌ಡಿಆರ್‌ಎಫ್ ಸಹ ಜಿಲ್ಲೆಯಲ್ಲೇ ಬೀಡುಬಿಟ್ಟಿದೆ. ತಲಕಾವೇರಿ, ಭಾಗಮಂಡಲ ಹಾಗೂ ಚೇರಂಗಾಲದ ಭೂಕುಸಿತ ಸ್ಥಳಕ್ಕೆ ರಕ್ಷಣಾ ತಂಡವು ಭೇಟಿ ನೀಡಿ ಪರಿಶೀಲಿಸಿದೆ.

ಪ್ರಜಾವಾಣಿ ಗುರುವಾರ, 10 ಜೂನ್ 2021

ಸ್ಪರ್ಧಾ ವಾಣಿ



ಅಧ್ಯಯನ ಸಾಮಗ್ರಿ ಆಯ್ಕೆಗಿರಲಿ ಆದ್ಯತೆ

ಮೂಲತಃ ಬೆಳಗಾವಿ ಜಿಲ್ಲೆ, ರಾಯಬಾಗ್ ತಾಲ್ಲೂಕಿನ ಖನದಾಳ ಗ್ರಾಮದವರಾದ ರಾಘವೇಂದ್ರ ಜಗಲಾಸರ, ಕೆ.ಎ.ಎಸ್ ಅಧಿಕಾರಿಯಾಗಿದ್ದು, ಉಪವಿಭಾಗಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಪ್ರಸ್ತುತ ಧಾರವಾಡ ಜಿಲ್ಲೆ ಕುಂದಗೋಳದಲ್ಲಿ ಪ್ರೊಬೇಷನರಿ ತಹಶೀಲ್ದಾರ್ ಆಗಿ ಸೇವೆಯಲ್ಲಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸುವ ನಿಟ್ಟನಲ್ಲಿ ಪ್ರಯತ್ನ ಯಾವ ರೀತಿ ಆಗಿರಬೇಕು ಎನ್ನುವ ಕುರಿತು ಅವರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.



ರಾಘವೇಂದ್ರ

ಸಂದರ್ಶನ: ಚನ್ನಬಸಪ್ಪ ರೊಟ್ಟಿ

- **ಶೈಕ್ಷಣಿಕ ಜೀವನ ಹೇಗಿತ್ತು?**

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಓದಿದ್ದು, ಸೇಂಟ್ ಫಾಲ್ಸ್ ಶಾಲೆ- ಬೆಳಗಾವಿ. ಪಿಯು ವಿಜ್ಞಾನ ಓದಿದ್ದು ಬೆಳಗಾವಿಯ ಆರ್.ಎಲ್. ಪಿಯು ಕಾಲೇಜಿನಲ್ಲಿ. ಎಂಜಿನಿಯರಿಂಗ್ ಪದವಿ ಓದಿದ್ದು- ಆರ್.ವಿ.ಸಿ.ಇ, ಬೆಂಗಳೂರು. ಎಂಜಿನಿಯರಿಂಗ್ ನಂತರ 'ಗೇಟ್' ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಾಸಾಗಿ, 'ಸೆಂಟ್ರಲ್ ಪವರ್ ರಿಸರ್ಚ್ ಇನ್‌ಸ್ಟಿಟ್ಯೂಟ್' ನಲ್ಲಿ ಪ್ರಾಜೆಕ್ಟ್ ಎಂಜಿನಿಯರ್ ಆಗಿ ಕೆಲಸಕ್ಕೆ ಸೇರಿದೆ. ನಂತರ ಎಂ.ಟೆಕ್. ಅಧ್ಯಯನ ಮಾಡಿದೆ.

- **ಸ್ಪರ್ಧಾತ್ಮಕ ಪರೀಕ್ಷೆಗಳತ್ತ ಒಲವು ಬೆಳೆದಿದ್ದು ಹೇಗೆ?**

ಎಂಜಿನಿಯರಿಂಗ್ ಓದುವಾಗಿನಿಂದಲೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಆಸಕ್ತಿ ಇತ್ತು. ನಮ್ಮ ಅಣ್ಣ ಲೋಕೇಶ್ (ಪ್ರಸ್ತುತ ಬಾಗಲಕೋಟೆ ಎಸ್ಪಿ) ಯು.ಪಿ.ಎಸ್.ಸಿ ಪರೀಕ್ಷೆ ಪಾಸಾದ ನಂತರ ನನಗೂ ನಾಗರಿಕ ಸೇವಾ ಪರೀಕ್ಷೆಗಳತ್ತ ಒಲವು ಮೂಡಿತು. ನಂತರ ಐಎಎಸ್, ಕೆಎಎಸ್ ಅಧ್ಯಯನ ಆರಂಭಿಸಿದೆ. ಇದಕ್ಕೆ ಪೋಷಕರಿಂದಲೂ ಪ್ರೋತ್ಸಾಹ ಸಿಕ್ಕಿತು.

- **ಸ್ಪರ್ಧಾತ್ಮಕ ಪರೀಕ್ಷಾ ತಯಾರಿ ಹೇಗಿತ್ತು?**

ನಾನು ಎದುರಿಸಬೇಕಾದ ಪರೀಕ್ಷೆಯ ಪಠ್ಯಕ್ರಮಕ್ಕೆ ಅನುಗುಣವಾಗಿ ಅಧ್ಯಯನ ಮಾಡುತ್ತಿದ್ದೆ. ಅಣ್ಣನೂ ಸೇರಿದಂತೆ ಹಲವು ಸಾಧಕರ ಜೊತೆ ಸಮಾಲೋಚನೆ ನಡೆಸಿ, ಅವರು ನೀಡಿದ ಸಲಹೆಯಂತೆ ಸುದ್ದಿಪತ್ರಿಕೆಗಳನ್ನು ಓದಿದೆ. ವಿಷಯ ವಿಶ್ಲೇಷಣೆ ಮಾಡುವುದು ಹೇಗೆ ಎಂಬುದನ್ನು ತಿಳಿದುಕೊಂಡೆ.

- **ನಿಮ್ಮ ಓದುವ ವೇಳಾಪಟ್ಟಿ ಹೇಗಿತ್ತು?**

ಬೆಂಗಳೂರಿನ 24 X 7 ಸೌಲಭ್ಯವಿರುವ ಗ್ರಂಥಾಲಯದಲ್ಲಿ ಓದುತ್ತಿದ್ದೆ. ಬೆಳಿಗ್ಗೆ 9 ರಿಂದ ಗ್ರಂಥಾಲಯದಲ್ಲಿ ಓದುತ್ತ ಕುಳಿತರೆ ಮಧ್ಯಾಹ್ನ 1.30 ರವರೆಗೆ ನಿರಂತರವಾಗಿ ಓದುತ್ತಿದ್ದೆ. ಈ ವೇಳೆಯಲ್ಲಿ ನನ್ನ ಓದು ಪೂರ್ವಭಾವಿ ಪರೀಕ್ಷೆಗೆ ಕೇಂದ್ರೀಕೃತವಾಗಿರುತ್ತಿತ್ತು. ನಂತರ ಮಧ್ಯಾಹ್ನ 2.30 ರಿಂದ 5.30 ರವರೆಗೆ ಮುಖ್ಯ ಪರೀಕ್ಷೆಗಾಗಿ ಓದುತ್ತಿದ್ದೆ. ಸಂಜೆ 6 ರಿಂದ ರಾತ್ರಿ 9 ರವರೆಗೆ ಹಿಂದಿನ ಪ್ರಶ್ನೆಪತ್ರಿಕೆಗಳನ್ನು, ಸ್ಪರ್ಧಾತ್ಮಕ ನಿಯತಕಾಲಿಕೆಗಳನ್ನು ಅವಲೋಕಿಸುತ್ತಿದ್ದೆ. ಓದುತ್ತಿರುವಾಗಲೇ ಲ್ಯಾಪ್‌ಟಾಪ್‌ನಲ್ಲಿ ನೋಟ್ಸ್ ಮಾಡಿಕೊಳ್ಳುತ್ತಿದ್ದೆ. ರಾತ್ರಿ 9.30 ರಿಂದ 1.30 ರವರೆಗೆ ಬರವಣಿಗೆ ಕೌಶಲ ವೃದ್ಧಿಗೆ ಆದ್ಯತೆ ನೀಡುತ್ತಿದ್ದೆ. ರೂಢಿಗಾಗಿ 3500 ಕ್ಕೂ ಹೆಚ್ಚು ಪ್ರಬಂಧ ಮಾದರಿಯ ಪ್ರಶ್ನೆಗಳಿಗೆ ನಾನು ಉತ್ತರ ಬರೆದಿರುವೆ. 70 ಕ್ಕೂ ಹೆಚ್ಚು ಪ್ರಬಂಧಗಳನ್ನು ಬರೆದು ರೂಢಿಸಿಕೊಂಡಿರುವೆ. ಈ ಮಾದರಿಯಲ್ಲಿ 5 ವರ್ಷ ನಿರಂತರವಾಗಿ ಸಿದ್ಧತೆ ಮಾಡಿಕೊಂಡೆ. ಯಾವುದೇ ಕೋಚಿಂಗ್ ಪಡೆಯಲಿಲ್ಲ.

- **ವೃತ್ತಿ ಜೀವನ ಆರಂಭಿಸಿದ್ದು ಯಾವ ಹುದ್ದೆಯಿಂದ?**

ನಾನು ಆರಂಭಿಕವಾಗಿ ಕೆ.ಪಿ.ಟಿ.ಸಿ.ಎಲ್ ಪರೀಕ್ಷೆಗಳನ್ನು ಎದುರಿಸಿದೆ. ಅಲ್ಲಿ ನಿರೀಕ್ಷಿತ ಯಶಸ್ಸು ಸಿಗಲಿಲ್ಲ. ನಂತರ 2016 ರಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನಿರೀಕ್ಷಕ ಹುದ್ದೆಗೆ ಆಯ್ಕೆಯಾದೆ. ಈ ಹುದ್ದೆಯಲ್ಲಿ ಎರಡೂವರೆ ವರ್ಷ ಸೇವೆ ಸಲ್ಲಿಸಿದೆ. ಇಲ್ಲಿದ್ದುಕೊಂಡೇ 2017 ರಲ್ಲಿ ಕೆ.ಎ.ಎಸ್ ಪರೀಕ್ಷೆ ಎದುರಿಸಿದೆ. ಅದರಲ್ಲಿ ಮೇನ್ಸ್ ಪಾಸಾಗಲಿಲ್ಲ. ಅದೇ ವರ್ಷ ಯು.ಪಿ.ಎಸ್.ಸಿ ಪರೀಕ್ಷೆ ಬರೆದು ಸಂದರ್ಶನಕ್ಕೂ ಹಾಜರಾದೆ. ನಂತರ 2019 ರಲ್ಲೂ ಮತ್ತೊಮ್ಮೆ ಯು.ಪಿ.ಎಸ್.ಸಿ ಸಂದರ್ಶನ ಎದುರಿಸಿದೆ. 2019 ಡಿಸೆಂಬರ್‌ನಲ್ಲಿ 2 ನೇ ಪ್ರಯತ್ನದಲ್ಲಿ ಕೆ.ಎ.ಎಸ್ ಪರೀಕ್ಷೆಯಲ್ಲಿ ಯಶ ಕಂಡು ಕಂದಾಯ ಇಲಾಖೆಯಲ್ಲಿ ಉಪವಿಭಾಗಾಧಿಕಾರಿ ಹುದ್ದೆ ಗಿಟ್ಟಿಸಿಕೊಂಡೆ.

- **ಸ್ಪರ್ಧಾರ್ಥಿಗಳಿಗೆ ನಿಮ್ಮ ಕಿವಿ ಮಾತೇನು?**

ನಿಮ್ಮ ಆಂತರಿಕ ಪ್ರೇರಣೆಯೇ ಯಶಸ್ಸಿನ ಮೂಲ. ಓದುವವರ ಸಾಂಗತ್ಯದಲ್ಲಿದ್ದರೆ ಲಾಭ ಹೆಚ್ಚು. ಪ್ರತಿ ವಿಷಯಕ್ಕೂ ಅದರದ್ದೇ ಆದ ಪ್ರಮಾಣೀಕೃತ ಆಕರ ಪುಸ್ತಕಗಳಿವೆ. ಅವುಗಳನ್ನು ತಪ್ಪದೇ ಓದಬೇಕು. ನಿಮಗೆ ನಿಖರ ಗುರಿ ಇರಬೇಕು. ಆ ಗುರಿ ಮಟ್ಟಲು ನಿಖರ ಓದಿನ ದಾರಿಯಲ್ಲಿ ಸಾಗುತ್ತಿದ್ದೇನೆ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಅಧ್ಯಯನ ಸಾಮಗ್ರಿಗಳ ಆಯ್ಕೆಯಲ್ಲಿ ವಿವೇಚನೆ ಇರಬೇಕು. ಲಘು ವ್ಯಾಯಾಮ, ಧ್ಯಾನ, ಲಘು ಊಟ-ಉಪಾಹಾರ ರೂಢಿಸಿಕೊಳ್ಳಬೇಕು.

ಪರೀಕ್ಷೆ ಮುಂದೂಡಿದರೂ ಸಿದ್ಧತೆ ಮುಂದೂಡದಿರಿ

ಅರುಣ ಬ. ಚೂರಿ

ಭಾರತೀಯ ಸ್ಟೇಟ್ ಬ್ಯಾಂಕ್‌ನ ನೇಮಕಾತಿ ಮತ್ತು ಭರ್ತಿ ಇಲಾಖೆಯು ಏಪ್ರಿಲ್ ತಿಂಗಳಿನಲ್ಲಿ ಎಸ್‌ಬಿಐ ಕ್ಲರ್ಕ್ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿ ಪ್ರತಿವರ್ಷದಂತೆ ಈ ವರ್ಷವೂ ಕೂಡ ತಾತ್ಕಾಲಿಕ ವೇಳಾ ಪಟ್ಟಿಯನ್ನು ಬಿಡುಗಡೆಗೊಳಿಸಿತ್ತು. ಆದರೆ ದೇಶದಾದ್ಯಂತ ಹೆಚ್ಚುತ್ತಿರುವ ಕೋವಿಡ್‌ನಿಂದಾಗಿ ಪರೀಕ್ಷೆಯನ್ನು ಮುಂದೂಡಿರುವುದು ಈಗಾಗಲೇ ಗೊತ್ತಿರಬಹುದು.

ಮೇ 31ರ ಅಧಿಸೂಚನೆಯ ಪ್ರಕಾರ, ಎಸ್‌ಬಿಐ ಕ್ಲರ್ಕ್ ಪ್ರಿಲಿಮ್ಸ್ ಪರೀಕ್ಷೆಯನ್ನು ಮುಂದಿನ ಅಧಿಸೂಚನೆಯವರೆಗೂ ಮುಂದೂಡಿರುವುದಾಗಿ ತಿಳಿಸಿದ್ದಾರೆ. ಹಾಗಾಗಿ ಕೋವಿಡ್ ನಿಯಂತ್ರಣಕ್ಕೆ ಬಂದು ಪರೀಕ್ಷೆ ನಡೆಸಬಹುದು ಎಂಬ ವರದಿ ಕೈಸೇರಿದ ಯಾವುದೇ ದಿನದಲ್ಲಾದರೂ ಮುಂದಿನ ಅಧಿಸೂಚನೆ ಹೊರಬೀಳಬಹುದು. ಆದರೆ ಸ್ಪರ್ಧಾರ್ಥಿಗಳು ತಾವು ನಡೆಸುತ್ತಿರುವ ಪರೀಕ್ಷಾ ತಯಾರಿಗೆ ಅಲ್ಪವಿರಾಮ ಹಾಕುವುದು ಸರಿಯಲ್ಲ.

ಪರೀಕ್ಷೆಯನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಿದಾಗ ಬಹುತೇಕ ಸ್ಪರ್ಧಾರ್ಥಿಗಳು ಪರೀಕ್ಷೆಯ ತಯಾರಿಯ ಬಗ್ಗೆ ಗಂಭೀರತೆಯನ್ನು ಕಳೆದುಕೊಳ್ಳುವುದು ಸಾಮಾನ್ಯ. ತಮ್ಮ ನಿಗದಿತ ವೇಳಾಪಟ್ಟಿ ಅನುಸಾರ ಅಭ್ಯಾಸಿಸದೆ ಇನ್ನೂ ಹೆಚ್ಚಿನ ಕಾಲಾವಧಿ ಇದೆ ಎಂದು ನಿರ್ಲಕ್ಷ್ಯ ವಹಿಸುತ್ತಾರೆ. ಸ್ಪರ್ಧಾರ್ಥಿ ಎಷ್ಟೇ ಬುದ್ಧಿವಂತನಾಗಿದ್ದರೂ ಸಹ ನಿರಂತರ ಅಭ್ಯಾಸಕ್ಕೆ ತಡೆ ಹಾಕಿದಾಗ ಅಥವಾ ನಿರ್ಲಕ್ಷ್ಯ ವಹಿಸಿದಾಗ ಯಶಸ್ಸು ಅಸಾಧ್ಯ.

ತಯಾರಿ ಪೂರ್ಣಗೊಳ್ಳದ, ಉದ್ಯೋಗದ ಜೊತೆಗೆ ಸಿದ್ಧತೆಯಲ್ಲಿರುವ ಅಥವಾ ಮನೆಯಿಂದಲೇ ಕಚೇರಿ ಕೆಲಸ ಮಾಡುವ ಅಭ್ಯರ್ಥಿಗಳಿಗೆ ಇದು ಉತ್ತಮ ಅವಕಾಶ ಎನ್ನಬಹುದು. ಪ್ರಥಮ ಬಾರಿಗೆ ಪರೀಕ್ಷೆಯನ್ನು ಎದುರಿಸುತ್ತಿರುವ, ತಮಗೆ ಕಷ್ಟ ಅಥವಾ ಗ್ರಹಿಸಲು ಹೆಚ್ಚು ಸಮಯ ಬೇಕು ಎಂದು ಕೆಲವೊಂದು ವಿಷಯಗಳನ್ನು ಓದದೆ ಕೈಬಿಟ್ಟ ಸ್ಪರ್ಧಾರ್ಥಿಗಳಿಗೆ ತಯಾರಿಗಾಗಿ ಇದು ಉತ್ತಮ ಕಾಲಾವಕಾಶ. ಹಾಗೆಯೇ ಉದ್ಯೋಗದೊಂದಿಗೆ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಸ್ಪರ್ಧಾರ್ಥಿಗಳಿಗೆ ನಿಖರತೆಯೊಂದಿಗೆ ವೇಗವನ್ನು ಹೆಚ್ಚಿಸಿಕೊಳ್ಳಲು ಅಗತ್ಯವಾದದ್ದು ಅಭ್ಯಾಸ. ಈ ಅವಶ್ಯಕತೆಯನ್ನು ಪೂರ್ಣಗೊಳಿಸಲು ಈ ತರಹದ ಸ್ಪರ್ಧಾರ್ಥಿಗಳಿಗೆ ಇದೊಂದು ಉತ್ತಮ ಅವಕಾಶ.




ಪ್ರಿಲಿಮ್ಸ್ ಅಧ್ಯಯನದ ಜೊತೆಗೆ ಮೇನ್ಸ್ ಅಧ್ಯಯನ

ಪ್ರಿಲಿಮ್ಸ್ ಪರೀಕ್ಷೆಗೆ ಸಾಕಷ್ಟು ಸಮಯ ದೊರೆತಿದೆ. ಹಾಗಾಗಿ ಪರೀಕ್ಷೆಯು ಕ್ಲಿಷ್ಟತೆಯಿಂದ ಕೂಡಿರಲಿದೆ ಎಂದು ಅಂದಾಜಿಸುವುದು ಸರಿಯಲ್ಲ.

ಯಾವುದೇ ಸ್ಪರ್ಧಾರ್ಥಿಯಾಗಿರಲಿ, ಸತತವಾಗಿ ಅಧ್ಯಯನ ನಡೆಸಿದರೆ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ ಯಶಸ್ವಿಯಾಗುವುದು ಕಷ್ಟವೇನಲ್ಲ. ಹಾಗೆಂದ ಮಾತ್ರಕ್ಕೆ ಹೆಚ್ಚುವರಿಯಾಗಿ ದೊರೆತ ಈ ಸಮಯವನ್ನು ಕೇವಲ ಪ್ರಿಲಿಮ್ಸ್ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸುವ ಗುರಿಗಾಗಿ ಮೀಸಲಿಡದಿರಿ, ಕಾರಣ ಇದು ಕೇವಲ ಅರ್ಹತಾ ಪರೀಕ್ಷೆ. ಆದ್ದರಿಂದ ನೀವು ಮೇನ್ಸ್ ಪರೀಕ್ಷೆಗೆ ಈಗಿನಿಂದಲೇ ಸೂಕ್ತ ತಯಾರಿ ನಡೆಸಬೇಕು. ಅತಿಮುಖ್ಯವಾಗಿ ಜನರಲ್ ಅವೇರ್‌ನೆಸ್/ ಫೈನಾನ್ಶಿಯಲ್ ಅವೇರ್‌ನೆಸ್ ವಿಭಾಗದಂತಹ ಹೆಚ್ಚು ಅಂಕ ಗಳಿಕೆಗೆ ಅವಕಾಶವಿರುವಂತಹ ವಿಷಯಗಳನ್ನು ಪ್ರತಿನಿತ್ಯ ಅಭ್ಯಾಸಿಸಿ ವಾರಕ್ಕೊಮ್ಮೆ ಪುನರಾವರ್ತಿಸಿ.

ಪರೀಕ್ಷಾ ತಂತ್ರ ನವೀಕರಿಸಿಕೊಳ್ಳಿ

ನಿಮಗೆ ಕ್ಲಿಷ್ಟ ಎನಿಸಿದ ಅಥವಾ ಹೆಚ್ಚಿನ ಸಮಯ ಅಧ್ಯಯನಕ್ಕೆ ಅವಶ್ಯಕ ಎಂದೆನಿಸಿ ಅಧ್ಯಯನ ಮಾಡದೇ ಹೋದ ವಿಷಯಗಳಿದ್ದರೆ ಈಗ ಹೆಚ್ಚುವರಿಯಾಗಿ ದೊರೆತ ಈ ಸಮಯದಲ್ಲಿ ಅಂತಹ ವಿಷಯಗಳ ಅಧ್ಯಯನ ಹಾಗೂ ಪುನರ್‌ಮನನ ಸಾಧ್ಯವೇ ಎಂಬುದನ್ನು ಅವಲೋಕಿಸಿ, ಸಾಧ್ಯವಿದ್ದಲ್ಲಿ ಅಧ್ಯಯನ ನಡೆಸಿ.



ಪ್ರಜಾವಾಣಿ ಉದ್ಯೋಗ ವಾರ್ತೆ

ಐಬಿಪಿಎಸ್: 10676 ಹುದ್ದೆಗಳು

ಬ್ಯಾಂಕಿಂಗ್ ಸಿಬ್ಬಂದಿ ಆಯ್ಕೆ ಸಂಸ್ಥೆ (ಐಬಿಪಿಎಸ್) ವಿವಿಧ ಹುದ್ದೆಗಳ ಆಯ್ಕೆಗೆ ಅರ್ಜಿ ಆಹ್ವಾನಿಸಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳು: ಅಸಿಸ್ಟೆಂಟ್ ಆಫೀಸರ್, ಆಫೀಸರ್ ಸ್ಕೇಲ್

ಸ್ಥಳ: ಭಾರತದೆಲ್ಲೆಡೆ

ಹುದ್ದೆಗಳ ಸಂಖ್ಯೆ: 10676

ವಿದ್ಯಾರ್ಹತೆ: ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ, ಎಂಬಿಎ, ಸಿಎ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಶುಲ್ಕ: ಸಾಮಾನ್ಯ ವರ್ಗ, ಒಬಿಸಿ ಹಾಗೂ ಇತರ ಅಭ್ಯರ್ಥಿಗಳಿಗೆ ₹850, ಎಸ್‌ಸಿ, ಎಸ್‌ಟಿ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ₹ 175

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 28, 2021

ಹೆಚ್ಚಿನ ಮಾಹಿತಿಗೆ: https://www.ibps.in/crp-rrb-x/

ಸಿಇಟಿ ದಿಕ್ಸೂಚಿ

Maths- Sets and Relations

1. If A and B have n elements in common, then the number of elements common to A × B and B × A is

(1) n (2) 2n
(3) n2 (4) 0

2. The domain of the function $f(x)=\sqrt{\cos x}$ is

(1) $\left[0,\frac{\pi}{2}\right]$ (2) $[0,\pi]\cup\left[\frac{3\pi}{2},2\pi\right]$

(3) $\left[\frac{3\pi}{2},2\pi\right]$ (4) $\left[\frac{-\pi}{2},\frac{\pi}{2}\right]$

3. In a class of 60 students, 25 students play cricket and 20 students play tennis, and 10 students play both the games, then the number of students who play neither is

(1) 0 (2) 35 (3) 45 (4) 25

(1) $B=\{x:-3<x<7\}$

(2) $C=\{x:-13<2x<4\}$

(3) $D=\{x:0<x+5<7\}$

(4) $E=\{x:-7<x<7\}$

4. The set $A=\{x:|2x+3|<7\}$ is equal to the set

5. Which one of the following is not correct for the features of exponential function given by $f(x) = b^x$ where $b > 1$?

(1) The domain of the function is R, the set of real numbers.
(2) The range of the function is the set of all positive real numbers.
(3) For very large negative values of x, the function is very close to 0
(4) The point (1, 0) is always on the graph of the function

6. Which of the following is not a correct statement?

(1) $\sqrt{3}$ is a prime (2) The sun is a star
(3) 2 is a prime number
(4) $\sqrt{2}$ is irrational.

7. Write the set builder form for $A=\{-1,1\}$

(1) $A=\{x:x \text{ is a real number}\}$

(2) $A=\{x:x \text{ is an integer}\}$

(3) A = {x : x is a root of the equation $x^2=1$}

(4) $A=\{x:x \text{ is a root of the equation } x^2+1=0\}$

8. If A and B are finite sets and then $A\subset B$,

(A) $n(A\cup B)=n(A)$ (B) $n(A\cap B)=n(B)$

(C) $n(A\cup B)=n(B)$ (D) $n(A\cap B)=\phi$

9. If $|x-2|\le 1$, then

(A) $x\in[1,3]$ (B) $x\in(1,3)$

(C) $x\in[-1,3)$ (D) $x\in(-1,3)$

10. If $|x+5|\ge 10$ then

(A) $x\in(-15,5]$

(B) $x\in(-15,5]$

(C) $x\in(-\infty,-15]\cup[5,\infty)$

(D) $x\in[-\infty,-15]\cup[5,\infty)$

11. The inverse of the matrix $\begin{bmatrix}2&5&0\\0&1&1\\-1&0&3\end{bmatrix}$ is

(A) $\begin{bmatrix}3&-5&5\\-1&-6&-2\\1&-5&2\end{bmatrix}$

(B) $\begin{bmatrix}3&-15&5\\-1&6&-2\\1&-5&-2\end{bmatrix}$

(C) $\begin{bmatrix}3&-1&1\\-15&6&-5\\5&-2&2\end{bmatrix}$ (D) $\begin{bmatrix}3&-15&5\\-1&6&-2\\1&-5&2\end{bmatrix}$

12. If , $A=\{1,2,3,4,5,6\}$, then the number of subsets of A which contain atleast two elements is

(A) 57 (B) 58
(C) 64 (D) 63

13. If n(A) = 2 and total number of possible relations from set A to set B is 1024, then n(B) is

(A) 10 (B) 5
(C) 512 (D) 20

Key

1)	2)	3)	4)	5)	6)	7)	8)	9)	10)
C	D	D	C	D	A	C	C	A	C
11)	12)	13)							
D	A	B							

Answers

1. Answer (3)
Topic Code: M1

Sol:- $n(A\cap B)=n$ we have

$n[(A\times B)\cap(B\times A)]=[n(A\cap B)]^2=n^2$

2. Answer (4)
Topic Code: M1
Hint:

Hint: $f(x)=\sqrt{\cos x}$

$\cos x\ge 0$

$-1\le\cos x\le 1$


$0\le\cos x\le 1$

$0\le x\le\frac{\pi}{2}$ (or) $0\le x\le 2\pi$ (1st , 4th Quadrants)

$x\in\left[0,\frac{\pi}{2}\right]\cup\left[\frac{3\pi}{2},2\pi\right]$ (or) $\left[-\frac{\pi}{2},\frac{\pi}{2}\right]$

$\left[\frac{-\pi}{2},\frac{\pi}{2}\right]$ is domain

3. Answer (4)
Topic Code: M1



Hint: $n(S)=60, n(C)=25, n(T)=20$

$n(C\cap T)=10$

$n(C\cup T)=n(C)+n(T)-n(C\cap T)$

$=25+20-10=35$

$n(C\cap T)'=n(S)-n(C\cup T)$

$=60-35=25$

4. Answer (3)
Topic Code: M1

Hint: $A=\{x:|2x+3|<7\}$


$|2x+3|<7$

$-7<2x+3<7$

$-5<x<2$

$0<(x+5)<7$

5. Answer (4)
Topic Code: M1



Hint:

$x=1$

$y = f(1)=b'=b\ne 0\ (\because b>1)$

6. Answer (1)
Topic Code: M1
Hint: Conceptual

7. Answer (3)
Topic Code : M1
Hint : $x^2=1\Rightarrow x=\pm 1$

8. Answer: (3)
Topic code: M1

Sol : Given A is subset of B

$\Rightarrow \boxed{A\cup B=B}$

$\Rightarrow \boxed{n(A\cup B)=n(B)}$

9. Answer: (1)
Topic code: M1

Sol: We know, $|x|\le a$

$\Rightarrow -a\le x\le a$

Thus, $|x-2|\le 1$

$\Rightarrow -1\le x-2\le 3$

$\Rightarrow x\in[1,3]$

10. Answer (3)
Topic Code: M1
Solution: $x+5\ge 10$ or $x+5\le -10$

$x\ge 5$ or $x\le -15$

11. Key. (4)
Topic Code: M1

Hint: let $A=\begin{bmatrix}2&5&0\\0&1&1\\-1&0&3\end{bmatrix}$

$|A|=2(3-0)-5(0+1)=6-5=1$

$\therefore |A|=1$

$\text{adj } A=\begin{bmatrix}3&-1&1\\-15&6&-5\\5&-2&2\end{bmatrix}^T=\begin{bmatrix}3&-15&5\\-1&6&-2\\1&-5&2\end{bmatrix}$ $A^{-1}=\frac{\text{adj}A}{|A|}=\begin{bmatrix}3&-15&5\\-1&6&-2\\1&-5&2\end{bmatrix}$

12. Answer: (1)
Topic code:M1
Sol: Sol: $\Rightarrow {}^6C_2+{}^6C_3+{}^6C_4+{}^6C_5+{}^6C_6$

$=2^6-{}^6C_0-{}^6C_1$

$=64-1-6=57$

13. Answer: (2)
Topic code:M1
Sol: No.of relations (maximum)
= 2n(A)-n(B)
Let n(B) = m

$n = n(A)=2\Rightarrow 2^{2.m}=2^{10}\Rightarrow m=5$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 4

41. ಕರ್ನಾಟಕದ 'ಸೈಕ್ಲಿಂಗ್-ಕ್ಯಾಪಿಟಲ್' ಎಂದೇ ಹೆಸರಾದ ಊರು
ಎ) ಕಲಬುರ್ಗಿ
ಬಿ) ಬೀದರ್
ಸಿ) ವಿಜಯಪುರ
ಡಿ) ಹಾಸನ

42. ಈ ಕೆಳಗಿನವುಗಳಲ್ಲಿ ಅತ್ಯಂತ ನೀಳವಾದ (ಉದ್ದದ) ತರಂಗ ಯಾವುದು?
ಎ) ರೇಡಿಯೊ ತರಂಗ
ಬಿ) ಎಕ್ಸ್-ರೇ
ಸಿ) ಬೆಳಕು ತರಂಗ
ಡಿ) ಧ್ವನಿತರಂಗ

43. ಕೃಷ್ಣದೇವರಾಯನ ಕೃತಿ 'ಅಮುಕ್ತಮಾಲ್ಯದ' ಏನನ್ನು ವಿವರಿಸುತ್ತದೆ?
ಎ) ಪ್ರೇಮಕಥೆ
ಬಿ) ಧಾರ್ಮಿಕ ವಿಚಾರಗಳು
ಸಿ) ರಾಜ್ಯಾಡಳಿತ
ಡಿ) ಮೌಲ್ಯ ಶಿಕ್ಷಣ

44. ಲೋಕಸಭಾ ಸದಸ್ಯನಾಗಲು ಒಬ್ಬ ವ್ಯಕ್ತಿಗೆ ಕನಿಷ್ಠ ವಯೋಮಿತಿ ಎಷ್ಟು?
ಎ) 25 ವರ್ಷದವನಾಗಿರಬೇಕು
ಬಿ) 40 ವರ್ಷದವನಾಗಿರಬೇಕು
ಸಿ) 50 ವರ್ಷದವನಾಗಿರಬೇಕು
ಡಿ) ಯಾವುದೇ ವಯಸ್ಸಿನ ಮಿತಿ ಇಲ್ಲ

45. ಜಗತ್ತಿನ ಪ್ರಥಮ 'ಲಿಖಿತ ಸಂವಿಧಾನ' ಹೊಂದಿದ ದೇಶ ಯಾವುದು?
ಎ) ಅಮೆರಿಕ
ಬಿ) ಜರ್ಮನಿ
ಸಿ) ಭಾರತ
ಡಿ) ಇಟಲಿ

46. 'ಮೂಲಭೂತ ಹಕ್ಕುಗಳ ರಕ್ಷಕ' ಎಂದು ಯಾವುದನ್ನು ಕರೆಯಲಾಗುತ್ತದೆ?
ಎ) ಸುಪ್ರೀಂ ಕೋರ್ಟ್
ಬಿ) ಕೇಂದ್ರ ಸರ್ಕಾರ
ಸಿ) ರಾಜ್ಯ ಸರ್ಕಾರ
ಡಿ) ಮಾನವ ಹಕ್ಕು ಆಯೋಗ

47. 'ಅನುಭವ ಮಂಟಪ'ದ ಶೂನ್ಯಪೀಠದ ಅಧ್ಯಕ್ಷ ಯಾರಾಗಿದ್ದರು?
ಎ) ಆಯ್ದಕ್ಕಿ ಮಾರಯ್ಯ
ಬಿ) ಅಲ್ಲಮಪ್ರಭು
ಸಿ) ಬಸವಣ್ಣ
ಡಿ) ಚನ್ನಬಸವಣ್ಣ

48. 1 ರಿಂದ 100 ರವರೆಗಿನ ಸಂಖ್ಯೆಗಳ ಸಂಕಲನ ಮಾಡಿದಾಗ ಬರುವ ಮೊತ್ತ ಎಷ್ಟು?
ಎ) 5050
ಬಿ) 5060
ಸಿ) 5030
ಡಿ) 5020

49. ₹ 5,000 ಗಳಿಗೆ ವಾರ್ಷಿಕ ಶೇ 5 ರ ಬಡ್ಡಿ ದರದಂತೆ, 4 ವರ್ಷಗಳಿಗೆ ಆಗುವ ಸರಳ ಬಡ್ಡಿ ಎಷ್ಟು?
ಎ) 5,000
ಬಿ) 500
ಸಿ) 1,000
ಡಿ) 250

50. ಒಬ್ಬ ವ್ಯಕ್ತಿ ಒಂದು ವಸ್ತುವನ್ನು ₹ 800ಕ್ಕೆ ಕೊಂಡು ಅದೇ ವಸ್ತುವನ್ನು ಶೇ 20 ರಷ್ಟು ಲಾಭಕ್ಕೆ ಮಾರುತ್ತಾನೆ. ಹಾಗಾದರೆ ಅವನು ಮಾರಿದ ಬೆಲೆ ಎಷ್ಟು?
ಎ) ₹ 860 ಬಿ) ₹ 980
ಸಿ) ₹ 1,000 ಡಿ) ₹ 960

51. A ಯು B ನ ಸಹೋದರ, C ಯು A ನ ತಾಯಿ, D ಯು C ನ ತಂದೆ, E ಯು B ನ ಮಗ ಹಾಗಾದರೆ, D ಯು B ಗೆ ಏನಾಗುತ್ತಾರೆ?
ಎ) ಮಾವ
ಬಿ) ಸಹೋದರ
ಸಿ) ತಾತ
ಡಿ) ಚಿಕ್ಕಪ್ಪ

52. ಸಂಖ್ಯೆಯನ್ನು ಪೂರ್ಣಗೊಳಿಸಿರಿ. 1432, 2543, 3654, 4765,
ಎ) 3654 ಬಿ) 4775
ಸಿ) 5766 ಡಿ) 5876

53. 'ಕರ್ನಾಟಕದ ಮ್ಯಾಂಚೆಸ್ಟರ್' ಎಂದು ಯಾವ ಊರನ್ನು ಕರೆಯುತ್ತಾರೆ?
ಎ) ಬೆಂಗಳೂರು
ಬಿ) ಚಿತ್ರದುರ್ಗ
ಸಿ) ತುಮಕೂರು
ಡಿ) ದಾವಣಗೆರೆ

54. 1907 ರಲ್ಲಿ ನಿರ್ಮಿಸಿದ ಕರ್ನಾಟಕದ ಮೊಟ್ಟಮೊದಲ ದೊಡ್ಡ ಜಲಾಶಯ ಯಾವುದು?
ಎ) ಕೃಷ್ಣರಾಜ ಸಾಗರ
ಬಿ) ತುಂಗಭದ್ರಾ ಜಲಾಶಯ
ಸಿ) ವಾಣಿವಿಲಾಸ ಸಾಗರ
ಡಿ) ಹಾರಂಗಿ ಜಲಾಶಯ

55. ಕರ್ನಾಟಕದಲ್ಲಿ ಅತೀ ಹೆಚ್ಚು ಕಬ್ಬು ಬೆಳೆಯುವ ಜಿಲ್ಲೆ ಯಾವುದು?
ಎ) ಮಂಡ್ಯ
ಬಿ) ವಿಜಯಪುರ
ಸಿ) ಬೆಳಗಾವಿ
ಡಿ) ಬಾಗಲಕೋಟೆ

ಭಾಗ-3ರ ಉತ್ತರ

26. ಬಿ, 27. ಡಿ, 28. ಸಿ, 29. ಸಿ, 30. ಎ, 31. ಡಿ, 32. ಸಿ, 33. ಬಿ, 34. ಡಿ, 35. ಸಿ, 36. ಸಿ, 37. ಸಿ, 38. ಡಿ, 39. ಸಿ, 40. ಡಿ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನಿಮ್ಮ ಗುರಿಯ ಬಗ್ಗೆ ನಿಮಗೆ ಸಮಾಧಾನ ಇದ್ದರೆ, ಅದು ನಿಜವಾದ ಸಂತೋಷ. -ಸೈನಾ ನೆಹ್ವಾಲ್

ಅಸಹನೀಯ ಬೆಲೆ ಏರಿಕೆ ತೈಲೋತ್ಪನ್ನಗಳ ದರ ತಗ್ಗಿಸಿ

ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ಇದೆ. ಪೆಟ್ರೋಲ್ ಬೆಲೆಯು ದೇಶದ ಹಲವೆಡೆ ಲೀಟರ್‌ಗೆ ₹ 100ರ ಗಡಿಯನ್ನು ದಾಟಿದೆ. ಡೀಸೆಲ್ ಬೆಲೆ ಕೂಡ ಲೀಟರ್‌ಗೆ ₹ 100 ಆಗುವತ್ತ ಹೆಜ್ಜೆ ಇರಿಸಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆಯು ಕಳೆದ ಒಂದು ವರ್ಷದ ಅವಧಿಯಲ್ಲಿ ಶೇಕಡ 30ರಷ್ಟು ಹೆಚ್ಚು ಏರಿಕೆ ಕಂಡಿದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯು ಅಗತ್ಯ ವಸ್ತುಗಳ ಪಟ್ಟಿಯಲ್ಲಿ ಬರುವ ಅಷ್ಟೂ ವಸ್ತುಗಳ ಬೆಲೆಯಲ್ಲಿ ಏರಿಕೆ ಆಗುವಂತೆ ಮಾಡುತ್ತದೆ. ದೇಶದ ತೈಲ ಬೆಲೆ ಎಷ್ಟಿರಬೇಕು ಎಂಬುದನ್ನು ನಿರ್ಧರಿಸುವುದು ಮಾರುಕಟ್ಟೆ ಶಕ್ತಿಗಳು ಎಂಬುದು ಬಾಯಿಮಾತಿನ ಸತ್ಯ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ತಗ್ಗಿದಾಗ ಕೇಂದ್ರ ಸರ್ಕಾರವು ದೇಶಿ ಮಾರುಕಟ್ಟೆಯಲ್ಲಿ ತೈಲದ ಮೇಲಿನ ಎಕ್ಸೈಸ್ ಸುಂಕವನ್ನು ಜಾಸ್ತಿ ಮಾಡಿ, ಕಚ್ಚಾ ತೈಲದ ಬೆಲೆ ಇಳಿಕೆಯ ಪ್ರಯೋಜನವು ಗ್ರಾಹಕರಿಗೆ ಸಿಗದಂತೆ ಮಾಡಿದ್ದು ಇದೆ. ಕೆಲವೆಡೆ ರಾಜ್ಯ ಸರ್ಕಾರಗಳು ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಪ್ರಮಾಣವನ್ನು ಹೆಚ್ಚಿಸಿ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆ ಇಳಿಕೆಯ ಪ್ರಯೋಜನವು ದೇಶಿ ಮಾರುಕಟ್ಟೆಯಲ್ಲಿ ಲಭ್ಯವಾಗದಂತೆ ಮಾಡುವುದೂ ಇದೆ. ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಬೆಲೆ ಇಳಿಕೆಯ ಕೆಲಸವನ್ನು ಮೊದಲು ಮಾಡಬೇಕಿರುವುದು ರಾಜ್ಯ ಸರ್ಕಾರಗಳೋ ಕೇಂದ್ರ ಸರ್ಕಾರವೋ ಎಂಬ ಚರ್ಚೆಯೂ ಆಳುವ ವರ್ಗದಲ್ಲಿ ನಡೆದಿದ್ದಿದೆ. ಆದರೆ, ಉತ್ತರ ಸಿಕ್ಕಿಲ್ಲ. 'ನಾವು ಕಡಿಮೆ ಮಾಡಿದರೆ, ರಾಜ್ಯ ಸರ್ಕಾರಗಳು ತೆರಿಗೆ ಜಾಸ್ತಿ ಮಾಡುತ್ತವೆ' ಎಂದು ಕೇಂದ್ರ ಸರ್ಕಾರದ ಹಿರಿಯ ಸಚಿವರೊಬ್ಬರು ಹೇಳಿದ್ದರು. ಇಷ್ಟರ ನಡುವೆ ಬಡವಾಗುತ್ತಿರುವುದು ಜನಸಾಮಾನ್ಯರ ಬದುಕು. ತೈಲೋತ್ಪನ್ನಗಳ ಬೆಲೆ ಏರಿಕೆ ಆದ ಪ್ರಮಾಣದಲ್ಲಿ ಜನಸಾಮಾನ್ಯರ ಆದಾಯವು ಒಂದು ವರ್ಷದಲ್ಲಿ ಏರಿಕೆ ಕಂಡಿಲ್ಲ ಎನ್ನುವುದು ಸಾಮಾನ್ಯ ಜ್ಞಾನ.



ಹಣದುಬ್ಬರ ಕಡಿಮೆ ಆಗದ ಹೊರತು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚುವುದಿಲ್ಲ. ಅದಕ್ಕೆ ಮೊದಲ ಹೆಜ್ಜೆಯಾಗಿ ತೈಲೋತ್ಪನ್ನಗಳ ಬೆಲೆ ಇಳಿಕೆ ಆಗಬೇಕು

ಎಣ್ಣೆಕಾಳುಗಳು, ಖಾದ್ಯತೈಲ, ವಿವಿಧ ಧಾನ್ಯಗಳು, ಕೆಲವು ತರಕಾರಿ, ಹಣ್ಣು, ಮೀನು–ಮಾಂಸ ಮತ್ತು ಮೊಟ್ಟೆಯಂತಹ ತೀರಾ ಅಗತ್ಯ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಆಗಿದೆ. ಇವೆಲ್ಲವುಗಳಿಗೆ ಕಾರಣ ಮಾರುಕಟ್ಟೆ ಶಕ್ತಿಗಳು ಎಂದು ಸರ್ಕಾರಗಳು ಸುಲಭವಾಗಿ ಹೇಳುವಂತಿಲ್ಲ. ಮಾರುಕಟ್ಟೆಯಲ್ಲಿ ತಮ್ಮ ಕೌಶಲಕ್ಕೆ ಅನುಗುಣವಾಗಿ ಹಣ ಸಂಪಾದಿಸಿಕೊಳ್ಳುವ ಅವಕಾಶವನ್ನು ಕೋವಿಡ್ ಸಾಂಕ್ರಾಮಿಕ ಹಾಗೂ ಲಾಕ್‌ಡೌನ್ ಕ್ರಮಗಳು ಜನರಿಂದ ಕಿತ್ತುಕೊಂಡಿವೆ. ಮಾರುಕಟ್ಟೆಯು ಸಹಜವಾಗಿ ಇದ್ದಿದ್ದರೆ, ಜನ ತಮ್ಮ ಜೀವನಕ್ಕೆ ಅಗತ್ಯವಿರುವಷ್ಟು ಹಣವನ್ನು ತಾವೇ ಸಂಪಾದಿಸಿಕೊಳ್ಳುವ ಅವಕಾಶವಾದರೂ ಇರುತ್ತಿತ್ತು. ಆದರೆ, ಈಗಿನ ಸ್ಥಿತಿಯು ದುಡಿಮೆಯ ವಿಚಾರದಲ್ಲಿ ತೀವ್ರ ಅಸಮಾನತೆಯನ್ನು ಸೃಷ್ಟಿಸಿದೆ – ಕೆಲವರು ಮನೆಯಲ್ಲೇ ಕುಳಿತು ಕೆಲಸ ಮಾಡುತ್ತಿದ್ದಾರೆ, ಹಲವರಿಗೆ ಕನಿಷ್ಠ ಮೊತ್ತವನ್ನೂ ದುಡಿದುಕೊಳ್ಳಲಾಗದ ಸ್ಥಿತಿ ಎದುರಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರಗಳು ಮುಂದೆ ನಿಂತು ಅಗತ್ಯ ವಸ್ತುಗಳ ಬೆಲೆಯನ್ನು ನಿಯಂತ್ರಿಸಬೇಕು. ಬೆಲೆ ಏರಿಕೆಗೆ ಕಾರಣ ಏನೇ ಇದ್ದರೂ ಅದನ್ನು ಗುರುತಿಸಿ, ಸಮಸ್ಯೆಯನ್ನು ಪರಿಹರಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ತೈಲೋತ್ಪನ್ನಗಳ ಬೆಲೆಯನ್ನು ಗಣನೀಯವಾಗಿ ತಗ್ಗಿಸಬೇಕು. ಅದು ಕಡಿಮೆ ಆಗದಿದ್ದರೆ ಹಣದುಬ್ಬರ ನಿಯಂತ್ರಣಕ್ಕೆ ಬರುವುದಿಲ್ಲ ಎನ್ನುವ ಅಭಿಪ್ರಾಯವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿಯೂ ಕೂಡ ವ್ಯಕ್ತಪಡಿಸಿದೆ. ಆದಾಯದ ಮೂಲಗಳೇ ಬತ್ತಿಹೋಗಿರುವ ಈಗಿನ ವಿಷಮ ಸಂದರ್ಭದಲ್ಲಿ ಅಸಹನೀಯ ಅನಿಸುತ್ತಿರುವ ಹಣದುಬ್ಬರ ಪ್ರಮಾಣ ತಗ್ಗಿಸುವುದು ಸರ್ಕಾರಗಳ ಆದ್ಯತೆಯ ಕೆಲಸ ಆಗಬೇಕು. ಹಣದುಬ್ಬರ ಕಡಿಮೆ ಆಗದ ಹೊರತು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚುವುದಿಲ್ಲ. ಅದಕ್ಕೆ ಮೊದಲ ಹೆಜ್ಜೆಯಾಗಿ ತೈಲೋತ್ಪನ್ನಗಳ ಬೆಲೆ ಇಳಿಕೆ ಆಗಬೇಕು. ದೇಶದಲ್ಲಿ ತೈಲೋತ್ಪನ್ನಗಳ ಬೆಲೆಯನ್ನು ನಿಯಂತ್ರಣ ಮುಕ್ತಗೊಳಿಸಿದಾಗ, 'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆ ಆದರೆ, ದೇಶದಲ್ಲಿಯೂ ಬೆಲೆ ತಗ್ಗುತ್ತದೆ' ಎಂಬ ಆಶ್ವಾಸನೆ ನೀಡಲಾಗಿತ್ತು. ಆದರೆ ವಾಸ್ತವದಲ್ಲಿ ಹಾಗೆ ಆಗಲಿಲ್ಲ. ಈಗಲಾದರೂ ತೆರಿಗೆಯ ಪ್ರಮಾಣ ತಗ್ಗಿಸಿ, ಬೆಲೆ ಇಳಿಕೆಗೆ ಗಮನ ನೀಡಬೇಕು. ಈ ಕೆಲಸವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಏಕಕಾಲದಲ್ಲಿ ಮಾಡುವತ್ತ ಗಮನ ಹರಿಸಬಹುದು.

ದಿನದ ಟ್ವೀಟ್



ಪಾಠ ಕಲಿತಿದೆಯೇ?

ಜಿತಿನ್ ಪ್ರಸಾದ್ ಅವರ ಬಿಜೆಪಿ ಸೇರ್ಪಡೆಯಿಂದ ನೀವು ರೋಮಾಂಚನಕ್ಕೆ ಒಳಗಾಗಿದ್ದೀರಾ? ವಿಫಲ ನಾಯಕರು ಅಥವಾ ಪ್ರತಿಸ್ಪರ್ಧಿ ಪಕ್ಷಗಳಲ್ಲಿ ಬಂಡೆದ್ದ ನಾಯಕರು ಬಿಜೆಪಿ ಸೇರುವುದನ್ನು ನಾವು ಇನ್ನೂ ಸಂಭ್ರಮಿಸುತ್ತಿದ್ದೇವೆಯೇ? ಬಂಗಾಳ ಚುನಾವಣೆಯ ಬಳಿಕ ಬಿಜೆಪಿ ಪಾಠ ಕಲಿತಿದೆ ಎಂದು ಭಾವಿಸುತ್ತೇನೆ. ಪಕ್ಷದಲ್ಲಿ ಯಾವುದೇ ಸ್ಥಾನ ಅಥವಾ ಟಿಕೆಟ್ ಕೊಡುವ ಮುನ್ನ ಪ್ರಸಾದ್ ಅವರು ಒಂದು ವರ್ಷ ಪ್ರೊಬೇಷನರಿ ಅವಧಿಯಲ್ಲಿ ಇರುವುದು ಒಳ್ಳೆಯದು.

ಸೌಮ್ಯದೀಪ್ತ, ಉಪನ್ಯಾಸಕ

25 ವರ್ಷಗಳ ಹಿಂದೆ

ಸೋಮವಾರ, 10-6-1996

● **ಇಂದು ಮಹತ್ವದ ಲೋಕಸಭೆ ಅಧಿವೇಶನ**

ನವದೆಹಲಿ, ಜೂನ್ 9 (ಪಿಟಿಐ, ಯುಎನ್‌ಐ)– ರಾಷ್ಟ್ರಪತಿ ಡಾ.ಶಂಕರ್ ದಯಾಳ್ ಶರ್ಮಾ ಅವರ ಸೂಚನೆಯಂತೆ, ಪ್ರಧಾನಿ ಎಚ್.ಡಿ. ದೇವೇಗೌಡ ನೇತೃತ್ವದ ಸರ್ಕಾರ ವಿಶ್ವಾಸಮತ ಕೋರಲಿರುವ ಎರಡು ದಿನಗಳ ಸಂಕ್ಷಿಪ್ತ ಲೋಕಸಭೆ ಅಧಿವೇಶನ ನಾಳೆ ಆರಂಭವಾಗಲಿದೆ.

ಭಾರತದ ಪ್ರಜಾಪ್ರಭುತ್ವ ಇತಿಹಾಸದಲ್ಲಿ ಮೊದಲ ಬಾರಿಗೆ ವಿಶ್ವಾಸಮತ ಕೋರುವ ಸಲುವಾಗಿಯೇ 15 ದಿನಗಳ ಅಂತರದಲ್ಲಿ ಎರಡನೇ ಬಾರಿಗೆ ಲೋಕಸಭೆ ಅಧಿವೇಶನ ಕರೆಯಲಾಗಿದೆ. ಬಿಜೆಪಿಯ ವಾಜಪೇಯಿ ನೇತೃತ್ವದ ಸರ್ಕಾರ ರಾಜೀನಾಮೆ ನೀಡಿದ ನಂತರ ಎಚ್.ಡಿ. ದೇವೇಗೌಡರ ನೇತೃತ್ವದ ಸಂಪುಟ ಅಸ್ತಿತ್ವಕ್ಕೆ ಬಂದಿದ್ದು, ಜೂನ್ 12ರ ಒಳಗೆ ಬಹುಮತ ಸಾಬೀತಿಗೆ ರಾಷ್ಟ್ರಪತಿ ಸೂಚಿಸಿದ್ದರು.

● **'ಬಂದಿ' ಬಸವ**

ಬೆಂಗಳೂರು, ಜೂನ್ 9– 'ಬಸವಣ್ಣ ಒಂದು ವರ್ಗಕ್ಕೆ ಸೀಮಿತವಲ್ಲ. ಅವರನ್ನು ನಮ್ಮಲ್ಲೇ ಇಟ್ಟುಕೊಂಡು ಕೊಳೆಸುವುದು ಬೇಡ. ಅವರ ತತ್ವಗಳು ವಿಶ್ವದಾದ್ಯಂತ ಪ್ರಚಾರವಾಗಬೇಕು' ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ಕರೆ ನೀಡಿದರು.

ಗುಲ್ಬರ್ಗ ವಿಶ್ವವಿದ್ಯಾಲಯದ ಮರು ನಾಮಕರಣದ ವಿಚಾರದಲ್ಲಿ ಎದ್ದಿರುವ ವಿವಾದಕ್ಕೆ ಉತ್ತರವೆನ್ನುವಂತೆ 'ಬಸವಣ್ಣನನ್ನು ಕೊಳೆಸೋಕೆ ಏನು ಮಾಡಬೇಕೋ ಎಲ್ಲವನ್ನೂ ನಾವು ಮಾಡಿದ್ದೇವೆ' ಎಂದರು.

50 ವರ್ಷಗಳ ಹಿಂದೆ

ಗುರುವಾರ, 10-6-1971

● **ಬಿತ್ತನೆ ಬೀಜ ಸಂಸ್ಥೆಯಲ್ಲಿ ಅಪಾರ ಭ್ರಷ್ಟಾಚಾರ: ಸಿಬಿಐ ತನಿಖೆಗೆ ರಾಜ್ಯಸಭೆಯಲ್ಲಿ ಹಟ**

ನವದೆಹಲಿ, ಜೂನ್ 9– ಸರ್ಕಾರಿ ವಲಯದ ರಾಷ್ಟ್ರೀಯ ಬಿತ್ತನೆ ಬೀಜ ಕಾರ್ಪೊರೇಷನ್ ವಿರುದ್ಧ ಮಾಡಲಾಗಿರುವ ತೀವ್ರತರ ಭ್ರಷ್ಟಾಚಾರ ಹಾಗೂ ಮೋಸದ ವ್ಯವಹಾರಗಳನ್ನು ಕೇಂದ್ರ ತನಿಖಾ ಮಂಡಳಿ (ಸಿಬಿಐ) ವಿಚಾರಣೆಗೆ ಒಪ್ಪಿಸಬೇಕೆಂದು ರಾಜ್ಯಸಭೆಯ ಎಲ್ಲ ಪಕ್ಷಗಳ ಸದಸ್ಯರು ಇಂದು ಆಗ್ರಹ ಪಡಿಸಿದರು.

ಕೇಂದ್ರ ತನಿಖಾ ಮಂಡಳಿಯೇ ತನಿಖೆ ನಡೆಸಬೇಕೆಂದು ಪಟ್ಟುಹಿಡಿದು ಕುಳಿತಿದ್ದ ಉದ್ರಿಕ್ತ ಸದಸ್ಯರನ್ನು ಸಾಂತ್ವನಗೊಳಿಸಲು ಕೃಷಿ ಸಚಿವ ಫಕ್ರುದ್ದೀನ್ ಅಲೀ ಅಹ್ಮದ್ ಅವರು ಸೂಚಿಸಿದರು. ಕಾರ್ಪೊರೇಷನ್‌ನ ಡೈರೆಕ್ಟರೂ ಆಗಿರುವ ಸಂಸತ್ ಸದಸ್ಯರೊಬ್ಬರ ಅಧ್ಯಕ್ಷತೆಯ ಸಮಿತಿಯಿಂದ ವಿಚಾರಣೆ ಏರ್ಪಡಿಸಲು ಸಿದ್ಧವೆಂದು ತಿಳಿಸಿದ ಭರವಸೆಯೂ ಫಲಕಾರಿಯಾಗಲಿಲ್ಲ.

● **ನ್ಯಾಯರೀತಿ ವರ್ತನೆ ಇಲ್ಲವೇ ಮತ್ತೆ ಸಕ್ಕರೆ ಬೆಲೆ, ಹಂಚಿಕೆ ಹತೋಟಿ**

ನವದೆಹಲಿ, ಜೂನ್ 9–ಸಕ್ಕರೆ ಕೈಗಾರಿಕೆ ಮತ್ತು ವ್ಯಾಪಾರಿಗಳು ನ್ಯಾಯವಾದ ರೀತಿಯಲ್ಲಿ ವರ್ತಿಸದಿರುವುದು ಕಂಡು ಬಂದರೆ ಮತ್ತೆ ಸಕ್ಕರೆ ಬೆಲೆ ಮತ್ತು ಹಂಚಿಕೆಯನ್ನು ನಿಯಂತ್ರಿಸಲು ಸರ್ಕಾರ ಹಿಂಜರಿಯುವುದಿಲ್ಲವೆಂದು ಇಲ್ಲಿ ಇಂದು ಸಕ್ಕರೆ ಉದ್ಯಮಕ್ಕೆ ಸ್ಪಷ್ಟಪಡಿಸಲಾಯಿತು.

ಭಾರತೀಯ ಸಕ್ಕರೆ ಕಾರ್ಖಾನೆ ಸಂಘವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಕೇಂದ್ರ ಕೃಷಿ ಸಚಿವ ಫಕ್ರುದ್ದೀನ್ ಅಲೀ ಅಹ್ಮದ್‌ರವರು ಈ ಎಚ್ಚರಿಕೆ ನೀಡಿದರು.

ಕಬ್ಬಿಗೆ ಕನಿಷ್ಠ ಬೆಲೆ ನಿಗದಿ ಮಾಡುವಾಗ, ಕಬ್ಬಿನಲ್ಲಿರುವ ಸಕ್ಕರೆ ಅಂಶವನ್ನೇ ಆಧಾರವಾಗಿಟ್ಟುಕೊಳ್ಳಬೇಕೆಂಬ ಸಕ್ಕರೆ ಗಿರಣಿಗಳ ಕೇಳಿಕೆಯನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳುವುದೆಂದು ಕೇಂದ್ರ ಕೃಷಿ ಸಚಿವರು ಭರವಸೆ ಇತ್ತರು.

ಚೀನೀ ಹುನ್ನಾರವನ್ನು ಬದಿಗಿಟ್ಟು, ಕೃಷಿ ಪರಿಸರದ ಅಸಲೀ ಭಯೋತ್ಪಾದನೆ ಕುರಿತು ಮಾತಾಡೋಣವೆ?

ಈಗ ಬೀಜದ ಬುಟ್ಟಿಯಲ್ಲಿ ಭಯೋತ್ಪಾತ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಬಾಂಬ್‌ಗಳಲ್ಲಿ ಅತ್ಯಂತ ಶ್ರೇಷ್ಠ ಬಾಂಬ್ ಯಾವುದು ಗೊತ್ತಾ? 'ಬೀಜ ಬಾಂಬ್'. ಅದರ ತಯಾರಿಕೆಯೂ ಸುಲಭ: ಒದ್ದೆ ಮಣ್ಣಿನ ಮುದ್ದೆಯಲ್ಲಿ ಕೆಲವು ಬೀಜಗಳನ್ನು ಹುದುಗಿಸಿ ಒಣಗಿಸಿಟ್ಟರಿ. ನೇರಳೆ, ಬೇವು, ನುಗ್ಗೆ, ಹಲಸು, ಹೊಂಗೆ ಹೀಗೆ ಯಾವುದೂ ಆದೀತು. ಮಳೆಗಾಲದ ಆರಂಭದಲ್ಲಿ ರಸ್ತೆ ಪಕ್ಕಕ್ಕೆ ಎಸೆಯುತ್ತ ಹೋಗಿ. ಅದು ಲೋಕ ಕಲ್ಯಾಣದ ಕೆಲಸ. ಹಕ್ಕಿ ಓಡಿಸಲು ರೈತರು ಬಳಸುವ ಚಿಟ್‌ಬಿಲ್ಲು, ಪೆಟ್ಲು ಅಥವಾ ಕವಣೆಯಿಂದ ಇಂಥ ಬೀಜದುಂಡೆಗಳನ್ನು ದೂರಕ್ಕೂ ಚಿಮ್ಮಿಸಬಹುದು. ಡ್ರೋನ್ ಮತ್ತು ಹೆಲಿಕಾಪ್ಟರ್ ಮೂಲಕ ಬಂಜರು ಭೂಮಿಗೆ ಇಂಥ ಬಾಂಬ್‌ಗಳನ್ನು ಬೀಳಿಸಬಹುದು. ಸುಧಾರಿತ ದೇಶಗಳಲ್ಲಿ ಬೀಜಗೋಲಿಗಳನ್ನು ದೂರಕ್ಕೆ ಉಡಾಯಿಸಲು ಬಗೆಬಗೆಯ ಮೋಜಿನ ಆಟಿಕೆಗಳೂ ಚಂದದ ಗೋಲಿಗಳೂ ಸಿಗುತ್ತವೆ. ಸೀಡ್‌ಬಾಂಬ್ ಹೆಸರನ್ನು ಗೂಗಲ್ ಮಾಡಿ ನಾನಾ ಬಗೆಯ ಹೂಹಣ್ಣುಗಳ ರೆಡಿಮೇಡ್ ಉಂಡೆಗಳನ್ನು ತರಿಸಬಹುದು. ಭಾರತ ಸರ್ಕಾರದ್ದೇ mygov.in ಬ್ಲಾಗ್‌ನಲ್ಲಿ ಸೆಗಣಿಮಿಶ್ರಿತ ಸೀಡ್‌ಬಾಂಬ್‌ಗಳ ತಯಾರಿಕೆ, ಪ್ರಸರಣ, ಪ್ರಯೋಜನದ ವಿವರಗಳಿವೆ.

ನಮ್ಮಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಇಂಥ 'ಬೀಜಗೋಲಿ' ತಯಾರಿಸಿ ಬಿತ್ತರಿಸುವ ಕೆಲಸ ಶಾಲೆ ಕಾಲೇಜುಗಳಲ್ಲಿ, ಯುವಸಂಘಗಳಲ್ಲಿ ಸಂಭ್ರಮದಲ್ಲಿ ನಡೆಯುತ್ತ ಬಂದಿತ್ತು. ಆದರೆ ಕೇಡಿ ಕೊರೊನಾ ಬಂದು ಆ ಕೆಲಸಕ್ಕೆ ಕಲ್ಲು ಹಾಕಿದೆ. ಅಂಥ ಒಳ್ಳೇ ಕೆಲಸದ ಬದಲಿಗೆ, ಈಗ ಭಯಾನಕ ಬೀಜ ಬಾಂಬ್‌ಗಳ ಬಗ್ಗೆ ಜನರನ್ನು ಹೆದರಿಸುವ ಕೆಲಸ ಆರಂಭವಾಗಿದೆ. ಚೀನೀಯರು ನಮ್ಮ ರೈತರಿಗೆ ಬೀಜಗಳ ಅದೇನೋ ಉಚಿತ ಪ್ಯಾಕೆಟ್‌ಗಳನ್ನು ಕಳಿಸುತ್ತಿದ್ದಾರಂತೆ. ಅಂಥ ಬೀಜಗಳನ್ನು ಬಿತ್ತಿದರೆ ರೈತಪರಿಸರದ ಸರ್ವನಾಶಕ್ಕೆ ಮುನ್ನುಡಿಯಂತೆ- ಅದಂತೆ ಇದಂತೆ.

ಅಂಥ ಹೊಸ ಆತಂಕದ ಸುದ್ದಿಯ ಸಂಕ್ಷಿಪ್ತ ಹಿನ್ನೆಲೆ ಹೀಗಿದೆ: ಕಳೆದ ವರ್ಷ ಇದೇ ದಿನಗಳಲ್ಲಿ ಉತ್ತರ ಭಾರತದ ಮತ್ತು ನಮ್ಮ ಗದಗ, ಶಿರಹಟ್ಟಿ ಭಾಗದ ಕೆಲವು ರೈತರಿಗೆ ಉಚಿತ ಬಿತ್ತನೆ ಬೀಜಗಳ ಪಾರ್ಸೆಲ್ ಬಂದಿದ್ದವು. ಇದನ್ನು ಚೀನಾ ದೇಶವೇ 'ಜೈವಿಕ ಅಸ್ತ್ರ'ವಾಗಿ ರವಾನಿಸಿದೆ. ಮುಗ್ಧ ರೈತರು ಇದನ್ನು ಬಿತ್ತಿದರೆ ಅದು ಚಿಗುರಿ, ಸ್ಥಳೀಯ ತಳಿಗಳನ್ನು ನಾಶ ಮಾಡಿ, ರೋಗರುಜಿನ, ಕೀಟಕಾಟ ಹಬ್ಬಿಸಿ ದೇಶಕ್ಕೆ ಅಪಾರ ನಷ್ಟ ಉಂಟುಮಾಡಬಹುದು. ಆ ಕುರಿತು ಕೇಂದ್ರ ಸರ್ಕಾರ ಹೋದ ವರ್ಷವೇ ಎಚ್ಚರಿಕೆ ನೀಡಿದೆ. 'ಈಗ ಮತ್ತೆ ಬಿತ್ತನೆಯ ಕಾಲ ಬಂದಿದ್ದರಿಂದ ರೈತರು ಹುಷಾರಾಗಿರಬೇಕು; ಹೆಸರು ದೆಸೆ ತಿಳಿಸದೆ ಯಾರಾದರೂ ನಿಮಗೆ ಉಚಿತ ಬೀಜದ ಪ್ಯಾಕೆಟ್ ಕಳಿಸಿದರೆ ಅದನ್ನು ಬಿತ್ತನೆಗೆ ಬಳಸಬೇಡಿ'. ಹೀಗೆಂದು ಬೀದರ್, ತುಮಕೂರು ಜಿಲ್ಲೆಗಳ ಕೃಷಿ ಅಧಿಕಾರಿಗಳು ರೈತರಿಗೆ ಎಚ್ಚರಿಕೆ, ಸೂಚನೆಗಳನ್ನು ಈ ವರ್ಷವೂ ಪ್ರಕಟಿಸಿದ್ದಾರೆ.

ಚೀನೀಯರ ಈ ಬೀಜ ಭಯೋತ್ಪಾತದ ಸಂಗತಿ ಕಳೆದ ಆಗಸ್ಟ್‌ನಲ್ಲೇ ನಮ್ಮ ಅನೇಕ ರಾಷ್ಟ್ರೀಯ ಪತ್ರಿಕೆಗಳಲ್ಲಿ, ಚಾನೆಲ್‌ಗಳಲ್ಲಿ ಚರ್ಚೆಗೆ ಬಂದಿದ್ದು ಹೌದು. ಈಗ ಮತ್ತೆ ಅದೇ ಭಯದ ಭೂತ ಧುತ್ತೆಂದಿದೆ. ಕೆಲವರು ಬಾಂಬ್ ಬಿದ್ದಂತೆ ಕಂಗಾಲಾಗಿದ್ದಾರೆ. ಆದರೆ ಹಾಗೆಲ್ಲ ಭಯ ಬೀಳಬೇಕಿಲ್ಲ. ಏಕೆಂದರೆ ಈ ಸುದ್ದಿಯ ಮೂಲವನ್ನು ಹುಡುಕುತ್ತ ಹೋದರೆ ಉಳ್ಳಾಗಡ್ಡೆ ಬಿಡಿಸಿ ಬೀಜ ಹುಡುಕಿದಂತಾಗುತ್ತಿದೆ. ಕಳೆದ ವರ್ಷ 'ಭಾರತ ರಾಷ್ಟ್ರೀಯ ಬೀಜ ಸಂಘ' ಹಾಗೂ 'ಅಂತರರಾಷ್ಟ್ರೀಯ ಬೀಜಪರೀಕ್ಷಾ ಪ್ರಾಧಿಕಾರ'ಗಳು ರೈತರಿಗೆ ಎಚ್ಚರಿಕೆಯ ನೋಟಿಸನ್ನು ಕಳಿಸಿದ್ದು ಹೌದು. ಏಕೆಂದರೆ ಅಮೆರಿಕ, ಕೆನಡಾ ಮತ್ತು ಬ್ರಿಟನ್‌ಗಳಲ್ಲಿ ಕೆಲವು ರೈತರಿಗೆ ಅಂಥ ಪುಟ್ಟಪುಟ್ಟ ಬೀಜದ ಪ್ಯಾಕೆಟ್‌ಗಳು ಬಂದಿದ್ದವು. ಅಮೆರಿಕ ತನ್ನ ರೈತರಿಗೆ ಕೊಟ್ಟ ಎಚ್ಚರಿಕೆಯ ನೋಟಿಸಿನ ಬೀಜವೇ ನಮ್ಮಲ್ಲೂ ಮರುಪ್ರಸಾರಗೊಂಡಿತು.

ಹೀಗೆ ಉಚಿತ ಪ್ಯಾಕೆಟ್‌ಗಳನ್ನು ರವಾನಿಸುವ ತಂತ್ರಕ್ಕೆ 'ಬ್ರಶಿಂಗ್ ಸ್ಕ್ಯಾಮ್' ಎನ್ನುತ್ತಾರೆ. ಅದು ಬೀಜವೇ ಆಗಬೇಕೆಂದಿಲ್ಲ. ಮಹಿಳೆಯರ ಅಲಂಕಾರಿಕ ಹೇರ್ ಕ್ಲಿಪ್ ಆಗಿರಬಹುದು; ಪುಟ್ಟ ಆಟಿಕೆ ಅಥವಾ ಮಕ್ಕಳ ಪಝಲ್ ಆಗಿರಬಹುದು. ಅವನ್ನು ಉತ್ಪಾದಿಸುವ ಕಂಪನಿಗಳ ಏಜೆಂಟ್‌ಗಳು ಕೆಲವರ ಮನೆಯ ವಿಳಾಸವನ್ನು ಪತ್ತೆ ಹಚ್ಚಿ ಹೀಗೆ ಉಚಿತ ಸ್ಯಾಂಪಲ್ ಕಳಿಸುತ್ತಾರೆ. ಮತ್ತು ಅಂಥ ಗ್ರಾಹಕರ ಹೆಸರಿನಲ್ಲಿ ತಾವೇ ನಕಲಿ ಖಾತೆ ತೆರೆದು 'ಭೇಷ್ ನಿಮ್ಮ ಮಾಲು ತುಂಬ ಚೆನ್ನಾಗಿದೆ' ಎಂಬ ಹೊಗಳಿಕೆಯ ಹೊಳಪು ಕೊಟ್ಟು (ಬ್ರಶಿಂಗ್ ಮಾಡಿ) ಬೇರೆ ಗ್ರಾಹಕರನ್ನು ಆಕರ್ಷಿಸಿ, ಕಂಪನಿಯಿಂದ ಪದೋನ್ನತಿ ಪಡೆಯುತ್ತಾರೆ. ಕಂಪನಿ ಅಕಸ್ಮಾತ್ ತಪಶೀಲು ಮಾಡಿದರೆ ಗ್ರಾಹಕರ ವಿಳಾಸ ಸರಿಯಾಗಿಯೇ ಇರುತ್ತದಲ್ಲ? ವಾಚು, ಮೊಬೈಲ್‌ನಂಥ ದೊಡ್ಡ ಮೊತ್ತದ, ದೊಡ್ಡ ಗಾತ್ರದ ವಸ್ತುಗಳಿಗಿಂತ ಬೀಜಗಳ ವಹಿವಾಟಿನಲ್ಲಿ ಇಂಥ ದುರ್ದಂಧೆ ಸುಲಭ. ಮೇಲಾಗಿ, ಅಮೆರಿಕ ಹಾಗೂ ಐರೋಪ್ಯ ದೇಶಗಳಿಗೆ ಅಗ್ಗದ ಚೀನೀ/ತೈವಾನಿ, ಕೊರಿಯಾದ ವಸ್ತುಗಳು ಇನ್ನಷ್ಟು ಅಗ್ಗದಲ್ಲಿ ಬರುವಂತೆ ಅಲ್ಲಿನ ಸರ್ಕಾರಗಳೇ ಅಂಚೆ ಶುಲ್ಕದಲ್ಲಿ ಭಾರೀ ರಿಯಾಯಿತಿ ಘೋಷಿಸಿಕೊಂಡಿವೆ.

ಚೀನೀ ಮೂಲದ ಬೇರೆಲ್ಲ ಭೋಗಸಾಮಗ್ರಿಗಳ ಜೊತೆ ಬೀಜಗಳೂ ಬಂದಿದ್ದು ಪಾಶ್ಚಾತ್ಯ ದೇಶಗಳಿಗೆ ತಲೆನೋವಾಗಿದೆ. ಏಕೆಂದರೆ ಬೀಜ, ಸಸ್ಯ, ಕೀಟ, ಶಿಲೀಂಧ್ರಗಳ ವಿಷಯದಲ್ಲಿ ಈ ದೇಶಗಳು ಕಟ್ಟೆಚ್ಚರದಿಂದ ಇರುತ್ತವೆ. ಪ್ರವಾಸಿಗರ ಸೂಟ್‌ಕೇಸ್‌ನಲ್ಲಿ ಜೀರಿಗೆ, ಸಾಸಿವೆ ಇದ್ದರೂ ಚೆಕ್ ಮಾಡಲಾಗುತ್ತದೆ. ಅಮೆರಿಕದ ಕೆಲವೆಡೆ ಈ ರಾಜ್ಯದಿಂದ ಆ ರಾಜ್ಯಕ್ಕೆ ಕೂಡ ಜೀವದ್ರವ್ಯಗಳ ಸಾಗಣೆ ಮಾಡುವಂತಿಲ್ಲ. ಬೇರೆ ದೇಶದಿಂದ ಸಸ್ಯ-ಪ್ರಾಣಿ-ಬೀಜ-ಮೊಟ್ಟೆ ಏನನ್ನೇ ತರಿಸಿದರೂ ಅವನ್ನು ಕ್ವಾರಂಟೈನ್ ಮಾಡಿ, ಸುರಕ್ಷತಾ ಸರ್ಟಿಫಿಕೇಟ್ ಪಡೆದ ನಂತರವೇ ಬಳಕೆಗೆ, ಸಂಶೋಧನೆಗೆ ಬಿಡಲಾಗುತ್ತದೆ. ಆ ಹಿನ್ನೆಲೆಯಲ್ಲೇ ಅವು ಚೀನಾದಿಂದ ಬರುವ ಬೀಜಗಳ ಫ್ರೀಪ್ಯಾಕೆಟ್ ಕುರಿತು ತಮ್ಮ ಪ್ರಜೆಗಳಿಗೆ ಎಚ್ಚರಿಕೆ ನೋಟಿಸ್ ನೀಡಿವೆ. ಅದನ್ನೇ ನಮ್ಮ ಕೃಷಿ ಅಧಿಕಾರಿಗಳೂ ಕಾಪಿ ಮಾಡಿ, ಎಚ್ಚರಿಕೆಯ ಘೋಷಪತ್ರ ಹೊರಡಿಸಿ, ಸುದ್ದಿ ಮಾಧ್ಯಮಗಳಿಗೆ ಹಬ್ಬದೂಟ ಉಣಿಸಿ ಕೈತೊಳೆದುಕೊಂಡಿವೆ. ನಮ್ಮ ರೈತರಿಗೆ ಚೀನಾದಿಂದ ಅಂಥ ಅನಾಮಿಕ ಪ್ಯಾಕೆಟ್ ಬಂದ ಒಂದೂ ಉದಾಹರಣೆ ಇದುವರೆಗಂತೂ ಸಿಕ್ಕಿಲ್ಲ.

ಅನಾಮಧೇಯ ಬೀಜಗಳ ಬಗ್ಗೆ ನಾವು ಹುಷಾರಾಗಿರಬೇಕು- ಖರೆ. ಬೀಜದ ಜೊತೆ ವೈರಸ್, ಕಳೆಬೀಜ, ಶಿಲೀಂಧ್ರ ಏನೂ ಇರಬಹುದು. ನಮ್ಮಲ್ಲಿ ಲಂಟಾನಾ, ಪಾರ್ಥೇನಿಯಂ, ಯುಪಟೋರಿಯಂ, ಗೇಣುದ್ದದ ಬಸವನಹುಳು, ಆಫ್ರಿಕನ್ ಕ್ಯಾಟ್‌ಫಿಶ್ ಹೀಗೆ ಏನೆಲ್ಲ ವ್ಯಾಪಿಸಿ ಹಾವಳಿ ಎಬ್ಬಿಸಿವೆ. ಇನ್ನಷ್ಟು ಬರಕೂಡದು. ಆದರೆ ನಿಸರ್ಗಕ್ಕೆ, ಎಲ್ಲಕ್ಕಿಂತ ಘಾತುಕ ಟೆರರಿಸ್ಟ್ ಯಾವುದು ಗೊತ್ತೆ? ಅವು ಇದೇ ಕೃಷಿ ಅಧಿಕಾರಿಗಳ ಕೃಪೆಯಿಂದ ನಮ್ಮಲ್ಲಿಗೆ ಬಂದ ಪೀಡೆನಾಶಕ ಕೆಮಿಕಲ್‌ಗಳು. ಬೇರೆ ದೇಶಗಳಲ್ಲಿ ನಿಷೇಧಿಸಿದ್ದೆಲ್ಲವೂ ನಮ್ಮ ಹೊಲಕ್ಕೆ ರಾಜಾರೋಷವಾಗಿ ಬರುತ್ತಿವೆ. ಹಕ್ಕಿಪಕ್ಷಿಗಳ ಕಣ್ಮರೆ, ದುಂಬಿ- ಜೇನ್ನೊಣಗಳ ಕಣ್ಮರೆ, ಮಣ್ಣುಜೀವಿಗಳ ಕಣ್ಮರೆಯನ್ನು ಯಾರೂ ದಾಖಲಿಸುತ್ತಿಲ್ಲ. ಆಧುನಿಕ ಕೃಷಿಯೇ ಭಯಾನಕವಾಗಿದ್ದರೂ ನಾವು ಎಚ್ಚತ್ತಿಲ್ಲ.

ಕೃಷಿವಿಷಗಳಿಂದಾಗಿ ನಿಸರ್ಗದ ಯಾವ ಯಾವ ಹಾಡುಹಕ್ಕಿಗಳು ಕಣ್ಮರೆಯಾಗಿವೆ ಎಂಬುದರ ಬಗ್ಗೆ ಬ್ರಿಟನ್ನಿನ ಸಂಸತ್ತಿನಲ್ಲಿ 25 ವರ್ಷಗಳ ಹಿಂದೆಯೇ ಶ್ವೇತ ಪತ್ರವನ್ನು ಹೊರಡಿಸಲಾಗಿತ್ತು. ಅಲ್ಲಿ ಈಗಲೂ ಶಾಲಾ ಮಕ್ಕಳನ್ನು ಹೊಲಕ್ಕೆ ಕಳಿಸಿ ಹಕ್ಕಿಪಕ್ಷಿ, ಹುಳಹುಪ್ಪಟೆಗಳ ದಾಖಲಾತಿ ಮಾಡಿಸಲಾಗುತ್ತದೆ. ನಮ್ಮ ಪಠ್ಯಗಳಲ್ಲಿ ಕೃಷಿಗೆ ಪೂರಕವಾದ ಹಕ್ಕಿಪಕ್ಷಿಗಳ ಹೇಳಹೆಸರಿಲ್ಲ. ಮೊನ್ನೆ ವಿಶ್ವ ಪರಿಸರ ದಿನ 'ಪ್ರಕೃತಿಯ ಪುನಶ್ಚೇತನ' ಕುರಿತು ನಮ್ಮ ಕೃಷಿ, ಅರಣ್ಯ, ಪಶುಸಂಗೋಪನೆ, ಕಂದಾಯ, ರೇಷ್ಮೆ, ಮೀನುಗಾರಿಕೆ, ನೀರಾವರಿ, ಗ್ರಾಮೀಣಾಭಿವೃದ್ಧಿ ಇತ್ಯಾದಿ ಛಪ್ಪನ್ನಾರು ಇಲಾಖೆಗಳ ಒಬ್ಬರಾದರೂ ಸಚಿವರಾಗಲೀ ಅಧಿಕಾರಿಗಳಾಗಲೀ ತುಟಿ ಬಿಚ್ಚಿದ್ದರೆ?

ಕೂತಲ್ಲೇ ಟ್ವೀಟ್ (ಹಕ್ಕಿ ಉಲಿ)ಮಾಡಿರಬಹುದು. ಮಾಡಿದ್ದರೆ ತಿಳಿಸಿ.

(ಲೇಖನದ ಪೂರ್ಣಪಾಠಕ್ಕಾಗಿ www.prajavani.co.in)



ಚುರುಮುರಿ



ಜೈಲೇ ಸುರಕ್ಷಿತ!

● ಚಂದ್ರಕಾಂತ ವಡ್ಡು

ಲಾಕ್‌ಡೌನ್‌ನಿಂದ ಕಾಲಿಗೆ ವಾಕಿಂಗ್ ಇಲ್ಲದೇ, ನಾಲಿಗೆಗೆ ಚಪ್ಪರಿಸಲು ಗಾಸಿಪ್ಪುಗಳಿಲ್ಲದೇ, ಗಂಟಲಿಗೆ ಸರಿಯಾಗಿ ಪೆಗ್ಗುಗಳಿಲ್ಲದೇ, ಆಕ್ಸಿಜನ್ ಅರವತ್ತಕ್ಕೆ ಇಳಿದವರಂತೆ ಬಸವಳಿದಿದ್ದ ಬದ್ರಿ.

ಈ ಮಧ್ಯೆ ಅಪ್ಪನಿಗೆ ಮಗ ವಾಟ್ಸ್‌ಆ್ಯಪ್ ಖಾತೆ ಬೇರೆ ತೆಗೆದುಕೊಟ್ಟಿದ್ದ. ಮೊದಲ ಬಾರಿಗೆ ಕೈಗೆ ಬಣ್ಣದ ಪೆನ್ಸಿಲ್ ಸಿಕ್ಕ ಮಗು ಮನೆಯ ಗೋಡೆಗಳ ಮೇಲೆಲ್ಲಾ ಗೀಚುವಂತೆ, ಬದ್ರಿ ವಾಟ್ಸ್‌ಆ್ಯಪ್‌ನಲ್ಲಿ ಕಂಡದ್ದನ್ನೆಲ್ಲಾ ಫಾರ್ವರ್ಡ್ ಮಾಡುತ್ತಾ ಸಮಯ ಕಳೆಯತೊಡಗಿದ್ದ.

ಒಂದು ಸಂಜೆ ಬದ್ರಿ ಮೊಬೈಲ್ ಪರದೆಯನ್ನು, ವೀಳ್ಯದೆಲೆಗೆ ಸುಣ್ಣ ತೀಡುವಂತೆ ತಿಕ್ಕುತ್ತಾ ಕುಳಿತಿರುವಾಗ ಹೆಂಡತಿ ಒಂದು ಬ್ರೇಕಿಂಗ್ ನ್ಯೂಸ್ ಬಿತ್ತರಿಸಿದಳು: 'ರೀ... ಲಾಕ್‌ಡೌನ್ ವಿಸ್ತರಿಸಿದ್ದಾರೆ!' ಅದೇ ಸುದ್ದಿಯನ್ನು ನೂರಾರು ವಾಟ್ಸ್‌ಆ್ಯಪ್ ಗುಂಪುಗಳಿಗೆ ಫಾರ್ವರ್ಡ್ ಮಾಡಿದ್ದರೂ ಬದ್ರಿಗೆ ಆ ವಿಷಯ ಗಮನಕ್ಕೇ ಬಂದಿರಲಿಲ್ಲ. ಅಚ್ಚರಿಯಿಂದ ಗೆಳೆಯ ತಿಂಗಳೇಶನಿಗೆ ಫೋನು ಹಚ್ಚಿದ. 'ವಿಸ್ತರಣೆ ವಿಷಯ ಗೊತ್ತಾಯ್ತಾ?'

'ಹ್ಞಾಂ... ಎರಡನೇ ಡೋಸ್ ಲಸಿಕೆ ತೆಗೆದುಕೊಳ್ಳುವ ಸಮಯ ವಿಸ್ತರಿಸಿದ್ದಾರಂತೆ'.

'ಲಾಕ್‌ಡೌನ್ ವಿಸ್ತರಣೆ...' ಎಂದು ವಿವರಿಸಲು ಹೊರಟ ಬದ್ರಿ.

'ಅದನ್ನು ವಾರದ ಹಿಂದೆ ಸುದ್ದಿ ವಾಹಿನಿಗಳೇ ನಿರ್ಧರಿಸಿದ್ದವು. ಈಗ ಮುಖ್ಯಮಂತ್ರಿ ಅನಿವಾರ್ಯವಾಗಿ ಘೋಷಣೆ ಮಾಡಿದ್ದಾರೆ, ಅಷ್ಟೇ...'

ಹೊಸ ಸುದ್ದಿ ತಿಳಿಸುವ ಪ್ರಯತ್ನ ಹುಸಿಯಾದ್ದರಿಂದ ಬದ್ರಿ ಮತ್ತೊಂದು ವಿಷಯ ಪೋಣಿಸಿದ.

'ಕೋವಿಡ್ ಮೂರನೇ ಅಲೆ ಎದುರಿಸಲು ಜೈಲುಗಳ ಸಂಖ್ಯೆ ಹೆಚ್ಚಿಸಬೇಕಾಗುತ್ತದೆ...'

ಇದೇನು ತಜ್ಞರ ಸಲಹೆಯೋ ವಿಶ್ವ ಆರೋಗ್ಯ ಸಂಸ್ಥೆ ನಿರ್ದೇಶನವೋ ಎಂದು ತಿಳಿಯದೇ ತಿಂಗಳೇಶ ಕಂಗಾಲಾದ.

'ಮೈಸೂರಿನ ಕೈದಿಗಳು ಪೆರೋಲ್ ಸಿಕ್ಕರೂ ಕೋವಿಡ್ ಸುರಕ್ಷತೆ ದೃಷ್ಟಿಯಿಂದ ಜೈಲಲ್ಲೇ ಇರಲು ತೀರ್ಮಾನಿಸಿದ್ದಾರೆ. ಇದೇ ಉಪಾಯ ಹೂಡಿ, ಮುಂಬರುವ ದಿನಗಳಲ್ಲಿ ಜನ ಜೈಲು ಸೇರಲು ಮುಗಿಬೀಳುತ್ತಾರೆ. ಆಸ್ಪತ್ರೆ, ಕೋವಿಡ್ ಆರೈಕೆ ಕೇಂದ್ರಗಳಿಗಿಂತ, ಮನೆಸೆರೆಗಿಂತ ಜೈಲೇ ಸುರಕ್ಷಿತ ಎನ್ನಿಸಿದರೆ ತಪ್ಪೇನು?' ತಿಂಗಳೇಶನಿಗೂ ಹೌದೆನ್ನಿಸಿತು.

ಸಂಗತ

ಶೈಕ್ಷಣಿಕ ಸಾಲ 'ಹೊರೆ' ಆಗದಿರಲಿ

ಶೈಕ್ಷಣಿಕ ಸಾಲವನ್ನು ವಿದ್ಯಾರ್ಥಿ ಮತ್ತು ಅವರ ಕುಟುಂಬದ ವೈಯಕ್ತಿಕ ಹೊಣೆಗಾರಿಕೆಗೆ ಸೀಮಿತಗೊಳಿಸಿ ನೋಡುವ ಮನೋಭಾವ ಬದಲಾಗಬೇಕು

● ಬಿ.ಎಸ್.ಶಿವಣ್ಣ ಮಳವಳ್ಳಿ


ಕೊರೊನಾ ವೈರಾಣು ಸೋಂಕು ಜಗತ್ತಿನ ವಿವಿಧ ರಾಷ್ಟ್ರಗಳನ್ನು ತೀವ್ರವಾಗಿ ಕಾಡುತ್ತಿದೆ. ಭಾರತವೂ ಒಂದೂಕಾಲು ವರ್ಷದಿಂದ ಕೊರೊನಾ ವೈರಾಣುವಿನ ಭೀತಿಯಲ್ಲೇ ಇದೆ. ಈ ಸೋಂಕು ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರಕ್ಕೆ ಸೀಮಿತವಾದ ಆತಂಕವಾಗಿ ಉಳಿದಿಲ್ಲ. ಕೋವಿಡ್–19 ಮತ್ತು ಅದರ ಪರಿಣಾಮವಾಗಿ ಜಾರಿಗೊಂಡ ಲಾಕ್‌ಡೌನ್‌ಗಳು ಇಡೀ ಜಗತ್ತಿನ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡಿವೆ. ಭಾರತದ ಪರಿಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಕೋವಿಡ್ ಸೃಷ್ಟಿಸಿರುವ ಬಿಕ್ಕಟ್ಟಿನಿಂದ ದುಡಿಯುವ ವರ್ಗದ ಜನರು ಹೆಚ್ಚು ತೊಂದರೆಗೆ ಸಿಲುಕಿದ್ದಾರೆ. ಬಡವರು ಮತ್ತು ಮಧ್ಯಮ ವರ್ಗದ ಜನರ ಆರ್ಥಿಕ ಜಂಘಾಬಲವೇ ಉಡುಗಿ ಹೋದಂತಹ ಸ್ಥಿತಿ ನಿರ್ಮಾಣವಾಗಿದೆ.

ಕರ್ನಾಟಕವೂ ಸೇರಿದಂತೆ ದೇಶದ ಬಹುತೇಕ ರಾಜ್ಯಗಳು ಈಗ ಎರಡನೇ ಲಾಕ್‌ಡೌನ್‌ನ ನಡುವೆ ಇವೆ. 2020ರಲ್ಲಿ ಜಾರಿಯಾದ ಮೊದಲ ಲಾಕ್‌ಡೌನ್‌ನಲ್ಲೇ ಜನರು ಹೈರಾಣಾಗಿದ್ದರು. ಈಗ ಕೋವಿಡ್‌ನಿಂದ ಸಾವು, ಆಸ್ಪತ್ರೆಗಳ ಹಾಸಿಗೆಗಳಿಗಾಗಿ ಪರದಾಟ ಹೆಚ್ಚಾಗುತ್ತಿದ್ದಂತೆ ಸರ್ಕಾರ ಮತ್ತೆ ಲಾಕ್‌ಡೌನ್ ಜಾರಿಗೊಳಿಸಿದೆ. ಪರಿಣಾಮವಾಗಿ ದೇಶದ ಬಹುತೇಕ ಭಾಗಗಳಲ್ಲಿ ಆರ್ಥಿಕ ಚಟುವಟಿಕೆಗಳು ಸ್ತಬ್ಧಗೊಂಡಿವೆ. ಇದು ದೇಶದ ಕೋಟ್ಯಂತರ ವಿದ್ಯಾರ್ಥಿಗಳ ಭವಿಷ್ಯವನ್ನೇ ತೂಗುಯ್ಯಾಲೆಯಲ್ಲಿ ಸಿಲುಕಿಸಿದೆ. ಕೋಟ್ಯಂತರ ಮಂದಿಯ ಉದ್ಯೋಗಕ್ಕೆ ಕತ್ತರಿ ಬಿದ್ದಿದ್ದರೆ, ಹೊಸ ಉದ್ಯೋಗಗಳ ಸೃಜನೆ ಸ್ಥಗಿತಗೊಂಡು ವರ್ಷ ಕಳೆಯುತ್ತಿದೆ.

ಕೋವಿಡ್ ಲಾಕ್‌ಡೌನ್ ಜಾರಿಗೊಳಿಸಿದ ಬೆನ್ನಲ್ಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 'ಪರಿಹಾರ ಪ್ಯಾಕೇಜ್' ಘೋಷಣೆಯ ಶಾಸ್ತ್ರ ಮುಗಿಸಿವೆ. ಮೊದಲ ಲಾಕ್‌ಡೌನ್‌ನಲ್ಲಿ ಘೋಷಿಸಿದ್ದಂತೆ ಈ ಬಾರಿಯೂ ಆಗಿದೆ. ಮಾನವೀಯ ಅಂತಃಕರಣದ ಸ್ಪರ್ಶವಿಲ್ಲದ, ಕೇವಲ ತೋರಿಕೆಯ ಪ್ಯಾಕೇಜ್‌ಗಳನ್ನು ಘೋಷಿಸುವ ಕೆಲಸವನ್ನು ನಮ್ಮ ರಾಜ್ಯ ಸರ್ಕಾರವೂ ಮಾಡಿದೆ. ಆದರೆ, ಎರಡೂ ಸಂದರ್ಭಗಳಲ್ಲಿ ಉದ್ಯೋಗ ಕಳೆದುಕೊಂಡ ಮತ್ತು ಉದ್ಯೋಗ ಸೃಜನೆಗಾಗಿ ಕಾದಿರುವ ಯುವಜನರ ನೆರವಿಗೆ ಬರುವ ಯಾವ ಉಪಕ್ರಮಗಳನ್ನೂ ಸರ್ಕಾರಗಳು ಘೋಷಿಸದೇ ಇರುವುದು ನಮ್ಮ ಆಡಳಿತ ವ್ಯವಸ್ಥೆಯಲ್ಲಿರುವ ದೂರದೃಷ್ಟಿಯ ಕೊರತೆಗೆ ಕನ್ನಡಿ ಹಿಡಿಯುತ್ತಿದೆ.

ದೇಶದಲ್ಲಿ ಬಡವರು ಮತ್ತು ಮಧ್ಯಮ ವರ್ಗದ ಕುಟುಂಬಗಳ ಹೆಚ್ಚಿನ ಯುವಕ, ಯುವತಿಯರು ಬ್ಯಾಂಕ್‌ಗಳು ಹಾಗೂ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಉದ್ಯೋಗದ ಭರವಸೆಯ ಆಧಾರದಲ್ಲೇ ಶೈಕ್ಷಣಿಕ ಸಾಲ ಮರುಪಾವತಿಯೂ ನಿಂತಿರುತ್ತದೆ. ಈಗ ಎರಡು ವರ್ಷಗಳಿಂದ ದೇಶದಲ್ಲಿ ನಿರುದ್ಯೋಗದ ಪ್ರಮಾಣ ಏರುತ್ತಲೇ ಇದೆ. ಜೂನ್ ಮೊದಲ ವಾರದ ಅಂತ್ಯಕ್ಕೆ ಸರಾಸರಿ ಶೇ 12.8 ತಲುಪಿದೆ. ನಗರ ಪ್ರದೇಶಗಳಲ್ಲಿ ನಿರುದ್ಯೋಗ ದರ ಶೇ 15.5ರಷ್ಟಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಶೇ 11.6ರಷ್ಟಿದೆ ಎಂಬುದನ್ನು 'ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ' (ಸಿಎಂಐಇ) ವರದಿ ತಿಳಿಸಿದೆ.

ಕೋವಿಡ್ ಲಾಕ್‌ಡೌನ್‌ನ ಪರಿಣಾಮವಾಗಿ ದೇಶದ ಬಹುತೇಕ ಬೃಹತ್ ಕಂಪನಿಗಳು ತಮ್ಮ ಮಾನವ ಸಂಪನ್ಮೂಲದ ಬಲವನ್ನು ಕಡಿಮೆ ಮಾಡಿವೆ. ಲಾಕ್‌ಡೌನ್ ಮತ್ತು ಅದು ಸೃಷ್ಟಿಸಿದ ಆರ್ಥಿಕ ಕುಸಿತದ ಕಾರಣಗಳಿಂದಾಗಿಯೇ ಕೋಟ್ಯಂತರ ಉದ್ಯೋಗಗಳಿಗೆ ಕತ್ತರಿ ಬಿದ್ದಿದೆ. ಬಹುಪಾಲು ಕಂಪನಿಗಳು ಹೊಸ ನೇಮಕಾತಿಗಳಿಗೆ ವಿದಾಯ ಹೇಳಿ ವರ್ಷ ಕಳೆದಿದೆ. ಇಂತಹ ಸನ್ನಿವೇಶದಲ್ಲಿ ಶೈಕ್ಷಣಿಕ ಸಾಲ ಪಡೆದ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬದ ಸದಸ್ಯರು ಕಂಗಾಲಾಗಿದ್ದಾರೆ. ದೇಶದಲ್ಲಿ ಅಂದಾಜು ₹ 1.2 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಶೈಕ್ಷಣಿಕ ಸಾಲ ಮರುಪಾವತಿಗೆ ಬಾಕಿ ಇದೆ ಎಂಬ ವರದಿಗಳಿವೆ. ಎರಡು ವರ್ಷಗಳಿಂದ ಈಚೆಗೆ ವ್ಯಾಸಂಗ ಮುಗಿಸಿದವರಿಗೆ ಶೈಕ್ಷಣಿಕ ಸಾಲದ ತಿಂಗಳ ಕಂತು ಪಾವತಿಗೆ ಸಾಕಾಗುವಷ್ಟು ವೇತನವುಳ್ಳ ಉದ್ಯೋಗ ಹುಡುಕಿಕೊಳ್ಳುವುದೂ ಕಷ್ಟವಾಗಿದೆ.



ನಮ್ಮ ಭವಿಷ್ಯದ ತಲೆಮಾರು ಇಂತಹ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿರುವ ಸಂದರ್ಭದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದವರು ಮಾನವೀಯ ಅಂತಃಕರಣದಿಂದ ಸ್ಪಂದಿಸುವ ಕೆಲಸ ಮಾಡಬೇಕಿತ್ತು. ಶೈಕ್ಷಣಿಕ ಸಾಲ ಮತ್ತು ಅದರ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ, ಕೆಲವು ವರ್ಷಗಳವರೆಗೆ ಮರುಪಾವತಿಗೆ ವಿರಾಮ ನೀಡುವ ನಿರ್ಧಾರವನ್ನು ಪ್ರಕಟಿಸಬೇಕಿತ್ತು. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ವಿಚಾರದ ಕಡೆಗೆ ಕಣ್ಣೆತ್ತಿಯೂ ನೋಡದೆ ಇರುವುದು ದುರದೃಷ್ಟಕರ ಬೆಳವಣಿಗೆ. ಆಡಳಿತ ಪಕ್ಷ ಮಾತ್ರವಲ್ಲ ವಿರೋಧ ಪಕ್ಷಗಳೂ ಸೇರಿದಂತೆ ದೇಶದ ಯಾವ ರಾಜಕೀಯ ಪಕ್ಷವೂ ಇದನ್ನು ವರ್ತಮಾನದಲ್ಲಿನ ಚರ್ಚೆಯ ಮುನ್ನೆಲೆಗೆ ತರದೇ ಇರುವುದು ಸೋಜಿಗದ ಸಂಗತಿ.

ಶೈಕ್ಷಣಿಕ ಸಾಲವನ್ನು ವಿದ್ಯಾರ್ಥಿ ಮತ್ತು ಅವರ ಕುಟುಂಬದ ವೈಯಕ್ತಿಕ ಹೊಣೆಗಾರಿಕೆಗೆ ಸೀಮಿತಗೊಳಿಸಿ ನೋಡುವ ಮನೋಭಾವ ಬದಲಾಗಬೇಕು. ಅದು ಸಾಮೂಹಿಕ ಹೊಣೆಗಾರಿಕೆ ಎಂದೇ ಭಾವಿಸಬೇಕು. ಶಿಕ್ಷಣಕ್ಕಾಗಿ ಪಡೆದ ಸಾಲವು ಮಕ್ಕಳ ಕುಟುಂಬಗಳನ್ನು ಬಾಧಿಸುವುದನ್ನು ತಡೆಯುವ ಕ್ರಮಗಳನ್ನು ಕೈಗೊಳ್ಳಬೇಕಿರುವುದು ಆಡಳಿತದ ಚುಕ್ಕಾಣಿ ಹಿಡಿದಿರುವವರ ಹೊಣೆಗಾರಿಕೆ. ವಿರೋಧ ಪಕ್ಷಗಳೂ ಸೇರಿದಂತೆ ಎಲ್ಲರೂ ಈ ವಿಚಾರದಲ್ಲಿ ದನಿಗೂಡಿಸಬೇಕಿದೆ.

ಲೇಖಕ: ಅಧ್ಯಕ್ಷ, ರಾಮಮನೋಹರ ಲೋಹಿಯಾ ವಿಚಾರ ವೇದಿಕೆ

ವಾಚಕರ ವಾಣಿ

ಸಂವಿಧಾನದತ್ತ ಒಕ್ಕೂಟ ತತ್ವಕ್ಕೆ ಜಯ

'18 ವರ್ಷಕ್ಕಿಂತ ಮೇಲಿನ ಎಲ್ಲರಿಗೂ ಒಕ್ಕೂಟ ಸರ್ಕಾರದಿಂದಲೇ ಉಚಿತ ಲಸಿಕೆ' ಎಂಬ ಪ್ರಧಾನಿಯವರ ಇತ್ತೀಚಿನ ಘೋಷಣೆಯು ನಮ್ಮ ಪವಿತ್ರ ಸಂವಿಧಾನ ಪ್ರಣೀತ ಒಕ್ಕೂಟ ತತ್ವಕ್ಕೆ ದೊರೆತ ಜಯವಾಗಿದೆ.

ಸುಪ್ರೀಂ ಕೋರ್ಟ್ ಚಾಟಿ ಏಟಿನಿಂದ ಎಂದು ಕೆಲವರು, 13 ರಾಜ್ಯಗಳ ಮುಖ್ಯಮಂತ್ರಿಗಳ ಒತ್ತಾಯದಿಂದ ಎಂದು ಕೆಲವರು, ಉಚಿತ ಲಸಿಕೆ ಘೋಷಣೆಗೂ ನ್ಯಾಯಾಲಯದ ಚಾಟಿ ಏಟಿಗೂ ಸಂಬಂಧವಿಲ್ಲ ಎಂದು ಆಳುವ ಪಕ್ಷ- ಹೀಗೆ ಉಚಿತ ಲಸಿಕೆ ಘೋಷಣೆ ಬಗ್ಗೆ ಯಾರು ಏನೇ ಹೇಳಿದರೂ ಇದು ಪ್ರಧಾನವಾಗಿ ನಮ್ಮ ಒಕ್ಕೂಟ ತತ್ವಕ್ಕೆ ಸಂದ ಜಯವಾಗಿದೆ. ಜೈ ಸಂವಿಧಾನ, ಜೈ ಒಕ್ಕೂಟ ತತ್ವ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಸುಂದರ ಪರಿಸರಕ್ಕೆ ದಾರಿ ತೋರಿ

ಚೀನಾ, ಜಪಾನ್, ಜರ್ಮನಿ, ಅಮೆರಿಕದಂತಹ ದೇಶಗಳು ಮಕ್ಕಳಿಗೆ ನಿರಂತರವಾಗಿ ಪರಿಸರ ಪಾಠ ಮಾಡುತ್ತಿವೆ. ನಮ್ಮ ರಾಜ್ಯದಲ್ಲಿ ಒಂದರಿಂದ ಹತ್ತನೇ ತರಗತಿವರೆಗೆ ಕೇವಲ ಶೇ 4ರಷ್ಟು ಪರಿಸರ ಪಾಠ ಇದೆ. ಇನ್ನುಳಿದ ಶೇ 96ರಷ್ಟು ಬೇರೆ ವಿಷಯಗಳ ಪಾಠ ಇರುವುದರಿಂದ ಮಕ್ಕಳಿಗೆ ಪರಿಸರದ ಸಂಪೂರ್ಣ ಜ್ಞಾನ ಇಲ್ಲದಂತಾಗಿದೆ. ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯು ಕೃಷಿ, ಪರಿಸರ ಪಾಠಗಳನ್ನೂ ಶಾಲೆಯ ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಒತ್ತಾಯಿಸಿ ಡಿಎಸ್‌ಇಆರ್‌ಟಿ, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಮನವಿ ಸಲ್ಲಿಸಿದೆ.

ಆಹಾರ, ರೈತ, ಮರ ಬೆಳೆಸುವುದು, ಅರಣ್ಯ, ಜಲಸಾಕ್ಷರತೆ, ಮಳೆ ಪ್ರಮಾಣ ಅಳೆಯುವುದು, ನೀರು ಆವಿ ಪ್ರಮಾಣ, ತಾರಸಿ ಮಳೆನೀರು, ಕೃಷಿ ಹೊಂಡ, ಕೆರೆ, ನದಿಮಾಲಿನ್ಯ, ಮಣ್ಣು ಸಂರಕ್ಷಣೆ, ಕಸ ನಿರ್ವಹಣೆ, ಗೊಬ್ಬರ ತಯಾರಿಕೆ, ಬಿತ್ತನೆ ಬೀಜ, ಪವನಶಕ್ತಿ, ಸೌರಶಕ್ತಿ, ಜೈವಿಕ ಇಂಧನ, ವಾಯುಮಾಲಿನ್ಯ, ಹಸಿರುಮನೆ, ಜಾಗತಿಕ ತಾಪಮಾನ, ಪ್ರಾಣಿ, ಪಕ್ಷಿ, ಪಂಜಾಬ್ ಕ್ಯಾನ್ಸರ್ ರೈಲು, ವಿಯೆಟ್ನಾಂ ಕಳೆನಾಶಕ ದುರಂತ, ಭೋಪಾಲ್ ವಿಷಾನಿಲ ದುರಂತ, ಬಂಗಾಳ ಬರದಂತಹ ಸಂಗತಿಗಳನ್ನು ಪಠ್ಯಕ್ರಮದಲ್ಲಿ ಸೇರಿಸಿ, ಶಾಲಾ ಮಕ್ಕಳಿಗೆ ಜ್ಞಾನ ನೀಡಿ, ಸುಂದರ ಪರಿಸರಕ್ಕೆ ದಾರಿ ತೋರಬೇಕಾಗಿದೆ.

ಎಚ್.ಆರ್.ಪ್ರಕಾಶ್, ಮಂಡ್ಯ

ಹೊಸ ಪ್ರಯೋಗಗಳೆಲ್ಲ 'ಅರುಚಿ' ಅಲ್ಲ

ಇಂದಿನ ಚಿತ್ರಗೀತೆಗಳಲ್ಲಿ ಅರುಚಿಯೇ ಅಭಿರುಚಿಯಾದಂತಿದೆ ಎಂಬ ಡಾ. ದೊಡ್ಡರಂಗೇಗೌಡ ಅವರ ಅಭಿಪ್ರಾಯಕ್ಕೆ (ಸಂಗತ, ಮೇ 28) 'ಈಗಿನ ಚಿತ್ರಗೀತೆಗಳಲ್ಲೂ ಮತ್ತೆ ಮತ್ತೆ ಕೇಳುವಂತಹ ಗೀತೆಗಳು ಇವೆ' ಎಂಬ ಇಳಾ ಕುಲಕರ್ಣಿ ಅವರ ಪ್ರತಿಕ್ರಿಯೆಯನ್ನು (ವಾ.ವಾ., ಜೂನ್ 9) ನಾನು ಅನುಮೋದಿಸುತ್ತೇನೆ. ಚಲನಚಿತ್ರ ಎಂಬುದು ಸದಾಕಾಲ ಕ್ರಿಯಾಶೀಲತೆಗೆ ತನ್ನನ್ನು ಒಡ್ಡಿಕೊಂಡು ಬೆಳೆದುಬರುತ್ತಿರುವ ಕ್ಷೇತ್ರ. ಈ ಪ್ರಕ್ರಿಯೆಯಲ್ಲಿ ಕೆಲವು ಪ್ರಯೋಗಗಳು ಯಶಸ್ವಿಯಾಗುತ್ತವೆ, ಮತ್ತೆ ಕೆಲವು ಮರೆಯಾಗುತ್ತವೆ. ಹೊಸ ಪ್ರಯೋಗಗಳೆಲ್ಲವೂ 'ಅರುಚಿ'ಯಿಂದ ಕೂಡಿರುತ್ತವೆ ಎಂದು ಹೇಳಲಾಗದು.

ಅಲ್ಲದೆ ಚಲನಚಿತ್ರ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಬೇಕಾದಷ್ಟು ಹೊಸ ಪ್ರತಿಭೆಗಳ ಪ್ರವೇಶವಾಗುತ್ತಿದೆ. ಅವರಲ್ಲಿ ಬಹುತೇಕರು ಬಹಳ ಕ್ರಿಯಾಶೀಲ ಚಿಂತನೆಯಿಂದ ಅತ್ಯುತ್ತಮವಾಗಿ ತೊಡಗಿಸಿಕೊಂಡಿದ್ದಾರೆ. ಅಂತಹ ಪ್ರತಿಭಾವಂತರನ್ನು ಪ್ರೋತ್ಸಾಹಿಸಿ ಮಾಧ್ಯಮವನ್ನು ಇನ್ನಷ್ಟು ಗಟ್ಟಿಯಾಗಿ ಕಟ್ಟುವತ್ತ ನಾವೆಲ್ಲರೂ ಗಮನಹರಿಸೋಣ.

ಸುಗ್ಗನಹಳ್ಳಿ ಷಡಕ್ಷರಿ, ಬೆಂಗಳೂರು

ಲಸಿಕೆ ಪ್ರಮಾಣಪತ್ರ: ದೋಷರಹಿತವಾಗಿರಲಿ

ಕೋವಿಡ್ ಲಸಿಕಾ ಫಲಾನುಭವಿಗಳಿಗೆ ನೀಡುತ್ತಿರುವ ಪ್ರಮಾಣಪತ್ರದಲ್ಲಿ ದೋಷಪೂರಿತ ಮಾಹಿತಿ ಕೊಡಲಾಗುತ್ತಿದೆ. ಲಸಿಕೆ ಪಡೆದ ಮೇಲೆ ಫಲಾನುಭವಿಗಳ ಮೊಬೈಲ್‌ಗೆ ಎಸ್‌ಎಂಎಸ್ ಸಂದೇಶ ಬರುತ್ತದೆ. ಅದರಲ್ಲಿನ ಲಿಂಕ್ ಮೇಲೆ ಒತ್ತಿದರೆ ಪ್ರಮಾಣಪತ್ರ ಲಭ್ಯವಾಗುತ್ತದೆ. ಆದರೆ, ಪ್ರಮಾಣಪತ್ರದಲ್ಲಿ ಲಸಿಕೆ ಪಡೆದವರ ಹೆಸರು, ವಯಸ್ಸು, ಲಿಂಗ ಇವುಗಳಿಗೆ ಸಂಬಂಧಿಸಿದಂತೆ ತಪ್ಪಾಗಿ ನಮೂದಿಸಲಾಗುತ್ತಿದೆ. ವಿದೇಶ ಪ್ರಯಾಣ ಮಾಡುವವರಿಗೆ ವಿಮಾನ ನಿಲ್ದಾಣದಲ್ಲಿ ಇಂಥ ದೋಷಪೂರಿತ ಪ್ರಮಾಣಪತ್ರಗಳಿಗೆ ಮಾನ್ಯತೆ ದೊರೆಯುವುದಿಲ್ಲ.

ಆದ್ದರಿಂದ ಫಲಾನುಭವಿಗಳ ಮಾಹಿತಿಯನ್ನು ನಿಖರವಾಗಿ ಕಂಪ್ಯೂಟರೀಕರಣ ಮಾಡಿ, ಎಲ್ಲೆಡೆ ಮಾನ್ಯತೆ ದೊರೆಯುವಂತಹ ಪ್ರಮಾಣಪತ್ರ ಲಭ್ಯವಾಗುವಂತೆ ಮಾಡಬೇಕು. ಇದಕ್ಕಾಗಿ ಡೇಟಾ ಎಂಟ್ರಿ ಸಿಬ್ಬಂದಿಗೆ ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಬೇಕು

ಡಾ. ಟಿ.ಪಿ.ಗಿರಡ್ಡಿ, ಜಮಖಂಡಿ

ಪರಿಷ್ಕೃತ ಲಸಿಕೆ ನೀತಿಯಲ್ಲೂ ತಾರತಮ್ಯ

ಹೊಸ ಕೋವಿಡ್ ಲಸಿಕೆ ನೀತಿಯು ಲಸಿಕೆ ನೀಡಿಕೆಯಲ್ಲಿನ ತಾರತಮ್ಯವನ್ನು ಸಂಪೂರ್ಣವಾಗಿ ತೊಡೆದುಹಾಕಿಲ್ಲ. ಕೇಂದ್ರ ಸರ್ಕಾರವೇ ಲಸಿಕೆ ಖರೀದಿಸಿ ಎಲ್ಲ ರಾಜ್ಯಗಳಿಗೂ ವಿತರಿಸಲು ಸಿದ್ಧವಾಗಿದೆ. ಆದರೆ ಅದು ಶೇ 75ರಷ್ಟು ಲಸಿಕೆಯನ್ನು ಮಾತ್ರ ಖರೀದಿಸಿ ಉಳಿದ ಶೇ 25ರಷ್ಟನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡಲು ಉತ್ಪಾದಕರಿಗೆ ಅನುವು ಮಾಡಿಕೊಟ್ಟಿದೆ.

ಭಾರತದಲ್ಲಿ ಉತ್ಪಾದನೆಯಾಗುವ ಅಷ್ಟೂ ಲಸಿಕೆಯನ್ನು ಪಡೆದರೂ ದೇಶದ ಎಲ್ಲಾ ಜನರಿಗೆ ಎರಡು ಡೋಸ್ ಲಸಿಕೆ ಹಾಕಿ, ಕೋವಿಡ್‌ನ ಮೂರನೇ ಅಲೆಯನ್ನು ಎದುರಿಸಲು ಸಾಧ್ಯವಾಗುವುದಿಲ್ಲ. ವಿದೇಶಗಳಿಂದ ಮತ್ತು ಇತರ ಉತ್ಪಾದನಾ ಕಂಪನಿಗಳಿಗೆ ಅನುಮತಿ ನೀಡಿ ಲಸಿಕೆಯನ್ನು ತಯಾರಿಸಬೇಕಾದ ಪರಿಸ್ಥಿತಿ ಇದೆ. ನಿಜಸ್ಥಿತಿ ಹೀಗಿರುವಾಗ ಶೇ 25ರಷ್ಟು ಲಸಿಕೆಯನ್ನು ಹೆಚ್ಚು ದರಕ್ಕೆ ಮಾರಾಟ ಮಾಡಲು ಲಸಿಕೆ ಉತ್ಪಾದನಾ ಕಂಪನಿಗಳಿಗೆ ಅವಕಾಶ ಮಾಡಿಕೊಡುವ ಲಸಿಕೆ ನೀತಿಯು ಜನರ ಜೀವರಕ್ಷಣೆಯ ದೃಷ್ಟಿಯಿಂದ ಒಳ್ಳೆಯದಲ್ಲ. ಜನರ ಜೀವರಕ್ಷಣೆ ಮೊದಲ ಆದ್ಯತೆಯಾಗಬೇಕು, ಕಂಪನಿಯ ಲಾಭ ತದನಂತರವಾಗಬೇಕು.

ಕೇಂದ್ರವು ಆ ನೆಲೆಯಲ್ಲಿ ತನ್ನ ಲಸಿಕೆ ನೀತಿಯನ್ನು ಬದಲಾಯಿಸಿ, ದೇಶದಲ್ಲಿ ಉತ್ಪಾನೆಯಾಗುವ ಎಲ್ಲ ಲಸಿಕೆಯನ್ನೂ ಸ್ವತಃ ಖರೀದಿಸಿ ಸಾರ್ವತ್ರಿಕವಾಗಿ ಎಲ್ಲರಿಗೂ ಉಚಿತ ಲಸಿಕೆ ನೀಡುವಂತಾಗಬೇಕು.

ಟಿ.ಸುರೇಂದ್ರ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚುನಾವಣೆ ಮೊದಲಿನ ಪಕ್ಷಾಂತರ ತಂತ್ರ

ಇತ್ತೀಚಿನ ವರ್ಷಗಳಲ್ಲಿ ರಾಜ್ಯ ವಿಧಾನಸಭಾ ಚುನಾವಣೆಗಳು ಘೋಷಣೆಯಾಗುವ ಮುನ್ನ ಪ್ರತಿ ಬಾರಿಯೂ ಪಕ್ಷಾಂತರಗಳು ನಡೆದು ರಾಜಕೀಯವಾಗಿ ಹೊಸ ಸಮೀಕರಣಗಳು ಸೃಷ್ಟಿಯಾಗುತ್ತವೆ. ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಪುದುಚೇರಿ ವಿಧಾನಸಭೆಗಳಿಗೆ ಚುನಾವಣೆಗಳು ಘೋಷಣೆಯಾಗುವ ಮುನ್ನವೇ ಪಕ್ಷಾಂತರ ಆರಂಭವಾಗಿತ್ತು. ಆದರೆ ಪಕ್ಷಾಂತರಿಗಳಲ್ಲಿ ಹೆಚ್ಚಿನವರು ವಲಸೆ ಹೋಗಿದ್ದು ಬಿಜೆಪಿಗೆ. ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಇನ್ನೇನು ಹತ್ತಿರ ಬಂದಿದೆ. ಪಕ್ಷಾಂತರದ ಇನ್ನೊಂದು ಅಧ್ಯಾಯಕ್ಕೆ ಬಿಜೆಪಿ ಈಗಾಗಲೇ ಚಾಲನೆ ನೀಡಿದೆ. ಕಾಂಗ್ರೆಸ್‌ನ ಪ್ರಮುಖ ನಾಯಕ ಜಿತಿನ್ ಪ್ರಸಾದ ಅವರು ಬುಧವಾರವಷ್ಟೇ ಬಿಜೆಪಿ ಸೇರಿದ್ದಾರೆ.

20 ಕೋಟಿಗೂ ಹೆಚ್ಚು ಜನಸಂಖ್ಯೆ ಇರುವ ಉತ್ತರ ಪ್ರದೇಶದಲ್ಲಿ ಬ್ರಾಹ್ಮಣರ ಪ್ರಮಾಣ ಶೇ 13ರಷ್ಟಿದೆ. ಹಲವು ಕ್ಷೇತ್ರಗಳಲ್ಲಿ ಬ್ರಾಹ್ಮಣರು ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಅಲ್ಲದೆ, ಉತ್ತರ ಪ್ರದೇಶದಲ್ಲಿ 'ಮೇಲುಜಾತಿ' ಎಂದು ಗುರುತಿಸಿಕೊಳ್ಳುವ ಮೂರು ಪ್ರಮುಖ ಜಾತಿಗಳಲ್ಲಿ ಬ್ರಾಹ್ಮಣ ಸಮುದಾಯ ಸಹ ಒಂದು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಹಲವು ದಶಕಗಳ ಕಾಲ ಬ್ರಾಹ್ಮಣರು ಕಾಂಗ್ರೆಸ್‌ನ ಜತೆಗಿದ್ದರು. 90ರ ದಶಕದಲ್ಲಿ ಬಿಜೆಪಿಯ ಕಟ್ಟಾ ಬೆಂಬಲಿಗರಾಗಿ ಬದಲಾದರು. ಈ ಬೆಳವಣಿಗೆಯ ನಡುವೆಯೂ ಬ್ರಾಹ್ಮಣರ ಒಂದು ವರ್ಗವು ಕಾಂಗ್ರೆಸ್‌ನ ಜತೆಯಲ್ಲಿಯೇ ಇತ್ತು. ಈಗ ಇವರನ್ನೂ ತನ್ನತ್ತ ಸೆಳೆದುಕೊಳ್ಳಲು ಬಿಜೆಪಿ ಮುಂದಾಗಿದೆ.

ಬಿಜೆಪಿಯ ಕಟ್ಟಾ ಬೆಂಬಲಿಗರಾಗಿದ್ದರೂ 2017ರ ಚುನಾವಣೆಯ ನಂತರ ಯೋಗಿ ಆದಿತ್ಯನಾಥ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದರ ಬಗ್ಗೆ ಬ್ರಾಹ್ಮಣರಲ್ಲಿ ಪ್ರಬಲ ಅಸಮಾಧಾನವಿದೆ. ಠಾಕೂರ್ ಸಮುದಾಯದವರಾದ ಯೋಗಿ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದಕ್ಕೆ ಬಿಜೆಪಿಯ ಕೆಲವು ಬ್ರಾಹ್ಮಣ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಯೋಗಿಯ ಪರವಾಗಿ ಬೆಂಬಲ ಪ್ರಬಲವಾಗಿದ್ದ ಕಾರಣ ಈ ಆಕ್ಷೇಪಗಳಿಗೆ ಮಣೆಯನ್ನೇ ಹಾಕಿರಲಿಲ್ಲ. ತಮ್ಮ ಆಡಳಿತಾವಧಿಯಲ್ಲಿ ಯೋಗಿ ಅವರು ಬ್ರಾಹ್ಮಣರನ್ನು ತಮ್ಮ ಆಪ್ತವಲಯದಿಂದ ದೂರವೇ ಇಟ್ಟಿದ್ದಾರೆ. ಮುಂದಿನ ವಿಧಾನಸಭಾ ಚುನಾವಣೆಯನ್ನು ಯೋಗಿ ನೇತೃತ್ವದಲ್ಲೇ ಎದುರಿಸುತ್ತೇವೆ ಎಂದು ಬಿಜೆಪಿ ಹೇಳಿದ ನಂತರ ಬ್ರಾಹ್ಮಣರ ಈ ಅಸಮಾಧಾನ ಮತ್ತಷ್ಟು ತೀವ್ರಗೊಂಡಿದೆ ಎಂಬ ವಿಶ್ಲೇಷಣೆ ಇದೆ.



ಜಿತಿನ್ ಪ್ರಸಾದ ಅವರಿಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಂದ ಸ್ವಾಗತ

ಕೋವಿಡ್ ನಿರ್ವಹಣೆಯಲ್ಲಿ ಯೋಗಿ ಅವರು ವಿಫಲವಾಗಿದ್ದಾರೆ ಎಂಬ ಟೀಕೆ ಬಿಜೆಪಿಯಲ್ಲೇ ವ್ಯಕ್ತವಾಗುತ್ತಿದೆ. ಯೋಗಿ ವಿರುದ್ಧದ ಅಸಮಾಧಾನ ಹೆಚ್ಚಾಗುತ್ತಿದೆ. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಯಾವುದೇ ಎಡವಟ್ಟು ಆಗುವುದನ್ನು ತಡೆಯಲು ಬಿಜೆಪಿ ಮುಂದಾಗಿದೆ. ಮತಗಳನ್ನು ಉಳಿಸಿಕೊಳ್ಳುವ ಮತ್ತು ಸೆಳೆಯುವ ಎಲ್ಲಾ ಪ್ರಯತ್ನಗಳನ್ನು ಬಿಜೆಪಿ ಮಾಡಲಿದೆ.

ಈ ಪ್ರಯತ್ನದ ಭಾಗವಾಗಿಯೇ ಈಗ ರಾಜ್ಯ ಸರ್ಕಾರದ ವಿರುದ್ಧ ತೀವ್ರ ಅಸಮಾಧಾನ ಹೊಂದಿರುವ ಬ್ರಾಹ್ಮಣ ಸಮುದಾಯವನ್ನು ಓಲೈಸಲು ಬಿಜೆಪಿ ಮುಂದಾಗಿದೆ. ಜಿತಿನ್ ಅವರ ಈವರೆಗಿನ ರಾಜಕೀಯ ಸಾಧನೆಗೆ ಬಂಗಾರದ ಹೊಳಪೇನೂ ಇಲ್ಲ. ಜಿತಿನ್ ಅವರು ತಳಮಟ್ಟದಲ್ಲಿ ಭಾರಿ ಬೆಂಬಲ ಇರುವ ನಾಯಕ ಅಲ್ಲ. 2009ರ ನಂತರದ ಎರಡು ಲೋಕಸಭಾ ಚುನಾವಣೆಯಲ್ಲಿಯೂ ಅವರು ಸೋತಿದ್ದಾರೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಜಿತಿನ್ ಅವರು ಕಾಂಗ್ರೆಸ್ ಉಸ್ತುವಾರಿ ಆಗಿದ್ದರು. ಅಲ್ಲಿ ಒಂದು ಕ್ಷೇತ್ರದಲ್ಲಿಯೂ ಕಾಂಗ್ರೆಸ್ ಗೆದ್ದಿಲ್ಲ.

ಬ್ರಾಹ್ಮಣ ಸಮುದಾಯದ ಜಿತಿನ್ ಅವರನ್ನು ಪಕ್ಷಕ್ಕೆ ಸೇರಿಸುವ ಮೂಲಕ ತನ್ನ ಬೆಂಬಲಕ್ಕಿರುವ ಬ್ರಾಹ್ಮಣರನ್ನು ಸಮಾಧಾನಪಡಿಸುವುದು ಬಿಜೆಪಿಯ ಗುರಿ ಆಗಿರಬಹುದು. ಜತೆಗೆ ಇದು, ಕಾಂಗ್ರೆಸ್ ಬೆಂಬಲಕ್ಕಿದ್ದ ಬ್ರಾಹ್ಮಣರನ್ನು ಸೆಳೆಯುವ ತಂತ್ರವೂ ಆಗಿದೆ. ಬಿಜೆಪಿಯಲ್ಲಿ ಈವರೆಗೆ ಬ್ರಾಹ್ಮಣ ಸಮುದಾಯವನ್ನು ಪ್ರತಿನಿಧಿಸುವ ಪ್ರಬಲ ನಾಯಕರೇ ಇರಲಿಲ್ಲ. ಈ ಕೊರತೆಯನ್ನು ಜಿತಿನ್ ತುಂಬಬಹುದೇ ಎಂಬ ಪ್ರಶ್ನೆಯೂ ಇದೆ.

ಬಿಜೆಪಿ ಈ ಹಿಂದೆಯೂ ರಾಜ್ಯದ ಎಲ್ಲಾ ಬ್ರಾಹ್ಮಣರನ್ನು ಸೆಳೆಯುವ ತಂತ್ರಗಳನ್ನು ಹೂಡಿತ್ತು. ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಹೇಮಾವತಿ ನಂದನ ಬಹುಗುಣ ಅವರ ಮಗಳು, ರೀತಾ ಬಹುಗುಣ ಜೋಶಿ ಅವರು 2016ರಲ್ಲಿ ಬಿಜೆಪಿಗೆ ಪಕ್ಷಾಂತರ ಮಾಡಿದ್ದರು. ಆದರೆ ಆಗಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಆ ಪಕ್ಷಾಂತರದಿಂದ ಯಾವುದೇ ಲಾಭವಾಗಿರಲಿಲ್ಲ. ಈಗಿನ ತಂತ್ರ ಕೆಲಸಕ್ಕೆ ಬರುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.



ಬಂಗಾಳದಲ್ಲಿ ಬಿಜೆಪಿಗೆ ಕೈಕೊಟ್ಟ 'ಸಿದ್ಧಸೂತ್ರ'

2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಎಲ್ಲ ರಾಜ್ಯಗಳಲ್ಲೂ ಪಕ್ಷವನ್ನು ಅಧಿಕಾರಕ್ಕೆ ತರುವ ಮಹತ್ವಾಕಾಂಕ್ಷೆ ಹೊತ್ತಿದ್ದ ಬಿಜೆಪಿ, ನಂತರದ ದಿನಗಳಲ್ಲಿ ಹಲವು ರಾಜ್ಯಗಳಲ್ಲಿ ಚುಕ್ಕಾಣಿ ಹಿಡಿಯಿತು. ಕೆಲವು ಕಡೆ ಚುನಾವಣೆಗೂ ಮುನ್ನ ಪಕ್ಷಾಂತರದ ಮೂಲಕ ಶಾಸಕರನ್ನು ಸೆಳೆದು ಅಧಿಕಾರ ಹಿಡಿಯುವ ಯತ್ನ ಮಾಡಿ ಅದರಲ್ಲಿ ಯಶಸ್ವಿಯೂ ಆಯಿತು. ಇದು ಮುಂದೆ ಬಿಜೆಪಿಯ ನೀತಿಯೇ ಆಗಿಹೋಯಿತು. ಒಕ್ರಮ್ ಐಬೊಬಿ ಸಿಂಗ್, ಪೆಮಾ ಖಂಡು, ಹಿಮಂತ ಬಿಸ್ವ ಶರ್ಮಾ ಅವರು ಬಿಜೆಪಿಗೆ ಬಂದು ಮುಖ್ಯಮಂತ್ರಿ ಪಟ್ಟಕ್ಕೇರಿದರು. ಅಸ್ಸಾಂ, ಮಣಿಪುರ ಮೊದಲಾದೆಡೆ ನಡೆಸಿದ ಈ ಪ್ರಯೋಗವನ್ನು ಪಶ್ಚಿಮ ಬಂಗಾಳದಲ್ಲಿ ಪ್ರಯೋಗಿಸಲು ಹೋಗಿ ಎಡವಿತು.


ತನಗೆ ನೆಲೆ ಇಲ್ಲದ ಹಿಂದಿಯೇತರ ಪ್ರದೇಶ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯುವ ಉಮೇದಿನಿಂದ ಟಿಎಂಸಿ, ಕಾಂಗ್ರೆಸ್ ಹಾಗೂ ಎಡಪಕ್ಷಗಳಿಂದ ಭಾರಿ ಸಂಖ್ಯೆಯ ಮುಖಂಡರನ್ನು ಬಿಜೆಪಿ ಸೆಳೆಯಿತು. ಚುನಾವಣೆಯ ಹೊಸ್ತಿಲಲ್ಲಿ ಸುವೇಂದು ಅಧಿಕಾರಿ, ರಾಜೀವ್ ಬ್ಯಾನರ್ಜಿ ಅವರಂತಹ ಪ್ರಭಾವಿ ನಾಯಕರನ್ನು ಪಕ್ಷಕ್ಕೆ ಕರೆತರಲಾಯಿತು. ಪಕ್ಷ ಭಾರಿ ಬಲಿಷ್ಠವಾಗಿದೆ ಎಂದು ಬಿಂಬಿಸಲಾಯಿತು. ಪಕ್ಷ ಅಧಿಕಾರಕ್ಕೆ ಬಂದೇಬಿಟ್ಟಿತು ಎನ್ನುವಂತೆ ಉತ್ಸಾಹ ಪ್ರದರ್ಶಿಸಿತು.

ಆದರೆ ಬಿಜೆಪಿಯ ಸರ್ವ ಪ್ರಯತ್ನವೂ ಬುಡಮೇಲಾಗಿದೆ ಎಂಬುದನ್ನು ಫಲಿತಾಂಶವು ತೋರಿಸಿತು. ಸುವೇಂದು ಅಧಿಕಾರಿ ಮಾತ್ರ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ನಂದಿಗ್ರಾಮದಲ್ಲಿ ಗೆದ್ದುಬಂದರು. ಉಳಿದೆಡೆ ಭಾರಿ ಸ್ಪರ್ಧೆ ಒಡ್ಡುವುದು ಬಿಜೆಪಿಯಿಂದ ಆಗಲಿಲ್ಲ. ಚುನಾವಣಾ ಪ್ರಕ್ರಿಯೆ ಆರಂಭವಾದಾಗಿನಿಂದ ಬಿರುಸಿನ ವಾಕ್ಸಮರ, ನಿಂದನೆ, ಹಲ್ಲೆ, ಘರ್ಷಣೆ, ಗೋಲಿಬಾರ್, ಹಿಂಸಾಚಾರಕ್ಕೆ ಸಾಕ್ಷಿಯಾಗಿದ್ದ ಬಂಗಾಳದಲ್ಲಿ ಮಮತಾ ಅವರಿಗೆ ಲಗಾಮು ಹಾಕಲು ಬಿಜೆಪಿಗೆ ಸಾಧ್ಯವಾಗಲಿಲ್ಲ.

ಹೊರಗಿನಿಂದ ಬಂದವರಿಗೆ ಪಕ್ಷ ಹೆಚ್ಚು ಮಣೆ ಹಾಕಿದ್ದರಿಂದ ಸ್ಥಳೀಯ ಕಾರ್ಯಕರ್ತರು ಪ್ರಚಾರ ಕಾರ್ಯದಿಂದ ವಿಮುಖರಾದರು. ರಾಜ್ಯದ ಮೂಲ ಬಿಜೆಪಿಗರ ಬೆಂಬಲ ಅಷ್ಟಾಗಿ ಸಿಗಲಿಲ್ಲ. ರಾಜ್ಯ ಬಿಜೆಪಿ ಘಟಕದ ಬದಲು ಕೇಂದ್ರ ಬಿಜೆಪಿ ನಾಯಕತ್ವವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ಮುಂದಾಯಿತು. ಅತಿಹುಮ್ಮಸ್ಸಿನಲ್ಲಿದ್ದ ಬಿಜೆಪಿಗೆ ಇವೆಲ್ಲ ಕಾರಣಗಳು ಮುಳುವಾದವು.

ಬಿಜೆಪಿಯ ಅಸ್ತ್ರ ಕೈಕೊಟ್ಟಿದ್ದರ ಪರಿಣಾಮ, ಅನ್ಯ ಪಕ್ಷಗಳಿಂದ ಕರೆತಂದವರ ಪೈಕಿ ಗೆದ್ದಿದ್ದು 8 ಮಂದಿ ಮಾತ್ರ. ಮಮತಾಗೆ ಸೆಡ್ಡು ಹೊಡೆಯಲು ಹೊರಟಿದ್ದ ಬಿಜೆಪಿಗೆ ಪಕ್ಷಾಂತರಿಗಳೇ ಮುಳುವಾದರು. ಎಲ್ಲ ರಾಜ್ಯಗಳಲ್ಲಿ ಅನುಸರಿಸಿದ್ದ ಬಿಜೆಪಿಯ ಸಿದ್ಧಸೂತ್ರಕ್ಕೆ ಸೋಲಾಯಿತು. ಬಿಜೆಪಿಗೆ ಹೋಗಿದ್ದವರು ಇದೀಗ ತಮ್ಮ ಮಾತೃ ಪಕ್ಷಗಳತ್ತ ಮುಖಮಾಡವಷ್ಟರ ಮಟ್ಟಿಗೆ ಬಿಜೆಪಿಯಲ್ಲಿ ಬದಲಾವಣೆ ಆಗುತ್ತಿದೆ.

ಬಚ್ಚು ಹಂಸದಾ, ಸೋನಾಲಿ ಗುಹಾ, ಸರಳಾ ಮುರ್ಮು, ಅಮಲ್ ಆಚಾರ್ಯ, ದೀಪೇಂದು ಬಿಸ್ವಾಸ್ ಮೊದಲಾದವರು ಮರಳಿ ಟಿಎಂಸಿ ಸೇರಲು ಹಾತೊರೆಯುತ್ತಿದ್ದು, ಮಮತಾ ಒಪ್ಪಿಗೆಗೆ ಕಾಯುತ್ತಿದ್ದಾರೆ. ಇವರಿಗೆ ಮತ್ತೆ ಅವಕಾಶ ನೀಡುವ ಭರವಸೆಯನ್ನೂ ಮಮತಾ ನೀಡಿದ್ದಾರೆ ಎನ್ನಲಾಗಿದೆ.



ಜಿತಿನ್ ಪ್ರಸಾದ ಬಿಜೆಪಿಗೆ ಸೇರ್ಪಡೆ

ಉತ್ತರ ಪ್ರದೇಶ ಕಾಂಗ್ರೆಸ್‌ಗೆ ಪೆಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಪಕ್ಷದ ಮುಖಂಡ ಮತ್ತು ರಾಹುಲ್ ಗಾಂಧಿ ಅವರ ಆಪ್ತ ಜಿತಿನ್ ಪ್ರಸಾದ ಬುಧವಾರ ಬಿಜೆಪಿ ಸೇರಿದ್ದಾರೆ.

47 ವರ್ಷದ ಜಿತಿನ್ ಪ್ರಸಾದ, ರೈಲ್ವೆ ಸಚಿವ ಪಿಯೂಷ್ ಗೋಯಲ್ ಅವರ ಸಮ್ಮುಖದಲ್ಲಿ ಬಿಜೆಪಿ ಸೇರಿದರು.

2022ರಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಗೆ ಮುನ್ನವೇ ಉತ್ತರ ಪ್ರದೇಶದ ಪ್ರಮುಖ ಯುವ ನಾಯಕ ಪಕ್ಷ ತೊರೆದಿರುವುದು ಕಾಂಗ್ರೆಸ್‌ಗೆ ದೊಡ್ಡ ಪೆಟ್ಟು ನೀಡಲಿದೆ ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗಿದೆ.

ಉತ್ತರ ಪ್ರದೇಶದಲ್ಲಿನ ಪ್ರಭಾವಿ ಬ್ರಾಹ್ಮಣ ಸಮುದಾಯದ ಮತದಾರರನ್ನು ಸೆಳೆಯುವ ಬಿಜೆಪಿ ಪ್ರಯತ್ನಗಳಿಗೆ ಜಿತಿನ್ ಪ್ರಸಾದ ಕೈಜೋಡಿಸಲಿದ್ದಾರೆ ಎಂದು ಹೇಳಲಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಆಡಳಿತದಲ್ಲಿ ಠಾಕೂರ್ ಸಮುದಾಯಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದರಿಂದ ಬ್ರಾಹ್ಮಣ ಸಮುದಾಯವನ್ನು ಕಡೆಗಣಿಸಲಾಗಿದೆ ಎನ್ನುವ ಅಭಿಪ್ರಾಯ ಮೂಡಿದೆ. ಹೀಗಾಗಿ, ಜಿತಿನ್ ಪ್ರಸಾದ ಪ್ರಮುಖ ಪಾತ್ರವಹಿಸುವ ನಿರೀಕ್ಷೆ ಇದೆ.

ಉತ್ತರ ಪ್ರದೇಶದಲ್ಲಿ ಶೇಕಡ 13ರಷ್ಟು ಬ್ರಾಹ್ಮಣ ಸಮುದಾಯದವರಿದ್ದಾರೆ. ಜಿತಿನ್ ಪ್ರಸಾದ ಅವರು ಕಳೆದ ವರ್ಷ ಬ್ರಾಹ್ಮಣ ಸಮುದಾಯದ ಸಂಘಟನೆಗಾಗಿ ಬ್ರಾಹ್ಮಣ ಚೇತನಾ ಪರಿಷತ್ ಆರಂಭಿಸಿದ್ದರು. ಯೋಗಿ ಆದಿತ್ಯನಾಥ ಅವರ ಸರ್ಕಾರದಲ್ಲಿ ಬ್ರಾಹ್ಮಣರಿಗೆ ಯಾವುದೇ ಸೌಲಭ್ಯಗಳು ದೊರೆಯುತ್ತಿಲ್ಲ. ಈ ಸಮುದಾಯದ ಜತೆ ತಾರತಮ್ಯ ಮಾಡಲಾಗುತ್ತಿದೆ ಎಂದು ಕಳೆದ ವರ್ಷ ದೂರಿದ್ದರು.

'ಕಾಂಗ್ರೆಸ್ ಜತೆ ನನ್ನ ಕುಟುಂಬ ಮೂರು ತಲೆಮಾರಿನ ಸಂಬಂಧ ಹೊಂದಿದೆ. ಆದ್ದರಿಂದ ಈ ಮಹತ್ವದ ನಿರ್ಧಾರವನ್ನು ಸಾಕಷ್ಟು ಚಿಂತನೆಯ ಬಳಿಕೆ ತೆಗೆದುಕೊಂಡಿದ್ದೇನೆ. ಈಗ ಜೀವನದ ಹೊಸ ಅಧ್ಯಾಯ ಆರಂಭಿಸಿದ್ದೇನೆ' ಎಂದು ಬಿಜೆಪಿ ಸೇರ್ಪಡೆ ಬಳಿಕ ಹೇಳಿದರು.

'ಕಾಂಗ್ರೆಸ್ ಪಕ್ಷದಲ್ಲಿದ್ದುಕೊಂಡು ಸಮಾಜ ಸೇವೆಯ ಜವಾಬ್ದಾರಿಯನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಬಿಜೆಪಿ ಸೇರಿದ್ದೇನೆ. ಬೆಂಬಲಿಗರ ಹಿತಾಸಕ್ತಿ ಕಾಪಾಡಲು ವಿಫಲವಾದರೆ ಆ ಪಕ್ಷದಲ್ಲಿದ್ದು ಉಪಯೋಗವೇನು?' ಎಂದು ಜಿತಿನ್ ಪ್ರಸಾದ ಹೇಳಿದ್ದಾರೆ.

ಬಿಜೆಪಿ ಮಾತ್ರ ದೇಶದ ಏಕೈಕ ರಾಷ್ಟ್ರೀಯ ಪಕ್ಷ. ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ನಿಜವಾದ ರಾಷ್ಟ್ರೀಯ ನಾಯಕ. ಬಿಜೆಪಿಗೆ ಧನ್ಯವಾದಗಳು

ಜಿತಿನ್ ಪ್ರಸಾದ, ಬಿಜೆಪಿ ಮುಖಂಡ

ಮೊದಲು ಸಿಂಧಿಯಾ, ಈಗ ಜಿತಿನ್ ಪಕ್ಷ ಬಿಟ್ಟಿರುವುದು ಕಾಂಗ್ರೆಸ್‌ಗೆ ಬಿದ್ದ ದೊಡ್ಡ ಹೊಡೆತ. ಕಷ್ಟದ ಸಮಯದಲ್ಲಿ ಅವರು ಪಕ್ಷವನ್ನು ತೊರೆಯಬಾರದಿತ್ತು

ಕುಲದೀಪ್ ಬೀಷ್ಣೋಯಿ
ಕಾಂಗ್ರೆಸ್ ಮುಖಂಡ

ಎಲ್ಲವನ್ನೂ ಒಳಗೊಳ್ಳುವ ದೇಶದ ಏಕೈಕ ಪಕ್ಷ ಎಂಬ ಸ್ಥಾನವನ್ನು ಕಾಂಗ್ರೆಸ್ ಮರುಗಳಿಸಬೇಕು. ನಮ್ಮ ಸ್ನೇಹಿತರು, ಪಕ್ಷ ತೊರೆಯಬಾರದು ಅಷ್ಟೆ

ಮಿಲಿಂದ್ ದೇವ್ರಾ
ಕಾಂಗ್ರೆಸ್ ಮುಖಂಡ

ಎಲ್ಲ ಹಂತಗಳಲ್ಲಿ ಚುನಾವಣೆ ನಡೆಸಬೇಕು ಮತ್ತು ಪಕ್ಷ ಸಂಘಟನೆಯಲ್ಲಿ ಅಮೂಲಾಗ್ರವಾಗಿ ಬದಲಾವಣೆ ತರಬೇಕು ಎಂದು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದ 23 ನಾಯಕರಲ್ಲಿ ಜಿತಿನ್ ಅವರು ಒಬ್ಬರಾಗಿದ್ದರು.

ಉತ್ತರ ಪ್ರದೇಶದ ಪಕ್ಷದ ವ್ಯವಹಾರಗಳನ್ನು ಪ್ರಿಯಾಂಕಾ ಗಾಂಧಿ ಅವರು ವಹಿಸಿಕೊಂಡ ಬಳಿಕ ತಮ್ಮನ್ನು ಕಡೆಗಣಿಸಲಾಗಿದೆ ಎನ್ನುವ ಅಭಿಪ್ರಾಯ ಜಿತಿನ್ ಪ್ರಸಾದ ಅವರಿಗೆ ಮೂಡಿತ್ತು.

ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಉಸ್ತುವಾರಿಯನ್ನು ಜಿತಿನ್ ಪ್ರಸಾದ ಅವರಿಗೆ ವಹಿಸಲಾಗಿತ್ತು. ಆದರೆ, ಕಾಂಗ್ರೆಸ್ ಸಾಧನೆ ಶೂನ್ಯವಾಗಿತ್ತು. ಈ ರಾಜ್ಯದಲ್ಲಿ ಖಾತೆಯನ್ನೇ ತೆರೆಯಲಿಲ್ಲ.

2014 ಮತ್ತು 2019ರಲ್ಲಿಯೂ ಲೋಕಸಭೆ ಚುನಾವಣೆಯಲ್ಲಿ ಜಿತಿನ್ ಪರಾಭವಗೊಂಡಿದ್ದರು. ಜತೆಗೆ, 2017ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸೋಲು ಅನುಭವಿಸಿದ್ದರು. ಕೇಂದ್ರದಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ ಜಿತಿನ್ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು.

ಪುದುಚೇರಿಯಲ್ಲಿ ಸಿಹಿ ಕೇರಳ, ತಮಿಳುನಾಡಲ್ಲಿ ಕಹಿ

ಚುನಾವಣೆಗೂ ಮೊದಲೇ ಬೇರೆ ಪಕ್ಷಗಳಿಂದ ಪ್ರಭಾವಿ ನಾಯಕರನ್ನು ಸೆಳೆದು, ಅಧಿಕಾರವನ್ನು ಹಿಡಿಯುವ ಬಿಜೆಪಿಯ ಪ್ರಯತ್ನಕ್ಕೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ಅಂಥ ಯಶಸ್ಸು ಸಿಕ್ಕಿಲ್ಲ. ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ತಮಿಳುನಾಡು, ಕೇರಳ ಹಾಗೂ ಪುದುಚೇರಿಯಲ್ಲಿ ಅಂಥ ಪ್ರಯತ್ನಗಳನ್ನು ಬಿಜೆಪಿ ಮಾಡಿತ್ತು. ಸ್ವಲ್ಪಮಟ್ಟಿನ ಯಶಸ್ಸು ಕಂಡಿದ್ದು ಪುದುಚೇರಿಯಲ್ಲಿ ಮಾತ್ರ.

ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಕಾರಣಕ್ಕೆ ಕಾಂಗ್ರೆಸ್‌ನಿಂದ ಉಚ್ಚಾಟಿತರಾಗಿದ್ದ ಎ. ನಮಶ್ಶಿವಾಯಂ ಹಾಗೂ ಈ. ತೀಪ್ಪೈಂದನ್ ಅವರನ್ನು ಬಿಜೆಪಿಯು ಚುನಾವಣೆಗೂ ಮೊದಲು ತನ್ನತ್ತ ಸೆಳೆದುಕೊಂಡಿತು. ಇದಾದ ನಂತರ ಇನ್ನಿಬ್ಬರು ಶಾಸಕರನ್ನು ಸೆಳೆದುಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಯಿತು. ಇದರಿಂದ, ಅವಧಿ ಮುಗಿಯುವುದಕ್ಕೂ ಎರಡು ತಿಂಗಳು ಮೊದಲು ಪುದುಚೇರಿಯ ಕಾಂಗ್ರೆಸ್ ನೇತೃತ್ವದ ಸರ್ಕಾರ ಪತನವಾಗುವಂತಾಯಿತು. ಈ ನಾಯಕರನ್ನು ಕಣಕ್ಕಿಳಿಸುವುದರ ಜತೆಗೆ ಕಾಂಗ್ರೆಸ್ ಒಳಗಿನ ಅತೃಪ್ತರನ್ನೂ ಬಳಸಿಕೊಂಡು, ಆರು ಸ್ಥಾನಗಳಲ್ಲಿ ಗೆಲುವು ಸಾಧಿಸಲು ಬಿಜೆಪಿಗೆ ಸಾಧ್ಯವಾಯಿತು. ಹಿಂದಿನ ಚುನಾವಣೆಯಲ್ಲಿ ಇಲ್ಲಿ ಖಾತೆ ತೆರೆಯಲು ಸಹ ಬಿಜೆಪಿಗೆ ಸಾಧ್ಯವಾಗಿರಲಿಲ್ಲ. ಈ ಬಾರಿ ಮಿತ್ರಪಕ್ಷ ಎನ್‌ಆರ್ ಕಾಂಗ್ರೆಸ್ ಜತೆ ಸೇರಿ ಅಧಿಕಾರ ಹಿಡಿಯಲು ಯಶಸ್ವಿಯಾಯಿತು.

ಬಿಜೆಪಿಯು ಇಂಥದ್ದೇ ಪ್ರಯತ್ನವನ್ನು ತಮಿಳುನಾಡು ಮತ್ತು ಕೇರಳದಲ್ಲೂ ನಡೆಸಿತ್ತಾದರೂ ಎರಡೂ ರಾಜ್ಯಗಳಲ್ಲಿ ದೊಡ್ಡ ಮೀನುಗಳು ಬಿಜೆಪಿಯ ಬಲೆಗೆ ಬಿದ್ದಿರಲಿಲ್ಲ.

ತಮಿಳುನಾಡಿನಲ್ಲಿ ನಟಿ ಖುಷ್ಬೂ, ಶಿವಾಜಿಗಣೇಶನ್ ಅವರ ಪುತ್ರ ರಾಮ್‌ಕುಮಾರ್, ಚೆನ್ನೈಯ ಮಾಜಿ ಮೇಯರ್ ಕರಾಟೆ ಆರ್. ತ್ಯಾಗರಾಜನ್‌ನಂಥ ಕೆಲವು ನಾಯಕರನ್ನು ಮಾತ್ರ ಪಕ್ಷಕ್ಕೆ ಸೆಳೆದುಕೊಳ್ಳಲು ಸಾಧ್ಯವಾಯಿತು. ಅದು ಹೆಚ್ಚು ಸಹಾಯಕವಾದಂತೆ ಕಾಣಿಸಲಿಲ್ಲ. ಎಐಎಡಿಎಂಕೆ ಜತೆಗಿನ ಮೈತ್ರಿ ಹಾಗೂ ಇತರ ಸ್ಥಳೀಯವಾದ ಕೆಲವು ಕಾರಣಗಳಿಂದ ರಾಜ್ಯದಲ್ಲಿ ಬಿಜೆಪಿಗೆ ನಾಲ್ಕು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಸಾಧ್ಯವಾಯಿತು. ರಾಜ್ಯದಲ್ಲಿ ಬಿಜೆಪಿಯ ಇತಿಹಾಸವನ್ನು ನೋಡಿದರೆ ಇದು ದೊಡ್ಡ ಸಾಧನೆಯೇ. 20 ವರ್ಷಗಳ ನಂತರ ಪಕ್ಷದ ಪ್ರತಿನಿಧಿಗಳಿಗೆ ತಮಿಳುನಾಡು ವಿಧಾನಸಭೆಯೊಳಗೆ ಪ್ರವೇಶ ಲಭಿಸಿದೆ. ಆದರೆ, ಬಿಜೆಪಿ ಇದಕ್ಕೂ ದೊಡ್ಡ ಗೆಲುವನ್ನು ನಿರೀಕ್ಷಿಸಿತ್ತು. ರಾಜ್ಯದಲ್ಲಿ ಬಿಜೆಪಿಯ ಒಟ್ಟಾರೆ ಮತಗಳಿಕೆ ಪ್ರಮಾಣ ಈಗಲೂ ಶೇ 2.6ರ ಆಸುಪಾಸಿನಲ್ಲೇ ಇದೆ. ಕಳೆದ ಹಲವು ಚುನಾವಣೆಗಳಿಂದ ಈ ಪ್ರಮಾಣ ಹೀಗೆಯೇ ಇದೆ.

ಕೇರಳದಲ್ಲೂ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಯುಡಿಎಫ್, ಎಲ್‌ಡಿಎಫ್ ಪಾಳಿ ಆಡಳಿತವನ್ನೇ ನಾಲ್ಕು ದಶಕಗಳಿಂದ ನೋಡಿಕೊಂಡು ಬಂದಿರುವ ಕೇರಳವು ಈ ಬಾರಿ ಆ ಸಂಪ್ರದಾಯವನ್ನು ಮುರಿದಿದೆ. ಇತರ ಪಕ್ಷಗಳ ಪ್ರಭಾವಿ ಮುಖಂಡರನ್ನು ತನ್ನತ್ತ ಸೆಳೆಯಲು ಬಿಜೆಪಿಗೆ ಇಲ್ಲಿ ಸಾಧ್ಯವಾಗಿಲ್ಲ. ಅದಕ್ಕಾಗಿ ಮೆಟ್ರೋ ಮ್ಯಾನ್ ಖ್ಯಾತಿಯ ಶ್ರೀಧರನ್ ಅವರ ವರ್ಚಸ್ಸನ್ನು ಬಳಸಿಕೊಳ್ಳುವ ಪ್ರಯತ್ನ ನಡೆಸಿತು.

ಶ್ರೀಧರನ್ ಅವರನ್ನು ಮುಂಚೂಣಿಯ ನಾಯಕನೆಂದು ಬಿಂಬಿಸಲಾಯಿತು. ಬಿಜೆಪಿ ಅಧಿಕಾರಕ್ಕೆ ಬಂದರೆ ಅವರೇ ಮುಖ್ಯಮಂತ್ರಿ ಎಂದು ಪರೋಕ್ಷವಾಗಿ ಹೇಳಲಾಯಿತು. 30ರಿಂದ 40 ಸ್ಥಾನಗಳನ್ನು ಗೆದ್ದರೂ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ರಚಿಸಲಿದೆ ಎಂಬ ವಾದವನ್ನು ತೇಲಿಬಿಡುವ ಮೂಲಕ, ಅಷ್ಟು ಸ್ಥಾನಗಳನ್ನು ಬಿಜೆಪಿ ಗೆಲ್ಲಲಿದೆ ಎಂದು ಬಿಂಬಿಸುವ ಪ್ರಯತ್ನವೂ ನಡೆಯಿತು. ಯಾವುದೂ ಫಲನೀಡಲಿಲ್ಲ. ಇದ್ದ ಒಂದು ಸ್ಥಾನವನ್ನೂ ಬಿಜೆಪಿ ಕಳೆದುಕೊಂಡಿದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಅಳುತ್ತಿರುವ 29 ವರ್ಷದ ಯುವಕನ ಚಿತ್ರವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. 'ಇವರ ಹೆಸರು ರಾಜೇಶ್ ತಿವಾರಿ. ಉತ್ತರ ಪ್ರದೇಶದ ಲಖನೌದವರು. ಯುಪಿಎಸ್‌ಪಿ ಪರೀಕ್ಷೆಯಲ್ಲಿ 643 ಅಂಕಗಳನ್ನು ಪಡೆದಿದ್ದರೂ ಉತ್ತೀರ್ಣರಾಗಲು ವಿಫಲರಾಗಿದ್ದಾರೆ. ಸಾಮಾನ್ಯ ವರ್ಗದ (ಜನರಲ್ ಕೆಟಗರಿ) ಕಟ್ ಆಫ್ ಅಂಕ 689ಕ್ಕೆ ನಿಗದಿಯಾಗಿದೆ. ಆದರೆ ಪರಿಶಿಷ್ಟ ಜಾತಿ/ವರ್ಗದ ಕಟ್ ಆಫ್ 601 ಅಂಕಕ್ಕೆ ನಿಗದಿಯಾಗಿದೆ. ಮೀಸಲಾತಿ ತುಷ್ಟೀಕರಣ ಇನ್ನಾದರೂ ನಿಲ್ಲಲಿ. ಉತ್ತಮ ಅಂಕ ಪಡೆದ ಎಲ್ಲ ಸಮುದಾಯದವರನ್ನೂ ಒಂದೇ ಎಂದು ಪರಿಗಣಿಸಿ' ಎಂಬ ಅರ್ಥದ ಪೋಸ್ಟ್‌ಗಳು ಹರಿದಾಡುತ್ತಿವೆ.



ರಿವರ್ಸ್ ಇಮೇಜ್ ತಂತ್ರಜ್ಞಾನದ ಮೂಲಕ ಪರಿಶೀಲಿಸಿದಾಗ ಈ ಚಿತ್ರದಲ್ಲಿರುವ ವ್ಯಕ್ತಿ ರಾಜೇಶ್ ತಿವಾರಿ ಅಲ್ಲ, ಬಾಂಗ್ಲಾದೇಶದ ಟೆಕ್ಸ್‌ಟೈಲ್ಸ್ ಎಂಜಿನಿಯರ್ ಸಯೀದ್ ರಿಮನ್ ಎಂಬುದು ಗೊತ್ತಾಗಿದೆ. ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳನ್ನು ಅವರು ನಡೆಸುತ್ತಾರೆ. 2016ರಲ್ಲಿ ಬಾಂಗ್ಲಾದೇಶದ ನಿರುದ್ಯೋಗ ಸಮಸ್ಯೆ ಇಟ್ಟುಕೊಂಡು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಈ ಚಿತ್ರವನ್ನು ಪ್ರಕಟಿಸಿದ್ದರು. ಕೋವಿಡ್ ಕಾರಣ ಪರೀಕ್ಷೆಗಳನ್ನು ಮುಂದೂಡಲಾಗಿದ್ದು, ಕಟ್ ಆಫ್ ಅಂಕಗಳನ್ನು ಯುಪಿಎಸ್‌ಸಿ ಇನ್ನೂ ಪ್ರಕಟಿಸಿಲ್ಲ. ಹೀಗಾಗಿ ಈ ಚಿತ್ರಕ್ಕೂ, ರಾಜೇಶ್ ತಿವಾರಿ ಎಂಬ ವ್ಯಕ್ತಿಗೂ, ಯುಪಿಎಸ್‌ಸಿಗೂ ಸಂಬಂಧವಿಲ್ಲ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಪ್ರತಿಜ್ಞೆಯ ಪರೀಕ್ಷೆ

ಬೋಧಿಸತ್ವನ ಪತ್ನಿ ಮಾದ್ರಿದೇವಿ ಗಂಡುಮಗುವಿಗೆ ಜನ್ಮವಿತ್ತಳು. ಜನನಕಾಲದಲ್ಲಿ ಮಗುವನ್ನು ಕಂಚಿನ ಜಾಲದಲ್ಲಿ ಗ್ರಹಿಸಿದರು. ಆದ್ದರಿಂದ ಅವನಿಗೆ ಜಾಲಿಕುಮಾರ ಎಂದು ಹೆಸರಿಟ್ಟರು. ಮುಂದೆ ಎರಡು ವರ್ಷದಲ್ಲಿ ಒಬ್ಬ ಮಗಳು ಹುಟ್ಟಿದಳು. ಜನನವಾಗುವಾಗ ಅವಳನ್ನು ಕೃಷ್ಣಾಜಿನದಲ್ಲಿ ಗ್ರಹಿಸಿದ್ದರಿಂದ ಆಕೆಗೆ ಕೃಷ್ಣಾಜಿನ ಎಂಬ ಹೆಸರೇ ಉಳಿಯಿತು.

ಬೋಧಿಸತ್ವದ ಆಳ್ವಿಕೆಯಲ್ಲಿ ದೇಶ ಅತ್ಯಂತ ಸಮೃದ್ಧವಾಗಿತ್ತು. ಮಳೆ, ಬೆಳೆ ಕಾಲಕಾಲಕ್ಕೆ ಆಗುತ್ತ, ಜನರು ತುಂಬ ತೃಪ್ತಿಯಿಂದಿದ್ದರು. ಬೋಧಿಸತ್ವ ಪ್ರತಿ ತಿಂಗಳಿಗೆ ಆರು ಬಾರಿ ಅಲಂಕೃತವಾದ ಮಾಂಗಲೀಕ ಆನೆಯ ಮೇಲೆ ಕುಳಿತು ದಾನಶಾಲೆಗಳನ್ನು ನೋಡಲು ಹೋಗುತ್ತಿದ್ದ. ಅವನ ಮೇಲ್ವಿಚಾರಣೆಯಿಂದ ಎಲ್ಲ ಕೆಲಸಗಾರರು ಕಾರ್ಯಗಳನ್ನು ಸರಿಯಾಗಿ, ಸರಿಯಾದ ಕಾಲದಲ್ಲಿ ಮಾಡುತ್ತಿದ್ದರು.

ಈ ಸಮಯದಲ್ಲಿ ಪಕ್ಕದ ಕಲಿಂಗ ರಾಷ್ಟ್ರದಲ್ಲಿ ಬರಗಾಲ ಬಂದಿತು. ಯಾವ ಹೊಲದಲ್ಲೂ ಬೆಳೆಯಿಲ್ಲ. ಕುಡಿಯಲು ನೀರಿಲ್ಲ. ಎಲ್ಲೆಲ್ಲಿಯೂ ಹಾಹಾಕಾರ ಉಂಟಾಯಿತು. ಬದುಕುವುದಕ್ಕಾಗಿ ಜನ ಕಳ್ಳತನ ಮಾಡತೊಡಗಿದರು. ಪ್ರಜೆಗಳೆಲ್ಲ ರಾಜಾಂಗಣಕ್ಕೆ ಬಂದು ಕೂಗಾಡಿ ರಾಜನನ್ನು ತೆಗಳತೊಡಗಿದರು. ಆಗ ಕಲಿಂಗರಾಜ ಹೇಳಿದ, 'ನನಗೆ ಪರಿಸ್ಥಿತಿಯ ಅರಿವಿದೆ. ದೇವತೆಗಳು ನಮ್ಮ ದೇಶದ ಮೇಲೆ ಕೋಪ ಮಾಡಿಕೊಂಡಂತಿದೆ. ಆದ್ದರಿಂದ ನಾನು ಶೀಲಗ್ರಹಣ ಮಾಡಿ, ಉಪೋಸಥ ವ್ರತವನ್ನು ಕೈಗೊಂಡು ದೇವತೆಗಳ ತೃಪ್ತಿಮಾಡಿ ಮಳೆ ಸುರಿಸುವಂತೆ ಬೇಡುತ್ತೇನೆ'. ಆತ ಹೇಳಿದಂತೆ ವ್ರತಗಳನ್ನು ಮಾಡಿದರೂ ಮಳೆಯಾಗಲಿಲ್ಲ. ರಾಜ ಚಿಂತಿತನಾಗಿ ಪುರಪ್ರಮುಖರನ್ನು, ಮಂತ್ರಿಗಳನ್ನು ಉಪಾಯಕ್ಕಾಗಿ ಕೇಳಿದ. ಮಂತ್ರಿಗಳು ಹೇಳಿದರು, 'ಸ್ವಾಮಿ, ಸಿವಿರಾಜ್ಯದ ಜೆತುತ್ತರ ನಗರದಲ್ಲಿ ವೆಸ್ಸಂತರನೆಂಬ ರಾಜಕುಮಾರನಿದ್ದಾನೆ. ಅವನಿರುವ ಸ್ಥಳದಲ್ಲಿ ಬರಗಾಲವಿಲ್ಲ, ಅವನ ಬಳಿ ದೇವತೆಗಳು ಕೊಟ್ಟ ಅಚ್ಚ ಬಿಳೀ ಬಣ್ಣದ ಮಾಂಗಲೀಕ ಆನೆಯಿದೆ. ಅದು ಸರ್ವಲಕ್ಷಣ ಶೋಭಿತವಾದದ್ದು. ರಾಜಕುಮಾರನನ್ನಾಗಲೀ, ಆನೆಯನ್ನಾಗಲೀ ಇಲ್ಲಿಗೆ ಕರೆತಂದರೆ ಖಂಡಿತವಾಗಿ ಸಮೃದ್ಧಿಯಾಗುತ್ತದೆ'. ರಾಜ ಯೋಚಿಸಿದ, ಬೇರೆ ದೇಶದ ರಾಜಕುಮಾರನನ್ನು ಕರೆ ತರುವುದು ಅನುಚಿತ. ಬೇಕಾದರೆ ಆನೆಯನ್ನು ಕೇಳಬಹುದು. ನಂತರ ನಗರ ಪ್ರಮುಖರನ್ನು, ಬ್ರಾಹ್ಮಣರನ್ನು ಆರಿಸಿ ಅವರಿಗೆ ಖರ್ಚಿಗೆ ಹಣ ಕೊಟ್ಟು, 'ಸಿವಿರಾಜ್ಯಕ್ಕೆ ಹೋಗಿ ಮಾಂಗಲಿಕ ಆನೆಯನ್ನು ಬೇಡಿ ತನ್ನಿ' ಎಂದು ಕಳುಹಿಸಿದ.

ಅವರೆಲ್ಲ ಜೆತುತ್ತರ ನಗರಕ್ಕೆ ಬಂದು ದಾನಶಾಲೆಯಲ್ಲಿ ಊಟ ಮಾಡಿದರು. ಮರುದಿನ ಬೋಧಿಸತ್ವ ವೆಸ್ಸಂತರ ತನ್ನ ಮಾಂಗಲೀಕ ಆನೆಯ ಮೇಲೆ ಕುಳಿತು ದಾನಶಾಲೆಗೆ ಬರುವಾಗ ದಾರಿಯಲ್ಲಿ ನಿಂತುಕೊಂಡರು. ಆತ ಅಲಂಕೃತನಾಗಿ ಸಕಲ ವೈಭವದಲ್ಲಿ ಬರುತ್ತಿರುವಾಗ ಈ ಜನರು ಅವನಿಗೆ ಕಾಣುವಂತೆ ಎತ್ತರದ ಸ್ಥಳದಲ್ಲಿ ನಿಂತು, ಅವನು ಕಂಡೊಡನೆ, 'ರಾಜಕುಮಾರ ವೆಸ್ಸಂತರನಿಗೆ ಜಯವಾಗಲಿ, ಮಹಾದಾನಿ ರಾಜಕುಮಾರನಿಗೆ ಜಯವಾಗಲಿ' ಎಂದು ಘೋಷಣೆ ಮಾಡತೊಡಗಿದರು. ಅವರನ್ನು ಕಂಡು ಅವರಿರುವ ಜಾಗಕ್ಕೇ ಆನೆಯನ್ನು ತೆಗೆದುಕೊಂಡು ಹೋಗಿ, 'ಸ್ವಾಮಿ, ತಾವು ನಮ್ಮ ದೇಶದ ಹೊರಗಿನವರು ಎಂದು ಕಾಣುತ್ತದೆ. ತಮ್ಮ ಅಪೇಕ್ಷೆ ಏನಾದರೂ ಇದ್ದರೆ ತಿಳಿಸಿ' ಎಂದ. ಈಗ ನಿಜವಾಗಿಯೂ ವೆಸ್ಸಂತರನ ದಾನದ ಮಹಾಪ್ರತಿಜ್ಞೆಯ ಪರೀಕ್ಷೆಯ ಕಾಲ ಹತ್ತಿರ ಬಂದಿತು. ಅವರು ಕೇಳಿದ್ದನ್ನು ಕೊಡುವುದು ಸುಲಭವಾಗಿರಲಿಲ್ಲ.

ದಿನ ಭವಿಷ್ಯ

ಗುರುವಾರ ಜೂನ್ 10, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಮೃಗಶಿರ ಅಮಾವಾಸ್ಯೆ ಗಂ. 22-6 (ಹ. 2-51) ಗುರುವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 12-17 (ಹ. 10-56) ವೈಧೃತಿ ನಾಮ ಯೋಗ ಗಂ. 3-53 ನಾಗ ಕರಣ ಗಂ. 22-6 ವಿಷ ಗಂ. 27-40 ಅಮೃತ ಶೇಷ ಗಂ 2-56 ಪುನರಮೃತ ಗಂ. 54-3 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 5-56 ಸೂರ್ಯಾಸ್ತ: 6-41 ಅದೃಷ್ಟ ಸಂಖ್ಯೆ 1, 4

ಮೇಷ: ಅಪೇಕ್ಷಿತ ಕೆಲಸ–ಕಾರ್ಯಗಳಲ್ಲಿ ಯಶಸ್ಸು. ನಿಮ್ಮ ಎಲ್ಲ ಪ್ರಯತ್ನಗಳೂ ನಿರ್ವಿಘ್ನದಾಯಕವಾಗಿ ನಡೆಯಲಿವೆ. ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗದ ಅವಕಾಶಗಳು ತೆರೆಯಲಿವೆ. ಹಿರಿಯರಿಗೆ ಆರೋಗ್ಯ ಸಮಸ್ಯೆ ಎದುರಾಗಲಿದೆ.

ವೃಷಭ: ವಿನಾಕಾರಣ ವಾದ ವಿವಾದಗಳನ್ನು ನಡೆಸದಿರುವುದು ಒಳಿತು. ಹಿರಿಯರ ಸಲಹೆಗಳನ್ನು ಉಪೇಕ್ಷಿಸದಿರಿ. ವ್ಯವಹಾರದಲ್ಲಿ ಸಾಮಾನ್ಯ ಆದಾಯವನ್ನು ನಿರೀಕ್ಷಿಸಬಹುದು. ಹೊಸ ವಸ್ತುಗಳ ಖರೀದಿಗಾಗಿ ಧನ ವ್ಯಯ.

ಮಿಥುನ: ಅನೇಕ ದಿನಗಳಿಂದ ನೆನೆಗುದಿಗೆ ಬಿದ್ದಿರುವ ಕೆಲಸ ಕಾರ್ಯಗಳು ಶೀಘ್ರವಾಗಿ ನೆರವೇರುವವು. ಹಣಕಾಸಿನ ಅನುಕೂಲತೆಗಳು ಕೂಡಿ ಬರುವುದರಿಂದಾಗಿ ಹೊಸ ಯೋಜನೆಗೆ ಧೈರ್ಯವಾಗಿ ಮುಂದಡಿ ಇಡಲಿದ್ದೀರಿ.

ಕರ್ಕಾಟಕ: ನಿಮ್ಮ ವ್ಯವಹಾರದ ಬಗ್ಗೆ ಸಂಗಾತಿಯೊಂದಿಗೆ ಚರ್ಚೆ ನಡೆಸಿ ನಿರ್ಧಾರ ಕೈಗೊಳ್ಳಲಿದ್ದೀರಿ. ವಿವಾದಿತ ವಿಷಯವನ್ನು ಚರ್ಚೆಯ ಮೂಲಕ ಬಗೆಹರಿಸಿಕೊಳ್ಳುವಿರಿ. ಹಿರಿಯರ ವಿಚಾರದಲ್ಲಿ ಯೋಗಕ್ಷೇಮ ನೋಡಲಿದ್ದೀರಿ.

ಸಿಂಹ: ಪಾಲುಗಾರಿಕೆ ವ್ಯವಹಾರ ಹೊಸ ತಿರುವು ಪಡೆದುಕೊಳ್ಳುವುದು. ಸಾಮಾಜಿಕ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವ ಸದಾವಕಾಶ ನಿಮಗೆ ದೊರಕಲಿದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದು.

ಕನ್ಯಾ: ಬೇರೆಯವರ ಚಾಡಿ ಮಾತುಗಳಿಗೆ ಕಿವಿಗೊಡದಿರುವುದು ಒಳಿತು. ಎಚ್ಚರಿಕೆಯ ನಡೆ ನಿಮಗೆ ಒಳಿತನ್ನು ತರುವುದು ಹಣಕಾಸಿನ ವಿಚಾರದಲ್ಲಿ ಅನುಕೂಲವಾಗಲಿದೆ.

ತುಲಾ: ಗೃಹನಿರ್ಮಾಣ ಕೆಲಸಗಳಿಗೆ ಉತ್ತಮ ಸಹಕಾರ ದೊರಕಲಿದೆ. ಹಿರಿಯರ ಪ್ರೋತ್ಸಾಹ ಮತ್ತು ಮಾರ್ಗದರ್ಶನದಿಂದಾಗಿ ಬದುಕಿಗೊಂದು ಹೊಸ ಆಯಾಮ. ದೂರದ ಪ್ರಯಾಣ ಸುಖವನ್ನು ಅನುಭವಿಸಲಿದ್ದೀರಿ.

ವೃಶ್ಚಿಕ: ನಿಮ್ಮ ಸಾಹಸೀ ಮನೋಭಾವದಿಂದಾಗಿ ಉತ್ತಮ ವರಮಾನ ಪಡೆಯಲಿದ್ದೀರಿ. ಯೋಗ್ಯ ವಿಚಾರಗಳಲ್ಲಿ ನಿಮ್ಮ ಬುದ್ಧಿ ಚಾತುರ್ಯದಿಂದಾಗಿ ಉತ್ತಮ ನಿರ್ಣಯ ಕೈಗೊಳ್ಳಲಿದ್ದೀರಿ.

ಧನು: ಸಮಾಜದ ಸಂಕಷ್ಟಗಳಿಗೆ ಸ್ಪಂದಿಸಿ ಸಹಕಾರ ಹಸ್ತ ನೀಡುವಿರಿ. ಸಾಮಾಜಿಕ ಕೆಲಸ-ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ. ಬಹುದಿನಗಳಿಂದ ಬಗೆಹರಿಯದ ಸಮಸ್ಯೆಗಳ ವಿಚಾರದಲ್ಲಿ ಪರಿಹಾರ ಕಂಡುಕೊಳ್ಳುವಿರಿ.

ಮಕರ: ನಿಮ್ಮ ವಿಶ್ವಾಸವನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ. ಮಹತ್ವದ ವಿಷಯದ ಕುರಿತು ಚಿಂತನ ಮಂಥನ ನಡೆಸಲಿದ್ದೀರಿ. ಹೊಸ ವಿಚಾರವೊಂದನ್ನು ತಿಳಿದುಕೊಳ್ಳುವಿರಿ. ಆರ್ಥಿಕ ಅನುಕೂಲ ದೊರಕಲಿದೆ.

ಕುಂಭ: ಸಮಾಜದ ನಾಯಕತ್ವವನ್ನು ವಹಿಸುವ ಅಪೂರ್ವ ಅವಕಾಶ ದೊರಕಲಿದೆ. ಅತಿಯಾದ ಆತ್ಮವಿಶ್ವಾಸವು ನಿಮ್ಮನ್ನು ನಗೆಪಾಟಲಿಗೆ ದೂಡುವ ಸಾಧ್ಯತೆ ಕಂಡುಬರುತ್ತಿದೆ. ವ್ಯವಹಾರದಲ್ಲಿ ಅನುಕೂಲ.


ಮೀನ: ವೃತ್ತಿಯಲ್ಲಿ ಭಿನ್ನವಾಗಿ ಯೋಚಿಸುವ ಮೂಲಕ ಮುನ್ನಡೆಯನ್ನು ಸಾಧಿಸಲಿದ್ದೀರಿ. ಸಂಗಾತಿಯ ಸಹಕಾರದಿಂದ ಸಂತಸ ಹಾಗೂ ವಿಶ್ವಾಸ ಮೂಡಿಬರಲಿದೆ. ಹೊಸ ಯೋಜನೆಗೆ ನಾಂದಿ ಹಾಡಲಿದ್ದೀರಿ.

ನಿಮ್ಮ ಜನ್ಮದಿನ 10-ಜೂನ್: ಈ ದಿನ ಅತ್ಯಂತ ಶುಭಕರ. ರಾಜಕೀಯ ವ್ಯಕ್ತಿಗಳಿಗೆ ವೃಥಾ ಆರೋಪಕ್ಕೆ ಗುರಿಯಾಗುವ ಸಾಧ್ಯತೆ. ಚಿನ್ನದ ವ್ಯಾಪಾರಸ್ಥರಿಗೆ ಉತ್ತಮವಾದ ಭವಿಷ್ಯವನ್ನು ತಂದುಕೊಡಲಿದೆ. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸು ದೊರಕಲಿದೆ. ಮಾನಸಿಕ ಕಿರಿಕಿರಿಯಿಂದಾಗಿ ಸಂಕಷ್ಟ ಎದುರಿಸಬೇಕಾದೀತು.

ಪದಬಂಧ 4623 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೂವಿನ ಪಕಳೆ (2)
3.ಸಣ್ಣ ಸಣ್ಣ ಗೆಜ್ಜೆಗಳಿರುವ ಕಾಲಿನ ಕಡಗ (3)
5.ಮರಿ ಬಿದ್ದಿರುವ ಆಳವಾದ ಗುಂಡಿ (3)
7.ಮನೆ ಮುಂತಾದ ಕಟ್ಟಡಗಳನ್ನು ಕಟ್ಟುವ ಸ್ಥಳ (4)
9.ಸಮಾಧಾನ ಹೀಗೆ ಬಂದಿದೆ (3)
10.ಹೆಪ್ಪುಗಟ್ಟಿರುವ ವಸ್ತು (3)
11.ಪುರೋಹಿತನ ಜೊತೆಗೆ ಮುಂದಾಳು ಇದ್ದಾನಲ್ಲಾ? (4)
13.ಚಕ ಚಕನೆ ನೇಯುವ ರಾಟೆ (3)
15.ಇದು ಶಾಶ್ವತವಲ್ಲದ್ದು (3)
16.ಒತ್ತುವ ಮುದ್ರೆ (2)

ಮೇಲಿಂದ ಕೆಳಕ್ಕೆ
2.ಅಪಹಾಸ್ಯವನ್ನು ಈ ರೀತಿ ಹೇಳಿ (3)
3.ಗಂಡಾಂತಕಾರಿ ಕೆಲಸಕ್ಕೆ ಬಳಸಿದ ದೊಡ್ಡ ಹಾರೆ (3)
4.ರಾತ್ರಿಗೊಂದು ಪರ್ಯಾಯ ಪದ (3)
6.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
8.ಪಂಚಪಾಂಡವರಲ್ಲಿ ಒಬ್ಬ (3)
9.ಒನಪು ತೋರಿದಾಗ ಬಂದ ಸ್ಮರಣೆ (3)
10.ಕಬ್ಬಿಣದ ಕೆಲಸಗಾರ (3)
12.ಜೋತಿಷ್ಯರಾಶಿಯಲ್ಲಿನ ಜೋಡಿ (3)
13.ಈತ ಬಲು ಜಾಣ! (3)
14.ಮಠದ ಹತ್ತಿರ ಆಮೆ ಬಂದಿದೆಯಲ್ಲಾ? (3)



4622ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಯಜ್ಞಪಶು 3.ಪ್ರಭವ 4.ಕಟವಾಯಿ 6.ಆಕಸ್ಮಿಕ 7.ದಿಮ್ಮನೆ 8.ಪರದಾಟ 11.ಗಟವಾಣಿ 13.ಕಾರ್ಖಾನೆ 14.ರಾಯಭಾರ
ಮೇಲಿಂದ ಕೆಳಕ್ಕೆ: 1.ಯವನಿಕೆ 2.ಶುಕ 3.ಪ್ರಕ್ಷೋಭ 5.ಯಿಡಾಕ 6.ಆನೆ 7.ದಿಟ 8.ಪಲ್ಲಂಗ 9.ಉಪಕಾರ 10.ಕಾಮನೆ 12.ಣಿರಾ

ಸುಡೊಕು 5009

		3	1			4		
6				5				8
	4		8				6	
4			5		9	2		1
	2			4			5	
3		5	2		8		4	6
5	7					8		9
		1	4	8	5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5008 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಅಂಗನವಾಡಿ ಕಾರ್ಯಕರ್ತೆಯರಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಕರೆ

ಮೂರನೆ ಅಲೆ ಎದುರಿಸಲು ಸಜ್ಜಾಗಿ

ಪ್ರಜಾವಾಣಿ ವಾರ್ತೆ



ಯಡಿಯೂರಪ್ಪ

ಬೆಂಗಳೂರು: ಕೋವಿಡ್ ಮೂರನೇ ಅಲೆ ಮಕ್ಕಳ ಮೇಲೆ ಹೆಚ್ಚಿನ ಪರಿಣಾಮ ಬೀಡುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಮಕ್ಕಳ ರಕ್ಷಣೆ ದೃಷ್ಟಿಯಿಂದ ಮೂರನೆ ಅಲೆ ಎದುರಿಸಲು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು ಎಂದು ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕರೆ ನೀಡಿದರು.

ಅಂಗನವಾಡಿ ಕಾರ್ಯಕರ್ತೆಯರೊಂದಿಗೆ ಬುಧವಾರ ವಿಡಿಯೊ ಸಂವಾದ ನಡೆಸಿದ ಅವರು, 'ಅಪೌಷ್ಟಿಕತೆ ಮತ್ತು ಅನಾರೋಗ್ಯದಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸಿ, ಅವರ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಬೇಕು. ಆರೋಗ್ಯ ಇಲಾಖೆಯ ಅಧಿಕಾರಿಗಳ ಜತೆ ನಿರಂತರ ಸಂಪರ್ಕದಲ್ಲಿದ್ದು, ಮಕ್ಕಳಲ್ಲಿ ಸೋಂಕು ಹರಡದಂತೆ ನಿಯಂತ್ರಿಸಬೇಕು' ಎಂದು ಸಲಹೆ ನೀಡಿದರು.

ಕೋವಿಡ್ ನಿಯಂತ್ರಣಕ್ಕಾಗಿ ಮನೆ ಮನೆ ಭೇಟಿ, ಜಾಗೃತಿ ಮೂಡಿಸುವುದು, ಮಕ್ಕಳು, ಬಾಣಂತಿಯರು ಮತ್ತು ಗರ್ಭಿಣಿಯರಿಗೆ ಮನೆಗಳಿಗೇ ಪೌಷ್ಟಿಕ ಆಹಾರ ಸಾಮಗ್ರಿ ತಲುಪಿಸುವುದು, ಗ್ರಾಮ ಮಟ್ಟದ ಕೋವಿಡ್ ಕಾರ್ಯಪಡೆ ಕೆಲಸ ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಎಲ್ಲರೂ ಸಮರ್ಥವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಲ್ಲಿ ಶೇಕಡ 85.91ರಷ್ಟು ಮಂದಿ ಕೋವಿಡ್ ಲಸಿಕೆ ಪಡೆದಿರುವುದು ಸಂತೋಷದ ಸಂಗತಿ.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನೂ 'ಕೊರೊನಾ ವಾರಿಯರ್' ಎಂದು ಘೋಷಿಸಲಾಗಿದೆ. ಕೋವಿಡ್ ಮೊದಲ ಅಲೆಯಲ್ಲಿ 20 ಮಂದಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಮೃತಪಟ್ಟಿದ್ದು, ಅವರ ಕುಟುಂಬಗಳಿಗೆ ತಲಾ ₹ 30 ಲಕ್ಷ ಪರಿಹಾರ ವಿತರಿಸಲಾಗಿದೆ ಎಂದು ಯಡಿಯೂರಪ್ಪ ತಿಳಿಸಿದರು.

ಪತಿ ಕಳೆದುಕೊಂಡ ಕಾರ್ಯಕರ್ತೆಗೆ ಸಾಂತ್ವನ

ಕೋವಿಡ್‌ನಿಂದ ಪತಿಯನ್ನು ಕಳೆದುಕೊಂಡಿರುವ ಬೆಂಗಳೂರಿನ ಭುವನೇಶ್ವರಿನಗರದ ಅಂಗನವಾಡಿ ಕಾರ್ಯಕರ್ತೆ ಗಿರಿಜಾ ಅವರಿಗೆ ಯಡಿಯೂರಪ್ಪ ಅವರು ವಿಡಿಯೊ ಸಂವಾದದ ವೇಳೆ ಸಾಂತ್ವನ ಹೇಳಿದರು.

'ಕುಟುಂಬದ ನಾಲ್ವರಿಗೂ ಕೋವಿಡ್ ತಗುಲಿತ್ತು. ಮೂವರು ಗುಣಮುಖರಾಗಿ ಬಂದೆವು. ಪತಿ ಮೃತರಾದರು' ಎಂದು ಗಿರಿಜಾ ನೋವು ತೋಡಿಕೊಂಡರು. ಬೆಳಗಾವಿ ಜಿಲ್ಲೆಯ ಮಂಜುಳಾ ಸಂಗಮೇಶ್ ಅವರ ಕ್ಷೇಮ ವಿಚಾರಿಸಿದ ಯಡಿಯೂರಪ್ಪ, 'ಬೆಂಗಳೂರಿಗೆ ಬಂದಾಗ ನಮ್ಮ ಮನೆಗೆ ಬಂದು ಕಾಫಿ ಕುಡಿದು ಹೋಗಿ' ಎಂದು ಆಹ್ವಾನ ನೀಡಿದರು.

ಸೋಂಕು, ಮರಣ ಪ್ರಮಾಣ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 10,959 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 6.68ಕ್ಕೆ ಇಳಿಕೆಯಾಗಿದೆ.

ಮರಣ ಪ್ರಮಾಣ ದರ ಕೂಡ ಇಳಿಮುಖ ಮಾಡಿದೆ. ಕೊರೊನಾ ಸೋಂಕಿತರಲ್ಲಿ 192 ಮಂದಿ ಸಾವಿಗೀಡಾಗಿರುವುದು ಬುಧವಾರ ಖಚಿತಪಟ್ಟಿದೆ. ಮರಣ ಪ್ರಮಾಣ ದರ ಶೇ 1.75 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 32,291ಕ್ಕೆ ಏರಿಕೆಯಾಗಿದೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಒಂದು ದಿನದ ಅವಧಿಯಲ್ಲಿ 1.63 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ.

ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 27.28 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 2.15 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 20,246 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 24.80 ಲಕ್ಷ ದಾಟಿದೆ.

ರಾಜ್ಯದ 28 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 50 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮೈಸೂರಿನಲ್ಲಿ 22 ಮಂದಿ, ಹಾವೇರಿಯಲ್ಲಿ 12 ಮಂದಿ, ಬಳ್ಳಾರಿಯಲ್ಲಿ 11 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 27 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 32 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3iaryCA**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in **ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.**

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1.	**ರಶ್ಮಿ ಪುರುಷೋತ್ತಮ್,** ನಂ. 22/14, 2ನೇ ಕ್ರಾಸ್, ಅಪ್ಪುರಾವ್ ರಸ್ತೆ, ಎಂ.ಜಿ.ಕೆ. ಮೂರ್ತಿ ಲೇಔಟ್, ಚಾಮರಾಜಪೇಟೆ, ಬೆಂಗಳೂರು	10,001
2.	**ಶಾಲಿನಿ ಪ್ರಸಾದ್,** ನಂ. 30, ಐಡಿಯಲ್ ಹೋಮ್ಸ್ ಟೌನ್‌ಶಿಪ್, ರಾಜರಾಜೇಶ್ವರಿ ನಗರ, ಬೆಂಗಳೂರು	10,000
3.	**ಟೆಸ್ಸಿ ಥಾಮಸ್,** ಬೆಂಗಳೂರು	10,000
4.	**ಜರ್ಮೇಲ್ ರತ್ನ,** ಬೆಂಗಳೂರು	10,000
5.	**ಗುರುಪಾದು ಮೈಗಯ್ಯ,** ಬೆಂಗಳೂರು	10,000
6.	**ಎಂ.ಎಸ್.ಆರ್. ಭಟ್ಟಾಚಾರ್,** ಕಾರ್ಪೊರೇಷನ್ ಬ್ಯಾಂಕ್ ಎದುರು, ಎನ್.ಆರ್. ಎಕ್ಸ್‌ಟೆನ್ಷನ್, ಚಿಂತಾಮಣಿ	10,000
7.	**ಸಿ.ಎಂ. ಗಂಗಾಧರಯ್ಯ,** ನಂ. 480, 1ನೇ ಕ್ರಾಸ್, 3ನೇ ಹಂತ, 3ನೇಬ್ಲಾಕ್, ಬಸವೇಶ್ವರನಗರ, ಬೆಂಗಳೂರು	10,000
8.	**ವಿ. ರಾಮಚಂದ್ರ,** ನಂ. 136, 3ನೇ 'ಎ'ಕ್ರಾಸ್, 2ನೇ ಮೇನ್, ಕಸ್ತೂರಿನಗರ, ಬೆಂಗಳೂರು	5,000
9.	**ಲಲಿತಾ ಎನ್.ಕೆ. ಮೂರ್ತಿ,** ನಂ.2/254, ಮುನ್ಸಿಪಲ್ ಕ್ವಾರ್ಟರ್ಸ್ ಎದುರು, ಸರಸ್ವತಿಪುರ, ಅರಸೀಕೆರೆ	5,000
10.	**ಡಾ.ವೈ.ಆರ್.ಪರಮೇಶ್ವರ,** ಚರ್ಮರೋಗ ತಜ್ಞ, ಅಭಿನವ, 2ನೇ ಕ್ರಾಸ್ 'ಬಿ' ಬ್ಲಾಕ್, ಗಾಂಧಿನಗರ, ಶಿವಮೊಗ್ಗ	5,000
11.	**ಭಾಸ್ಕರ್ ಜೆ.** ನಂ.237, 8ನೇ ಕ್ರಾಸ್, 2ನೇ ಬ್ಲಾಕ್, ವಿಶ್ವಪ್ರಿಯ ಲೇಔಟ್, ಬೇಗೂರು, ಬೆಂಗಳೂರು	5,000
12.	**ಎನ್. ನಾಗಮ್ಮ,** ನಂ.80, ಚಾಮುಂಡೇಶ್ವರಿ, ರೈಲ್ವೆ ಲೇಔಟ್, ಜೆ.ಕೆ. ಟೈಯರ್ಸ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ, ಮೈಸೂರು	5,000
13.	**ಶೋಭಾ ಮುರಳೀಧರನ್,** ನಂ.450, ಉತ್ತರಧಾಮ್, 2ನೇ 'ಡಿ'ಮೇನ್, ಮುತ್ಯಾಲನಗರ, ಬೆಂಗಳೂರು	5,000
14.	**ರಾಮಕೃಷ್ಣಭಟ್ಟ ಕೆ.ಎಂ.**, ನಂ.170 ಎ, ಬೆಟ್ಟಮಕ್ಕಿ ಹೊಸ ಕಾಲೊನಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎದುರು, ಸೀಬಿನಕೆರೆ ಪೋಸ್ಟ್, ತೀರ್ಥಹಳ್ಳಿ	5,000
15.	**ಜಿ.ಚಂದ್ರಮೋಹನ್,** ನಂ.94, ಅಶ್ವಥಿ, 4ನೇ ಕ್ರಾಸ್, ಶಿವಲಿಂಗಯ್ಯ ಕಾಲೊನಿ, ಎಚ್‌ಎಎಲ್, ಬೆಂಗಳೂರು	5,000
16.	**ಪ್ರತೀಕ್ ಶರ್ಮಾ,** 141, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	5,000
17.	**ಚೇತನ್ ಎಂ.ವಿ.,** ನಂ. 867, ಮೊದಲನೇ ಮೇನ್, ಬಿಇಎಂಎಲ್ ಲೇಔಟ್, 5ನೇ ಹಂತ, ಆರ್‌ಆರ್ ನಗರ, ಬೆಂಗಳೂರು	5,000
18.	**ಎಸ್. ಪ್ರಕಾಶ್,** ಕೆನರಾ ಬ್ಯಾಂಕ್, ವಿದ್ಯಾಭವನ, ಬಸ್ ನಿಲ್ದಾಣ ರಸ್ತೆ, ಹಾಸನ	3,000
19.	**ಎಚ್.ಎಲ್. ಗುರುರಾಜರಾವ್,** ನಂ. 544, 'ಶ್ರೀನಿಧಿ', 2ನೇ ಕ್ರಾಸ್, ಕೆ.ಜಿ. ಲೇಔಟ್, ಬನಶಂಕರಿ 3ನೇ ಹಂತ, ಬೆಂಗಳೂರು	2,500
20.	**ಗೊಲ್ಲಾಳಪ್ಪ ಎಸ್.ವಾಲಿ,** ವಿದ್ಯಾನಗರ, ಸಿಂದಗಿ ರಸ್ತೆ, ಇಂಡಿ, ವಿಜಯಪುರ	2,001
21.	**ಟಿ.ವಿ.ಸೋಮಶೇಖರ್,** ತೆನೆಯೂರು ಬೆಂಡಿಗನಹಳ್ಳಿ ಪೋಸ್ಟ್, ಹೊಸಕೋಟೆ ತಾ. ಬೆಂಗಳೂರು (ಗ್ರಾ)	2,000
22.	**ಕೆ.ಜೈಗೋಪಾಲ್,** ನಂ. ಜೆ 94, 1ನೇ ಮುಖ್ಯರಸ್ತೆ, ಎಲ್.ಎನ್.ಪುರಂ, ಬೆಂಗಳೂರು	2,000
23.	**ಕೆ.ಜಿ.ಸರೋಜಾ,** ನಂ. ಜೆ 94, 1ನೇ ಮುಖ್ಯರಸ್ತೆ, ಎಲ್.ಎನ್.ಪುರಂ, ಬೆಂಗಳೂರು	2,000
24.	**ಶಾರದಮ್ಮ ,** ಕಾಟಮನಲ್ಲೂರು, ವರ್ಗೋನಗರ ಪೋಸ್ಟ್, ಬೆಂಗಳೂರು	2,000
25.	**ಡಾ.ವೆಂಕಟಗಿರಿರಾವ್ ಎ.ಕೆ.,** ಎ.ಕೆ. ಅರೂರ್ 'ಎಸ್'ಕ್ಲಿನಿಕ್, ಬಜಗೋಳಿ ಪೋಸ್ಟ್, ಕಾರ್ಕಳ ತಾ. ಉಡುಪಿ	2,000
26.	**ಐ.ಎಂ.ಬಸ್ರಿ,** ನಂ.37–40,ಖವಾಸ್ಪುರ್ ಮಸೀದಿ ಹತ್ತಿರ, ಶಹಾಪುರ, ಯಾದಗಿರಿ	2,000
27.	**ಎಸ್.ಪ್ರಕಾಶ್,** ನಂ.306, ರಿನೇಸೆನ್ಸ್ ಟೆಂಪಲ್ ಬೆಲ್ಸ್, ಯಶವಂತಪುರ, ಬೆಂಗಳೂರು	2,000
28.	**ವೀಣಾ ಚಕ್ರಪಾಣಿ,** ನಂ.104, ಶ್ರವಂತಿ ಪ್ಯಾರಡೈಸ್, ಕನಕಪುರ ಮುಖ್ಯರಸ್ತೆ, ಜೆ.ಪಿ.ನಗರ 6ನೇ ಹಂತ, ಬೆಂಗಳೂರು	2,000
29.	**ಶ್ರೀಶೈಲ ಬೀಳಗಿ,** ಬಿಇಒ, ವಿರಾಜಪೇಟೆ,3541/7, ಎನ್.ಎಸ್. ಎಕ್ಸ್‌ಟೆನ್ಷನ್, ಹುಣಸೂರು	2,000
30.	**ಶ್ರೀಧರ್ ವಾದಿರಾಜ್ ಸವದತ್ತಿ,** ವೆಂಕಟೇಶ ಕಾಲೊನಿ, ಜಮಖಂಡಿ	2,000
31.	**ಎಂ.ಎಸ್. ಅಭಿನವ್,** ನಂ. 664/1, ಕಾಶೀಪತಿ ಅಗ್ರಹಾರ, ಕೆ.ಆರ್. ಮೊಹಲ್ಲಾ, ಮೈಸೂರು	2,000
32.	**ಅಶ್ವಿನಿ ಆರ್.,** ಶಾಂತು ನಿವಾಸ, ವಿದ್ಯಾನಗರ ರಸ್ತೆ, ಯಲ್ಲಾಪುರ ನಾಕಾ, ಶಿರಸಿ	2,000
33.	**ಮೊಹಮ್ಮದ್ ಸನಾವುಲ್ಲಾ,** ನಂ.2947, 6ನೇ ಕ್ರಾಸ್, 18ನೇ ಎ ಮೇನ್, ಎಚ್‌ಎಎಲ್ 2ನೇ ಹಂತ, ಬೆಂಗಳೂರು	2,000
34.	**ಕರ್ನಾಟಕ ಸೋಷಲಿಸ್ಟ್ ಫೋರಂ,** 6, ರಿವೆಂಡೆಲ್ ಅಪಾರ್ಟ್‌ಮೆಂಟ್, ಐಡಿಯಲ್ ಹೋಮ್ಸ್ ಲೇಔಟ್, ಆರ್. ಆರ್. ನಗರ, ಬೆಂಗಳೂರು	1,500
35.	**ಅಶೋಕ ಬಿ.** ಎಲ್‌ಐಸಿ, ಕುಂಬಾರ ಗಲ್ಲಿ, ಪಾಂಡುರಂಗ ದೇವಸ್ಥಾನದ ಹತ್ತಿರ, ಅರಸೀಕೆರೆ	1,200
36.	**ಸಿ.ವಸಂತಾ,** ನಂ. 398/1, 14ನೇ ಮೇನ್, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು	1,050
37.	**ಬೋರಮ್ಮ ಚಿನ್ನಪ್ಪ ಸಾಹು ಚಿಂಚೋಳಿ**, ಹಳೇಪೇಟೆ, ಶಹಾಪುರ ತಾ. ಶಹಾಪುರ, ಯಾದಗಿರಿ	1,010
38.	**ಸತೀಶ ಕೆ.,** ಸಹಾಯಕ ಎಂಜಿನಿಯರ್,ಕೌದ್ಲೆ, ಕೊಪ್ಪ, ಮದ್ದೂರು	1,002
39.	**ಪುಂಡಲೀಕ ರಾಥೋಡ್**, ಬಿಜಿಎಸ್ ಪಿ.ಜಿ, ಮುಖ್ಯರಸ್ತೆ, ವಿಜಯನಗರ, ಬೆಂಗಳೂರು	1,001
40.	**ವಿಶ್ವನಾಥ್ ಎಸ್. ಪಾಟೀಲ್**, ನೀಲಂ ಪ್ರಿಸಿಷಿನ್ ಟೆಕ್ನಾಲಜಿ, ಗೋಕುಲ ರಸ್ತೆ, ಹುಬ್ಬಳ್ಳಿ	1,001
41.	**ಭಾಸ್ಕರ್ ಕೆ.ಆರ್.** ನಂ. 409, ಮೊದಲನೇ ಮಹಡಿ, 4ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು	1,001
42.	**ಸಾಯಿಪ್ರಸಾದ್ ಮೋಹನ್**, ನಂ. 72, ವಿಜಯನಗರ, ಹುಬ್ಬಳ್ಳಿ	1,001
43.	**ಎಚ್.ಎಸ್. ಬಸವಪ್ರಭು, ಬೆಂಗಳೂರು**	1,001
44.	**ಸಂಗಪ್ಪ ಗಿಡದ ಮಸ್ಕಿ,** ಕೇರಾಫ್ ಶ್ರೀಸೂಗೂರೇಶ್ವರ ಟ್ರೇಡರ್ಸ್, ಮೇನ್ ರೋಡ್, ಸಿಂಧನೂರು	1,001
45.	**ಶಮಿನ್ ಎಂ. ಇದ್ದಲಗಿ,** ಮುಚಖಂಡಿ ಕ್ರಾಸ್, ಬಾಗಲಕೋಟೆ	1,001
46.	**ಡಾ.ಹಾಲತಿ ಸೋಮಶೇಖರ್,** ಮೈಸೂರು	1,000
47.	**ಸರ್ವೇಶ್ ಟಿ.,** ಅವ್ವ ನಿಂಗಮ್ಮ ನಿಲಯ, 8ನೇ ಕ್ರಾಸ್, ವಿ.ವಿ.ನಗರ, ಮಂಡ್ಯ	1,000
48.	**ಸಮುವೇಲಾ ಪ್ರಕಾಶ್ ಎಸ್.**, ನಂ.1250, 2ನೇ ಹಂತ, ರಾಜೀವ್ ನಗರ, ಮೈಸೂರು	1,000
49.	**ರಾಮರಾವ್ ಅಡವಿರಾವ್ ಕುಲಕರ್ಣಿ**, ಹಿರೇಅರಳಿಹಳ್ಳಿ, ಯಲಬುರ್ಗಾ ತಾ. ಕೊಪ್ಪಳ	1,000
50.	**ಎನ್.ನರಸಿಂಹರಾವ್,** ನಂ. 615/24, 4ನೇ ಕ್ರಾಸ್, ರಾಘವೇಂದ್ರ ಕಾಲೊನಿ, ಬಿಳೇಕಹಳ್ಳಿ, ಬೆಂಗಳೂರು	1,000

ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ: 1,04,64,000

ಕೆಪಿಎಸ್‌ಸಿ ಹಿಂದಿನ ಅಧ್ಯಕ್ಷ, 9 ಸದಸ್ಯರ ವಿರುದ್ಧ ಪ್ರಾಸಿಕ್ಯೂಷನ್

ಭ್ರಷ್ಟಾಚಾರ ಆರೋಪ: ರಾಷ್ಟ್ರಪತಿ ಅಂಗಳಕ್ಕೆ

● ರಾಜೇಶ್ ರೈ ಚಟ್ಲ

ಬೆಂಗಳೂರು: 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಂದಿನ ಅಧ್ಯಕ್ಷ ಮತ್ತು 9 ಸದಸ್ಯರನ್ನು ಭ್ರಷ್ಟಾಚಾರ ತಡೆ (ಪಿಸಿ) ಕಾಯ್ದೆ–1988ರ ಕಲಂ 19ರ ಅಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಸಿಐಡಿ ಸಲ್ಲಿಸಿದ್ದ ಕೋರಿಕೆಯನ್ನು ರಾಷ್ಟ್ರಪತಿಗೆ ಕಳುಹಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಆದರೆ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಕಲಂ 197ರ ಅಡಿ ಅಧ್ಯಕ್ಷರು ಮತ್ತು ಸದಸ್ಯರ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದಿರಲು ಸರ್ಕಾರ ತೀರ್ಮಾನಿಸಿದೆ. ಮೇ 27ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ತೆಗೆದುಕೊಂಡ ನಿರ್ಣಯದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಈ ನಿರ್ಣಯಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಹಿ ಹಾಕಿದ್ದಾರೆ.

ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿದ್ದ ಸಿಐಡಿ, ಸಾಕ್ಷ್ಯಾಧಾರಗಳ ಸಹಿತ ಸಾವಿರಾರು ಪುಟಗಳ ಕರಡು ದೋಷಾರೋಪ ಪಟ್ಟಿ ಸಿದ್ಧಪಡಿಸಿದೆ. ಪ್ರಕರಣಕ್ಕೆ ಸಂಬಂಧಿಸಿ ಕೆಪಿಎಸ್‌ಸಿಯ ಅಂದಿನ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ–1988ರ ಕಲಂ 19ರ ಅಡಿ ಮತ್ತು ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಕಲಂ 197ರ ಅಡಿ ಪ್ರಕರಣ ದಾಖಲಿಸಿಕೊಂಡು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಸಿಐಡಿ ಕೋರಿಕೆ ಸಲ್ಲಿಸಿತ್ತು.

'ಸಿಆರ್‌ಪಿಸಿ ಕಲಂ 197ರ ಅಡಿ ಪ್ರಕರಣ ದಾಖಲಿಸಿಕೊಂಡು ಪ್ರಾಸಿಕ್ಯೂಷನ್ ನಡೆಸಲು ಸಿಐಡಿಗೆ ಅನುಮತಿ ನೀಡಬೇಕೇ, ಬೇಡವೇ ಎನ್ನುವುದು ರಾಜ್ಯ ಸರ್ಕಾರದ ವಿವೇಚನೆ ಬಿಟ್ಟ ವಿಚಾರ. ಆದರೆ, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ–1988ರ ಕಲಂ 19ರ ಅಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವುದು ರಾಷ್ಟ್ರಪತಿ ವಿವೇಚನೆಗೆ ಬಿಟ್ಟಿದ್ದು. ಯಾಕೆಂದರೆ, ಕೆಪಿಎಸ್‌ಸಿ ಅಧ್ಯಕ್ಷ, ಸದಸ್ಯರ ನೇಮಕಾತಿಯಲ್ಲಿ ಸಕ್ಷಮ ಪ್ರಾಧಿಕಾರ ರಾಷ್ಟ್ರಪತಿ. ಸಿಐಡಿ ಸಲ್ಲಿಸಿರುವ ಕೋರಿಕೆಯನ್ನು ಸಂವಿಧಾನದ ಅನುಚ್ಛೇದ 317 (1)ರ ಪ್ರಕಾರ ಅಗತ್ಯ ಕ್ರಮಕ್ಕೆ ರಾಜ್ಯ ಸರ್ಕಾರ ಕಳುಹಿಸಬೇಕು. ರಾಷ್ಟ್ರಪತಿ ನಿರ್ಣಯ ಕೈಗೊಳ್ಳಬೇಕು. ಇದೀಗ ಕಳುಹಿಸಲು ಸರ್ಕಾರ ನಿರ್ಧರಿಸಿದೆ' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಅಧಿಕಾರಿ ತಿಳಿಸಿದರು.

ಅನುಮತಿ ನಿರಾಕರಣೆ: 'ಲಭ್ಯವಿರುವ ದಾಖಲೆಗಳನ್ನು ಅವಲೋಕಿಸಿದಾಗ ಅಧ್ಯಕ್ಷರು ಮತ್ತು ಸದಸ್ಯರನ್ನು ಸಿಆರ್‌ಪಿಸಿ ಕಲಂ 197ರ ಅಡಿ ಅಪರಾಧವೆಂದು ಪರಿಗಣಿಸಲು ಮೇಲ್ನೋಟಕ್ಕೆ ಯಾವುದೇ ಅಂಶಗಳು ಕಂಡುಬರುತ್ತಿಲ್ಲ. ಆರೋಪಿತರ ಮೇಲೆ ಮಾಡಿರುವ ಆರೋಪಗಳು ಸ್ಪಷ್ಟವಾಗಿ ಆಧಾರರಹಿತವೆಂದು ಕಂಡುಬರುತ್ತವೆ. ಯಾವುದೇ ಗ್ರಹಿಸಬಲ್ಲ ಕೃತ್ಯಗಳು ಇಲ್ಲದೆ ಅಥವಾ ಪಿತೂರಿ ನಡೆದಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿರುವುದು ಕಂಡುಬರುತ್ತಿರುವುದರಿಂದ ಭಾರತೀ ದಂಡ ಸಂಹಿತೆ (ಐಪಿಸಿ) ಪ್ರಕರಣ 166 ಮತ್ತು 167ರ ಅಡಿ ಅಪರಾಧವೆಂದು ಪರಿಗಣಿಸಲು ಸಾಧ್ಯ ಆಗಿರುವುದಿಲ್ಲ' ಎಂದು ಅಭಿಪ್ರಾಯಪಟ್ಟು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ.

ಪಿಸಿ ಮತ್ತು ಸಿಆರ್‌ಪಿಸಿ ಅಡಿ ಪ್ರಾಸಿಕ್ಯೂಷನ್‌ಗೆ ಸಿಐಡಿ ಮಾಡಿದ್ದ ಮನವಿಯನ್ನು ಸೆ. 15ರಂದು ನಡೆದ ಸಚಿವ ಸಂಪುಟ ಸಭೆಗೆ ಡಿಪಿಎಆರ್ ಮಂಡಿಸಿತ್ತು. ಅಂದು, ಈ ಬಗ್ಗೆ ಯಾವುದೇ ನಿರ್ಣಯ ಕೈಗೊಳ್ಳದೆ, ಪರಿಶೀಲಿಸಿ ಶಿಫಾರಸು ಮಾಡಲು ಸಂಪುಟ ಉಪ ಸಮಿತಿ ರಚಿಸಲಾಗಿತ್ತು. ಆದರೆ, ಎರಡು ಬಾರಿ ಸಭೆ ನಡೆಸಿದ್ದ ಸಮಿತಿ ಯಾವುದೇ ಅಂತಿಮ ಶಿಫಾರಸು ಮಾಡದೆ, ಸೂಕ್ತ ನಿರ್ಧಾರವನ್ನು ಸಂಪುಟ ಸಭೆ ತೆಗೆದುಕೊಳ್ಳುವಂತೆ ಷರಾ ಬರೆದಿತ್ತು.

ಯಾರು ಎಷ್ಟನೇ ಆರೋಪಿ?

1. ಗೋನಾಳ್ ಭೀಮಪ್ಪ (ಅಂದಿನ ಅಧ್ಯಕ್ಷರು)
4. ಮಂಗಳಾ ಶ್ರೀಧರ್
9. ಬಿ.ಎಸ್. ಕೃಷ್ಣಪ್ರಸಾದ್
10. ಎಸ್.ಆರ್. ರಂಗಮೂರ್ತಿ
11. ಎನ್. ಮಹದೇವ್
12. ಎಚ್.ವಿ. ಪಾರ್ಶ್ವನಾಥ್
13. ಎಸ್. ದಯಾಶಂಕರ್
14. ಎಚ್.ಡಿ. ಪಾಟೀಲ್
15. ಎನ್ ರಾಮಕೃಷ್ಣ
16. ಬಿ.ಟಿ. ಕನಿರಾಮ್ (ಎಲ್ಲರೂ ಸದಸ್ಯರು). ಎಲ್ಲರೂ ಕೆಪಿಎಸ್‌ಸಿಯಿಂದ ನಿವೃತ್ತರು.

ನಿಯಂತ್ರಣದತ್ತ ಕೋವಿಡ್

ಒಂದನೇ ಪುಟದಿಂದ...

ಶೇ 3ರ ಗಡಿಯ ಆಸುಪಾಸಿಗೆ ಏರಿಕೆಯಾಗಿದ್ದ ಮರಣ ಪ್ರಮಾಣ ದರ ಕೂಡ ಇಳಿಕೆಯಾಗುತ್ತಿದೆ. ಏಳು ದಿನಗಳಲ್ಲಿ ವರದಿಯಾದ ಮರಣ ಪ್ರಕರಣಗಳ ಪ್ರಕಾರ ರಾಜ್ಯದಲ್ಲಿ ಶೇ 2.67ರಷ್ಟು ಮರಣ ಪ್ರಮಾಣ ದರವಿದೆ. ಯಾದಗಿರಿ, ಉಡುಪಿ ಸೇರಿದಂತೆ 9 ಜಿಲ್ಲೆಗಳಲ್ಲಿ ಈ ಪ್ರಮಾಣವು ಶೇ 1ಕ್ಕಿಂತ ಕಡಿಮೆಯಿದೆ. ಬೆಂಗಳೂರು ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ರಾಜ್ಯದ ಸರಾಸರಿಗಿಂತ ಅಧಿಕವಿದೆ.

ಅಧಿಕ ಮರಣ ಪ್ರಮಾಣದ ಜಿಲ್ಲೆಗಳು

ಜಿಲ್ಲೆ	ಮರಣ ಪ್ರಮಾಣ ದರ (ಶೇ)
ಬೆಂಗಳೂರು ನಗರ	7.86
ಹಾವೇರಿ	5.89
ಬೀದರ್	5.36
ಕಲಬುರ್ಗಿ	3.14
ಧಾರವಾಡ	2.50

*ಒಂದು ವಾರದ ಸರಾಸರಿ

ಕಡಿಮೆ ಮರಣ ಪ್ರಮಾಣದ ಜಿಲ್ಲೆಗಳು

ಜಿಲ್ಲೆ	ಮರಣ ಪ್ರಮಾಣ (ಶೇ)
ಯಾದಗಿರಿ	0.24
ಉಡುಪಿ	0.31
ಚಿತ್ರದುರ್ಗ	0.31
ಕೊಡಗು	0.55
ಚಿಕ್ಕಮಗಳೂರು	0.66

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ಐ.ಟಿ. ಪೋರ್ಟಲ್ ಸಮಸ್ಯೆ ವಾರದಲ್ಲಿ ನಿವಾರಣೆ'

ನವದೆಹಲಿ (ಪಿಟಿಐ): ಆದಾಯ ತೆರಿಗೆ ವಿವರಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸುವ ಹೊಸ ಪೋರ್ಟಲ್‌ನಲ್ಲಿನ ಸಮಸ್ಯೆಗಳು ಈ ವಾರದಲ್ಲಿ ಸರಿಹೋಗಬಹುದು ಎಂದು ಐ.ಟಿ. ಸೇವಾ ಕಂಪನಿ ಇನ್ಫೊಸಿಸ್ ಹೇಳಿದೆ.

ಹೊಸ ವೆಬ್‌ಸೈಟ್‌ನಲ್ಲಿನ ಸಮಸ್ಯೆಗಳನ್ನು ಸರಿಪಡಿಸುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇನ್ಫೊಸಿಸ್ ಹಾಗೂ ಅದರ ಅಧ್ಯಕ್ಷ ನಂದನ್ ನಿಲೇಕಣಿ ಅವರಲ್ಲಿ ಹೇಳಿದ್ದರು. 'ಮೊದಲ ದಿನ ನಾವು ಕೆಲವು ತಾಂತ್ರಿಕ ಸಮಸ್ಯೆಗಳನ್ನು ಗಮನಿಸಿದ್ದೇವೆ. ಅವುಗಳನ್ನು ಸರಿಪಡಿಸಲು ಕೆಲಸ ಮಾಡುತ್ತಿದ್ದೇವೆ. ಈ ಆರಂಭಿಕ ಸಮಸ್ಯೆಗಳ ಬಗ್ಗೆ ಇನ್ಫೊಸಿಸ್ ವಿಷಾದ ವ್ಯಕ್ತಪಡಿಸುತ್ತದೆ. ವ್ಯವಸ್ಥೆಯು ವಾರದಲ್ಲಿ ಸರಿಹೋಗಬಹುದು ಎಂಬ ನಿರೀಕ್ಷೆ ಇದೆ' ಎಂದು ನಿಲೇಕಣಿ ಅವರು ಟ್ವೀಟ್ ಮಾಡಿದ್ದರು.

ಸಂಕ್ಷಿಪ್ತ ಸುದ್ದಿ

ಮಲಯಾಳ ಬಳಸದಂತೆ ಸುತ್ತೋಲೆ: ಕ್ಷಮೆಯಾಚಿಸಿದ ಅಧಿಕಾರಿ

ನವದೆಹಲಿ: ಕೆಲಸದ ಸಮಯದಲ್ಲಿ ದಾದಿಯರು ಮಲಯಾಳ ಭಾಷೆಯಲ್ಲಿ ಮಾತನಾಡಬಾರದು ಎಂದು ಸುತ್ತೋಲೆ ಹೊರಡಿಸಿದ್ದ ದೆಹಲಿಯ ಜಿ.ಬಿ.ಪಂತ್ ಆಸ್ಪತ್ರೆಯ ನರ್ಸಿಂಗ್ ಅಧೀಕ್ಷಕರು ಕ್ಷಮೆಯಾಚಿಸಿದ್ದಾರೆ. ಯಾವುದೇ ಭಾರತೀಯ ಭಾಷೆ, ಪ್ರದೇಶ ಮತ್ತು ಧರ್ಮಕ್ಕೆ ಅಗೌರವ ತರುವ ಉದ್ದೇಶದಿಂದ ಸುತ್ತೋಲೆ ಹೊರಡಿಸಿಲ್ಲ ಎಂದು ಅವರು ಹೇಳಿದ್ದಾರೆ.

'ಆಸ್ಪತ್ರೆ ಆಡಳಿತ ಮತ್ತು ದೆಹಲಿ ಸರ್ಕಾರಕ್ಕೆ ಈ ಬಗ್ಗೆ ತಿಳಿದಿರಲಿಲ್ಲ, ಸದ್ಯ ಈ ಆದೇಶವನ್ನು ಹಿಂಪಡೆಯಲಾಗಿದೆ' ಎಂದು ಆಸ್ಪತ್ರೆ ತಿಳಿಸಿದೆ.

ಮಿದುಳು ನಿಷ್ಕ್ರಿಯ: 8 ಜನರಿಗೆ ಜೀವದಾನ

ಕೊಯಮತ್ತೂರು (ಪಿಟಿಐ): ಅಪಘಾತದಲ್ಲಿ ಗಾಯಗೊಂಡು ಮಿದುಳು ನಿಷ್ಕ್ರಿಯಗೊಂಡಿದ್ದ 51 ವರ್ಷದ ವ್ಯಕ್ತಿಯ ಅಂಗಾಂಗಗಳ ದಾನದಿಂದ 8 ಮಂದಿಗೆ ಜೀವದಾನ ಸಿಕ್ಕಿದೆ.

ನಗರದ ಸಿಂಗನಲ್ಲೂರ್ ನಿವಾಸಿ, ವೃತ್ತಿಯಲ್ಲಿ ದರ್ಜಿಯಾಗಿದ್ದ ಆರ್. ಚೆಂತಮರೈ ಅವರು ಇದೇ 6ರಂದು ಅಪಘಾತಕ್ಕೀಡಾಗಿದ್ದರು. ಇದೇ 8ರಂದು ಇಲ್ಲಿನ ಕೆಎಂಸಿ ಆಸ್ಪತ್ರೆಯಲ್ಲಿ ಮಿದುಳು ನಿಷ್ಕ್ರಿಯಗೊಂಡಿದೆ ಎಂದು ಘೋಷಿಸಲಾಗಿತ್ತು. ಈ ವ್ಯಕ್ತಿಯ ಅಂಗಾಂಗಗಳನ್ನು ಆತನ ಕುಟುಂಬದ ಸದಸ್ಯರು ದಾನ ಮಾಡಿದರು.

ಮೃತ ವ್ಯಕ್ತಿಯ ಯಕೃತ್ತು ಮತ್ತು ಒಂದು ಮೂತ್ರಪಿಂಡವನ್ನು ಕೆಎಂಸಿ ಆಸ್ಪತ್ರೆಯಲ್ಲಿ ಅಗತ್ಯವಿದ್ದ ವ್ಯಕ್ತಿಗೆ ಕಸಿ ಮಾಡಿ ಜೋಡಿಸಲಾಯಿತು. ಇನ್ನೊಂದು ಮೂತ್ರಪಿಂಡವನ್ನು ವೆಲ್ಲೂರಿನ ಖಾಸಗಿ ಆಸ್ಪತ್ರೆಗೆ ಮತ್ತು ಹೃದಯವನ್ನು ಚೆನ್ನೈನ ಖಾಸಗಿ ಆಸ್ಪತ್ರೆಗೆ ರವಾನಿಸಲಾಯಿತು. ಅಲ್ಲದೆ, ಕಣ್ಣು, ಚರ್ಮ ಮತ್ತು ಮೂಳೆಯನ್ನು ಸ್ಥಳೀಯ ಖಾಸಗಿ ಆಸ್ಪತ್ರೆಗೆ ನೀಡಲಾಯಿತು ಎಂದು ಕೆಎಂಸಿ ಆಸ್ಪತ್ರೆ ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಅರುಣಾಚಲ ಪ್ರದೇಶ: ಲಸಿಕೆ ಪಡೆದರೆ ಉಚಿತ ಅಕ್ಕಿ

ಇಟಾನಗರ: ಕೋವಿಡ್–19 ಲಸಿಕೆ ಪಡೆದರೆ ಉಚಿತವಾಗಿ 20 ಕೆ.ಜಿ. ಅಕ್ಕಿಯನ್ನು ನೀಡುವ ಮೂಲಕ ಲಸಿಕಾ ಅಭಿಯಾನವನ್ನು ಚುರುಕುಗೊಳಿಸುವ ತಂತ್ರವನ್ನು ಇಲ್ಲಿಯ ಸ್ಥಳೀಯಾಡಳಿತ ಅನುಸರಿಸುತ್ತಿದೆ.

ಗ್ರಾಮಸ್ಥರಲ್ಲಿ ಲಸಿಕೆಯ ಕುರಿತು ಇರುವ ತಪ್ಪು ಪರಿಕಲ್ಪನೆಗಳನ್ನು ಹೋಗಲಾಡಿಸುವ ಸಂಬಂಧ ಕಾರ್ಯರೂಪಕ್ಕೆ ತಂದ ಈ ಕಾರ್ಯತಂತ್ರ ಫಲಪ್ರದವಾಗಿದೆ.

'ಲಸಿಕೆ ಅಭಿಯಾನವನ್ನು ಚುರುಕುಗೊಳಿಸಲು ನಿರಂತರವಾಗಿ ಕಾರ್ಯತಂತ್ರ ರೂಪಿಸುತ್ತಿದ್ದೇವೆ. ಮಧ್ಯಾಹ್ನದೊಳಗೆ 80ಕ್ಕೂ ಹೆಚ್ಚು ಮಂದಿ ಬಂದು ಲಸಿಕೆ ಹಾಕಿಸಿಕೊಂಡಿದ್ದಾರೆ. ಜೂನ್ 20ರೊಳಗೆ ಶೇ100 ರಷ್ಟು ಮಂದಿಗೆ ಲಸಿಕೆ ನೀಡುವ ಗುರಿ ಹೊಂದಿದ್ದೇವೆ' ಎಂದು ಈ ಕಾರ್ಯತಂತ್ರದ ರೂವಾರಿ ಯಜ್ಯಲಿಯ ಸರ್ಕಲ್ ಆಫೀಸರ್ ತಾಶಿ ವಾಂಗ್‌ಚುಕ್ ಥೋಂಗ್‌ಡೊಕ್ ಹೇಳಿದರು.

ವಿಮಾನ ಅಪಹರಿಸುವ ಬೆದರಿಕೆ: ವ್ಯಕ್ತಿ ಬಂಧನ

ಭೋಪಾಲ್: ಮಧ್ಯಪ್ರದೇಶದ ಭೋಪಾಲ್ ಮತ್ತು ಇಂದೋರ್ ವಿಮಾನ ನಿಲ್ದಾಣಗಳಿಂದ ವಿಮಾನಗಳನ್ನು ಅಪಹರಿಸಿ ಪಾಕಿಸ್ತಾನಕ್ಕೆ ಕೊಂಡೊಯ್ಯುವದಾಗಿ ಬೆದರಿಕೆ ಹಾಕಿದ ಆರೋಪದಡಿ ರಾಜಾಭೋಜ್ ಎಂಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಈತ, ಮಂಗಳವಾರ ಸಂಜೆ 5 ಗಂಟೆ ಸುಮಾರಿಗೆ ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಕರೆ ಮಾಡಿ, ವಿಮಾನ ಅಪಹರಿಸುವ ಬೆದರಿಕೆ ಹಾಕಿದ್ದ ಎಂದು ಭೋಪಾಲ್‌ನ ಗಾಂಧಿನಗರ ಪೊಲೀಸ್ ಠಾಣೆ ಉಸ್ತುವಾರಿ ಅರುಣ್ ಶರ್ಮಾ ಬುಧವಾರ ಸುದ್ದಿ ಸಂಸ್ಥೆಗೆ ತಿಳಿಸಿದರು.

ಈ ಬೆದರಿಕೆ ಕರೆ ಬಂದ ನಂತರ ವಿಮಾನ ನಿಲ್ದಾಣ ನಿರ್ವಹಣೆಯ ಅಧಿಕಾರಿಗಳು, ಗಾಂಧಿನಗರ ಪೊಲೀಸರಿಗೆ ದೂರು ನೀಡಿದರು.

ಕೋವಿಡ್: ಕೇಂದ್ರ ಸರ್ಕಾರಿ ನೌಕರರಿಗೆ ವಿಶೇಷ ರಜೆ

ನವದೆಹಲಿ: ಪೋಷಕರು ಅಥವಾ ಕುಟುಂಬದ ಯಾವುದೇ ಅವಲಂಬಿತ ಸದಸ್ಯರಿಗೆ ಕೋವಿಡ್ ಇದ್ದರೆ ಕೇಂದ್ರ ಸರ್ಕಾರಿ ನೌಕರರು 15 ದಿನ ವಿಶೇಷ ಸಾಂದರ್ಭಿಕ ರಜೆ ತೆಗೆದುಕೊಳ್ಳಬಹುದು ಎಂದು ಕೇಂದ್ರ ಆದೇಶ ಹೊರಡಿಸಿದೆ.

ವಿಶೇಷ ಸಾಂದರ್ಭಿಕ ರಜೆ (ಎಸ್‌ಸಿಎಲ್) ಅವಧಿ ಮುಗಿದ ನಂತರವೂ ಕುಟುಂಬದ ಸದಸ್ಯರು ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದರೆ, ಅವರು ಆಸ್ಪತ್ರೆಯಿಂದ ಬಿಡುಗಡೆಯಾಗುವವರೆಗೆ ಎಸ್‌ಸಿಎಲ್ ಹೊರತುಪಡಿಸಿ ಯಾವುದೇ ರೀತಿಯ ರಜೆ ಪಡೆಯಬಹುದು ಎಂದು ತಿಳಿಸಲಾಗಿದೆ.

ಕೋವಿಡ್ ದೃಢಪಟ್ಟ ವ್ಯಕ್ತಿಯೊಂದಿಗೆ ನೇರ ಸಂಪರ್ಕ ಹೊಂದಿರುವ ನೌಕರರು, ಹೋಂ ಕ್ವಾರಂಟೈನ್ ಆಗಿದ್ದರೆ ಅವರಿಗೆ ಏಳು ದಿನಗಳವರೆಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶ ನೀಡಲಾಗುವುದು ಎಂದೂ ಹೇಳಲಾಗಿದೆ.

ಮನೆ ಮನೆಗೆ ಲಸಿಕೆ ಕಾರ್ಯಕ್ರಮಕ್ಕೆ ಅನುಮತಿ ನೀಡದ ಕೇಂದ್ರಕ್ಕೆ ಬಾಂಬೆ ಹೈಕೋರ್ಟ್ ತರಾಟೆ

'ಕೊರೊನಾ ಮೇಲೆ ನಿರ್ದಿಷ್ಟ ದಾಳಿ ನಡೆಸಿ'

ಮುಂಬೈ (ಪಿಟಿಐ): ಇಂದಿನ ಸಮಾಜದ ಅತಿ ದೊಡ್ಡ ಶತ್ರುವಾದ ಕೊರೊನಾ ವೈರಾಣು ವಿರುದ್ಧದ ಹೋರಾಟವು 'ನಿರ್ದಿಷ್ಟ ದಾಳಿ'ಯಂತೆ (ಸರ್ಜಿಕಲ್ ಸ್ಟ್ರೈಕ್) ಇರಬೇಕು. ಆದರೆ, ಶತ್ರು ಹೊರಬರಲಿ ಎಂದು ಕಾಯುತ್ತಾ ನಿಂತ ಯೋಧರಂತೆ ಹೋರಾಟ ನಡೆಸುತ್ತಿದೆ ಎಂದು ಕೇಂದ್ರ ಸರ್ಕಾರವನ್ನು ಬಾಂಬೆ ಹೈಕೋರ್ಟ್ ಬುಧವಾರ ತರಾಟೆಗೆ ತೆಗೆದುಕೊಂಡಿದೆ.

ಮನೆ ಮನೆಗೆ ತೆರಳಿ ಲಸಿಕೆ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ವಕೀಲರಾದ ಧೃತಿ ಕಪಾಡಿಯಾ ಮತ್ತು ಕುನಾಲ್ ತಿವಾರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. 75 ವರ್ಷ ದಾಟಿದ ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ, ಹಾಸಿಗೆ ಅಥವಾ ಗಾಲಿ ಕುರ್ಚಿಗಳಲ್ಲಿ ಇರುವವರಿಗೆ ಅವರು ಇರುವಲ್ಲಿಗೇ ಹೋಗಿ ಲಸಿಕೆ ನೀಡಬೇಕು ಎಂದು ಅವರು ಕೋರ್ಟ್‌ಗೆ ಮನವಿ ಮಾಡಿದ್ದರು.

ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತ ಮತ್ತು ನ್ಯಾಯಮೂರ್ತಿ ಜಿ.ಎಸ್. ಕುಲಕರ್ಣಿ ಇದ್ದ ವಿಭಾಗೀಯ ಪೀಠ ಈ ಅರ್ಜಿಯ ವಿಚಾರಣೆ ನಡೆಸಿದೆ. ಕೇಂದ್ರ ಸರ್ಕಾರದ 'ಮನೆಯ ಸಮೀಪವೇ ಲಸಿಕೆ ಕೇಂದ್ರ' ನೀತಿಯ ಕುರಿತು ಕೋರ್ಟ್ ಹೀಗೆ ಹೇಳಿದೆ: 'ನಮ್ಮ ಶತ್ರು ಕೊರೊನಾ ವೈರಾಣು ಕೆಲವು ಪ್ರದೇಶಗಳು ಮತ್ತು ಮನೆಯಿಂದ ಹೊರ ಬರಲಾಗದ ಜನರಲ್ಲಿ ಅಡಗಿರುತ್ತದೆ. ಹೀಗಾಗಿ ಸರ್ಕಾರವು ನಿರ್ದಿಷ್ಟ ದಾಳಿ ಮಾದರಿಯಲ್ಲಿ ವೈರಸ್ ಇರುವಲ್ಲಿಗೇ ಹೋಗಿ ಅದನ್ನು ಸೋಲಿಸಬೇಕು. ಆದರೆ ನೀವು ವೈರಾಣು ಹೊರಗೆ ಬರಲಿ ಎಂದು ಗಡಿಯಲ್ಲಿ ನಿಂತು ಕಾಯುತ್ತಿದ್ದೀರಿ' ಎಂದು ಹೇಳಿದೆ. ಸರ್ಕಾರ ಜನರ ಒಳಿತಿಗಾಗಿಯೇ ಹಲವಾರು ನಿರ್ಧಾರಗಳನ್ನು ಕೈಗೊಂಡಿದೆ. ಆದರೆ ನಿರ್ಧಾರಗಳನ್ನು ವಿಳಂಬವಾಗಿ ತೆಗೆದುಕೊಂಡಿದ್ದರಿಂದ ಹಲವಾರು ಜೀವ ನಷ್ಟವಾಯಿತು ಎಂದಿದೆ.

ಲಸಿಕಾ ಕೇಂದ್ರಗಳಿಗೆ ತೆರಳಲಾಗದ ಹಿರಿಯ ನಾಗರಿಕರು ಮತ್ತು ಅಂಗವಿಕಲರ ಭಾವನೆಗಳಷ್ಟೇ ಅಲ್ಲ, ಅವರ ಕುಟುಂಬದವರ ಭಾವನೆಗಳನ್ನೂ ಕೇಂದ್ರ ಸರ್ಕಾರ ಪರಿಗಣಿಸಬೇಕು ಎಂದು ಕೋರ್ಟ್ ಹೇಳಿದೆ. ಈ ಅರ್ಜಿಯ ಮುಂದಿನ ವಿಚಾರಣೆಯನ್ನು ಜುಲೈ 1ಕ್ಕೆ ನಿಗದಿಪಡಿಸಿದೆ.

ಲಸಿಕೆ ಅಭಿಯಾನದ ಆರಂಭದಲ್ಲಿ ಹಿರಿಯ ರಾಜಕಾರಣಿಯೊಬ್ಬರು ತಮ್ಮ ಮನೆಯಲ್ಲೇ ಹೇಗೆ ಲಸಿಕೆ ಪಡೆದರು ಎಂದು ಬಿಎಂಸಿಯನ್ನು ಕೋರ್ಟ್ ಪ್ರಶ್ನಿಸಿದೆ. ಈ ಕಾರ್ಯಕ್ಕೆ ಬಿಎಂಸಿ ಅಥವಾ ರಾಜ್ಯ ಸರ್ಕಾರ ಹೊಣೆ ಹೊತ್ತುಕೊಳ್ಳಲೇಬೇಕು ಎಂದು ಹೇಳಿದೆ. ಬಿಎಂಸಿ ಪರ ವಕೀಲ ಅನಿಲ್ ಸಖಾರೆ ಮತ್ತು ಮಹಾರಾಷ್ಟ್ರ ಸರ್ಕಾರ ಪರ ಹೆಚ್ಚುವರಿ ವಕೀಲೆ ಗೀತಾ ಶಾಸ್ತ್ರಿ ಅವರಿಗೂ ಈ ಕುರಿತು ಮಾಹಿತಿ ನೀಡಲು ಕೋರ್ಟ್ ಆದೇಶಿಸಿದೆ.

ಸದ್ಯಕ್ಕೆ ಮನೆ ಬಾಗಿಲಿಗೆ ತೆರಳಿ ಲಸಿಕೆ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲು ಆಗುವುದಿಲ್ಲ. ಆದರೆ 'ಮನೆ ಹತ್ತಿರ ಲಸಿಕೆ' ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಕೇಂದ್ರ ಸರ್ಕಾರ ಮಂಗಳವಾರ ಹೇಳಿತ್ತು.

'ಕೇಂದ್ರದ ಅನುಮತಿ ಬೇಕಿಲ್ಲ'

ಕೇರಳ, ಜಮ್ಮು ಮತ್ತು ಕಾಶ್ಮೀರ, ಬಿಹಾರ ಮತ್ತು ಒಡಿಶಾ ಸರ್ಕಾರಗಳು ಮತ್ತು ಮಹಾರಾಷ್ಟ್ರದ ವಸಯಿ-ವಿರಾರ್‌ನಂತಹ ಕೆಲವು ನಗರ ಪಾಲಿಕೆಗಳು ಮನೆ ಬಾಗಿಲಿಗೆ ತೆರಳಿ ಲಸಿಕೆ ನೀಡುತ್ತಿರುವುದನ್ನು ಕೋರ್ಟ್ ಉಲ್ಲೇಖಿಸಿದೆ. ದೇಶದ ಇತರ ರಾಜ್ಯಗಳಲ್ಲಿ ಅದೇ ಮಾದರಿಯನ್ನು ಏಕೆ ಅನುಕರಿಸುವುದಿಲ್ಲ ಎಂದು ಪೀಠವು ಪ್ರಶ್ನಿಸಿದೆ.

ರಾಜ್ಯ ಸರ್ಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳು ಮನೆ ಮನೆಗೂ ತೆರಳಿ ಲಸಿಕೆ ನೀಡುವ ಕಾರ್ಯಕ್ರಮ ಹಮ್ಮಿಕೊಂಡರೆ ಅದನ್ನು ಕೇಂದ್ರ ಸರ್ಕಾರ ತಡೆಯುವಂತಿಲ್ಲ. ಆದರೆ ರಾಜ್ಯ ಸರ್ಕಾರಗಳು ಕೇಂದ್ರದ ಅನುಮತಿಗಾಗಿ ಕಾಯುತ್ತಿವೆ. ಹಲವಾರು ರಾಜ್ಯಗಳು ಕೇಂದ್ರದ ಅನುಮತಿಯಿಲ್ಲದೇ ಮನೆಮನೆಗೆ ತೆರಳಿ ಲಸಿಕೆ ನೀಡುತ್ತಿರುವಾಗ ಬೃಹನ್‌ಮುಂಬೈ ನಗರ ಪಾಲಿಕೆ (ಬಿಎಂಸಿ) ಏಕೆ ಕೇಂದ್ರದ ಅನುಮತಿಗೆ ಕಾಯುತ್ತಿದೆ. ಹೀಗೆ ಮಾಡುವ ಮೂಲಕ ಬಿಎಂಸಿಯು ಹೈಕೋರ್ಟ್‌ನ ನಿರೀಕ್ಷೆಯನ್ನು ಹುಸಿಗೊಳಿಸಿದೆ. ಕೋವಿಡ್ ನಿರ್ವಹಣೆ ವಿಚಾರದಲ್ಲಿ ಬಿಎಂಸಿ ಇತರ ರಾಜ್ಯಗಳಿಗೆ ಮಾದರಿಯಾಗಿದೆ ಎಂದು ನಾವು ಸದಾ ಹೇಳುತ್ತಿದ್ದೆವು ಎಂದು ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತ ಹೇಳಿದ್ದಾರೆ.

'ಆಟ್ಮಾಸ್ಫೆರಿಕ್ ರಿಸರ್ಚ್' ನಿಯತಕಾಲಿಕದಲ್ಲಿ ವರದಿ

ಖರಗಪುರ ಐಐಟಿಯ ಜಿಯಾ ಅಲ್ಬರ್ಟ್, ವಿಷ್ಣುಪ್ರಿಯಾ ಸಾಹೂ ಮತ್ತು ಪ್ರಸಾದ್ ಕೆ. ಭಾಸ್ಕರನ್ ಅವರು ಈ ಬಗ್ಗೆ ಸಂಶೋಧನೆ ಕೈಗೊಂಡಿದ್ದಾರೆ.

ಚಂಡಮಾರುತ ಪತ್ತೆಗೆ ವಿನೂತನ ಪದ್ಧತಿ

ನವದೆಹಲಿ: ಉಷ್ಣವಲಯದಲ್ಲಿ ಸಂಭವಿಸುವ ಚಂಡಮಾರುತಗಳನ್ನು ಮುಂಚಿತವಾಗಿಯೇ ಪತ್ತೆ ಮಾಡಲು ವಿಜ್ಞಾನಿಗಳ ತಂಡ ವಿಭಿನ್ನ ಪದ್ಧತಿ ರೂಪಿಸಿದೆ.



ಉಪಗ್ರಹ ಪತ್ತೆ ಮಾಡುವ ಮುನ್ನವೇ ಈ ಕಾರ್ಯ ಕೈಗೊಳ್ಳುವ ವ್ಯವಸ್ಥೆ ಇದಾಗಿದೆ. ವಾತಾವರಣದಲ್ಲಿ ಸಂಭವಿಸುವ ಸುಂಟರಗಾಳಿ ಮತ್ತು ಸುಳಿಗಳ ವಿಶ್ಲೇಷಣೆ ನಡೆಸಿ ಚಂಡಮಾರುತ ಸಂಭವಿಸುವುದನ್ನು ಪತ್ತೆ ಮಾಡುವ ವಿಧಾನವನ್ನು ರೂಪಿಸಲಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ತಿಳಿಸಿದೆ.

'ಇದುವರೆಗೆ ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನದ ಮೂಲಕವೇ ಚಂಡಮಾರುತಗಳ ಸಂಭವಿಸುವಿಕೆಯನ್ನು ಪತ್ತೆ ಮಾಡಲಾಗುತ್ತಿತ್ತು. ಆದರೆ, ಸಮುದ್ರದ ಮೇಲ್ಮೈ ಪ್ರದೇಶದಲ್ಲಿ ವಾಯುಭಾರ ಕುಸಿತವಾದ ಬಳಿಕವೇ ಇದು ಸಾಧ್ಯವಾಗಲಿದೆ.

ಚಂಡಮಾರುತ ಸಂಭವಿಸುವುದನ್ನು ಮುಂಚಿತವಾಗಿಯೇ ಗುರುತಿಸಿದರೆ, ಅದರಿಂದ ಉಂಟಾಗುವ ಹಾನಿಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಬಹುದು. ಜತೆಗೆ, ಪೂರ್ವ ಸಿದ್ಧತೆಗಳನ್ನು ಕೈಗೊಳ್ಳಲು ಸಾಕಷ್ಟು ಸಮಯಾವಕಾಶ ದೊರೆಯುತ್ತದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

'ಕೋವಿಡ್: ಒಳಾಂಗಣದಲ್ಲಿ ಹರಡುವಿಕೆ ಹೆಚ್ಚು'

ವಾಷಿಂಗ್ಟನ್ (ಪಿಟಿಐ): ಮಾಸ್ಕ್ ಧರಿಸದೆ ಒಳಾಂಗಣಗಳಲ್ಲಿ ಮಾತನಾಡುವುದರಿಂದ ಕೋವಿಡ್ 19 ಹರಡುವಿಕೆಯ ಅಪಾಯ ಹೆಚ್ಚಿದೆ ಎಂದು ಹೊಸ ಅಧ್ಯಯನದಿಂದ ಬೆಳಕಿಗೆ ಬಂದಿದೆ.

ಮಾತನಾಡುವಾಗ ಹೊರಸೂಸುವ ವಿಭಿನ್ನ ಗಾತ್ರದ ಉಗುಳು ಯಾವ ಗಾತ್ರಗಳನ್ನು ಹೊಂದಿರುತ್ತವೆ ಮತ್ತು ವಿವಿಧ ಪ್ರಮಾಣದ ವೈರಸ್‌ಗಳನ್ನು ಹೇಗೆ ಸಾಗಿಸಬಲ್ಲವು ಎಂಬುದನ್ನು ಜರ್ನಲ್ ಆಫ್ ಇಂಟರ್ನಲ್ ಮೆಡಿಸಿನ್ ಜರ್ನಲ್‌ನಲ್ಲಿ ಮಂಗಳವಾರ ಪ್ರಕಟವಾಗಿರುವ ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

ಈ ಅಧ್ಯಯನ ನಡೆಸಿರುವ ಸಂಶೋಧಕರ ಪ್ರಕಾರ, ಮಧ್ಯಮ ಗಾತ್ರದ ಉಗುಳ ಹನಿಗಳು ಕೆಲವೇ ನಿಮಿಷಗಳಲ್ಲಿ ಗಾಳಿಯಲ್ಲಿ ನಿಷ್ಕ್ರಿಯವಾಗುತ್ತವೆ. ಆದರೆ ಈ ಹನಿಗಳು ಗಾಳಿಯಲ್ಲಿ ಸಾಕಷ್ಟು ದೂರದವರೆಗೆ ಸಾಗುತ್ತವೆ.

ಅಲ್ಲದೆ, ಮುಚ್ಚಿದ ಪರಿಸರದಲ್ಲಿ ಸಿಡಿಯುವ ಉಗುಳಿನ ಹನಿಗಳು ಗಾಳಿಯಲ್ಲಿ ಹೆಚ್ಚು ಶೇಖರಣೆಯಾಗುತ್ತವೆ ಮತ್ತು ಹೆಚ್ಚು ಗಂಭೀರ ಉಸಿರಾಟದ ಸಮಸ್ಯೆ ಹಾಗೂ ಶ್ವಾಸಕೋಶದ ಸೋಂಕಿನ ಅಪಾಯ ಹೆಚ್ಚಿಸಬಹುದು.

'ಜನರು ಮಾತನಾಡುವಾಗ ಕೆಲವು ಉಗುಳು ಹನಿಗಳು ಹಾರುವುದನ್ನು ನಾವೆಲ್ಲರೂ ನೋಡಿದ್ದೇವೆ. ಆದರೆ ಬರಿಗಣ್ಣಿನಿಂದ ನೋಡಲಾಗದಷ್ಟು ಚಿಕ್ಕದಾದ ಇನ್ನೂ ಸಾವಿರಾರು ಸಂಖ್ಯೆಯ ಉಗುಳ ಹನಿಗಳು ಅದರಲ್ಲಿರುತ್ತವೆ' ಎಂದು ಅಮೆರಿಕದ ಮಧುಮೇಹ ಮತ್ತು ಜೀರ್ಣಾಂಗ ಮತ್ತು ಮೂತ್ರಪಿಂಡ ಕಾಯಿಲೆಗಳ ರಾಷ್ಟ್ರೀಯ ಸಂಸ್ಥೆಯ ಆಡ್ರಿಯಾನ್ ಬಾಕ್ಸ್ ಹೇಳಿದ್ದಾರೆ.

'ಮಾತನಾಡುವಾಗ ಉತ್ಪತ್ತಿಯಾಗುವ ಉಗುಳಿನ ಹನಿಗಳಲ್ಲಿ ವೈರಸ್ ಸಮೃದ್ಧ ಸಂಖ್ಯೆಯಲ್ಲಿರುತ್ತವೆ. ಉಗುಳ ಹನಿಗಳ ನೀರು ಆವಿಯಾದರೂ ವೈರಸ್ ಹೊಗೆಯಂತೆ ನಿಮಿಷಗಳ ಕಾಲ ಗಾಳಿಯಲ್ಲಿ ತೇಲುತ್ತವೆ. ಇದರಿಂದಾಗಿ ಇತರರು ಅಪಾಯಕ್ಕೆ ಸಿಲುಕುತ್ತಾರೆ' ಎಂದು ಅಧ್ಯಯನ ವರದಿಯ ಹಿರಿಯ ಲೇಖಕ ಬಾಕ್ಸ್ ಹೇಳಿದ್ದಾರೆ.

ಕೋವಿಡ್ 19 ವೈರಸ್ ಗಾಳಿಯಲ್ಲಿ ಹರಡುವುದಷ್ಟೇ ಅಲ್ಲ, ಒಳಾಂಗಣಗಳಲ್ಲಿ ಮಾಸ್ಕ್‌ಧರಿಸದೆ ಮಾತನಾಡುವುದು ಇತರರಿಗೆ ಹೆಚ್ಚು ಅಪಾಯ ಉಂಟು ಮಾಡುತ್ತದೆ ಎಂದು ಈ ಅಧ್ಯಯನದಲ್ಲಿ ತೀರ್ಮಾನಕ್ಕೆ ಬರಲಾಗಿದೆ.

'ಒಳಾಂಗಣದಲ್ಲಿ ಆಗಾಗ್ಗೆ ತಿನ್ನುವುದು ಮತ್ತು ಕುಡಿಯುವುದು, ಸಾಮಾನ್ಯವಾಗಿ ಜೋರಾಗಿ ಮಾತನಾಡುವುದು ನಡೆಯುತ್ತದೆ. ಒಳಾಂಗಣದಲ್ಲೇ ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳು ಇರುವುದರಿಂದ ಇವು ವೈರಸ್‌ಗಳನ್ನು ಶರವೇಗದಲ್ಲಿ ಹರಡುವ ಕೇಂದ್ರಬಿಂದುಗಳಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ' ಎಂದು ಈ ಅಧ್ಯಯನದ ಲೇಖಕರು ಹೇಳಿದ್ದಾರೆ.



ರಸ್ತೆ ಜಲಾವೃತ ಮಹಾರಾಷ್ಟ್ರದ ಥಾಣೆ ನಗರದಲ್ಲಿ ಬುಧವಾರ ಸುರಿದ ಭಾರಿ ಮಳೆಯಿಂದಾಗಿ ರಸ್ತೆಗಳು ಜಲಾವೃತವಾಗಿದ್ದು, ಇದರ ನಡುವೆಯೇ ಜನರು ಸಾಗಿದರು– ಪಿಟಿಐ ಚಿತ್ರ

ಮುಂದಿನ ವಾರ ರಾಜ್ಯಕ್ಕೆ ಅರುಣ್ ಸಿಂಗ್ ಭೇಟಿ ಸಾಧ್ಯತೆ

ಹೇಳಿಕೆ ನೀಡದಂತೆ ಹೈಕಮಾಂಡ್ ತಾಕೀತು

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಶಾಸಕರು, ಸಚಿವರನ್ನು ಒಳಗೊಂಡು- ಪಕ್ಷದ ಯಾವೊಬ್ಬ ಮುಖಂಡರೂ ಹೇಳಿಕೆ ನೀಡಬಾರದು ಎಂದು ಬಿಜೆಪಿ ಹೈಕಮಾಂಡ್ ತಾಕೀತು ಮಾಡಿದೆ.

'ಹೈಕಮಾಂಡ್ ಬಯಸಿದಲ್ಲಿ ನಾಯಕತ್ವ ಬಿಟ್ಟುಕೊಡುವೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇತ್ತೀಚೆಗೆ ಹೇಳಿಕೆ ನೀಡಿರುವ ಬೆನ್ನಲ್ಲೇ, ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಚರ್ಚೆಗಳ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ವರಿಷ್ಠರು, ಸಚಿವರು ಮತ್ತು ಶಾಸಕರಿಗೆ ಮೌಖಿಕ ಎಚ್ಚರಿಕೆ ನೀಡುವಂತೆ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರಿಗೆ ಸೂಚಿಸಿದ್ದಾರೆ.

ದೂರವಾಣಿ ಮೂಲಕ ಮುಖ್ಯಮಂತ್ರಿ ಯಡಿಯೂರಪ್ಪ ಅವರೊಂದಿಗೂ ಬುಧವಾರ ಮಾತನಾಡಿರುವ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಪಕ್ಷದಲ್ಲಿನ ಇತ್ತೀಚಿನ ಬೆಳವಣಿಗೆಗಳಿಗೆ ಪುಷ್ಟಿ ನೀಡುವ ರೀತಿಯಲ್ಲಿ ಹೇಳಿಕೆ ನೀಡಬಾರದು ಎಂದು ಮನವಿ ಮಾಡಿದ್ದಾರೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

'ಸಚಿವ ಸಿ.ಪಿ. ಯೋಗೇಶ್ವರ್, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ್, ಅರವಿಂದ್ ಬೆಲ್ಲದ್ ಮತ್ತಿತರರು ಭಿನ್ನಮತೀಯ ಚಟುವಟಿಕೆಯಲ್ಲಿ ತೊಡಗಿದ್ದರೂ ಅವರ ವಿರುದ್ಧ ಮುಖಂಡರು ಶಿಸ್ತು ಕ್ರಮ ಕೈಗೊಳ್ಳದಿರುವುದು ಬೇಸರ ಮೂಡಿಸಿದೆ' ಎಂದು ಯಡಿಯೂರಪ್ಪ ಅವರು ಈ ಮಾತುಕತೆ ವೇಳೆ ದೂರಿದ್ದಾರೆ ಎಂದು ಮುಖಂಡರೊಬ್ಬರು ಹೇಳಿದ್ದಾರೆ.

ಪಕ್ಷದ ಶಾಸಕರು ಸಹಿ ಸಂಗ್ರಹದಲ್ಲಿ ತೊಡಗಿದಲ್ಲಿ ತಪ್ಪು ಸಂದೇಶ ರವಾನೆಯಾಗುವ ಸಾಧ್ಯತೆ ಇರುವುದರಿಂದ ಅಂಥ ಕಾರ್ಯಕ್ಕೆ ಅವಕಾಶ ನೀಡಕೂಡದು ಎಂದೂ ಅಧ್ಯಕ್ಷ ಕಟೀಲ್ ಅವರಿಗೆ ತಾಕೀತು ಮಾಡಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಅರುಣ್ ಸಿಂಗ್ ಅವರು ಮುಂದಿನ ವಾರ ಮೂರು ದಿನಗಳ ಅವಧಿಗೆ ರಾಜ್ಯಕ್ಕೆ ಭೇಟಿ ನೀಡಲಿರುವ ಸಾಧ್ಯತೆ ಇದೆ. ಈ ಸಂದರ್ಭ ಮುಖಂಡರೊಂದಿಗೆ ಸಭೆ ನಡೆಸಿ, ಪಕ್ಷದಲ್ಲಿನ ಆಂತರಿಕ ಗೊಂದಲಗಳ ನಿವಾರಣೆಗೆ ಕ್ರಮ ಕೈಗೊಳ್ಳಲಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಸಿದ್ಧಗಂಗಾ ಸ್ವಾಮೀಜಿ ಜತೆ ವಿಜಯೇಂದ್ರ ಗೋಪ್ಯ ಚರ್ಚೆ

ತುಮಕೂರು: ಸಿದ್ಧಗಂಗಾ ಮಠಕ್ಕೆ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಬುಧವಾರ ಸಂಜೆ ದಿಢೀರ್ ಭೇಟಿ ನೀಡಿದ್ದು, ಸಿದ್ಧಲಿಂಗ ಸ್ವಾಮೀಜಿ ಜತೆಗೆ ಸುಮಾರು 20 ನಿಮಿಷಗಳ ಕಾಲ ಗೋಪ್ಯ ಮಾತುಕತೆ ನಡೆಸಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನಾಯಕತ್ವ ಬದಲಾಗಲಿದೆ ಎಂಬ ಚರ್ಚೆಯ ನಡುವೆ ವಿಜಯೇಂದ್ರ ಭೇಟಿ ನೀಡಿ ಸ್ವಾಮೀಜಿ ಜತೆಗೆ ಚರ್ಚಿಸಿರುವುದು ಮಹತ್ವ ಪಡೆದುಕೊಂಡಿದೆ.

ಯಡಿಯೂರಪ್ಪ ನಾಯಕತ್ವ ಬದಲಾವಣೆ ವಿಚಾರ ಪ್ರಮುಖವಾಗಿ ಚರ್ಚೆಯಾಗಿದೆ. ನಾಯಕತ್ವ ಬದಲಾವಣೆಗೆ ವರಿಷ್ಠರು ಮುಂದಾದರೆ ಆ ಸಂದರ್ಭದಲ್ಲಿ ಏನೆಲ್ಲ ಕಾರ್ಯತಂತ್ರ ರೂಪಿಸಬೇಕಾಗಬಹುದು. ಮುಂದಿನ ರಾಜಕೀಯ ನಡೆಯ ಬಗ್ಗೆಯೂ ಚರ್ಚೆಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ. ಕಳೆದ ಕೆಲ ದಿನಗಳಿಂದ ರಾಜ್ಯದಲ್ಲಿ ನಡೆದಿರುವ ರಾಜಕೀಯ ಬೆಳವಣಿಗೆಗಳನ್ನು ಸ್ವಾಮೀಜಿ ಗಮನಕ್ಕೆ ತಂದರು ಎನ್ನಲಾಗಿದೆ.

ಹಿಂದಿನ ದಿನಗಳಲ್ಲಿ ಮಠಕ್ಕೆ ಬರುವ ಮುನ್ನ ಪಕ್ಷದ ಸ್ಥಳೀಯ ನಾಯಕರು, ಕಾರ್ಯಕರ್ತರಿಗೆ ಮಾಹಿತಿ ನೀಡುತ್ತಿದ್ದರು. ಆದರೆ, ಅವರ ಭೇಟಿ ಬಗ್ಗೆ ಸ್ಥಳೀಯ ಕಾರ್ಯಕರ್ತರಿಗೂ ಮಾಹಿತಿ ಇರಲಿಲ್ಲ.

ಜೂನ್ 5ರಂದು ಮಠಕ್ಕೆ ಭೇಟಿ ನೀಡಿದ್ದ ವಸತಿ ಸಚಿವ ವಿ. ಸೋಮಣ್ಣ ಸಹ ಸ್ವಾಮೀಜಿ ಅವರನ್ನು ಭೇಟಿಯಾಗಿದ್ದರು. ಅದಕ್ಕೂ ಮುನ್ನ ಕೋವಿಡ್ ಪ್ರಗತಿ ಪರಿಶೀಲನೆಗೆ ಬಂದಿದ್ದ ಯಡಿಯೂರಪ್ಪ ಅವರೂ ಪಕ್ಷದ ನಾಯಕರನ್ನು ದೂರವಿಟ್ಟು ಸ್ವಾಮೀಜಿ ಜತೆ ಗೋಪ್ಯ ಮಾತುಕತೆ ನಡೆಸಿದ್ದರು. ಕಳೆದ ತಿಂಗಳು ಬಿಜೆಪಿ ಹಿರಿಯ ಮುಖಂಡ ಭೂಪೇಂದ್ರ ಯಾದವ್ ಸಹ ಸ್ವಾಮೀಜಿ ಅವರನ್ನು ಭೇಟಿಯಾಗಿದ್ದರು.

ಭೂಪೇಂದ್ರಗೆ ಹೊಣೆ?

ಬೆಂಗಳೂರು: ರಾಜ್ಯದಲ್ಲಿನ ಬಿಜೆಪಿ ವಿದ್ಯಮಾನಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಪಡೆಯಲು ಪಕ್ಷದ ಹಿರಿಯ ನಾಯಕ ಭೂಪೇಂದ್ರ ಯಾದವ್ ಅವರನ್ನು ಕರ್ನಾಟಕಕ್ಕೆ ಕಳುಹಿಸಲು ವರಿಷ್ಠರು ತೀರ್ಮಾನಿಸಿದ್ದಾರೆ.

'ಪಕ್ಷದ ವರಿಷ್ಠರು ಹೇಳಿದರೆ ರಾಜೀನಾಮೆ ನೀಡಲು ಸಿದ್ಧ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಇತ್ತೀಚೆಗೆ ನೀಡಿದ್ದ ಹೇಳಿಕೆ ಚರ್ಚೆಗೆ ಗ್ರಾಸವಾಗಿತ್ತು. ಇದರ ಬೆನ್ನಲ್ಲೇ ಶಾಸಕರು ನಾಯಕತ್ವದ ಪರ- ವಿರೋಧದ ಹೇಳಿಕೆಗಳನ್ನು ನೀಡುತ್ತಿರುವ ಕಾರಣ ರಾಜ್ಯ ರಾಜಕೀಯ ವಸ್ತುಸ್ಥಿತಿ ವರದಿ ಸಲ್ಲಿಸಲು ಯಾದವ್ ಅವರಿಗೆ ಸೂಚಿಸಲಾಗಿದೆ ಎಂದು ಹೇಳಲಾಗಿದೆ.

ಅಲ್ಲದೆ, ಯಡಿಯೂರಪ್ಪ ಅವರ ಬದಲಾವಣೆ, ಮುಂದಿನ ವಿಧಾನಸಭಾ ಚುನಾವಣೆ ಇತ್ಯಾದಿ ವಿಷಯಗಳ ಬಗ್ಗೆ ಬಿಜೆಪಿಯಲ್ಲಿರುವ ವಿವಿಧ ಗುಂಪುಗಳಿಂದ ಅಭಿಪ್ರಾಯ ಪಡೆದು ಕೇಂದ್ರ ಸಮಿತಿಗೆ ವರದಿ ನೀಡಲಿದ್ದಾರೆ. ಭೂಪೇಂದ್ರ ಯಾದವ್ ಅವರು ಬಿಹಾರ ಬಿಜೆಪಿ ಉಸ್ತುವಾರಿ ವಹಿಸಿದ್ದಾರೆ.

ಕಾಶ್ಮೀರ ವಿಭಜನೆ ವದಂತಿ: ಸಭೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರವನ್ನು ಪುನಃ ವಿಭಜನೆ ಮಾಡಲಾಗುತ್ತದೆ ಎಂಬ ವದಂತಿಗಳು ಹಬ್ಬಿದ ಬೆನ್ನಲ್ಲೇ, ಪೀಪಲ್ಸ್ ಅಲಯೆನ್ಸ್ ಫಾರ್ ಗುಪ್ಕಾರ್ ಡಿಕ್ಲರೇಷನ್ (ಪಿಎಜಿಡಿ), ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ನಿವಾಸದಲ್ಲಿ ಬುಧವಾರ ಸಭೆ ನಡೆಸಿದೆ. ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದಲ್ಲಿ ಅನಿಶ್ಚಿತ ಪರಿಸ್ಥಿತಿ ತಲೆದೋರಿರುವ ಕಾರಣ ಮುಫ್ತಿ ಸೂಚನೆ ಮೇರೆಗೆ ಈ ಸಭೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಸಭೆ ಕುರಿತು ಮಾಹಿತಿ ನೀಡಿದ ಸಿಪಿಎಂ ಹಿರಿಯ ನಾಯಕ ಮಹಮ್ಮದ್ ಯೂಸುಫ್ ತಾರಿಗಾಮಿ, 'ಜಮ್ಮು ಮತ್ತು ಕಾಶ್ಮೀರದ ಸದ್ಯದ ಪರಿಸ್ಥಿತಿ ಕುರಿತು ಚರ್ಚೆ ನಡೆಸಲು ನಾವು ಹಲವಾರು ತಿಂಗಳುಗಳ ಸಭೆ ಬಳಿಕ ಸೇರಿದ್ದೇವೆ. ಈ ಸಭೆ ಫಲಪ್ರದವಾಗಲಿದೆ ಎಂಬ ನಂಬಿಕೆ ಇದೆ' ಎಂದು ಹೇಳಿದ್ದಾರೆ.

ಪಿಎಜಿಡಿ ಎಂದರೆ ಎನ್‌ಸಿ, ಪಿಡಿಪಿ, ಸಿಪಿಐ, ಸಿಪಿಎಂ, ಪೀಪಲ್ಸ್ ಮೂವ್‌ಮೆಂಟ್ ಮತ್ತು ಅವಾಮಿ ನ್ಯಾಷನಲ್ ಕಾನ್ಫರೆನ್ಸ್ ಪಕ್ಷಗಳ ಮೈತ್ರಿಕೂಟ. 2019ರ ಆಗಸ್ಟ್‌ನಲ್ಲಿ ಕೇಂದ್ರ ಸರ್ಕಾರ ಹಿಂಪಡೆದ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸುವ ದೃಢ ನಿರ್ಧಾರದೊಂದಿಗೆ ಈ ಮೈತ್ರಿಕೂಟವನ್ನು ರಚಿಸಲಾಗಿದೆ. ಜಿಲ್ಲಾ ಅಭಿವೃದ್ಧಿ ಮಂಡಳಿ (ಡಿಡಿಸಿ) ಚುನಾವಣೆ ನಡೆಯುವ ವೇಳೆಯಲ್ಲಿ 2 ತಿಂಗಳ ಕಾಲ ಪಿಎಜಿಡಿ ಸಕ್ರಿಯವಾಗಿತ್ತು. ಜನವರಿಯಲ್ಲಿ ಸಜ್ಜದ್ ಲೋನ್ ನೇತೃತ್ವದ ಪೀಪಲ್ಸ್ ಕಾನ್ಫರೆನ್ಸ್ ಮೈತ್ರಿಕೂಟದಿಂದ ಹೊರಗೆ ಹೋದ ಬಳಿಕ ಮೈತ್ರಿಕೂಟ ತಟಸ್ಥವಾಗಿತ್ತು. 2021ರಲ್ಲಿ ಇದೇ ಮೊದಲ ಬಾರಿಗೆ ಸಭೆ ಸೇರಿದೆ.

ಕೆಲದಿನಗಳಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಸೇನೆಯ ಚಲನವಲನಗಳು ಕಂಡುಬರುತ್ತಿವೆ. ಜೊತೆಗೆ, ಜಮ್ಮು ಮತ್ತು ಕಾಶ್ಮೀರದ ಗವರ್ನರ್ ಮನೋಜ್ ಸಿನ್ಹಾ ದೆಹಲಿಗೆ ಭೇಟಿ ನೀಡಿದ್ದರು. ಹೀಗಾಗಿ, ಕೇಂದ್ರ ಸರ್ಕಾರ ಮತ್ತೊಂದು ಮಹತ್ತರ ಯೋಜನೆ ಹಮ್ಮಿಕೊಂಡಿದೆ ಎಂದು ಜಮ್ಮು ಮತ್ತು ಕಾಶ್ಮೀರದಲ್ಲಿ ವದಂತಿ ಹರಡಿದೆ.

ಮುಂಗಾರು ಬೆಳೆಗಳ ಬೆಂಬಲ ಬೆಲೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: 2021–22ನೇ ಸಾಲಿನ ಮುಂಗಾರು ಬೆಳೆಗಳ ಕನಿಷ್ಠ ಬೆಂಬಲ ಬೆಲೆಗಳನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ. ಬುಧವಾರ ಇಲ್ಲಿ ನಡೆದ, ಆರ್ಥಿಕ ವ್ಯವಹಾರಗಳನ್ನು ಕುರಿತ ಸಂಪುಟ ಸಮಿತಿಯ ಸಭೆಯಲ್ಲಿ ಬೆಂಬಲ ಬೆಲೆ ಹೆಚ್ಚಳಕ್ಕೆ ಅನುಮತಿ ನೀಡಲಾಗಿದೆ.

ಭತ್ತಕ್ಕೆ ನೀಡಲಾಗುವ ಬೆಂಬಲ ಬೆಲೆಯನ್ನು ಕ್ವಿಂಟಲ್‌ಗೆ ₹ 72ರಷ್ಟು, ತೊಗರಿ ಮತ್ತು ಉದ್ದು ಬೆಳೆಯ ಬೆಲೆಯನ್ನು ₹300ರಷ್ಟು, ಜೋಳ ಮತ್ತು ರಾಗಿಯ ಬೆಂಬಲ ಬೆಲೆಯನ್ನು ಕ್ವಿಂಟಲ್‌ಗೆ ಕ್ರಮವಾಗಿ ₹118 ಹಾಗೂ ₹80ರಷ್ಟು ಹೆಚ್ಚಿಸಲಾಗಿದೆ.

'2021–22ನೇ ಸಾಲಿನ ಒಟ್ಟು 14 ಮುಂಗಾರು ಬೆಳೆಗಳ ಬೆಂಬಲ ಬೆಲೆ ಹೆಚ್ಚಳ ಪ್ರಸ್ತಾವಕ್ಕೆ ಸಂಪುಟದ ಅನುಮೋದನೆ ಲಭಿಸಿದೆ. ಈ ಬೆಳೆಗಳನ್ನು ಬೆಳೆಯುವ ರೈತರಿಗೆ ಉತ್ಪಾದನಾ ವೆಚ್ಚದ ಮೇಲೆ, ಶೇ 50 ರಿಂದ ಶೇ 85ರಷ್ಟು ಹೆಚ್ಚು ಗಳಿಕೆ ಆಗಲಿದೆ' ಎಂದು ಕೇಂದ್ರದ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ತಿಳಿಸಿದ್ದಾರೆ.

ಹೊಸ ಬೆಲೆಯ ಪ್ರಕಾರ 2021–22ನೇ ಸಾಲಿನಲ್ಲಿ ಭತ್ತಕ್ಕೆ (ಸಾಮಾನ್ಯ ತಳಿ) ಕ್ವಿಂಟಲ್‌ಗೆ ₹ 1,940 ಲಭಿಸಲಿದೆ. ಕಳೆದ ವರ್ಷ ಇದು ₹1,868ರಷ್ಟಿತ್ತು. ಅದರಂತೆ ಜೋಳಕ್ಕೆ ₹ 2,738 (ಕಳೆದ ವರ್ಷ ₹2,620) ತೊಗರಿ ಮತ್ತು ಉದ್ದು ಕಾಳುಗಳಿಗೆ ₹ 6,300 (ಕಳೆದ ವರ್ಷ ₹6,000) ಬೆಂಬಲ ಬೆಲೆ ಲಭಿಸಲಿದೆ.

ಶೇಂಗಾ ಮತ್ತು ಉಚ್ಚೆಳ್ಳಿನ ಬೆಲೆಯನ್ನು ಕ್ರಮವಾಗಿ ಕಳೆದ ವರ್ಷಕ್ಕಿಂತ ₹275 ಹಾಗೂ ₹235ರಷ್ಟು ಹೆಚ್ಚಿಸಲಾಗಿದೆ. ಸಜ್ಜೆ ₹100 (ಹೊಸ ಬೆಲೆ ₹2,250) ಹಾಗೂ ರಾಗಿಯ ಬೆಂಬಲಬೆಲೆಯನ್ನು ₹82ರಷ್ಟು (₹3,377) ಹೆಚ್ಚಿಸಲಾಗಿದೆ.

ಕಾಯ್ದೆ ರದ್ದತಿಗೆ ಕಾಂಗ್ರೆಸ್ ಆಗ್ರಹ

'ನೂತನ ಕೃಷಿ ಕಾಯ್ದೆಗಳ ವಿರುದ್ಧ ನಡೆಯುತ್ತಿರುವ ರೈತರ ಹೋರಾಟವನ್ನು ಅಂತ್ಯಗೊಳಿಸಲು, ಆ ಕಾಯ್ದೆಗಳನ್ನು ರದ್ದುಪಡಿಸುವುದೇ ಏಕೈಕ ದಾರಿ' ಎಂದು ಕಾಂಗ್ರೆಸ್ ಪ್ರತಿಪಾದಿಸಿದೆ. ಈ ಕಾಯ್ದೆಗಳ ವಿಚಾರದಲ್ಲಿ ಅಹಂಕಾರದ ನಿಲುವು ತೋರುತ್ತಿರುವ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

'ರೈತ ಸಂಘಟನೆಗಳು ಕಾಯ್ದೆಗಳನ್ನು ರದ್ದುಪಡಿಸುವ ಬೇಡಿಕೆ ಬಿಟ್ಟು ಬೇರೆ ಆಯ್ಕೆಗಳ ಬಗ್ಗೆ ಚರ್ಚಿಸುವುದಿದ್ದರೆ, ಮಾತುಕತೆ ನಡೆಸಲು ಸರ್ಕಾರ ಸಿದ್ಧವಿದೆ' ಎಂಬ ತೋಮರ್ ಅವರ ಹೇಳಿಕೆಗೆ ಕಾಂಗ್ರೆಸ್ ಹೀಗೆ ಪ್ರತಿಕ್ರಿಯೆ ನೀಡಿದೆ.

'ರೈತರು ನಿಮ್ಮ ಬಳಿ ಭಿಕ್ಷೆ ಬೇಡುತ್ತಲೂ ಇಲ್ಲ, ಅವರಿಗೆ ಭಿಕ್ಷೆ ಬೇಕಾಗಿಯೂ ಇಲ್ಲ. ಅವರಿಗೆ ನ್ಯಾಯಬೇಕಿದೆ. ರೈತರು ಅವರ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ನಿಮ್ಮ ಅಹಂಕಾರವನ್ನು ತೋರಿಸಬೇಡಿ. ನಿಮ್ಮ ಪ್ರತಿಷ್ಠೆಯ ಸಿಂಹಾಸನದಿಂದ ಕೆಳಗೆ ಇಳಿದುಬನ್ನಿ, ನಿಮ್ಮ ಮೊಂಡುತನವನ್ನು ಪಕ್ಕಕ್ಕಿಡಿ. ಆಗ ಮಾತ್ರ ಈ ಕರಾಳ ಕಾಯ್ದೆಗಳನ್ನು ರದ್ದುಪಡಿಸಲು ಸಾಧ್ಯವಾಗುತ್ತದೆ' ಎಂದು ಕಾಂಗ್ರೆಸ್ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದ್ದಾರೆ.

'ನ್ಯೂನತೆ ತೋರಿಸಿ, ಮಾತುಕತೆಗೆ ಬನ್ನಿ'

'ಕೃಷಿ ಕಾನೂನುಗಳನ್ನು ವಿರೋಧಿಸಿ ಪ್ರತಿಭಟನೆಯಲ್ಲಿ ತೊಡಗಿರುವ ರೈತರ ಜತೆ ಮಾತುಕತೆಗೆ ನಾವು ಹಿಂಜರಿದಿಲ್ಲ. ಮೂರು ಕಾನೂನುಗಳಲ್ಲಿ ಇರುವ ನ್ಯೂನತೆಗಳನ್ನು ಎತ್ತಿ ತೋರಿಸಲು ನಾವು ರೈತ ಮುಖಂಡರಲ್ಲಿ ಮನವಿ ಮಾಡುತ್ತೇವೆ. ಅವರ ಸಮಸ್ಯೆಗಳನ್ನು ಪರಿಹರಿಸಲು ನಾವು ಸಿದ್ಧ' ಎಂದು ಸಚಿವ ತೋಮರ್ ತಿಳಿಸಿದರು.

'ಸರ್ಕಾರವು ರೈತ ಪ್ರತಿನಿಧಿಗಳ ಜತೆಗೆ ಈಗಾಗಲೇ 11 ಸುತ್ತುಗಳ ಸಭೆ ನಡೆಸಿದೆ. ಆದರೆ ಕಾನೂನುಗಳಲ್ಲಿರುವ ನ್ಯೂನತೆಗಳನ್ನು ತೋರಿಸುವಲ್ಲಿ ಅವರು ವಿಫಲರಾಗಿದ್ದಾರೆ' ಎಂದು ಅವರು ಹೇಳಿದರು.

ರೈಲ್ವೆ ಇಲಾಖೆಗೆ 5 ಮೆಗಾಹರ್ಟ್ಸ್ ತರಂಗಾಂತರ

ನವದೆಹಲಿ (ಪಿಟಿಐ): ಸಂವಹನ ಮತ್ತು ಸಿಗ್ನಲ್ ವ್ಯವಸ್ಥೆಯನ್ನು ಸುಧಾರಿಸಲು 5 ಮೆಗಾಹರ್ಟ್ಸ್ ತರಂಗಾಂತರವನ್ನು (ಸ್ಪೆಕ್ಟ್ರಂ) ಭಾರತೀಯ ರೈಲ್ವೆಗೆ ಹಂಚಿಕೆ ಮಾಡಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಸಾರಿಗೆ ಜಾಲದಲ್ಲಿ ಪ್ರಯಾಣಿಕರ ಸುರಕ್ಷತೆಯನ್ನು ಸುಧಾರಿಸಲು ಇದು ಸಹಾಯ ಮಾಡುತ್ತದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಹೇಳಿದ್ದಾರೆ.

ಈ ತರಂಗಾಂತರ ಮೂಲಕ ರೈಲ್ವೆಯು ತನ್ನ ಮಾರ್ಗದಲ್ಲಿ ಎಲ್‌ಟಿಇ (ಲಾಂಗ್ ಟರ್ಮ್ ಎವಲೂಷನ್) ಆಧಾರಿತ ಮೊಬೈಲ್ ರೈಲು ರೇಡಿಯೊ ಸಂವಹನವನ್ನು ಒದಗಿಸಲು ಉದ್ದೇಶಿಸಿದೆ.

ಯೋಜನೆಯ ಅಂದಾಜು ವೆಚ್ಚ ₹25,000 ಕೋಟಿ ಆಗಿದ್ದು, ಮುಂದಿನ ಐದು ವರ್ಷಗಳಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದೆ ಎಂದು ರೈಲ್ವೆ ಪ್ರಕಟಣೆಯಲ್ಲಿ ತಿಳಿಸಿದೆ.

'ಮೋದಿ ಅಧಿಕಾರದಿಂದ ಕಿತ್ತೊಗೆಯುವುದು ನನ್ನ ಗುರಿ'



ಕೋಲ್ಕತ್ತ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಧಿಕಾರದಿಂದ ಕಿತ್ತೊಗೆಯುವುದು ನನ್ನ ಗುರಿ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುಡುಗಿದರು.

ಭಾರತೀಯ ಕಿಸಾನ್ ಯೂನಿಯನ್‌ನ ರಾಕೇಶ್ ಟಿಕಾಯತ್ ಮತ್ತು ಯುಧ್‌ವೀರ್ ಸಿಂಗ್ ನೇತೃತ್ವದಲ್ಲಿ ರೈತ ಮುಖಂಡರು, ಕೇಂದ್ರದ ಹೊಸ ಮೂರು ಕೃಷಿ ಕಾನೂನುಗಳನ್ನು ವಿರೋಧಿಸಿ ಮತ್ತು ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಲು ಆಗ್ರಹಿಸಿ ನಡೆಸುತ್ತಿರುವ ರೈತ ಹೋರಾಟಕ್ಕೆ ಬೆಂಬಲ ಕೋರಿ ಬುಧವಾರ ಮಮತಾ ಅವರನ್ನು ಭೇಟಿ ಮಾಡಿದರು.

ರೈತ ನಾಯಕರೊಂದಿಗೆ ಸಭೆ ನಡೆಸಿದ ನಂತರ ಮಮತಾ, ರೈತ ಹೋರಾಟಕ್ಕೆ ಬೆಂಬಲ ನೀಡುವುದಾಗಿ ಘೋಷಿಸಿದರು. ರೈತರ ಹೋರಾಟ ಬೆಂಬಲಿಸಲು ಬಿಜೆಪಿ ವಿರೋಧಿ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳನ್ನು ಒಗ್ಗೂಡಿಸುವುದಾಗಿಯೂ ಆಶ್ವಾಸನೆ ನೀಡಿದರು.

ಪಶ್ಚಿಮ ಬಂಗಾಳದ ಭೌಗೋಳಿಕ ಗಡಿಯ ಆಚೆಗೆ ಪಕ್ಷವು ತನ್ನ ಹೆಜ್ಜೆ ಗುರುತುಗಳನ್ನು ಮೂಡಿಸುವುದಾಗಿ ತೃಣಮೂಲ ಕಾಂಗ್ರೆಸ್ ಘೋಷಿಸಿದ ಕೆಲವೇ ದಿನಗಳಲ್ಲಿ ಉತ್ತರ ಭಾರತ ಮೂಲದ ರೈತ ಸಂಘಗಳ ಹೋರಾಟಕ್ಕೆ ಬ್ಯಾನರ್ಜಿ ಬೆಂಬಲ ಘೋಷಿಸಿದ್ದಾರೆ.

'ಸಾರ್ವಜನಿಕ ನೀತಿಯ ವಿಷಯ ಬಂದಾಗ ರಾಜ್ಯಗಳ ಜತೆಗೆ ಚರ್ಚಿಸುವ ವೇದಿಕೆ ಇರಬೇಕು. ರಾಜ್ಯಗಳ ಮೇಲೆ ದಬ್ಬಾಳಿಕೆ ನಡೆಸುವುದು ಒಕ್ಕೂಟ ವ್ಯವಸ್ಥೆಗೆ ಒಳಿತಲ್ಲ. ಸಾರ್ವಜನಿಕ ನೀತಿ ವಿಷಯಗಳ ಬಗ್ಗೆ ಚರ್ಚಿಸಲು ಮತ್ತು ಅನ್ಯಾಯದ ವಿರುದ್ಧ ಒಟ್ಟಾಗಿ ನಿಲ್ಲಲು ರಾಜ್ಯಗಳು ಒಗ್ಗೂಡುವುದು ಅಗತ್ಯವಾಗಿದೆ' ಎಂದು ಪ್ರತಿಪಾದಿಸಿದರು.

'ಬಿಜೆಪಿ ಆಡಳಿತವು ಆರೋಗ್ಯ ಕ್ಷೇತ್ರದಿಂದ ಹಿಡಿದು ಕೃಷಿ ಮತ್ತು ಕೈಗಾರಿಕೆಗಳವರೆಗಿನ ಎಲ್ಲ ಕ್ಷೇತ್ರಗಳಿಗೆ ಹಾನಿ ಮಾಡಿದ್ದು, ದೇಶ ನಲುಗುತ್ತಿದೆ. ನಾವು ಪ್ರಾಕೃತಿಕ ಮತ್ತು ರಾಜಕೀಯ ವಿಪತ್ತುಗಳನ್ನು ಎದುರಿಸುತ್ತಿದ್ದೇವೆ' ಎಂದರು.

ಕಂಪನಿಗಳಿಂದ ಅರ್ಜಿ ಆಹ್ವಾನಿಸಿದ ಡಿಆರ್‌ಡಿಒ

ಬೃಹತ್ ಪ್ರಮಾಣದಲ್ಲಿ '2–ಡಿಜಿ' ಔಷಧ ಉತ್ಪಾದನೆ

ಹೈದರಾಬಾದ್ (ಪಿಟಿಐ): ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಕೋವಿಡ್–19 ಚಿಕಿತ್ಸೆಗಾಗಿ ತಾನು ಅಭಿವೃದ್ಧಿಪಡಿಸಿರುವ '2–ಡಿಜಿ' ಔಷಧವನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದನೆ ಮಾಡುವ ಸಂಬಂಧ ತಂತ್ರಜ್ಞಾನವನ್ನು ವರ್ಗಾಯಿಸಲು ಮುಂದಾಗಿದೆ.

ತಂತ್ರಜ್ಞಾನ ವರ್ಗಾವಣೆಗೆ ಆಸಕ್ತಿ ಹೊಂದಿರುವ ದೇಶದ ಔಷಧ ಕಂಪನಿಗಳಿಂದ ಡಿಆರ್‌ಡಿಒ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಜೂನ್ 17 ಕೊನೆಯ ದಿನವಾಗಿದೆ.

'ತಂತ್ರಜ್ಞಾನ ಹಾಗೂ ಉತ್ಪಾದನಾ ಸಾಮರ್ಥ್ಯವನ್ನು ಪರಿಗಣಿಸಿ, ಕೇವಲ 15 ಕಂಪನಿಗಳಿಗೆ ಮಾತ್ರ ತಂತ್ರಜ್ಞಾನ ವರ್ಗಾವಣೆ ಮಾಡಲಾಗುವುದು. ಮೊದಲು ಬಂದವರಿಗೆ ಆದ್ಯತೆ ಆಧಾರದಲ್ಲಿ ಕಂಪನಿಗಳ ಆಯ್ಕೆ ನಡೆಯುವುದು' ಎಂದು ಡಿಆರ್‌ಡಿಒ ತಿಳಿಸಿದೆ.

'ಕಂಪನಿಗಳು ಸಲ್ಲಿಸುವ ಪ್ರಸ್ತಾವನೆಗಳನ್ನು ತಾಂತ್ರಿಕ ಮೌಲ್ಯಮಾಪನ ಸಮಿತಿಯು ಪರಿಶೀಲಿಸಿ, ಅಂತಿಮ ನಿರ್ಧಾರ ಕೈಗೊಳ್ಳುವುದು' ಎಂದೂ ತಿಳಿಸಿದೆ.

ಡಿಆರ್‌ಡಿಒದ ಅಂಗಸಂಸ್ಥೆಯಾದ 'ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಮೆಡಿಸಿನ್ ಆ್ಯಂಡ್ ಅಲೈಡ್ ಸೈನ್ಸಸ್' (ಐಎನ್‌ಎಂಎಎಸ್), ಡಾ.ರೆಡ್ಡೀಸ್ ಲ್ಯಾಬೋರೇಟರೀಸ್‌ನ ಸಹಯೋಗದಲ್ಲಿ '2–ಡಿಆಕ್ಸಿ–ಡಿ–ಗ್ಲುಕೋಸ್' (2–ಡಿಜಿ) ಔಷಧಿಯನ್ನು ಅಭಿವೃದ್ಧಿಪಡಿಸಿದೆ.

ಈ ಔಷಧವು ಕೋವಿಡ್–19 ರೋಗಿಗಳಲ್ಲಿ ಆಮ್ಲಜನಕ ಪೂರೈಕೆ ವ್ಯವಸ್ಥೆ ಮೇಲಿನ ಅವಲಂಬನೆಯನ್ನು ಕಡಿಮೆಗೊಳಿಸಿ, ರೋಗಿಗಳು ತ್ವರಿತವಾಗಿ ಗುಣಮುಖರಾಗಿರುವುದು ಕ್ಲಿನಿಕಲ್ ಟ್ರಯಲ್‌ಗಳಲ್ಲಿ ಕಂಡುಬಂದಿದೆ.

2–ಡಿಜಿ ಔಷಧದಿಂದ ಚಿಕಿತ್ಸೆ ನೀಡಲಾದ ಕೋವಿಡ್–19 ರೋಗಿಗಳ ಪೈಕಿ ಹೆಚ್ಚಿನ ರೋಗಿಗಳ ಆರ್‌ಟಿ-ಪಿಸಿಆರ್ ವರದಿ ನೆಗೆಟಿವ್ ಬಂದಿರುವುದು ಸಹ ಗಮನಾರ್ಹ.

ಪಿಎಂಎವೈ: ರಿಯಲ್ ಎಸ್ಟೇಟ್ ಕ್ಷೇತ್ರ ಪುನರುಜ್ಜೀವನಗೊಳಿಸುವ ಉದ್ದೇಶ

3.61 ಲಕ್ಷ ಮನೆ ನಿರ್ಮಾಣಕ್ಕೆ ಅನುಮೋದನೆ

ನವದೆಹಲಿ: ಕೋವಿಡ್ -19 ಸಾಂಕ್ರಾಮಿಕ ರೋಗದಿಂದಾಗಿ ತೀವ್ರ ನಷ್ಟಕ್ಕೀಡಾಗಿರುವ ರಿಯಲ್ ಎಸ್ಟೇಟ್ ಕ್ಷೇತ್ರ ಪುನರುಜ್ಜೀವನಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಆವಾಸ್ ಯೋಜನೆ - ನಗರ (ಪಿಎಂಎವೈ-ಯು) ಅಡಿಯಲ್ಲಿ 3.61 ಲಕ್ಷ ಹೊಸ ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದೆ.

ಮಂಗಳವಾರ ನಡೆದ ಕೇಂದ್ರ ಮಂಜೂರಾತಿ ಮತ್ತು ಉಸ್ತುವಾರಿ ಸಮಿತಿ (ಸಿಎಸ್‌ಎಂಸಿ) ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.



ಕೋವಿಡ್ -19 ಸಾಂಕ್ರಾಮಿಕ ರೋಗದ ಎರಡನೇ ಅಲೆಯ ಮಧ್ಯೆ ನಡೆದ ಮೊದಲ ಸಭೆ ಇದು. ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ರಾಜ್ಯಗಳು ಸಲ್ಲಿಸಿದ 708 ಪ್ರಸ್ತಾವನೆಗಳ ಆಧಾರದ ಮೇಲೆ ಇದಕ್ಕೆ ಅನುಮೋದನೆ ನೀಡಲಾಗಿದೆ. ಸಭೆಯಲ್ಲಿ 13 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಮನೆಗಳನ್ನು ಕೈಗೆಟುಕುವ ದರದಲ್ಲಿ ಒದಗಿಸಲು ಫಲಾನುಭವಿಗಳ ನೇತೃತ್ವದಲ್ಲೇ ನಿರ್ಮಾಣ ಸಂಸ್ಥೆಗಳು ಮತ್ತು ಸರ್ಕಾರದ ಪಾಲುದಾರಿಕೆಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಹೇಳಿಕೆ ತಿಳಿಸಿದೆ.

'ಈವರೆಗೆ ಪಿಎಂಎವೈ (ಯು) ಅಡಿಯಲ್ಲಿ ಮಂಜೂರಾದ ಒಟ್ಟು ಮನೆಗಳ ಸಂಖ್ಯೆ 112.4 ಲಕ್ಷ. ಇದುವರೆಗೆ 82.5 ಲಕ್ಷ ಮನೆಗಳನ್ನು ನಿರ್ಮಿಸಲಾಗಿದ್ದು, ಇದರಲ್ಲಿ 48.31 ಲಕ್ಷ ಮನೆಗಳು ಪೂರ್ಣಗೊಂಡಿದ್ದು, ಫಲಾನುಭವಿಗಳಿಗೆ ವಿತರಿಸಲಾಗಿದೆ. ಈ ಯೋಜನೆಯಡಿ ಒಟ್ಟು ₹7.35 ಲಕ್ಷ ಕೋಟಿ ಹೂಡಿಕೆ ಮಾಡಲಾಗಿದ್ದು, ಇದರಲ್ಲಿ ₹1.81 ಲಕ್ಷ ಕೋಟಿ ಕೇಂದ್ರ ನೆರವು ಹೊಂದಿದೆ. ಇದರಲ್ಲಿ ₹96,067 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ

ಸುಶೀಲ್ ವಿಶೇಷ ಆಹಾರದ ಮನವಿ ತಿರಸ್ಕರಿಸಿದ ಕೋರ್ಟ್


ಸುಶೀಲ್ ಕುಮಾರ್

ನವದೆಹಲಿ (ಪಿಟಿಐ): ಕೊಲೆ ಆರೋಪದಲ್ಲಿ ಜೈಲು ಸೇರಿರುವ ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಸುಶೀಲ್ ಕುಮಾರ್, ಜೈಲಿನಲ್ಲಿ ವಿಶೇಷ ಪೌಷ್ಟಿಕ ಆಹಾರ ಮತ್ತು ಪೂರಕ ಸಾಮಗ್ರಿ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ನ್ಯಾಯಾಲಯ ಬುಧವಾರ ವಜಾ ಗೊಳಿಸಿದೆ.

ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಸತ್ವೀರ್ ಸಿಂಗ್ ಲಾಂಬಾ, 'ಆಪಾದಿತ ಕೇಳುತ್ತಿರುವ ಆಹಾರ ಮತ್ತು ಪೂರಕ ಸಾಮಗ್ರಿಗಳನ್ನು ಕೇವಲ ಅವುಗಳ ಮೇಲಿನ ಆಸೆಯಿಂದ ಕೇಳಿದಂತೆ ಕಂಡುಬರುತ್ತಿದೆ. ಅವರಿಗೆ ಯಾವುದೇ ರೀತಿಯಲ್ಲಿ ಅವುಗಳ ಅವಶ್ಯಕತೆ ಇಲ್ಲ'ಎಂದು ಹೇಳಿದ್ದಾರೆ.

ಭಾರತೀಯರ ವಿರುದ್ಧ ಜನಾಂಗೀಯ ನಿಂದನೆ ಆರೋಪ: ಇಸಿಬಿ ಭರವಸೆ

ಮಾರ್ಗನ್, ಬಟ್ಲರ್ ತನಿಖೆಗೆ ಆದೇಶ

ಲಂಡನ್ (ಪಿಟಿಐ): ಭಾರತೀಯರ ಬಗ್ಗೆ ಅವಹೇಳನಕಾರಿ ಟ್ವೀಟ್ ಮಾಡಿದ ಇಂಗ್ಲೆಂಡ್ ಕ್ರಿಕೆಟ್ ತಂಡದ ನಾಯಕ ಏಯಾನ್ ಮಾರ್ಗನ್ ಮತ್ತು ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಜೋಸ್ ಬಟ್ಲರ್ ಅವರನ್ನು ಜನಾಂಗೀಯ ನಿಂದನೆ ಆರೋಪದ ಮೇಲೆ ತನಿಖೆಗೆ ಒಳಪಡಿಸಲಾಗಿದೆ.

ಮಾರ್ಗನ್ ಮತ್ತು ಬಟ್ಲರ್ ಅವರ ಟ್ವೀಟ್ ಸಾಮಾಜಿಕ ತಾಣಗಳಲ್ಲಿ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು ಆರೋಪಿಗಳ ವಿರುದ್ಧ ಸೂಕ್ತ ಮತ್ತು ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದೆ.

ಏಷ್ಯಾದ ಜನರನ್ನು ನಿಂದಿಸಿ,


ಏಯಾನ್ ಮಾರ್ಗನ್

ಮಹಿಳೆಯರ ಬಗ್ಗೆ ಕೀಳು ಅಭಿಪ್ರಾಯ ವ್ಯಕ್ತಪಡಿಸಿ 2012 ಮತ್ತು 2013ರಲ್ಲಿ ಮಾಡಿದ ಟ್ವೀಟ್‌ಗೆ ಸಂಬಂಧಿಸಿ ವೇಗದ ಬೌಲರ್ ಒಲಿ ರಾಬಿನ್ಸನ್ ಅವರನ್ನು ಇಸಿಬಿ ಸೋಮವಾರ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಅಮಾನತುಗೊಳಿಸಿತ್ತು. ಇದರ ಬೆನ್ನಲ್ಲೇ ಮಾರ್ಗನ್ ಮತ್ತು ಬಟ್ಲರ್ ಭಾರತೀಯರನ್ನು 'ಸರ್' ಪದವನ್ನು ಬಳಸಿಕೊಂಡು ಟ್ವಿಟರ್‌ನಲ್ಲಿ ಗೇಲಿ ಮಾಡಿದ್ದರು.


ಜೋಸ್ ಬಟ್ಲರ್ –ಎಎಫ್‌ಪಿ ಚಿತ್ರ

'ವಿವಾದಾತ್ಮಕ ಟ್ವೀಟ್‌ಗಳ ಬಗ್ಗೆ ಕಳೆದ ವಾರವೇ ಆಟಗಾರರಿಗೆ ಎಚ್ಚರಿಕೆ ನೀಡಲಾಗಿತ್ತು. ಆದರೂ ಅನೇಕ ಟ್ವೀಟ್‌ಗಳು ಸಾಮಾಜಿಕ ತಾಣಗಳಲ್ಲಿ ಉಳಿದಿರುವುದು ಅಚ್ಚರಿಯ ವಿಷಯ. ನಮ್ಮಲ್ಲಿ ಕ್ರೀಡಾಕ್ಷೇತ್ರದಲ್ಲಿ ಭೇದ ಭಾವಕ್ಕೆ ಎಡೆಯಿಲ್ಲ. ಇದೊಂದು ಪ್ರಕರಣ ಮಾತ್ರವಲ್ಲ, ಅವಮಾನ ಮಾಡುವ ಉದ್ದೇಶದಿಂದ ಈ ಹಿಂದೆ ಯಾರಾದರೂ ಸಾಮಾಜಿಕ ತಾಣಗಳಲ್ಲಿ ಪೋಸ್ಟ್ ಹಾಕಿದ್ದರೆ ಅವುಗಳ ಬಗ್ಗೆಯೂ ಗಮನಹರಿಸಲಾಗುವುದು' ಎಂದು ಇಸಿಬಿ ತಿಳಿಸಿದೆ.

ಬಟ್ಲರ್ ಮತ್ತು ಮಾರ್ಗನ್ ಐಪಿಎಲ್ ಟೂರ್ನಿಯಲ್ಲಿ ಆಡಿದ್ದಾರೆ. ಬಟ್ಲರ್ ರಾಜಸ್ಥಾನ ರಾಯಲ್ಸ್‌ನಲ್ಲಿದ್ದರೆ ಮಾರ್ಗನ್ ಕೋಲ್ಕತ್ತ ನೈಟ್‌ರೈಡರ್ಸ್ ತಂಡದ ಪರ ಆಡಿದ್ದರು.

ಸೆಮಿಗೆ ಸಕ್ಕರಿ, ಬಾರ್ಬೊರಾ

ಫ್ರೆಂಚ್ ಓಪನ್: ಕೊಕೊ ಗಫ್, ಇಗಾ ಸ್ವಾಟೆಕ್‌ಗೆ ಸೋಲು

ಪ್ಯಾರಿಸ್ (ಎಎಫ್‌ಪಿ): ಯುವ ಆಟಗಾರ್ತಿ ಕೊಕೊ ಗಫ್ ಅವರ ದಿಟ್ಟ ಆಟಕ್ಕೆ ತಿರುಗೇಟು ನೀಡಿದ ಚೆಕ್ ಗಣರಾಜ್ಯದ ಬಾರ್ಬೊರಾ ಕ್ರೆಸಿಕೋವಾ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು. ಮತ್ತೊಂದು ಪಂದ್ಯದಲ್ಲಿ ಹಾಲಿ ಚಾಂಪಿಯನ್ ಇಗಾ ಸ್ವಾಟೆಕ್ ವಿರುದ್ಧ ಗೆದ್ದು ಮರಿಯಾ ಸಕ್ಕರಿ ನಾಲ್ಕರ ಘಟ್ಟ ಪ್ರವೇಶಿಸಿದರು.

ಬುಧವಾರ ನಡೆದ ಪಂದ್ಯದಲ್ಲಿ ಗ್ರೀಸ್‌ನ ಮರಿಯಾ ಸಕ್ಕರಿ 6-4, 6-4ರಲ್ಲಿ ಪೋಲೆಂಡ್‌ನ ಸ್ವಾಟೆಕ್ ಅವರನ್ನು ಮಣಿಸಿದರು. ಇದು ಅವರ ಚೊಚ್ಚಲ ಗ್ರ್ಯಾನ್‌ಸ್ಲಾಂ ಸೆಮಿಫೈನಲ್ ಆಗಿದೆ. ಬಾರ್ಬೊರಾ ಕೂಡ ಗ್ರ್ಯಾನ್‌ಸ್ಲಾಂ ಟೂರ್ನಿಯೊಂದರಲ್ಲಿ ಮೊದಲ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿದ್ದಾರೆ.

ಅಮೆರಿಕದ 17ರ ಹರಯದ ಆಟಗಾರ್ತಿ ಎದುರು ಬಾರ್ಬೊರಾ 7-6 (8/6), 6-3ರಲ್ಲಿ ಗೆದ್ದರು. ಕ್ರೆಸಿಕೋವಾ ಮೊದಲ ಸೆಟ್‌ನಲ್ಲಿ ಐದು ಸೆಟ್ ಪಾಯಿಂಟ್‌ಗಳನ್ನು ಉಳಿಸಿಕೊಂಡು ಗೆಲುವು ಸಾಧಿಸಿದರು. ಎರಡನೇ ಸೆಟ್‌ನಲ್ಲಿ 6 ಮ್ಯಾಚ್ ಪಾಯಿಂಟ್‌ಗಳನ್ನು ಗಳಿಸಿ ಎದುರಾಳಿಯನ್ನು ಹೊರದಬ್ಬಿದರು.

15 ವರ್ಷಗಳಲ್ಲಿ ಗ್ರ್ಯಾನ್‌ಸ್ಲಾಂ ಟೂರ್ನಿಯೊಂದರ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಅತಿ ಕಿರಿಯ ಆಟಗಾರ್ತಿ ಎಂಬ ಖ್ಯಾತಿ ಹೊಂದಿರುವ 24ನೇ ಶ್ರೇಯಾಂಕದ ಕೊಕೊ ಗಫ್ 7 ಬಾರಿ ಡಬಲ್ ಫಾಲ್ಟ್ ಮತ್ತು 41 ಬಾರಿ ತಪ್ಪೆಸಗಿ ನಿರಾಸೆಗೆ ಒಳಗಾದರು.


ಮರಿಯಾ ಸಕ್ಕರಿ ಗೆಲುವಿನ ಸಂಭ್ರಮ –ರಾಯಿಟರ್ಸ್ ಚಿತ್ರ

ನಾಲ್ಕರ ಘಟ್ಟಕ್ಕೆ ನಡಾಲ್, ಸಿಟ್ಸಿಪಾಸ್: ಹಾಲಿ ಚಾಂಪಿಯನ್, ಸ್ಪೇನ್‌ನ ರಫೆಲ್ ನಡಾಲ್ ಕೂಡ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟರು. ಕ್ವಾರ್ಟರ್‌ಫೈನಲ್‌ನಲ್ಲಿ ಅವರು 6-3, 4-6, 6-4, 6-0ರಿಂದ ಅರ್ಜೆಂಟೀನಾದ ಡಿಗೊ ಸ್ವಾರ್ಟ್ಜ್‌ಮನ್ ಎದುರು ಗೆದ್ದರು. ಎಂಟರಘಟ್ಟದ ಮತ್ತೊಂದು ಪಂದ್ಯದಲ್ಲಿ ಗ್ರೀಕ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ ಅವರು 6-3, 7-6, 7-5ರಿಂದ ರಷ್ಯಾದ ಡ್ಯಾನಿಲ್ ಮೆಡ್ವಡೆವ್ ಅವರನ್ನು ಪರಾಭವಗೊಳಿಸಿದರು.

'ಡಬ್ಲ್ಯುಟಿಸಿ ಫೈನಲ್: ಮಯಂಕ್ ಆಡಲಿ'

ನವದೆಹಲಿ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಮಯಂಕ್ ಅಗರವಾಲ್ ಅವರಿಗೆ ಇನಿಂಗ್ಸ್ ಆರಂಭಿಸಲು ಅವಕಾಶ ನೀಡಬೇಕು ಎಂದು ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಮಾಜಿ ಕೋಚ್ ಮೈಕ್ ಹೆಸನ್ ಸಲಹೆ ನೀಡಿದ್ದಾರೆ.


ಮಯಂಕ್ ಅಗರವಾಲ್

'ಭಾರತ ತಂಡವು ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ಅವರನ್ನೇ ಆರಂಭಿಕರಾಗಿ ಆಯ್ಕೆ ಮಾಡುವುದರ ಬದಲು ಮಯಂಕ್‌ಗೆ ಅವಕಾಶ ನೀಡುವುದು ಸೂಕ್ತ. ಹೋದ ಸಲ ನ್ಯೂಜಿಲೆಂಡ್‌ನಲ್ಲಿ ನಡೆದ ಸರಣಿಯಲ್ಲಿ ಕಿವೀಸ್ ಬೌಲರ್‌ಗಳನ್ನು ಎದುರಿಸಿದ ಅನುಭವ ಮಯಂಕ್‌ಗೆ ಇದೆ. ಆ ಅನುಭವ ತಂಡಕ್ಕೆ ನೆರವಾಗುವ ಸಾಧ್ಯತೆ ಇದೆ' ಎಂದಿದ್ದಾರೆ.

ಹೋದ ವರ್ಷ ಭಾರತ ತಂಡವು 0–2ರಿಂದ ಕಿವೀಸ್ ಎದುರು ಸರಣಿ ಸೋತಿತ್ತು. ಆ ಸರಣಿಯಲ್ಲಿ ಅರ್ಧಶತಕ ಗಳಿಸಿದ್ದ ಭಾರತದ ನಾಲ್ವರಲ್ಲಿ ಮಯಂಕ್ ಕೂಡ ಒಬ್ಬರಾಗಿದ್ದರು. ಆದರೆ. ಹೋದ ಬಾರಿ ಆಸ್ಟ್ರೇಲಿಯಾ ಪ್ರವಾಸದಲ್ಲಿ ಫಾರ್ಮ್ ಕಳೆದುಕೊಂಡಿದ್ದರು.

'ಸೌತಾಂಪ್ಟನ್ ಕ್ರೀಡಾಂಗಣವು ವಿಶಿಷ್ಟವಾಗಿದೆ. ಇಲ್ಲಿ ಅಭ್ಯಾಸ ಪಂದ್ಯಗಳನ್ನು ಆಡುವುದರಿಂದ ಆಟಗಾರರಿಗೆ ಹೆಚ್ಚು ಪ್ರಯೋಜನವಾಗುತ್ತದೆ. ಭಾರತದ ತಂಡವು ದೊಡ್ಡದಾಗಿದೆ. ಆದ್ದರಿಂದ ತಮ್ಮಲ್ಲಿಯೇ ಎರಡು ತಂಡಗಳನ್ನು ಮಾಡಿಕೊಂಡು ಅಭ್ಯಾಸ ಪಂದ್ಯಗಳನ್ನು ಆಡಿಕೊಂಡರೆ ಸೂಕ್ತ' ಎಂದು ಹೆಸನ್ ಅಭಿಪ್ರಾಯಪಟ್ಟರು.

ಇದೇ 18ರಂದು ವಿಶ್ವ ಟೆಸ್ಟ್ ಫೈನಲ್ ಪಂದ್ಯವು ನಡೆಯಲಿದೆ.

ಸೆಹ್ವಾಗ್ ಕನಸಿನ ಕ್ರಿಕ್‌ಉರು ಆ್ಯಪ್ ಲೋಕಾರ್ಪಣೆ

ತೆಂಡೂಲ್ಕರ್ ಆಟ ಅನುಕರಿಸಿದ್ದ ವೀರೂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಆಟ ನೋಡುವುದರಿಂದಲೇ ಬಹಳಷ್ಟು ಕಲಿಯಲು ಸಾಧ್ಯ. 1992ರ ವಿಶ್ವಕಪ್‌ನಲ್ಲಿ ಸಚಿನ್ ತೆಂಡೂಲ್ಕರ್ ಆಡಿದ್ದ ರೀತಿಯನ್ನು ನಕಲು ಮಾಡಿಕೊಂಡೇ ತಾವು ಬೆಳೆದಿದ್ದಾಗಿ ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಹೇಳಿದರು.

ಬುಧವಾರ ಕ್ರಿಕ್‌ಉರು ಆ್ಯಪ್ ಲೋಕಾರ್ಪಣೆ ಮಾಡಿದ ಸೆಹ್ವಾಗ್, 'ಈಗ ಯಾವುದೇ ಯಶಸ್ವಿ ಬ್ಯಾಟ್ಸ್‌ಮನ್ ಆಟದ ವಿಡಿಯೊಗಳು ಬೇಕಾದಷ್ಟು ಸಿಗುತ್ತವೆ. ಅವುಗಳನ್ನು ನೋಡಿ ಕಲಿಯಬಹುದು. ಆದರೆ ನಾನು ಕಲಿಯುವ ಸಮಯದಲ್ಲಿ ಅಂತಹ ಅವಕಾಶ ಇರಲಿಲ್ಲ. 1992ರ ವಿಶ್ವಕಪ್ ಪಂದ್ಯಗಳಲ್ಲಿ ಸಚಿನ್ ಆಡುತ್ತಿದ್ದ ರೀತಿಯನ್ನು ಟಿವಿಯಲ್ಲಿ ವೀಕ್ಷಿಸುತ್ತಿದ್ದೆ. ಅದನ್ನೇ ನೆನಪಿಟ್ಟುಕೊಂಡು ಅಭ್ಯಾಸ


ವೀರೇಂದ್ರ ಸೆಹ್ವಾಗ್

ಮಾಡುತ್ತಿದ್ದೆ. ಬ್ಯಾಕ್‌ಫುಟ್ ಪಂಚ್, ನೇರ ಡ್ರೈವ್‌ಗಳನ್ನು ಕಲಿತಿದ್ದು ಸಚಿನ್ ಅವರನ್ನು ನೋಡಿಯೇ. ನೋಡಿ ಕಲಿಯುವುದು ಒಳ್ಳೆಯ ಅನುಭವ' ಎಂದರು.

'ನಾನು ಕಲಿಯುವ ವೇಳೆ ಆನ್‌ಲೈನ್‌ನಲ್ಲಿ ಎಲ್ಲರೊಂದಿಗೆ ಮಾತನಾಡುವ, ವಿಡಿಯೊಗಳನ್ನು ಸುಲಭವಾಗಿ ಪಡೆಯುವ ಅವಕಾಶ ಸಿಕ್ಕಿದ್ದರೆ ಇನ್ನೂ ಬೇಗ ಭಾರತ ತಂಡದಲ್ಲಿ ಆಡುವ ಅವಕಾಶ ಗಿಟ್ಟಿಸಬಹುದಿತ್ತು' ಎಂದು ವೀರೂ ಅಭಿಪ್ರಾಯಪಟ್ಟರು.

ಭಾರತ ತಂಡಕ್ಕೆ ಸಚಿನ್ ಜೊತೆ ಹಲವು ಪಂದ್ಯಗಳಲ್ಲಿ ಇನಿಂಗ್ಸ್ ಆರಂಭಿಸಿದ ಕುರಿತೂ ನೆನಪಿಸಿಕೊಂಡರು.

'ಆಟದಲ್ಲಿ ಕೌಶಲಗಳಷ್ಟೇ, ಮನೋಬಲವೂ ಮುಖ್ಯವಾಗುತ್ತದೆ. ಮನಸ್ಸು ಸದೃಢವಾಗಿದ್ದರೆ, ಆಟದ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಗುತ್ತದೆ. ಸಂಜಯ್ ಬಾಂಗರ್ ಕೂಡ ನನಗೆ ಇದೇ ಸಲಹೆ ಕೊಟ್ಟಿದ್ದರು' ಎಂದು ನೆನಪಿಸಿಕೊಂಡರು.

ಸೆಹ್ವಾಗ್ ಕ್ರಿಕ್‌ಉರು ಆ್ಯಪ್ ಸಂಸ್ಥಾಪಕರಾಗಿದ್ದಾರೆ. ಇದರ ಮೂಲಕ ಕ್ರಿಕೆಟ್ ತರಬೇತಿ ನೀಡಲು ಸೆಹ್ವಾಗ್ ಯೋಜನೆ ರೂಪಿಸಿದ್ದಾರೆ. ಅನುಭವಿ ಅಂತರರಾಷ್ಟ್ರೀಯ ಕ್ರಿಕೆಟಿಗರು ಈ ಮೂಲಕ ತರಬೇತಿ ನೀಡಲಿದ್ದಾರೆ. ದೇಶ, ವಿದೇಶ, ನಗರ, ಗ್ರಾಮೀಣ ಭಾಗದ ಮಕ್ಕಳಿಗೆ ಇದು ಹೆಚ್ಚು ನೆರವಾಗಲಿದೆ ಎಂದು ಬಾಂಗರ್ ಆ್ಯಪ್‌ನ ವಿಡಿಯೊದಲ್ಲಿ ಹೇಳಿದ್ದಾರೆ.

'ಮೊದಲ' ಜಯವೇ ಮುಖ್ಯ: ರಮಣ್‌ದೀಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಕ್ಸ್‌ಗೆ ತಂಡ ಸೂಕ್ತ ರೀತಿಯಲ್ಲಿ ಸಜ್ಜಾಗುತ್ತಿದ್ದು ಮೊದಲ ಪಂದ್ಯದ ಜಯವೇ ಮುಖ್ಯವಾಗಿರುವುದರಿಂದ ಅದರ ಕಡೆಗೆ ಹೆಚ್ಚು ಗಮನ ನೀಡಲಾಗುತ್ತಿದೆ ಎಂದು ಭಾರತ ಹಾಕಿ ತಂಡದ ಅನುಭವಿ ಫಾರ್ವರ್ಡ್ ಆಟಗಾರ ರಮಣ್‌ದೀಪ್ ಸಿಂಗ್ ಬುಧವಾರ ಅಭಿಪ್ರಾಯಪಟ್ಟಿದ್ದಾರೆ.

ಭಾರತ ತಂಡದ ಒಲಿಂಪಿಕ್ಸ್ ಅಭಿಯಾನ ಜುಲೈ 24ರಂದು ಆರಂಭವಾಗಲಿದ್ದು ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಸೆಣಸಲಿದೆ. ಆ ಪಂದ್ಯದಲ್ಲಿ ಜಯ ಗಳಿಸಿದರೆ ಉಳಿದ ಪಂದ್ಯಗಳ ಬಗ್ಗೆ ಭರವಸೆ ಮೂಡಲಿದೆ


ರಮಣ್‌ದೀಪ್ ಸಿಂಗ್ –ಪಿಟಿಐ ಚಿತ್ರ

ಎಂದು ರಮಣ್‌ದೀಪ್ ಹೇಳಿದ್ದಾರೆ. ಅವರ ಅಭಿಪ್ರಾಯವನ್ನು ಹಾಕಿ ಇಂಡಿಯಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಭಾರತ ತಂಡ 'ಎ' ಗುಂಪಿನಲ್ಲಿ ಸ್ಥಾನ ಗಳಿಸಿದೆ. ಈ ಗುಂಪಿನಲ್ಲಿ ಹಾಲಿ ಚಾಂಪಿಯನ್ ಅರ್ಜೆಂಟೀನಾ, ಆತಿಥೇಯ ಜಪಾನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಸ್ಪೇನ್ ತಂಡಗಳು ಇವೆ. ಭಾರತ ತಂಡದ ತರಬೇತಿ ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ ದಕ್ಷಿಣ ಪ್ರಾದೇಶಿಕ ಕೇಂದ್ರದಲ್ಲಿ ನಡೆಯುತ್ತಿದೆ.

ಇಲ್ಲಿ ಒಲಿಂಪಿಕ್ಸ್‌ನ ವಾತಾವರಣವನ್ನೇ ನಿರ್ಮಿಸಿ ಭಾರತದ ಆಟಗಾರರು ಎರಡು ತಂಡಗಳನ್ನಾಗಿ ಮಾಡಿಕೊಂಡು ಆಡುತ್ತಿದ್ದಾರೆ' ಎಂದು 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಆಡಿದ್ದ ರಮಣ್‌ದೀಪ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕುಸ್ತಿ: ದಹಿಯಾಗೆ ಬೆಳ್ಳಿ

ವಾರ್ಸಾ (ಪಿಟಿಐ): ಭಾರತದ ರವಿ ದಹಿಯಾ ಅವರು ಪೋಲೆಂಡ್ ಓಪನ್ ಕುಸ್ತಿ ಟೂರ್ನಿಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.


ರವಿ ದಹಿಯಾ

ಬುಧವಾರ ಇಲ್ಲಿ ನಡೆದ 61 ಕೆಜಿ ವಿಭಾಗದ ಫೈನಲ್ ಹಣಾಹಣಿಯಲ್ಲಿ ಅವರು 3–5ರಿಂದ ಉಜ್ಬೆಕಿಸ್ತಾನದ ಗುಲೊಮಜೋನ್ ಅಬ್ದುಲ್ಲಾಯೆವ್ ಎದುರು ಸೋತರು.


ಇದೇ ಕುಸ್ತಿಪಟು ವಿರುದ್ಧ ಟೂರ್ನಿಯ ಮೊದಲ ಬೌಟ್‌ನಲ್ಲಿ ರವಿ ದಹಿಯಾ 10–1ರಿಂದ ಜಯ ಸಾಧಿಸಿದ್ದರು.

10 ಸಾವಿರ ಮೀಟರ್ ಓಟ: ಗಿಡಿ ವಿಶ್ವದಾಖಲೆ

ಹೆಂಗೆಲೊ, ನೆದರ್ಲೆಂಡ್ಸ್ (ಎಪಿ): ಇಥಿಯೋಪಿಯಾದ ಲೆಟೆಸೆನ್ಬೆಟ್ ಗಿಡಿ, ಮಹಿಳೆಯರ 10 ಸಾವಿರ ಮೀಟರ್ ಓಟದಲ್ಲಿ ವಿಶ್ವದಾಖಲೆ ಬರೆದಿದ್ದಾರೆ. ಇಲ್ಲಿ ನಡೆಯುತ್ತಿರುವ ಇಥಿಯೋಪಿಯನ್ ಒಲಿಂಪಿಕ್ಸ್ ಟ್ರಯಲ್ಸ್‌ನಲ್ಲಿ ಅವರು ಬುಧವಾರ 29 ನಿಮಿಷ, 1.03 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿದರು. ಇದರೊಂದಿಗೆ ನಾಲ್ಕು ದಿನಗಳ ಹಿಂದಷ್ಟೇ (ಭಾನುವಾರ) ಸಿಫಾನ್ ಹಸನ್ ಸ್ಥಾಪಿಸಿದ್ದ ದಾಖಲೆಯನ್ನು ಮೀರಿದರು.

ಇದೇ ಟ್ರ್ಯಾಕ್‌ನಲ್ಲಿ ನೆದರ್ಲೆಂಡ್ಸ್ ಅಥ್ಲೀಟ್ ಸಿಫಾನ್ 29 ನಿಮಿಷ, 6.82 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದರು.

ಷೇರುಪೇಟೆ ವಹಿವಾಟು ▼ 334



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,740
ಇಂದಿನ ಅಂತ್ಯ	15,635
▼	105
ದಿನದ ಕನಿಷ್ಠ	15,566

ವಿನಿಮಯ ದರ

$ ಡಾಲರ್	72.97
£ ಪೌಂಡ್	103.48
€ ಯುರೊ	88.94
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹1410 (1415)
ಸೂರ್ಯಕಾಂತಿ (ರಿಫೈನ್ಡ್)	₹1510 (1500)
ಪಾಮೋಲಿನ್	₹1227 (1240)

ಈಕ್ವಿಟಿ ಮ್ಯೂಚುವಲ್ ಫಂಡ್: ಮೇನಲ್ಲಿ ₹ 10 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಮೇ ತಿಂಗಳಿನಲ್ಲಿ ₹ 10 ಸಾವಿರ ಕೋಟಿ ಬಂಡವಾಳ ಹೂಡಿಕೆ ಆಗಿದೆ. 14 ತಿಂಗಳ ಅವಧಿಯಲ್ಲಿನ ಗರಿಷ್ಠ ಮೊತ್ತದ ಹೂಡಿಕೆ ಇದಾಗಿದೆ.

ಈ ಹಿಂದೆ 2020ರ ಮಾರ್ಚ್‌ನಲ್ಲಿ ₹ 11,723 ಕೋಟಿ ಹೂಡಿಕೆ ಆಗಿತ್ತು. ಕೋವಿಡ್ ಪ್ರಕರಣಗಳು ಇಳಿಕೆ ಆಗುತ್ತಿರುವುದು ಹಾಗೂ ತ್ರೈಮಾಸಿಕದಲ್ಲಿ ಕಂಪನಿಗಳು ಉತ್ತಮ ಸಾಧನೆ ತೋರಿರುವುದರಿಂದಾಗಿ ಷೇರು ಪೇಟೆಯಲ್ಲಿ ಉತ್ತಮ ವಹಿವಾಟು ನಡೆಯುತ್ತಿದೆ. ಇದು ಹೂಡಿಕೆಯನ್ನು ಹೆಚ್ಚಿಸಿದೆ ಎಂದು ತಜ್ಞರು ಹೇಳಿದ್ದಾರೆ.

ಮಾರ್ಚ್‌ನಲ್ಲಿ ₹ 9,115 ಕೋಟಿ ಮತ್ತು ಏಪ್ರಿಲ್‌ನಲ್ಲಿ ₹ 3,437 ಕೋಟಿ ಮೊತ್ತವು ಈಕ್ವಿಟಿ ಫಂಡ್‌ಗಳಲ್ಲಿ ಹೂಡಿಕೆ ಆಗಿತ್ತು. ಇದಕ್ಕೆ ಹೋಲಿಸಿದರೆ ಮೇನಲ್ಲಿ ಆಗಿರುವ ಹೂಡಿಕೆಯು ಗರಿಷ್ಠ ಮಟ್ಟದಲ್ಲಿದೆ. ಭಾರತೀಯ ಮ್ಯೂಚುವಲ್ ಫಂಡ್ ಸಂಸ್ಥೆಗಳ ಒಕ್ಕೂಟ ಈ ಮಾಹಿತಿ ನೀಡಿದೆ.

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು 2020ರ ಜುಲೈನಿಂದ 2021ರ ಫೆಬ್ರುವರಿ ಅವಧಿಯವರೆಗೆ ಬಂಡವಾಳ ಹಿಂತೆಗೆತ ದಾಖಲಿಸಿದ್ದವು. ಡೆಟ್ (ಸಾಲಪತ್ರ ಆಧಾರಿತ) ಮ್ಯೂಚುವಲ್ ಫಂಡ್‌ಗಳಿಂದ ಮೇನಲ್ಲಿ ₹ 44,512 ಕೋಟಿ ಬಂಡವಾಳ ಹಿಂತೆಗೆತ ಆಗಿದೆ. ಏಪ್ರಿಲ್‌ನಲ್ಲಿ ₹ 1 ಲಕ್ಷ ಕೋಟಿ ಹೂಡಿಕೆ ಆಗಿತ್ತು. ಒಟ್ಟಾರೆಯಾಗಿ ಮ್ಯೂಚುವಲ್ ಫಂಡ್ ಉದ್ಯಮದಿಂದ ಮೇ ತಿಂಗಳಿನಲ್ಲಿ ₹ 38,602 ಕೋಟಿ ಬಂಡವಾಳ ಹಿಂತೆಗೆತ ಆಗಿದೆ. ಏಪ್ರಿಲ್‌ನಲ್ಲಿ ₹ 92,906 ಕೋಟಿ ಹೂಡಿಕೆ ಆಗಿತ್ತು. ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ₹ 288 ಕೋಟಿ ಹೂಡಿಕೆ ಆಗಿದೆ.

ಷೇರುಪೇಟೆ ಸೂಚ್ಯಂಕ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿದ್ದು, ಹೂಡಿಕೆದಾರರು ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ತೊಡಗಿಸುವುದನ್ನು ಮುಂದುವರಿಸಿದ್ದಾರೆ. ಮುಂಬರುವ ತಿಂಗಳುಗಳಲ್ಲಿಯೂ ಇದೇ ಪ್ರವೃತ್ತಿ ಮುಂದುವರಿಯುವ ನಿರೀಕ್ಷೆಯಿದೆ ಎಂದು ಫೈಯರ್ಸ್‌ನ ಸಂಶೋಧನಾ ಮುಖ್ಯಸ್ಥ ಗೋಪಾಲ್ ಕಾವಲಿರೆಡ್ಡಿ ತಿಳಿಸಿದ್ದಾರೆ.

ಅಂಕಿ–ಅಂಶ ₹

ಮ್ಯೂಚುವಲ್ ಫಂಡ್ ಉದ್ಯಮ ನಿರ್ವಹಣಾ ಸಂಪತ್ತು

₹33 ಲಕ್ಷ ಕೋಟಿ
ಮೇ ಅಂತ್ಯಕ್ಕೆ

₹32.38 ಲಕ್ಷ ಕೋಟಿ
ಏಪ್ರಿಲ್ ಅಂತ್ಯಕ್ಕೆ

ಬೆಂಗಳೂರು ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹1800-2000
ಮಧ್ಯಮ	₹1500-1800
ಸಣ್ಣ	₹1000-1500

ಮುಂಬೈ ಧಾರಣೆ

ಶೇಂಗಾ

9-6-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1495 (1500)
ಒಂದು ವಾರದ ಡೆಲಿವರಿ	1490 (1495)
ಸೋಯಾ ಕಚ್ಚಾ	1375 (1390)
ಪಾಮ್ ವಾರದ ಡೆಲಿವರಿ	1225 (1238)
ಸೂರ್ಯಕಾಂತಿ ಎಣ್ಣೆ ಕಚ್ಚಾ	1450 (1460)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,800 (48,875)
ಬೆಳ್ಳಿ ಕೆ.ಜಿ 70,900 (71,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40000
ಹಳತು	42500-50000
ಕಾರ್ಕಳ	
ಹೊಸತು	36000-40000
ಕುಂದಾಪುರ	
ಹೊಸಚಾಲಿ	35000-40000
ಪುತ್ತೂರು	
ಹೊಸತು	28000-40000
ಸಿದ್ದಾಪುರ	
ಬಿಳಿಗೋಟು	26199-31299
ಚಾಲಿ	34199-37099
ಕೋಕ	12699-28699
ಕೆಂಪುಗೋಟು	28469-31089
ರಾಶಿ	40500-42200
ರಾಮನಗರ ರೇಷ್ಮೆ	
ಮಿಶ್ರತಳಿ	280-334
ದ್ವಿತಳಿ	350-481

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	11050
ಎಸಿ	4675
ಆರ್‌ಪಿ	5250
ಆರ್‌ಸಿ	3125

ಮಾರಾಟದ ಒತ್ತಡ: ಸೆನ್ಸೆಕ್ಸ್ 334 ಅಂಶ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಆರಂಭದಲ್ಲಿ ಕಂಡುಕೊಂಡಿದ್ದ ಗಳಿಕೆಯನ್ನು ಮಾರಾಟದ ಒತ್ತಡಕ್ಕೆ ಒಳಗಾಗಿ ಕಳೆದುಕೊಂಡವು. ದಿನದ ಕೊನೆಯಲ್ಲಿ ನಕಾರಾತ್ಮಕವಾಗಿ ವಹಿವಾಟು ಅಂತ್ಯಗೊಳಿಸಿದವು.

ಜಾಗತಿಕ ಷೇರುಪೇಟೆಗಳ ಇಳಿಮುಖ ವಹಿವಾಟಿನಿಂದಾಗಿ ರಿಲಯನ್ಸ್ ಇಂಡಸ್ಟ್ರೀಸ್, ಬ್ಯಾಂಕಿಂಗ್ ಮತ್ತು ಮೂಲಸೌಕರ್ಯ ಷೇರುಗಳು ಲಾಭ ಗಳಿಕೆಯ ಒತ್ತಡಕ್ಕೆ ಒಳಗಾದವು. ಇದರಿಂದಾಗಿ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು. ರೂಪಾಯಿ ಮೌಲ್ಯ ಇಳಿಕೆಯೂ ಹೂಡಿಕೆದಾರರ ವಿಶ್ವಾಸವನ್ನು ತಗ್ಗಿಸಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 334 ಅಂಶ ಇಳಿಕೆ ಕಂಡು 51,941 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 105 ಅಂಶ ಇಳಿಕೆಯಾಗಿ 15,635 ಅಂಶಗಳಿಗೆ ತಲುಪಿತು.

ಯುರೋಪ್‌ನ ಕೇಂದ್ರೀಯ ಬ್ಯಾಂಕ್‌ನ (ಇಸಿಬಿ) ಹಣಕಾಸು ನೀತಿಯ ನಿರ್ಧಾರಗಳು ಮತ್ತು ಅಮೆರಿಕದ ಹಣದುಬ್ಬರದ ಅಂಕಿ–ಅಂಶಗಳು ಗುರುವಾರ ಹೊರಬೀಳಲಿವೆ. ಹೀಗಾಗಿ ಜಾಗತಿಕ ಹೂಡಿಕೆದಾರರು ಎಚ್ಚರಿಕೆಯಿಂದ ವಹಿವಾಟು ನಡೆಸಿದರು. ಆರ್ಥಿಕ ಚೇತರಿಕೆಗಾಗಿ ಬಾಂಡ್ ಖರೀದಿಸುವ ನೀತಿಯನ್ನು ಇಸಿಬಿ ಮುಂದುವರಿಸುವ ಸಾಧ್ಯತೆ ಇದೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 8 ಪೈಸೆ ಇಳಿಕೆಯಾಗಿ ಒಂದು ಡಾಲರ್‌ಗೆ ₹ 72.97ರಂತೆ ವಿನಿಮಯಗೊಂಡಿತು.

ರಫ್ತು ಶೇ 52ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು ಜೂನ್ ತಿಂಗಳ ಮೊದಲ ವಾರದಲ್ಲಿ ಶೇಕಡ 52.39ರಷ್ಟು ಹೆಚ್ಚಾಗಿದ್ದು, ₹ 56,283 ಕೋಟಿಗೆ ತಲುಪಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ತಿಳಿಸಿದೆ.

ಎಂಜಿನಿಯರಿಂಗ್, ಹರಳು ಮತ್ತು ಚಿನ್ನಾಭರಣ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ವಲಯವು ಉತ್ತಮ ಬೆಳವಣಿಗೆ ಕಂಡಿರುವುದರಿಂದ ಈ ಪ್ರಗತಿ ಸಾಧ್ಯವಾಗಿದೆ ಎಂದು ಅದು ಹೇಳಿದೆ.

ಕಬ್ಬಿಣದ ಅದಿರು, ಎಣ್ಣೆ ಕಾಳುಗಳು ಮತ್ತು ಸಂಬಾರ ಪದಾರ್ಥಗಳ ರಫ್ತು ವಹಿವಾಟು ನಕಾರಾತ್ಮಕ ಬೆಳವಣಿಗೆ ಕಂಡಿವೆ.